ಸೋಮವಾರ, ಮೇ 30, 2022 | ₹ 6.00

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

/prajavani.net @prajavani /prajavani http://bit.ly/Prajavani

ಪ್ರಚಾರ

ಗುಜರಾತ್‌ನ ಅಹಮದಾಬಾದ್‌ನಲ್ಲಿ ಭಾನುವಾರ 'ಸಾಮ್ರಾಟ್ ಪೃಥ್ವಿರಾಜ್' ಚಿತ್ರದ ಪ್ರಚಾರ ಕಾರ್ಯಕ್ರಮದಲ್ಲಿ ಬಾಲಿವುಡ್ ನಟ ಮಾನುಷಿ ಚಿಲ್ಲರ್ ಹಾಗೂ ನಟ ಅಕ್ಷಯ್ ಕುಮಾರ್ ಪಾಲ್ಗೊಂಡಿದ್ದರು



ಪಠ್ಯಪುಸ್ತಕಗಳ ಮರು ಪರಿಷ್ಕರಣೆ ಬಗ್ಗೆ ವಿವಾದ • ಸಾಹಿತಿ ಬರಗೂರು ರಾಮಚಂದ್ರಪ್ಪ ಆಗ್ರಹ

‘ಶೈಕ್ಷಣಿಕ ಘನತೆ: ಮುಖ್ಯಮಂತ್ರಿ ಮಧ್ಯಪ್ರವೇಶಿಸಲಿ’

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಪಠ್ಯಪುಸ್ತಕಗಳ ಮರು ಪರಿಷ್ಕರಣೆ ಬಗ್ಗೆ ವಿವಾದವೆದ್ದಿದೆ. ವಿದ್ಯಾರ್ಥಿಗಳು, ಪೋಷಕರಲ್ಲಿ ಗೊಂದಲ ಸೃಷ್ಟಿಸಬಾರದು. ಶೈಕ್ಷಣಿಕ ಕ್ಷೇತ್ರದ ಘನತೆಯನ್ನು ಉಳಿಸಲು ಮುಖ್ಯಮಂತ್ರಿ ಅವರು ಮಧ್ಯಪ್ರವೇಶ ಮಾಡಬೇಕು’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

‘ಅನೇಕ ಪಠ್ಯಗಳನ್ನು ಕೈಬಿಡಲಾಗಿದೆ. ಬೇರೆ ಪಠ್ಯಗಳನ್ನು ಸೇರಿಸಲಾಗಿದೆ. ಕಾಲಕಾಲಕ್ಕೆ ಪರಿಷ್ಕರಣೆ ಅಗತ್ಯ. ಆದರೆ, ಪರಿಷ್ಕರಣೆಗೆ ಪಠ್ಯಕ್ರಮದ ಚೌಕಟ್ಟು ಇರುತ್ತದೆ. ಆ ಚೌಕಟ್ಟಿನಲ್ಲೇ ಸಂವಿಧಾನದ ಆಶಯಗಳಿಗೆ ಬದ್ಧವಾಗಿ ನಡೆಯಬೇಕು’ ಎಂದು ಪ್ರತಿಪಾದಿಸಿದ್ದಾರೆ.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಈ ಆಶಯಕ್ಕೆ ವಿರುದ್ಧವಾಗಿ, ಪಠ್ಯಕ್ರಮದ ಚೌಕಟ್ಟು ಮೀರಿ ಪಠ್ಯಪುಸ್ತಕ ರಚನೆ, ಪರಿಷ್ಕರಣೆ, ಮರುಪರಿಷ್ಕರಣೆಗಳು ನಡೆಯಬಾರದು’ ಎಂದು ಅವರು ಹೇಳಿದರು.

‘ನನ್ನ ನೇತೃತ್ವದಲ್ಲಿ ಪಠ್ಯ ಪರಿಷ್ಕರಣೆ ನಡೆದಾಗ ಯಾವ ಕಾರಣಕ್ಕೆ ಯಾವ ಪಠ್ಯ ಸೇರಿಸಲಾಗಿದೆ; ಕೈಬಿಡಲಾಗಿದೆ ಎಂಬ ವಿವರಗಳನ್ನು ಆವಾಗಲೇ ನೀಡಿದ್ದೇನೆ. ವೈಯಕ್ತಿಕವಾಗಿ ಕೆಲವರು ನನ್ನ ಮೇಲೆ ಆರೋಪ ಮಾಡಿದ್ದಾರೆ. ನನ್ನ ತೇಜೋವಧೆ ಮಾಡುವ ಕೆಲಸವಾಗುತ್ತಿದೆ. ಅವರ ಮಟ್ಟಕ್ಕೆ ಇಳಿದು ಪ್ರತಿಕ್ರಿಯೆ ಕೊಡಲಾರೆ. ಆ ಸಂವೇದನೆ, ಮೌಲ್ಯವನ್ನು ಕನ್ನಡ ನನಗೆ ಕಲಿಸಿದೆ’ ಎಂದು ಪ್ರತಿಕ್ರಿಯಿಸಿದರು.

‘ಬರಗೂರು ಗ್ಯಾಂಗ್ ಪದ ಬಳಕೆ ತಪ್ಪು’

ಚಿತ್ರದುರ್ಗ: ‘ಸಾಹಿತಿ ಬರಗೂರು ರಾಮಚಂದ್ರಪ್ಪ ‘ಎಡ’ವೂ ಅಲ್ಲ, ‘ಬಲ’ವೂ ಅಲ್ಲದ ‘ಮಾನವೀಯ’ ಪಂಥದವರು. ಅವರ ಬಗ್ಗೆ ಪಠ್ಯ ಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಬಳಸಿರುವ ‘ಬರಗೂರು ಗ್ಯಾಂಗ್’ ಪದ ತಪ್ಪು’ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ.ವಸಂತ ಕುಮಾರ್ ಭಾನುವಾರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಪಠ್ಯಪುಸ್ತಕ ಕುರಿತು ಊಹಾಪೋಹದ ಮೇಲೆ ವ್ಯಕ್ತಿ, ಜಾತಿ ನಿಂದನೆ ಚರ್ಚೆ ನಡೆದಿರುವುದು ಒಳ್ಳೆ ಬೆಳವಣಿಗೆಯಲ್ಲ. ಈಗ ತತ್ವ ವಿಚಾರದ ಮೇಲೆ ನಡೆಯಬೇಕಿದ್ದ ಚರ್ಚೆ ಪಂಥ, ರಾಜಕೀಯ ಸ್ವರೂಪ ಪಡೆದಿದೆ’ ಎಂದರು.

‘ಪಠ್ಯಪುಸ್ತಕಗಳಲ್ಲಿ ಒಂದೇ ಜಾತಿಯ ಲೇಖಕರ ಲೇಖನಗಳನ್ನು ಸೇರಿಸಿರುವುದು ಸರ್ವಥಾ ಸರಿಯಲ್ಲ. ಆ ಕಾರಣಕ್ಕಾಗಿ ಇಡೀ ಪಠ್ಯವನ್ನು ಬ್ರಾಹ್ಮಣ ಪಠ್ಯ, ಆರ್‌ಎಸ್‌ಎಸ್ ಪಠ್ಯ ಎನ್ನುತ್ತಿರುವುದು ಬೌದ್ಧಿಕ ದಾರಿದ್ರ್ಯದ ಪ್ರತೀಕ’ ಎಂದು ಹೇಳಿದರು.

ಪರಿಷ್ಕೃತ ಪಠ್ಯಪುಸ್ತಕ ವಿತರಿಸಲು ಸೂಚನೆ

ಬೆಂಗಳೂರು: ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಪರಿಷ್ಕೃತಗೊಂಡಿರುವ ಪಠ್ಯಪುಸ್ತಕಗಳನ್ನೇ ಕಡ್ಡಾಯವಾಗಿ ಶಾಲೆಗಳಿಗೆ ವಿತರಿಸುವಂತೆ ಕರ್ನಾಟಕ ಪಠ್ಯಪುಸ್ತಕ ಸಂಘ ಸುತ್ತೋಲೆ ಹೊರಡಿಸಿದೆ.

ಹಳೆಯ ಪಠ್ಯಪುಸ್ತಕಗಳನ್ನು ಯಾವುದೇ ಕಾರಣಕ್ಕೂ ಶಾಲೆಗಳಿಗೆ ವಿತರಿಸದಂತೆ ಏಪ್ರಿಲ್ 13 ರಂದು ನಡೆಸಿದ ಸಭೆಯಲ್ಲಿ ಕಟ್ಟುನಿಟ್ಟಿನ ಸೂಚನೆಯನ್ನು ಸಂಘ ನೀಡಿತ್ತು. ಆದರೂ, ಹಳೆಯ ಪಠ್ಯಪುಸ್ತಕಗಳನ್ನು ಕೆಲವು ಶಾಲೆಗಳಲ್ಲಿ ವಿತರಿಸುತ್ತಿರುವ ಬಗ್ಗೆ ದೂರುಗಳು ಬಂದಿರುವುದರಿಂದ ಮತ್ತೊಮ್ಮೆ ಈ ಸೂಚನೆ ನೀಡಲಾಗಿದೆ.

’ಹಳೆಯ ಪಠ್ಯಪುಸ್ತಕಗಳನ್ನು ವಿತರಿಸಬಾರದು. 2022–23ನೇ ಸಾಲಿಗೆ ಹೊಸದಾಗಿ ಮುದ್ರಣಗೊಂಡು ಸರಬರಾಜಾಗುತ್ತಿರುವ ಪರಿಷ್ಕೃತ ಪಠ್ಯಪುಸ್ತಕಗಳನ್ನೇ ಕಡ್ಡಾಯವಾಗಿ ಶಾಲೆಗಳಿಗೆ ವಿತರಿಸಬೇಕು’ ಎಂದು ಕರ್ನಾಟಕ ಪಠ್ಯಪುಸ್ತಕ ಸಂಘದ ವ್ಯವಸ್ಥಾಪಕ ನಿರ್ದೇಶಕರು ಸುತ್ತೋಲೆಯಲ್ಲಿ ಉಲ್ಲೇಖಿಸಿದ್ದಾರೆ.

‘ಒಂದು ವೇಳೆ, ಹಳೆಯ ಪಠ್ಯಪುಸ್ತಕಗಳನ್ನು ಶಾಲೆಗಳಿಗೆ ಈಗಾಗಲೇ ಸರಬರಾಜು ಮಾಡಿದ್ದರೆ ತಕ್ಷಣವೇ ಅವುಗಳನ್ನು ವಾಪಸ್ ಪಡೆದುಕೊಳ್ಳಬೇಕು. ಈ ವಿಷಯದಲ್ಲಿ ವ್ಯತ್ಯಾಸಗಳಾದಲ್ಲಿ ಬ್ಲಾಕ್ ಹಂತದ ಪಠ್ಯಪುಸ್ತಕ ನೋಡಲ್ ಅಧಿಕಾರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಜಿಲ್ಲಾ ಹಂತದ ಪಠ್ಯ ಪುಸ್ತಕ ನೋಡಲ್ ಅಧಿಕಾರಿಗಳು ಹಾಗೂ ಉಪನಿರ್ದೇಶಕರು ಸಂಪೂರ್ಣ ಜವಾಬ್ದಾರಿಯಾಗಿರುತ್ತಾರೆ. ತಪ್ಪುಗಳಾದರೆ ಸಂಬಂಧಪಟ್ಟವರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು’ ಎಂದು ಸುತ್ತೋಲೆಯಲ್ಲಿ ಉಲ್ಲೇಖಿಸಿದ್ದಾರೆ.

ಪರಿಷ್ಕರಿಸಿದ ಪಠ್ಯಪುಸ್ತಕಗಳನ್ನು 204 ಬ್ಲಾಕ್‌ಗಳಿಗೆ ಸರಬರಾಜು ಮಾಡಲಾಗುತ್ತಿದೆ. 6 ರಿಂದ 10ನೇ ತರಗತಿಯ ಸಮಾಜ ವಿಜ್ಞಾನ ಮತ್ತು 1, 2, 4, 5, 6, 7, 8, 9 ಮತ್ತು 10ನೇ ತರಗತಿಗಳ ಪ್ರಥಮ ಭಾಷೆ ಕನ್ನಡ ಪಠ್ಯ ಪುಸ್ತಕಗಳು ಹಾಗೂ 6, 8 ಮತ್ತು 9ನೇ ತರಗತಿಗಳ ದ್ವಿತೀಯ ಭಾಷೆ ಕನ್ನಡ ಪಠ್ಯಪುಸ್ತಕಗಳು ಹಾಗೂ 7, 8 ಮತ್ತು 9ನೇ ತರಗತಿಗಳ ತೃತೀಯ ಭಾಷೆಯ ಕನ್ನಡ ಪಠ್ಯಪುಸ್ತಕಗಳನ್ನು ಪರಿಷ್ಕರಿಸಿ ಮುದ್ರಿಸಲಾಗಿದೆ ಎಂದು ವಿವರಿಸಿದ್ದಾರೆ.

ಸುದ್ದಿ 2 ನಿಮಿಷ

‘ಪೀರ್ ಪಾಶಾ ದರ್ಗಾದಲ್ಲಿ ಅನುಭವ ಮಂಟಪದ ಸಾಕ್ಷ್ಯಗಳಿಲ್ಲ’

ಬೀದರ್: ‘ಬಸವಕಲ್ಯಾಣದಲ್ಲಿರುವ ಪೀರ್ ಪಾಶಾ ದರ್ಗಾದಲ್ಲಿ ಅನುಭವ ಮಂಟಪವಿದ್ದ ಬಗ್ಗೆ ಸಾಕ್ಷ್ಯಗಳಿಲ್ಲ. ಬಸವಣ್ಣನವರ ಬಗ್ಗೆ ಇರುವ ಹತ್ತಾರು ಗ್ರಂಥಗಳಲ್ಲೂ ಇದರ ಉಲ್ಲೇಖವಿಲ್ಲ’ ಎಂದು ಅನುಭವ ಮಂಟಪದ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು ಸ್ಪಷ್ಟಪಡಿಸಿದ್ದಾರೆ.

ಬಸವಕಲ್ಯಾಣದ ಪೀರ್ ಪಾಶಾ ದರ್ಗಾ 12ನೇ ಶತಮಾನದಲ್ಲಿ ವಿಶ್ವಗುರು ಬಸವಣ್ಣ ಸ್ಥಾಪಿಸಿದ ಅನುಭವ ಮಂಟಪವಾಗಿತ್ತು ಎಂಬ ವಿಷಯ ಚರ್ಚೆಗೆ ಗ್ರಾಸವಾಗಿರುವ ಹಿನ್ನೆಲೆಯಲ್ಲಿ ಅವರು ಈ ಸ್ಪಷ್ಟನೆ ನೀಡಿದ್ದಾರೆ.



‘ಅನುಭವ ಮಂಟಪ ಸಾಧಾರಣ ಕಟ್ಟಡವಾಗಿರಬಹುದು. ಇತಿಹಾಸಕಾರರು ಸಂಶೋಧನೆ ಮಾಡಿದರೆ ಮಾತ್ರ ಸತ್ಯಾಂಶ ತಿಳಿಯಲು ಸಾಧ್ಯ. ಆದರೆ, ದರ್ಗಾದಲ್ಲಿ ಅನುಭವ ಮಂಟಪದ ಕುರುಹಗಳಿರುವ ಅಂಶ ಎಲ್ಲಿಯೂ ಉಲ್ಲೇಖವಾಗಿಲ್ಲ’ ಎಂದು ತಿಳಿಸಿದ್ದಾರೆ.

‘ಬಸವಣ್ಣನವರು ಸ್ಥಾವರಕ್ಕೆ ಮಹತ್ವ ಕೊಟ್ಟಿರಲಿಲ್ಲ. ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎಂಬುದು ಅವರ ಸಿದ್ಧಾಂತ. ಈ ದೃಷ್ಟಿಕೋನದಿಂದ ನೋಡಿದರೆ ಅವರ ಅನುಭವ ಮಂಟಪ ಬಹುತೇಕ ಸಾಧಾರಣ ಕಟ್ಟಡ ಅಥವಾ ಹೆಂಚಿನ ಮನೆಯೂ ಇರಬಹುದು. ಕಾಲಾನುಕ್ರಮದಲ್ಲಿ ಅದು ನಶಿಸಿರಬಹುದು. ಪೀರ್ ಪಾಶಾ ದರ್ಗಾ ಅನುಭವ ಮಂಟಪ ಆಗಲು ಸಾಧ್ಯವಿಲ್ಲ’ ಎಂದು ತಿಳಿಸಿದ್ದಾರೆ.

‘ಕುರುಹುಗಳು ಭಾವೈಕ್ಯದ ಪರಂಪರೆ, ಅಶಾಂತಿಗೆ ಜನ ಅವಕಾಶ ನೀಡಲ್ಲ’

ಕಲಬುರಗಿ: ‘ಮಸೀದಿಗಳಲ್ಲಿ ದೇಗುಲದ ಕುರುಹುಗಳಿವೆ ಎಂದು ಕೆಲವರು ವಿವಾದ ಎಬ್ಬಿಸುತ್ತಿರುವುದು ಒಳ್ಳೆ ಬೆಳವಣಿಗೆಯಲ್ಲ. ರಾಜ್ಯದ ಜನರು ಇದಕ್ಕೆ ಅವಕಾಶ ನೀಡುವುದಿಲ್ಲ ಎಂಬ ನಂಬಿಕೆಯಿದೆ’ ಎಂದು ರಾಜ್ಯ ವಕ್ಫ್ ಮಂಡಳಿ ಅಧ್ಯಕ್ಷ ಎನ್.ಕೆ.ಶಾಫಿ ಸಅದಿ ತಿಳಿಸಿದರು.

‘ಶತಮಾನಗಳಿಂದ ಹಿಂದೂ, ಮುಸ್ಲಿಮರು ಸೇರಿ ವಿವಿಧ ಜಾತಿ, ಧರ್ಮದವರು ಒಂದಾಗಿ ಬಾಳುತ್ತಿದ್ದಾರೆ. ಶರಣ, ಸೂಫಿ ಪರಂಪರೆಯಿದೆ. ಮಸೀದಿ, ದರ್ಗಾಗಳಲ್ಲಿ ದೇವಾಲಯ, ಮಠಗಳ ಸಂಕೇತ ಮತ್ತು ದೇವಾಲಯಗಳಲ್ಲಿ ಮಸೀದಿಗಳ ಕುರುಹುಗಳಿವೆ. ಇದು ಭಾವೈಕ್ಯದ ಪರಂಪರೆ’ ಎಂದು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಬಸವಣ್ಣ, ಕುವೆಂಪು ಅವರು ಜನಿಸಿದ ನೆಲದಲ್ಲಿ ಕೋಮುವಾದದ ಹೆಸರಿನಲ್ಲಿ ಅಪಾಯಕಾರಿ ಬೆಳವಣಿಗೆ ಆಗುವುದನ್ನು ಜನರು ತಡೆಯುತ್ತಾರೆ. ಶಾಂತಿ, ಸೌಹಾರ್ದತೆಗಾಗಿ ವಿವಿಧ ಮಠಾಧೀಶರು, ಸ್ವಾಮೀಜಿಗಳ ಜೊತೆ ಚರ್ಚಿಸಿದ್ದು, ಸಭೆಗಳನ್ನು ನಡೆಸಲಾಗಿದೆ’ ಎಂದು ತಿಳಿಸಿದರು.

‘ಕ್ರಿಯೆ ಮತ್ತು ಪ್ರತಿಕ್ರಿಯೆಯಿಂದ ಕೆಡುಕು ಹೆಚ್ಚಾಗುವುದೇ ಹೊರತು ಒಳಿತು ಆಗುವುದಿಲ್ಲ. ಜಾತಿ–ಧರ್ಮದ ಹೆಸರಿನಲ್ಲಿ ಕಲಹಕ್ಕೆ ಅವಕಾಶ ನೀಡುವ ಬದಲು ಎಲ್ಲರೂ ಜೊತೆಯಾಗಿ ಬಾಂಧವ್ಯದಿಂದ ಬಾಳಬೇಕು’ ಎಂದು ಮನವಿ ಮಾಡಿದರು.



ಧಾರವಾಡದಲ್ಲಿ ಭಾನುವಾರ ನಡೆದ ಸಿತಾರ್ ನವಾಜ್ ಉಸ್ತಾದ್ ಬಾಲೇಖಾನ್ ಸ್ಮರಣೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ (ಎಡದಿಂದ–ಕುಳಿತವರು) ಹಾಜಿ ಅಹ್ಮದ್ ಸೋಅಬಾಸೊ ಸತಾರ್ ಮೇಕರ್ (ಜೀವಮಾನ ಸಾಧನೆ) , ರಾಘವೇಂದ್ರ ಆಯಿ, ಡಾ. ಗಣೇಶ ಎನ್. ದೇವಿ, ಪಂ. ವಿನಾಯಕ ತೊರವಿ, ವಿದುಷಿ ಆರತಿ ಅಂಕಲಿಕರ್ (ಸಿತಾರ್ ನವಾಜ್ ಉಸ್ತಾದ್ ಬಾಲೆಖಾನ್ ಪ್ರಶಸ್ತಿ) , ಪಂ. ರಾಜೇಂದ್ರ ನಾಕೋಡ, ಪಂ. ವ್ಯಾಸಮೂರ್ತಿ ಕಟ್ಟಿ(ಸಹ ಕಲಾವಿದರ ಪ್ರಶಸ್ತಿ) ಉಸ್ತಾದ್ ಚೋಟೆ ರಹೀಮತ್ ಖಾನ್, (ನಿಂತಿರುವವರು) ಶಫೀಕ್ ಖಾನ್, ರಯಿಸ್ ಖಾನ್, ಶಾರದಾ ಶ್ರೀನಿವಾಸನ್, ಹಫೀಸ್ ಖಾನ್ , ವಿನುತಾ ರಮೇಶ್, ಸುನೀತಾ ಬಸವರಾಜ್, ರಫೀಕ್ ಖಾನ್, ಗೋಪಾಲಕೃಷ್ಣ ಮತ್ತು ವಿದ್ಯಾರ್ಥಿ ವೇತನ ಪಡೆದ ಶ್ವೇತಾ ಎಸ್. ಮೈದರಗಿ, ಸ್ನೇಹಾ ಗುಡ್ಡಳ್ಳಿ, ಮಂಜುಳಾ ಗೌರಿ, ಸಂಗೀತಾ ಜಿ. ಸೌದಿಮಠ ಇದ್ದಾರೆ –ಪ್ರಜಾವಾಣಿ ಚಿತ್ರ

‘ಸೌಹಾರ್ದಕ್ಕೆ ಪೂರಕ ಭಾರತೀಯ ಸಂಗೀತ’

ಪ್ರಜಾವಾಣಿ ವಾರ್ತೆ

ಧಾರವಾಡ: ‘ಸೌಹಾರ್ದ ಕದಡಿರುವ ಈ ಹೊತ್ತಿನಲ್ಲಿ ಭಾವೈಕ್ಯ ಸಾರುವಲ್ಲಿ ಭಾರತೀಯ ಸಂಗೀತವು ಮುಖ್ಯ ಪಾತ್ರವನ್ನು ವಹಿಸುತ್ತಿದೆ’ ಎಂದು ಭಾಷಾತಜ್ಞ ಡಾ.ಗಣೇಶ ಎನ್.ದೇವಿ ಅವರು ಅಭಿಪ್ರಾಯಪಟ್ಟರು.

ಸಿತಾರ್ ನವಾಜ್ ಉಸ್ತಾದ್ ಬಾಲೇಖಾನ್ ಸ್ಮಾರಕ ಪ್ರತಿಷ್ಠಾನ ಟ್ರಸ್ಟ್, ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್, ಇನ್ಫೊಸಿಸ್ ಹಾಗೂ ಎಲ್‌ಐಸಿ ಸಹಯೋಗದಲ್ಲಿ ಭಾನುವಾರ ಇಲ್ಲಿ ನಡೆದ ‘ಬಾಲೇಖಾನ್ ಅವರ ಪುಣ್ಯಸ್ಮರಣೆ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಯುದ್ಧ, ದ್ವೇಷ, ಅಸೂಯೆಗಳೇ ತಾಂಡವವಾಡುತ್ತಿರುವ ಸಂದರ್ಭದಲ್ಲಿ ಎಲ್ಲವನ್ನೂ, ಎಲ್ಲರನ್ನೂ ಒಳಗೊಳ್ಳುವ ಸಂಗೀತದ ಅವಶ್ಯಕತೆಯಿದೆ. ಧಾರವಾಡ ಘರಾಣೆ ಹುಟ್ಟಿಗೆ ಕಾರಣರಾದ ಖಾನ್ ಕುಟುಂಬದ ಸಂಗೀತ ಸೇವೆ ಸೌಹಾರ್ದ ಸಮಾಜಕ್ಕೆ ಮಾದರಿಯಾಗಿದೆ’ ಎಂದರು.

ಸಿತಾರ್ ನವಾಜ್ ಉಸ್ತಾದ್ ಬಾಲೆ ಖಾನ್ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ವಿನಾಯಕ ತೊರವಿ, ‘ಧಾರವಾಡದ ಸಂಗೀತ ಪ್ರೀತಿಯನ್ನು ತೋರಿಸುವ ಉದ್ದೇಶದಿಂದಲೇ ಬೆಂಗಳೂರಿನಲ್ಲಿ ಧಾರವಾಡ ಹೆಸರಿನ ಸಂಗೀತ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದೇನೆ’ ಎಂದರು.

ನಂತರ ಹಿರಿಯ ಸಂಗೀತ ಗಾಯಕರು ಹಾಗೂ ಕಲಾವಿದರಿಂದ ಬೆಳಿಗ್ಗೆಯಿಂದ ರಾತ್ರಿಯವರೆಗೂ ನಿರಂತರ ಸಂಗೀತ ಕಾರ್ಯಕ್ರಮ ಜರುಗಿತು.

ಕೆಎಎಸ್ ಅಧಿಕಾರಿಗಳ ಸಂಘಕ್ಕೆ ಡಾ. ರವಿ ಅಧ್ಯಕ್ಷ

ಪ್ರಜಾವಾಣಿ ವಾರ್ತೆ



ಡಾ. ರವಿ ಎಂ. ತಿರ್ಲಾಪುರ

ಬೆಂಗಳೂರು: ಕರ್ನಾಟಕ ಆಡಳಿತ ಸೇವೆ ಅಧಿಕಾರಿಗಳ ಸಂಘಕ್ಕೆ ಸರ್ವಾನುಮತದಿಂದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ.

ಭಾನುವಾರ ನಗರದಲ್ಲಿ ನಡೆದ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಈ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಆಪ್ತ ಕಾರ್ಯದರ್ಶಿ ಡಾ. ರವಿ ಎಂ. ತಿರ್ಲಾಪುರ (ಅಧ್ಯಕ್ಷ), ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆಗಳ ಸಚಿವರ ಆಪ್ತ ಕಾರ್ಯದರ್ಶಿ ಎಂ.ಕೆ. ಜಗದೀಶ್ (ಉಪಾಧ್ಯಕ್ಷ), ಬಿಡಿಎ ವಿಶೇಷ ಭೂಸ್ವಾಧೀನ ಅಧಿಕಾರಿ ಡಾ.ಬಿ.ಆರ್. ಹರೀಶ್ ನಾಯ್ಕ್ (ಕಾರ್ಯದರ್ಶಿ), ಶಿವಮೊಗ್ಗ ಹೆಚ್ಚುವರಿ ಜಿಲ್ಲಾಧಿಕಾರಿ ಡಾ. ನಾಗೇಂದ್ರ ಎಫ್. ಹೊನ್ನಾಳಿ (ಜಂಟಿ ಕಾರ್ಯದರ್ಶಿ), ಧಾರವಾಡ ತಹಶೀಲ್ದಾರ್ ಡಾ. ಸಂತೋಷ್ ಬಿರಾದಾರ್ (ಖಜಾಂಚಿ) ಅವರನ್ನು ಆಯ್ಕೆ ಮಾಡಲಾಗಿದೆ.

ಮುಖ್ಯಮಂತ್ರಿ ಬೊಮ್ಮಾಯಿ ಪ್ರಶ್ನೆಗೆ ಸಿದ್ದರಾಮಯ್ಯ ಪ್ರತ್ಯುತ್ತರ

ನಾನು ದ್ರಾವಿಡ ಪಂಥಕ್ಕೆ ಸೇರಿದ್ದೇನೆ

ಪ್ರಜಾವಾಣಿ ವಾರ್ತೆ

ಚನ್ನರಾಯಪಟ್ಟಣ (ಹಾಸನ): ‘ದ್ರಾವಿಡರು ಈ ದೇಶದ ಮೂಲ ನಿವಾಸಿಗಳು. ನಾನು ಅದೇ ಪಂಥಕ್ಕೆ ಸೇರಿದ್ದೇನೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಭಾನುವಾರ ಇಲ್ಲಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸಿದ್ದರಾಮಯ್ಯ ಅವರು ದ್ರಾವಿಡರೇ ಅಥವಾ ಆರ್ಯರೇ ಎಂಬುದನ್ನು ಸ್ಪಷ್ಟಪಡಿಸಲಿ ಎಂದು ಮುಖ್ಯಮಂತ್ರಿ ಸವಾಲು ಹಾಕಿದ್ದಾರೆ. ಆರ್ಯರು ಸಾವಿರಾರು ವರ್ಷಗಳ ಹಿಂದೆ ಮಧ್ಯಪ್ರಾಚ್ಯದಿಂದ ಬಂದಿದ್ದಾರೆ. ಇಲ್ಲೇ ನೆಲೆಸಿರುವುದರಿಂದ ಅವರು ಭಾರತೀಯರಾಗಿದ್ದಾರೆ. ನಾನು ದ್ರಾವಿಡ ಪಂಥಕ್ಕೆ ಸೇರಿದವ ಎಂದಿದ್ದೇನೆ. ಇದರಲ್ಲಿ ತಪ್ಪೇನಿದೆ’ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ವರಿಷ್ಠರ ಮೂಲ ಎಲ್ಲಿಯದು ಎಂಬ ಬಿಜೆಪಿ ನಾಯಕರ ಪ್ರಶ್ನೆಗೆ, ‘ಸೋನಿಯಾಗಾಂಧಿ ಇಟಲಿಯವರು. ರಾಜೀವ್‌ಗಾಂಧಿ ಅವರನ್ನು ಮದುವೆಯಾಗಿ ಭಾರತದ ಪೌರತ್ವ ಪಡೆದಿದ್ದಾರೆ. ನಮ್ಮ ದೇಶದವರು ಅಮೆರಿಕದಲ್ಲಿ ನೆಲೆಸಿ ಅಲ್ಲಿನ ಪೌರತ್ವ ಪಡೆದಿಲ್ಲವೇ?’ ಎಂದು ಹೇಳಿದರು.

‘ಘರ್ ವಾಪಸಿ’ಗೆ ಸಲಹೆ: ಟ್ವಿಟರ್‌ನಲ್ಲೂ ಚರ್ಚೆ ಮುಂದುವರಿಸಿರುವ ಸಿದ್ದರಾಮಯ್ಯ, ‘ಬೊಮ್ಮಾಯಿಯವರೇ, ನಾನು ಮಾತ್ರವಲ್ಲ, ನೀವೂ ದ್ರಾವಿಡರೇ ಆಗಿದ್ದೀರಿ. ಈ ಸ್ಪಷ್ಟತೆ ನನಗಿದೆ. ನಾನು ದ್ರಾವಿಡ ಮೂಲವನ್ನು ಉಳಿಸಿಕೊಂಡಿದ್ದೇನೆ. ನೀವು ಅಧಿಕಾರದ ದುರಾಸೆಯಿಂದ ಮೂಲವನ್ನು ತೊರೆದು ಪಕ್ಷಾಂತರ ಮಾಡಿದ್ದೀರಿ. ಬೇಗ ‘ಘರ್ ವಾಪಸಿ’ ಆಗಿಬಿಡಿ’ ಎಂದು ಹೇಳಿದರು.

‘ನೆಹರೂ ಅವರನ್ನು ನರೇಂದ್ರ ಮೋದಿಗೆ ಹೋಲಿಸಲು ಸಾಧ್ಯವೇ ಇಲ್ಲ ಎಂದು ಮತ್ತೆ ಹೇಳುತ್ತೇನೆ. ಇಬ್ಬರೂ ನಾಯಕರ ಸಾಧನೆ ಬಗ್ಗೆ ಮುಕ್ತ ಚರ್ಚೆಗೆ ನೀವು ಸಿದ್ಧ ಇದ್ದರೆ ನಾನೂ ಸಿದ್ಧನಿದ್ದೇನೆ. ನನ್ನ ಮಾತಿಗೆ ನೀವು ಖರೀದಿಸಿಟ್ಟಿರುವ ‘ಟ್ರೋಲ್ ಗ್ಯಾಂಗ್’ ಮೂಲಕ ಉತ್ತರ ಕೊಡಿಸಲು ಹೋಗಬೇಡಿ’ ಎಂದಿದ್ದಾರೆ.

ಸಿದ್ದರಾಮಯ್ಯ ಆರ್‌ಎಸ್‌ಎಸ್ ಬಗ್ಗೆ ಅಧ್ಯಯನ ಮಾಡಿಲ್ಲ. ಸಂಘದ ಬಗ್ಗೆ ಕನಿಷ್ಠ ಜ್ಞಾನವೂ ಇಲ್ಲ. ಅವರಿಗೆ ಆರ್‌ಎಸ್‌ಎಸ್ ಕುರಿತ ಪುಸ್ತಕ ನೀಡುತ್ತೇವೆ, ಗಮನಿಸಲಿ.
ಎಸ್.ಟಿ.ಸೋಮಶೇಖರ್
ಸಹಕಾರ ಸಚಿವ

ಸಿದ್ದರಾಮಯ್ಯ ಅವರ ಮುಖ ರಾಮನದ್ದು. ಚಿಂತನೆ ಮತ್ತು ಬುದ್ಧಿ ಮಾತ್ರ ರಾವಣನದ್ದು. ಹಾಗಾಗಿ ಸಿದ್ದರಾಮಯ್ಯ ಅವರು ಸಿದ್ದರಾವಣ ಎಂದು ಹೆಸರು ಬದಲಿಸಿಕೊಳ್ಳಲಿ
ನಳಿನ್‌ಕುಮಾರ್ ಕಟೀಲ್
ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಸಿದ್ದರಾಮಯ್ಯ ಒಮ್ಮೆ ಆರ್‌ಎಸ್‌ಎಸ್ ಶಾಖೆಗೆ ಬರಲಿ: ಕೆ.ಎಸ್. ಈಶ್ವರಪ್ಪ

ಶಿವಮೊಗ್ಗ: ‘ಸಿದ್ದರಾಮಯ್ಯ ಅವರಿಗೆ ಆರ್‌ಎಸ್‌ಎಸ್ ಏನೆಂದು ಅರ್ಥ ಆಗಬೇಕಾದರೆ ಅವರು ಒಮ್ಮೆ ಆರ್‌ಎಸ್‌ಎಸ್ ಶಾಖೆಗೆ ಬರಲಿ’ ಎಂದು ಶಾಸಕ ಕೆ.ಎಸ್.ಈಶ್ವರಪ್ಪ ಆಹ್ವಾನ ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಹೆಡಗೇವಾರ್ ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿರುವುದು ಇತಿಹಾಸದ ಪುಸ್ತಕಗಳಲ್ಲಿ ಉಲ್ಲೇಖವಾಗಿದೆ. ತೆಗೆದುಕೊಡುತ್ತೇನೆ. ಒಮ್ಮೆ ನೋಡಲಿ’ ಎಂದು ಹೇಳಿದರು.

‘ ಹೆಡಗೇವಾರ್ ಕೂಡ ಕಾಂಗ್ರೆಸ್‌ನಲ್ಲಿದ್ದರು. ಇದು ಸಿದ್ದರಾಮಯ್ಯಗೆ ಗೊತ್ತಾ? ಆರ್‌ಎಸ್‌ಎಸ್ ಪದಾಧಿಕಾರಿಗಳಲ್ಲಿ ಹಿಂದುಳಿದವರು, ದಲಿತರು ಇಲ್ಲ. ಇಲ್ಲಿರುವವರೆಲ್ಲರೂ ಹಿಂದೂಗಳೇ’ ಎಂದು ತಿರುಗೇಟು ನೀಡಿದರು.

‘ಕಾಂಗ್ರೆಸ್ ನಾಯಕರೇ ನಪುಂಸಕರು’

ಬೆಂಗಳೂರು: ಹುಬ್ಬಳ್ಳಿ ಮತ್ತು ಕಾಶ್ಮೀರದಲ್ಲಿ ರಾಷ್ಟ್ರಧ್ವಜ ಹಾರಿಸಲು ಬಿಡದೇ ನಪುಂಸಕರಾಗಿ ವರ್ತಿಸಿದ್ದು ಕಾಂಗ್ರೆಸ್ ನಾಯಕರು ಎಂದು ಇಂಧನ ಸಚಿವ ವಿ.ಸುನಿಲ್‌ಕುಮಾರ್ ಕಿಡಿಕಾರಿದ್ದಾರೆ.

ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಮೋದಿ ಮತ್ತು ಬೊಮ್ಮಾಯಿ ಅವರ ಜನಪರ ಆಡಳಿತವನ್ನು ಸಹಿಸದೇ ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ ಎಂದು ಹೇಳಿದರು.

ಶ್ರೀನಗರದಲ್ಲಿ ರಾಷ್ಟ್ರಧ್ವಜ ಹಾರಿಸಲು ಸಾಧ್ಯವಾಗಿದ್ದು ಮೋದಿ ಪ್ರಧಾನಿ ಆದ ಬಳಿಕ. ಕಾಂಗ್ರೆಸ್ ನಾಯಕರು ನಪುಂಸಕರಾಗಿದ್ದರಿಂದಲೇ ಅಲ್ಲಿ ರಾಷ್ಟ್ರಧ್ವಜ ಹಾರಿಸಲು ಬಿಡಲಿಲ್ಲ ಎಂದು ಟೀಕಿಸಿದರು.



ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರದ ಕಾನಗೋಡಿನ ದೊಡ್ಡ ಕೆರೆಯಲ್ಲಿ ಭಾನುವಾರ ನಡೆದ ‘ಕೆರೆ ಬೇಟೆ’ಗೆ ವಿವಿಧೆಡೆಗಳಿಂದ ಸಾವಿರಾರು ಜನರು ಕೂಣಿಯೊಂದಿಗೆ ಮೀನು ಹಿಡಿಯಲು ಆಗಮಿಸಿದ್ದರು

ಕೂಣಿ ತುಂಬ ಸಿಗದ ಮೀನು: ಬೇಟೆಗಾರರಿಂದ ಕಲ್ಲು ತೂರಾಟ

ಪ್ರಜಾವಾಣಿ ವಾರ್ತೆ

ಸಿದ್ದಾಪುರ (ಉತ್ತರಕನ್ನಡ ಜಿಲ್ಲೆ): ತಾಲ್ಲೂಕಿನ ಕಾನಗೋಡು ಗ್ರಾಮದ ದೊಡ್ಡಕೆರೆಯಲ್ಲಿ ಭಾನುವಾರ ‘ಕೆರೆ ಬೇಟೆ’ ವೇಳೆ ಗ್ರಾಮಸ್ಥರು ಹಾಗೂ ಪೊಲೀಸರ ಮೇಲೆ ಉದ್ರಿಕ್ತ ಮೀನು ಬೇಟೆಗಾರರು ಕಲ್ಲು ತೂರಾಟ ನಡೆಸಿದ್ದಾರೆ. ಈ ಘಟನೆಗೆ ಸಂಬಂಧಿಸಿ 10 ಜನರನ್ನು ಬಂಧಿಸಲಾಗಿದೆ.

ಗ್ರಾಮದ ಈಶ್ವರ ದೇವಸ್ಥಾನದ ಸಮಿತಿ ಆಯೋಜಿಸಿದ್ದ ‘ಕೆರೆ ಬೇಟೆ’ಯಲ್ಲಿ ಐದು ಸಾವಿರಕ್ಕೂ ಹೆಚ್ಚು ಜನ ಪಾಲ್ಗೊಂಡಿದ್ದರು. 40 ಎಕರೆ ವಿಸ್ತೀರ್ಣದ ಕೆರೆಯಲ್ಲಿ ಏಕಕಾಲಕ್ಕೆ ಸಾವಿರಾರು ಜನರು ಕೂಣಿಯೊಂದಿಗೆ (ಮೀನು ಹಿಡಿಯುವ ಸಾಧನ) ಮೀನು ಹಿಡಿಯಲು ಇಳಿದಿದ್ದರು.

ಪ್ರತಿ ಕೂಣಿಗೆ ₹ 600 ದರ ನಿಗದಿಪಡಿಸಲಾಗಿತ್ತು. ನಿರೀಕ್ಷಿತ ಪ್ರಮಾಣದ ಮೀನು ಸಿಗದೆ ಬೇಸರಗೊಂಡ ಜನರು ಕೂಣಿಗೆ ನೀಡಿದ ಹಣ ಮರಳಿಸಲು ಪಟ್ಟು ಹಿಡಿದರು. ಜನರ ಆಕ್ರೋಶ ಕಂಡ ದೇವಸ್ಥಾನ ಸಮಿತಿಯವರು ಸ್ಥಳದಿಂದ ಕಾಲ್ಕಿತ್ತಿದ್ದರು. ಇದರಿಂದ ಮತ್ತಷ್ಟು ಸಿಟ್ಟಿಗೆದ್ದ ಜನರು ಗ್ರಾಮದ ಕೆಲ ಮನೆಗಳಿಗೆ ತೆರಳಿ ಸಮಿತಿಯವರ ವಿಚಾರಣೆ ನಡೆಸತೊಡಗಿದ್ದರು. ಆಗ ಪರಸ್ಪರ ಘರ್ಷಣೆ ಉಂಟಾಯಿತು.

‘ಕೆರೆ ಬೇಟೆಗೆ ಶಿರಾಳಕೊಪ್ಪ, ಆನವಟ್ಟಿ, ಸೊರಬ, ದಾಸನಕೊಪ್ಪ ಭಾಗದಿಂದ ಸಾಕಷ್ಟು ಜನರು ಬಂದಿದ್ದರು. ಸಿಟ್ಟಿಗೆದ್ದ ಅವರು ಕಲ್ಲು ತೂರಾಟ ನಡೆಸಿದ್ದರು. ಪೊಲೀಸರ ಮೇಲೂ ಆಕ್ರೋಶ ಹೊರಹಾಕಿದರು. ಕೆಲ ಸಿಬ್ಬಂದಿ ಗಾಯಗೊಂಡರು’ ಎಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದರು.

ಹೆಚ್ಚುವರಿ ಎಸ್ಪಿ ಎಸ್.ಬದರೀನಾಥ, ‘ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿದೆ. ಜನರು ಹಳ್ಳಿಗಳಿಗೆ ನುಗ್ಗಿ ಆಸ್ತಿ ಹಾನಿ ಮಾಡಿದ ಆರೋಪಗಳಿವೆ. ಆಯೋಜಕರಿಂದ ಮಾಹಿತಿಯನ್ನು ಕಲೆ ಹಾಕುತ್ತಿದ್ದೇವೆ. ಘಟನೆಗೆ ಕಾರಣರಾದವರ ಮೇಲೆ ಶಿಸ್ತುಕ್ರಮ ಜರುಗಿಸುತ್ತೇವೆ’ ಎಂದರು.

ನಾಟಕ ಅಕಾಡೆಮಿ ಪ್ರಶಸ್ತಿ ಪ್ರದಾನ ಸಮಾರಂಭ: ಮಂಜಮ್ಮ ಜೋಗತಿ ಒತ್ತಾಯ

‘ಕಲಾವಿದರ ಮಾಸಾಶನ ಹೆಚ್ಚಿಸಲು ಒತ್ತಾಯ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ‘ಹಿರಿಯ ಕಲಾವಿದರಿಗೆ ನೀಡುತ್ತಿರುವ ಮಾಸಾಶನವನ್ನು ₹ 2 ಸಾವಿರದಿಂದ 5 ಸಾವಿರಕ್ಕೆ ಹೆಚ್ಚಿಸಬೇಕು’ ಎಂದು ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷೆ ಮಂಜಮ್ಮ ಜೋಗತಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ಕರ್ನಾಟಕ ನಾಟಕ ಅಕಾಡೆಮಿ ಇಲ್ಲಿನ ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಭಾನುವಾರ ಏರ್ಪಡಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅಕಾಡೆಮಿ ಅಧ್ಯಕ್ಷರು, ಸದಸ್ಯರು, ಪ್ರಶಸ್ತಿ ಪುರಸ್ಕೃತ ಕಲಾವಿದರ ಪರಿಚಯವಿರುವ ‘ಕಿರುಹೊತ್ತಿಗೆ’ ಬಿಡುಗಡೆ ಮಾಡಿ ಅವರು ಮಾತನಾಡಿದರು.

‘ರಂಗದ ಮೇಲೆ ರಾಜ, ರಾಣಿ, ಸೇವಕಿ ವೇಷ ಹಾಕಿ ಮಿಂಚುವ ಕಲಾವಿದರ ಬದುಕಿನಲ್ಲಿ ಕಷ್ಟಕಾರ್ಪಣ್ಯಗಳು ಅಡಗಿರುತ್ತವೆ. ಆದರೂ ಸ್ವಾಭಿಮಾನದಿಂದ ಬದುಕಿದ್ದಾರೆ. ರಂಗಭೂಮಿಯನ್ನೇ ವೃತ್ತಿಯಾಗಿ ಮಾಡಿಕೊಂಡರೆ ಹೊಟ್ಟೆ ತುಂಬುವುದಿಲ್ಲ. ಯುವ ಕಲಾವಿದರು ರಂಗಭೂಮಿಯನ್ನು ಹವ್ಯಾಸವಾಗಿ ಬೆಳೆಸಿಕೊಂಡು ಬದುಕಿಗೆ ಬೇರೆ ಯಾವುದಾದರೂ ಕ್ಷೇತ್ರ ಆಯ್ಕೆ ಮಾಡಿಕೊಳ್ಳಿ’ ಎಂದು ಅವರು ಸಲಹೆ ನೀಡಿದರು.

ಸಮಾರಂಭವನ್ನು ಸಚಿವ ಬಿ.ಶ್ರೀರಾಮುಲು ಅವರು ಉದ್ಘಾಟಿಸಿದರು. ನಾಟಕ ಅಕಾಡೆಮಿ ಅಧ್ಯಕ್ಷ ಆರ್. ಭೀಮಸೇನ, ಕರ್ನಾಟಕ ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷ ಬೆಳಗಲ್ಲು ವೀರಣ್ಣ, ಬಳ್ಳಾರಿ ನಗರ ಶಾಸಕ ಜಿ.ಸೋಮಶೇಖರರೆಡ್ಡಿ, ಅಕಾಡೆಮಿ ಸದಸ್ಯ ಪ್ರಭುದೇವ ಕಪ್ಪಗಲ್ಲು ಉಪಸ್ಥಿತರಿದ್ದರು.



ಕರ್ನಾಟಕ ನಾಟಕ ಅಕಾಡೆಮಿ ವಾರ್ಷಿಕ ಪ್ರಶಸ್ತಿ ಪುರಸ್ಕೃತ ಕಲಾವಿದರ ಜತೆ (ಎಡದಿಂದ ಕುಳಿತವರು) ಅಕಾಡೆಮಿ ಸದಸ್ಯ ಪ್ರಭುದೇವ ಕಪ್ಪಗಲ್ಲು, ಅಧ್ಯಕ್ಷ ಆರ್. ಭೀಮಸೇನ, ಲೆಕ್ಕ ಪರಿಶೋಧಕ ಜಯಪ್ರಕಾಶ್ ಗುಪ್ತಾ, ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷೆ ಮಂಜಮ್ಮ ಜೋಗತಿ, ಸಚಿವ ಬಿ. ಶ್ರೀರಾಮುಲು, ಶಾಸಕರಾದ ಜಿ. ಸೋಮಶೇಖರ ರೆಡ್ಡಿ, ವೈ.ಎಂ. ಸತೀಶ್, ಚೇಂಬರ್ ಆಫ್ ಕಾಮರ್ಸ್ ಕಾರ್ಯದರ್ಶಿ ಯಶವಂತ ರಾಜ್, ಅಧ್ಯಕ್ಷ ಸಿ. ಶ್ರೀನಿವಾಸರಾವ್, ನಾಟಕ ಅಕಾಡೆಮಿ ರಿಜಿಸ್ಟ್ರಾರ್ ಮಂಜುನಾಥ ಆರಾಧ್ಯ ಹಾಗೂ ಬುಡಾ ಅಧ್ಯಕ್ಷ ಪಾಲಣ್ಣ ಇದ್ದಾರೆ

ಪ್ರಶಸ್ತಿ ಪುರಸ್ಕೃತರು

ದತ್ತಾತ್ರೇಯ ಕುರಹಟ್ಟಿ, (ಬೆಂಗಳೂರು), ಹಾಲಯ್ಯ ವೀರಭದ್ರಯ್ಯ ಹುಡೇಜಾಲಿ (ಕೊಪ್ಪಳ), ಲತಾಶ್ರೀ ಸಿ.ಜಿ (ಬಳ್ಳಾರಿ), ಗಂಗಣ್ಣ ಬಿ. (ಬಳ್ಳಾರಿ), ಲಲಿತಾಬಾಯಿ ಲಾಲಪ್ಪ ದಶವಂತ (ವಿಜಯಪುರ), ಹನುಮಂತ ನಿಂಗಪ್ಪ ಸುಣಗದ (ಧಾರವಾಡ), ಸುಮಿತ್ರಾ ಯಲ್ಲವ್ವ ಮಾದರ (ಬಾಗಲಕೋಟೆ), ಅಡವಯ್ಯಸ್ವಾಮಿ ವಿ. ಕುಲಕರ್ಣಿ (ಬೆಳಗಾವಿ), ಶಾಂತಪ್ಪ ರುದ್ರಗೌಡ ಜಾಲಿಕೋನಿ (ಹಾವೇರಿ), ವಿಜಯಕುಮಾರ ಜಿತೂರಿ (ಬೆಂಗಳೂರು) ಕೆ. ವೀರಯ್ಯಸ್ವಾಮಿ (ದಾವಣಗೆರೆ), ಬಿ.ಪಿ ಯಮನೂರ ಸಾಬ್ (ದಾವಣಗೆರೆ), ಡಿ. ಅಡವೀಶಯ್ಯ (ತುಮಕೂರು), ಟಿ. ವಿಮಲಾಕ್ಷಿ (ಚಿತ್ರದುರ್ಗ), ಪ್ರೊ.ಎಸ್.ಸಿ. ಗೌರಿಶಂಕರ (ಶಿವಮೊಗ್ಗ), ಕೆ.ಎಂ. ನಂಜುಂಡಪ್ಪ (ಚಿಕ್ಕಮಗಳೂರು), ಎಂ.ಎನ್. ಸುರೇಶ್ (ಬೆಂಗಳೂರು), ಸರೋಜಾ ಹೆಗಡೆ (ಮೈಸೂರು), ಸರೋಜಿನಿ ಶೆಟ್ಟಿ (ಮಂಗಳೂರು), ಚಂದ್ರಹಾಸ ಸುವರ್ಣ (ಉಡುಪಿ), ಡಿ. ಕೆಂಪಣ್ಣ (ಬೆಂಗಳೂರು ಗ್ರಾಮಾಂತರ), ಜೆ. ಶ್ರೀನಿವಾಸ ಮೂರ್ತಿ (ತುಮಕೂರು), ಸುಧಾ ಹೆಗಡೆ (ಬೆಂಗಳೂರು), ಎಂ.ಸಿ. ಸುಂದರೇಶ (ಬೆಂಗಳೂರು). ಕುರಹಟ್ಟಿ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ದೊರೆತಿದ್ದರೆ, ಉಳಿದವರು ವಾರ್ಷಿಕ ರಂಗ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಪುಸ್ತಕ ಬಹುಮಾನ: ಮಹಾಂತೇಶ ರಾಮದುರ್ಗ (ಬೆಳಗಾವಿ) ಯುವ ರಂಗ ಪ್ರಶಸ್ತಿ, ಬದಿನೇಹಾಳು ಭೀಮಣ್ಣ (ಆದವಾನಿ), ಗಣೆನಾಡು ರಂಗ ಪ್ರಶಸ್ತಿ, ಎಚ್. ವೆಂಕಟೇಶ್ (ಬೆಂಗಳೂರು) ಕೆ. ಹಿರಣ್ಣಯ್ಯ ದತ್ತಿ ಪುರಸ್ಕಾರ, ಜಲಮಂಡಳಿ ಆರ್. ರಾಮಚಂದ್ರ (ಬೆಂಗಳೂರು), ಚಿಂದೋಡಿ ವೀರಪ್ಪ ದತ್ತಿ ಪುರಸ್ಕಾರ, ಸೀತಾ ಚಂದ್ರಕಾಂತ ಮಲ್ಲಾಬಾದಿ (ಕಲಬುರಗಿ) ಚಿಂದೋಡಿ ಲೀಲಾ ದತ್ತಿ ಪುರಸ್ಕಾರ, ಪಿ.ಎ. ಸರಸ್ವತಿ ಚಂಗಪ್ಪ (ಕೊಡಗು), ಮಾಲತಿಶ್ರೀ ದತ್ತಿ ಪುರಸ್ಕಾರ, ಟಿ.ಬಿ. ಡ್ಯಾಂ ಕನ್ನಡ ಕಲಾ ಸಂಘ (ಹೊಸಪೇಟೆ) ಕೆ. ರಾಮಚಂದ್ರಯ್ಯ ದತ್ತಿ ಪುರಸ್ಕಾರ, ಎಂ.ಎಂ. ಶಿವಪ್ರಕಾಶ್ (ಅವಿಭಜಿತ ಬಳ್ಳಾರಿ).

‘ಮುಂದಿನ ವರ್ಷದಿಂದ ಯೋಗ ಶಿಕ್ಷಣ’

ಪ್ರಜಾವಾಣಿ ವಾರ್ತೆ

ಆನೇಕಲ್ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ಮುಂದಿನ ಶೈಕ್ಷಣಿಕ ವರ್ಷದಿಂದ ಶಾಲೆ, ಕಾಲೇಜುಗಳಲ್ಲಿ ಯೋಗ ಶಿಕ್ಷಣ ಜಾರಿಗೆ ತರಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಇಲ್ಲಿಯ ಜಿಗಣಿಯ ಎಸ್-ವ್ಯಾಸ ಯೋಗ ವಿಶ್ವವಿದ್ಯಾಲಯದಲ್ಲಿ ಭಾನುವಾರ ಆಯೋಜಿಸಿದ್ದ 24ನೇ ಅಂತರರಾಷ್ಟ್ರೀಯ ಯೋಗ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಅವರು ಈ ವಿಷಯ ತಿಳಿಸಿದರು.

ವಿದ್ಯಾರ್ಥಿ ದಿಸೆಯಿಂದಲೇ ಒತ್ತಡ ಪರಿಸ್ಥಿತಿಯ ನಿರ್ವಹಣೆ ಕಲಿಸಲು ಮತ್ತು ಯೋಗದ ಮಹತ್ವ ತಿಳಿಸಲು 8ನೇ ತರಗತಿಯಿಂದ ಕಾಲೇಜು ಹಂತದವರೆಗೆ ಯೋಗ ಶಿಕ್ಷಣ ಜಾರಿಗೆ ತರಲಾಗುವುದು. ಈ ಬಗ್ಗೆ ತಜ್ಞರೊಂದಿಗೆ ಚರ್ಚಿಸಲಾಗುವುದು ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ಜಮೀನಿನಲ್ಲಿ ರೋಟರ್‌ಗೆ ಸಿಲುಕಿ ಛಿದ್ರವಾದ ಮಹಿಳೆ



ಸೌಮ್ಯ

ಕೋಲಾರ: ತಾಲ್ಲೂಕಿನ ಕಲ್ವಮಂಜಲಿ ಗ್ರಾಮದ ಜಮೀನಿನಲ್ಲಿ ಭಾನುವಾರ ಮಹಿಳೆಯೊಬ್ಬರು ಆಕಸ್ಮಿಕವಾಗಿ ಟ್ರ್ಯಾಕ್ಟರ್ ರೋಟರ್‌ಗೆ ಸಿಲುಕಿ ಮೃತಪಟ್ಟಿದ್ದು, ದೇಹ ಛಿದ್ರವಾಗಿದೆ.

ಟ್ರ್ಯಾಕ್ಟರ್‌ಗೆ ರೋಟರ್ ಹಾಕಿ ಉಳುಮೆ ಮಾಡುತ್ತಿದ್ದ ಪತಿ ರಾಜೇಶ್‌ಗೆ ಮೊಬೈಲ್ ಕೊಡಲು ಸೌಮ್ಯ (35) ಹೋದಾಗ ಈ ದುರ್ಘಟನೆ ನಡೆದಿದೆ.

ರೋಟರ್‌ಗೆ ಸೀರೆಯ ಸೆರಗು ಸಿಲುಕಿದ್ದು, ಕೂಡಲೇ ಯಂತ್ರದ ಕಡೆಗೆ ಎಳೆದುಕೊಂಡಿದೆ. ಟ್ರ್ಯಾಕ್ಟರ್ ಚಲಿಸುತ್ತಿದ್ದ ಕಾರಣ ಸೌಮ್ಯ ಅವರ ದೇಹ ರೋಟರ್‌ನಲ್ಲಿ ಸಿಲುಕಿ ತುಂಡು, ತುಂಡಾಗಿದೆ. ಪತಿ ಟ್ರ್ಯಾಕ್ಟರ್ ನಿಲ್ಲಿಸಿ ಕೆಳಗಿಳಿದು ಬರುವಷ್ಟರಲ್ಲಿ ಸೌಮ್ಯ ಅವರ ರುಂಡ, ಮುಂಡ, ಕೈ ಕಾಲು ಪ್ರತ್ಯೇಕಗೊಂಡು ಸ್ಥಳದಲ್ಲೇ ಬಿದ್ದಿದ್ದವು ಎಂದು ಪೊಲೀಸರು ತಿಳಿಸಿದ್ದಾರೆ. ವೇಮಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೋಟೆ ಅಬ್ಬಿ ಜಲಪಾತ; ಮೂವರ ಸಾವು

ಮಡಿಕೇರಿ: ತಾಲ್ಲೂಕಿನ ಮುಕ್ಕೊಡ್ಲು ಕೋಟೆ ಅಬ್ಬಿ ಜಲಪಾತಕ್ಕೆ ಬಂದಿದ್ದ ತೆಲಂಗಾಣದ ಮೂವರು ಪ್ರವಾಸಿಗರು ನೀರುಪಾಲಾಗಿದ್ದಾರೆ. ಶ್ಯಾಮ (36), ಶಾಹಿಂದ್ರ (16) ಮತ್ತು ಶ್ರೀಹರ್ಷ(18) ಅವರು ನೀರಿನ ಸೆಳೆತಕ್ಕೆ ಸಿಲುಕಿ ಮೃತಪಟ್ಟಿದ್ದಾರೆ. ಪ್ರವಾಸಕ್ಕೆ ಬಂದಿದ್ದ ತೆಲಂಗಾಣದ 13 ಪ್ರವಾಸಿಗರು ಕುಶಾಲನಗರ ಸಮೀಪದ ಹೋಂಸ್ಟೇಯಲ್ಲಿ ವಾಸ್ತವ್ಯ ಮಾಡಿದ್ದರು. ಭಾನುವಾರ ಬೆಳಿಗ್ಗೆ ಜಲಪಾತಕ್ಕೆ ತೆರಳಿದ್ದರು. ನೀರಿಗೆ ಇಳಿದು ಆಟವಾಡುವಾಗ ಅವಘಡ ಸಂಭವಿಸಿದೆ. ಅಗ್ನಿ ಶಾಮಕದಳ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಮೃತದೇಹ ಹೊರಗೆ ತೆಗೆಯಲಾಯಿತು.

ಸೋಮವಾರ, ಮೇ 30, 2022 | ₹ 6.00


www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರತಿಭಟನೆ...
ಪ್ರಾಯೋಗಿಕ ಅಭ್ಯಾಸಕ್ಕೆ ಸ್ಥಳೀಯವಾಗಿ ಅವಕಾಶ ಕಲ್ಪಿಸಲು ಆಗ್ರಹಿಸಿ ಚೀನಾದಲ್ಲಿ ವೈದ್ಯಕೀಯ ಶಿಕ್ಷಣ ಪಡೆಯುತ್ತಿರುವ ಭಾರತೀಯ ವಿದ್ಯಾರ್ಥಿಗಳು ನವದೆಹಲಿಯಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು



ಎಐಟಿಯುಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಮರ್‌ಜೀತ್ ಕೌರ್ ಟೀಕೆ

‘ರಾಷ್ಟ್ರದ ಸಂಪತ್ತು ಮಾರುವವರು ದೇಶವಿರೋಧಿಗಳು’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 32 ವರ್ಷಗಳ ನಂತರ ನಡೆದ ಸಮ್ಮೇಳನ
- ಕೆಂಬಾವುಟ ಹಿಡಿದು ಕಾರ್ಮಿಕರಿಂದ ಮೆರವಣಿಗೆ
- ದಾರಿಯುದ್ದಕ್ಕೂ ಸರ್ಕಾರದ ವಿರುದ್ಧ ಘೋಷಣೆ

ಮೈಸೂರು: ‘ಕಾರ್ಮಿಕರು ತಮ್ಮ ಬೆವರಿನಿಂದ ಕಟ್ಟಿದ ರಾಷ್ಟ್ರದ ಸಂಪತ್ತನ್ನು ಮಾರಾಟ ಮಾಡುವವರೇ ದೇಶವಿರೋಧಿಗಳು’ ಎಂದು ಎಐಟಿಯುಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಮರ್‌ಜೀತ್ ಕೌರ್ ತಿಳಿಸಿದರು.

ಇಲ್ಲಿನ ಪುರಭವನದಲ್ಲಿ ಭಾನುವಾರ ಆರಂಭವಾದ ಮೂರು ದಿನಗಳ ಎಐಟಿಯುಸಿಯ 11ನೇ ರಾಜ್ಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

‘ಅಟಲ್‌ಬಿಹಾರಿ ವಾಜಪೇಯಿ, ಎಚ್‌.ಡಿ.ದೇವೇಗೌಡ ಸೇರಿದಂತೆ ಹಿಂದೆ ಪ್ರಧಾನಿಯಾಗಿದ್ದ ಹಲವರ ಅವಧಿಯಲ್ಲಿ ಸರ್ಕಾರವನ್ನು ಟೀಕಿಸಿದ್ದೆವು. ಆದರೆ, ಈಗ ಸರ್ಕಾರವನ್ನು ಟೀಕಿಸಿದವರಿಗೆ ರಾಷ್ಟ್ರವಿರೋಧಿಗಳು ಎಂಬ ಪಟ್ಟ ಕಟ್ಟಲಾಗುತ್ತಿದೆ’ ಎಂದು ಟೀಕಿಸಿದರು.

‘ಬ್ರಿಟಿಷರ ವಿರುದ್ಧ ಹೋರಾಡಿ ಪಡೆದ ಹಕ್ಕುಗಳನ್ನು ಇಂದು ನರೇಂದ್ರ ಮೋದಿ ವಾಪಸು ಪಡೆದುಕೊಂಡು ಮತ್ತೆ ಬ್ರಿಟಿಷ್ ಮಾದರಿ ಆಡಳಿತವನ್ನು ಸ್ಥಾಪಿಸುತ್ತಿದ್ದಾರೆ. ದೇಶದ ಪರಿಸ್ಥಿತಿ ದಿನದಿಂದ ದಿನಕ್ಕೆ ಹದಗೆಡುತ್ತಿದೆ. ಮುಂದಿನ ಚುನಾವಣೆಗಳಿಗಾಗಿ ಮಸೀದಿಗಳನ್ನು ಅಗೆಯುವುದೇ ಸರ್ಕಾರದ ಕಾರ್ಯಸೂಚಿಯಾಗಿದೆ. ಕೋಮುಸೌಹಾರ್ದ ಹಾಳು ಮಾಡಲಾಗುತ್ತಿದೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ಕೇಂದ್ರದ ಜನವಿರೋಧಿ ನೀತಿಗಳು ಕೋವಿಡ್‌ಗಿಂತಲೂ ಅಪಾಯಕಾರಿ. ಏರುತ್ತಿರುವ ಇಂಧನ ದರ, ಅಡುಗೆ ಎಣ್ಣೆ ದರ, ಕಡಿತಗೊಳ್ಳುತ್ತಿರುವ ವೇತನಗಳು, ಉದ್ಯೋಗನಷ್ಟ ಹೀಗೆ ಹಲವು ಸಮಸ್ಯೆಗಳಿಗೆ ಕೇಂದ್ರ ಸರ್ಕಾರದ ನೀತಿಗಳೇ ಕಾರಣವಾಗಿದೆ’ ಎಂದು ಹರಿಹಾಯ್ದರು.

ಹೋರಾಟದ ಮೂಲಕ ಸರ್ಕಾರವನ್ನು ಮಣಿಸಿ: ‘ಕೇಂದ್ರ ಹಾಗೂ ಕೆಲವು ರಾಜ್ಯಸರ್ಕಾರಗಳು ವಿವೇಚನಾರಹಿತ ಕಾಯ್ದೆಗಳನ್ನು ಜಾರಿಗೆ ತರುತ್ತಿವೆ. ಬೆಲೆ ಏರಿಕೆ ಮಿತಿ ಮೀರುತ್ತಿದೆ. ಹೋರಾಟದ ಮೂಲಕವೇ ಸರ್ಕಾರವನ್ನು ಮಣಿಸಬೇಕು’ ಎಂದು ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಎಚ್‌.ಆರ್‌. ಶೇಷಾದ್ರಿ ಕರೆಕೊಟ್ಟರು.

ಇದಕ್ಕೂ ಮುನ್ನ ನಡೆದ ಮೆರವಣಿಗೆಯಲ್ಲಿ ಕೆಂಬಾವುಟ ಹಿಡಿದಿದ್ದ ಸಾವಿರಕ್ಕೂ ಅಧಿಕ ಹೋರಾಟಗಾರರು ಪಾಲ್ಗೊಂಡರು. ಸಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆ, ಅಶೋಕರಸ್ತೆ ಮೂಲಕ ಮೆರವಣಿಗೆಯಲ್ಲಿ ಪುರಭವನಕ್ಕೆ ಬಂದರು. ಪುರುಷರು ಕೆಂಪಂಗಿಯಲ್ಲಿ,ಮಹಿಳೆಯರು ಕೆಂಪು ಸೀರೆ ಧರಿಸಿ ಗಮನಸೆಳೆದರು.

ಸಮ್ಮೇಳನ 32 ವರ್ಷಗಳ ನಂತರ ಮೈಸೂರಿನಲ್ಲಿ ನಡೆಯುತ್ತಿದೆ. ಎಐಟಿಯುಸಿಯ ಪ್ರಧಾನ ಕಾರ್ಯದರ್ಶಿ ವಿಜಯಭಾಸ್ಕರ್, ಕರ್ನಾಟಕ ರಾಜ್ಯ ಸಮಿತಿ ಅಧ್ಯಕ್ಷ ಎಚ್‌.ವಿ.ಅನಂತ ಸುಬ್ಬರಾವ್, ಮುಖಂಡ ಮಹದೇವನ್, ನಿವೃತ್ತ ಪ್ರಾಧ್ಯಾಪಕ ಪಿ.ವಿ.ನಂಜರಾಜೇ ಅರಸ್ ಇದ್ದರು.



ಎಐಟಿಯುಸಿಯ 11ನೇ ರಾಜ್ಯ ಸಮ್ಮೇಳನದ ಪ್ರಯುಕ್ತ ಮೈಸೂರಿನಲ್ಲಿ ಸಂಘಟನೆಯ ನೂರಾರು ಕಾರ್ಯಕರ್ತರು ಮೆರವಣಿಗೆ ನಡೆಸಿದರು



ಗಂಗಾರತಿ ದರ್ಶನ ಸೋಮವತಿ ಅಮಾವಾಸ್ಯ ಹಿನ್ನಲೆಯಲ್ಲಿ ಹರಿದ್ವಾರದಲ್ಲಿ ಭಾನುವಾರ ಸಾವಿರಾರು ಭಕ್ತರು ಗಂಗಾರತಿ ದರ್ಶನ ಪಡೆದರು –ಪಿಟಿಐ ಚಿತ್ರ

ಕೆಪಿಎಸ್‌ಸಿ ಬಾಗಿಲು ತಟ್ಟಲಿರುವ ಶಾಸಕ ಸುರೇಶ್ ಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದಲ್ಲಿ (ಕೆಪಿಎಸ್‌ಸಿ) ಪಾರದರ್ಶಕತೆ ಮತ್ತು ವೃತ್ತಿಪರತೆ ತರುವಂತೆ ಆಗ್ರಹಿಸಿ ಮಂಗಳವಾರ ಬೆಳಿಗ್ಗೆ ಆಯೋಗದ ಬಾಗಿಲು ತಟ್ಟುವ ಮೂಲಕ ಪ್ರತಿಭಟನೆ ನಡೆಸುವುದಾಗಿ ಬಿಜೆಪಿ ಶಾಸಕ ಎಸ್‌. ಸುರೇಶ್ ಕುಮಾರ್ ತಿಳಿಸಿದ್ದಾರೆ.

2021 ರ ಫೆಬ್ರುವರಿಯಲ್ಲಿ ನಡೆಸಿದ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿ ಪರೀಕ್ಷೆಯ ಫಲಿತಾಂಶವನ್ನು ಇನ್ನೂ ಪ್ರಕಟಿಸಿಲ್ಲ. ಈ ಕುರಿತು ಅಸಮಾಧಾನ ವ್ಯಕ್ತಪಡಿಸಿ ಆಯೋಗದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗೆ ಪತ್ರ ಬರೆದಿದ್ದ ಸುರೇಶ್ ಕುಮಾರ್, ತಕ್ಷಣ ಫಲಿತಾಂಶ ಪ್ರಕಟಿಸುವಂತೆ ಆಗ್ರಹಿಸಿದ್ದರು. ಆದರೆ, ಆಯೋಗದಿಂದ ಸ್ಪಂದನೆ ಬಾರದ ಕಾರಣ ಈಗ ಪ್ರತಿಭಟನೆಗೆ ಮುಂದಾಗಿದ್ದಾರೆ.

‘ರಾಜ್ಯ ಸರ್ಕಾರದ ಆಡಳಿತ ಯಂತ್ರದ ನಿರ್ವಹಣೆಗೆ ದಕ್ಷ ಮತ್ತು ಸಮರ್ಥ ಮಾನವ ಸಂಪನ್ಮೂಲವನ್ನು ಸಕಾಲದಲ್ಲಿ ಒದಗಿಸಬೇಕಾದ ಕೆಪಿಎಸ್‌ಸಿ ತನ್ನ ನಿಷ್ಕ್ರಿಯತೆಯ ಮೂಲಕ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಸಂಸ್ಥೆಯ ಸ್ವಾಯತ್ತತೆಯೇ ಅದರ ಜವಾಬ್ದಾರಿ ನಿರ್ವಹಣೆಗೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಸಕಾಲದಲ್ಲಿ ಪರೀಕ್ಷೆ ಫಲಿತಾಂಶ ನಡೆಸದೇ, ವಿವಿಧ ಇಲಾಖೆಗಳ ನೇಮಕಾತಿ ಪಟ್ಟಿ ಅಂತಿಮಗೊಳಿಸದೇ ಇರುವುದರಿಂದ ತೊಂದರೆಯಾಗುತ್ತಿದೆ’ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಕೇಂದ್ರ ಲೋಕಸೇವಾ ಆಯೋಗದ ಮಾದರಿಯಲ್ಲಿ ಕೆಪಿಎಸ್‌ಸಿ ಕಾರ್ಯನಿರ್ವಹಿಸಲು ಸಾಧ್ಯವಿಲ್ಲವೆ? ಕೆಪಿಎಸ್‌ಸಿ ಹಲವು ವರ್ಷಗಳಿಂದ ಎಷ್ಟು ಪರೀಕ್ಷೆಗಳನ್ನು ನಡೆಸಿದೆ? ಎಷ್ಟರಲ್ಲಿ ಫಲಿತಾಂಶ ಪ್ರಕಟಿಸಲಾಗಿದೆ? ಎಷ್ಟು ಜನರಿಗೆ ಉದ್ಯೋಗ ನೀಡಲಾಗಿದೆ? ವಿಳಂಬಕ್ಕೆ ಕಾರಣಗಳೇನು? ದಕ್ಷ, ಪ್ರಾಮಾಣಿಕ ಅಧಿಕಾರಿಗಳನ್ನು ಮುಖ್ಯವಾಹಿನಿಗೆ ತರಲು ಸಂಸ್ಥೆಯು ರೂಪಿಸಿದ ಕ್ರಿಯಾಯೋಜನೆ ಏನು? ಎಂಬ ಪ್ರಶ್ನೆಗಳೊಂದಿಗೆ ಕೆಪಿಎಸ್‌ಸಿ ಕಚೇರಿಯ ಬಾಗಿಲಿನ ಮುಂದೆ ಬುಧವಾರ ಬೆಳಿಗ್ಗೆ ನಿಲ್ಲುತ್ತೇನೆ’ ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಕಾಂಗ್ರೆಸ್ ತೊರೆದ ‘ಮುಖ್ಯಮಂತ್ರಿ’ ಚಂದ್ರು

ಬೆಂಗಳೂರು: ಚಿತ್ರನಟ ‘ಮುಖ್ಯಮಂತ್ರಿ’ ಚಂದ್ರು ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ಶನಿವಾರ ರಾಜೀನಾಮೆ ಸಲ್ಲಿಸಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿರುವ ಚಂದ್ರು, ‘ವೈಯಕ್ತಿಕ ಕಾರಣಗಳಿಂದ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆರಾಜೀನಾಮೆ ನೀಡುತ್ತಿದ್ದೇನೆ. ಕೆಪಿಸಿಸಿ ಸಾಂಸ್ಕೃತಿಕ ಘಟಕದ ಅಧ್ಯಕ್ಷ ಸ್ಥಾನದ ಜವಾಬ್ದಾರಿ ವಹಿಸಿಕೊಳ್ಳುವುದಿಲ್ಲ’ ಎಂದು ತಿಳಿಸಿದ್ದಾರೆ. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೂ ರಾಜೀನಾಮೆ ಪತ್ರದ ಪ್ರತಿಯನ್ನು ಕಳುಹಿಸಿದ್ದಾರೆ.

ರಾಜೀನಾಮೆ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಚಂದ್ರು, ‘ಪಕ್ಷದಲ್ಲಿನ ಕೆಲವು ಬೆಳವಣಿಗೆಗಳಿಂದ ಬೇಸರವಾಗಿ ರಾಜೀನಾಮೆ ನೀಡಿ, ಹೊರ ಬಂದಿದ್ದೇನೆ. 2018ರಲ್ಲಿ ವಿಧಾನ ಪರಿಷತ್‌ಗೆ ನಾಮಕರಣ ಮಾಡಲು ನನ್ನ ಹೆಸರು ಅಂತಿಮಗೊಂಡಿತ್ತು. ಆಗ ಕೊನೆಯ ಕ್ಷಣದಲ್ಲಿ ಪ್ರಭಾವಿ ನಾಯಕ ರೊಬ್ಬರ ಹಸ್ತಕ್ಷೇಪದಿಂದ ಪಟ್ಟಿಯಿಂದ ಕೈಬಿಡಲಾಗಿತ್ತು. ಆ ಬಳಿಕವೂ ನ್ಯಾಯ ದೊರಕಲಿಲ್ಲ’ ಎಂದರು.

ರಾಜ್ಯಸಭೆ ಸದಸ್ಯ ಸ್ಥಾನಕ್ಕೆ ಬೇಡಿಕೆ ಇಟ್ಟು ರಾಜೀನಾಮೆ ಸಲ್ಲಿಸಲಾಗಿದೆ ಎಂಬುದು ಸುಳ್ಳು ಮಾಹಿತಿ. ಯಾವ ಪಕ್ಷ ಸೇರಬೇಕು ಎಂಬುದರ ಕುರಿತು ಇನ್ನೂ ತೀರ್ಮಾನಿಸಿಲ್ಲ. ಅತಿ ಹಿಂದುಳಿದ ಸಮು ದಾಯಗಳ ಪರವಾದ ತಮ್ಮ ಹೋರಾಟ ಮುಂದುವರಿಯುತ್ತದೆ ಎಂದು ತಿಳಿಸಿದರು.



ಮೊದಲು ಬಿಜೆಪಿಯಲ್ಲಿದ್ದ ‘ಮುಖ್ಯಮಂತ್ರಿ’ ಚಂದ್ರು, ವಿಧಾನ ಪರಿಷತ್ ಸದಸ್ಯ, ಕನ್ನಡ ಅಭಿವೃದ್ಧಿ ಪ್ರಾಧಿಕಾಐರದ ಅಧ್ಯಕ್ಷರಾಗಿದ್ದರು. 2013ರಲ್ಲಿ ಬಿಜೆಪಿಗೆ ವಿದಾಯ ಹೇಳಿ ಕಾಂಗ್ರೆಸ್ ಪಕ್ಷ ಸೇರಿದ್ದರು.

ಕೆಪಿಸಿಸಿ ಪದಾಧಿಕಾರಿಗಳಿಗೆ ಜವಾಬ್ದಾರಿ ಹಂಚಿಕೆ

ಬೆಂಗಳೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ನೂತನ ಪದಾಧಿಕಾರಿಗಳಿಗೆ ಜವಾಬ್ದಾರಿ ಹಂಚಿಕೆ ಮಾಡಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಭಾನುವಾರ ಆದೇಶ ಹೊರಡಿಸಿದ್ದಾರೆ.

ಕೆಪಿಸಿಸಿ ಉಪಾಧ್ಯಕ್ಷರಿಗೆ ಜಿಲ್ಲೆ ಮತ್ತು ವಿಭಾಗವಾರು ಜವಾಬ್ದಾರಿ ನೀಡಲಾಗಿದೆ. ಪ್ರಧಾನ ಕಾರ್ಯದರ್ಶಿಗಳಿಗೆ ವಿಧಾನಸಭಾ ಕ್ಷೇತ್ರವಾರು ಜವಾಬ್ದಾರಿ ಹಂಚಿಕೆ ಮಾಡಲಾಗಿದೆ. ಕೆಲವರಿಗೆ ಕೆಪಿಸಿಸಿ ಕಚೇರಿ, ಚುನಾವಣಾ ಸಿದ್ಧತಾ ಸಭೆಗಳ ಜವಾಬ್ದಾರಿಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಸಮಿತಿಗಳ ಸಭೆ: ರಾಜ್ಯದಲ್ಲೂ ಕಾಂಗ್ರೆಸ್ ಚಿಂತನ ಶಿಬಿರ ನಡೆಸುವುದಕ್ಕಾಗಿ ರಚಿಸಿರುವ ಏಳು ಸಮಿತಿಗಳ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಸದಸ್ಯರ ಜತೆ ಶಿವಕುಮಾರ್ ಮಂಗಳವಾರ ಸಭೆ ನಡೆಸಲಿದ್ದಾರೆ. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಕೂಡ ಸಭೆಯಲ್ಲಿ ಭಾಗವಹಿಸಲಿದ್ದಾರೆ.

‘ದಲಿತರು ಕಾಂಗ್ರೆಸ್‌ನಲ್ಲಿ ಸಿಎಂ ಆಗಬಹುದು’

ಪ್ರಜಾವಾಣಿ ವಾರ್ತೆ

ಬೆಂಗಳೂರು:‘ ಕಾಂಗ್ರೆಸ್‌ನಲ್ಲಿ ದಲಿತರು ಮುಖ್ಯಮಂತ್ರಿಯಾಗಲು ಅವಕಾಶವಿದೆ ಎಂಬ ನಂಬಿಕೆ ನನಗಿದೆ’ ಎಂದು ಕಾಂಗ್ರೆಸ್ ಶಾಸಕ ಡಾ.ಜಿ. ಪರಮೇಶ್ವರ ಹೇಳಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಅಧಿಕೃತ ನಿವಾಸಕ್ಕೆ ಭಾನುವಾರ ಭೇಟಿ ನೀಡಿದ ಅವರು ಕೆಲಕಾಲ ಚರ್ಚೆ ನಡೆಸಿದರು. ಬಳಿಕ ಸುದ್ದಿಗಾರರ ಜತೆ ಮಾತನಾಡುವಾಗ, ‘ಮುಖ್ಯಮಂತ್ರಿ ಹುದ್ದೆಯ ಕನಸು ಕಾಣುವ ದಲಿತರು ಹುಚ್ಚರು’ ಎಂಬ ಕೇಂದ್ರ ಸಚಿವ ಎ. ನಾರಾಯಣಸ್ವಾಮಿ ಅವರ ಹೇಳಿಕೆ ಕುರಿತು ಪ್ರತಿಕ್ರಿಯಿಸಿದರು.

‘ದಲಿತರನ್ನು ಮುಖ್ಯಮಂತ್ರಿ ಮಾಡುವುದಿಲ್ಲ ಎಂದು ಬಿಜೆಪಿ ನಾಯಕರು ಸ್ಪಷ್ಟಪಡಿಸಿರಬಹುದು. ನಮ್ಮ ಪಕ್ಷದ ಬಗ್ಗೆ ಅವರಿಗೆ ಏನು ಗೊತ್ತು? ಬಿಜೆಪಿಯ ಕುರಿತು ಮಾತ್ರ ಅವರಿಗೆ ತಿಳಿದಿದೆ. ಕಾಂಗ್ರೆಸ್‌ನಲ್ಲಿ ಎಲ್ಲರಿಗೂ ಅವಕಾಶಗಳಿವೆ’ ಎಂದರು.

ಇತಿಹಾಸ ತಿರುಚಬಾರದು: ‘ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು ಯಾರು ಎಂಬುದು ಎಲ್ಲರಿಗೂ ಗೊತ್ತು. ಹೆಡಗೇವಾರ್ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದ ಕುರಿತು ನಾನು ಯಾವತ್ತೂ ಓದಿಲ್ಲ. ಈಗ ಇತಿಹಾಸವನ್ನು ತಿರುಚುವ ಕೆಲಸ ಮಾಡಬಾರದು’ ಎಂದು ಅವರು ಹೇಳಿದರು.

‘ಪಕ್ಷದ ಕುರಿತು ನನಗೆ ಯಾವುದೇ ಅಸಮಾಧಾನ ಇಲ್ಲ. ನಾಯಕರ ಮೇಲೂ ಸಿಟ್ಟು ಇಲ್ಲ. ವೈಯಕ್ತಿಕ ಕಾರಣಗಳಿಂದಾಗಿ ಇತ್ತೀಚೆಗೆ ಕೆಲವು ಸಭೆಗಳಲ್ಲಿ ಭಾಗವಹಿಸಲು ಸಾಧ್ಯವಾಗಿರಲಿಲ್ಲ. ಕ್ಷೇತ್ರ ಮತ್ತು ಜಿಲ್ಲೆಯಲ್ಲೇ ಹೆಚ್ಚು ಕೆಲಸ ಮಾಡುತ್ತಿದ್ದೇನೆ. ವಿಧಾನ ಪರಿಷತ್ ಚುನಾವಣೆಯಲ್ಲಿ ಎಲ್ಲರೂ ಒಗ್ಗೂಡಿ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಿದ್ದೇವೆ’ ಎಂದರು.

ಸಿದ್ದರಾಮಯ್ಯ ಮತ್ತು ತಮ್ಮ ಸಂಬಂಧ ತುಂಬಾ ಹಳೆಯದು. ಇಬ್ಬರ ನಡುವೆ ಯಾವುದೇ ರೀತಿಯ ವೈಮನಸ್ಸಿಲ್ಲ. ಅವರ ಭೇಟಿಯಲ್ಲೂ ವಿಶೇಷತೆ ಇಲ್ಲ. ಇತ್ತೀಚಿನ ಕೆಲವು ವಿಚಾರಗಳ ಕುರಿತು ಚರ್ಚೆ ನಡೆಸಲಾಗಿದೆ ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

‘ಭಾರತ ದ್ರಾವಿಡರು, ಆದಿವಾಸಿಗಳಿಗೆ ಸೇರಿದ್ದು’

ಠಾಣೆ(ಪಿಟಿಐ): ಭಾರತ ದೇಶವು ದ್ರಾವಿಡರು ಮತ್ತು ಆದಿವಾಸಿಗಳಿಗೆ ಸೇರಿದ್ದಾಗಿದೆಯೇ ಹೊರತು, ತಮಗೆ ಅಥವಾ ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ, ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸೇರಿದ್ದಲ್ಲ ಎಂದು ಎಐಎಂಐಎಂ ಅಧ್ಯಕ್ಷ ಅಸಾದುದ್ದೀನ್ ಒವೈಸಿ ಅವರು ಹೇಳಿದ್ದಾರೆ.

ಮಹಾರಾಷ್ಟ್ರದ ಭಿವಂಡಿಯಲ್ಲಿ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ ಒವೈಸಿ ಅವರು, 'ಶಿವಸೇನಾ ಸಂಸದ ಸಂಜಯ್ ರಾವುತ್ ಅವರ ರಕ್ಷಣೆಗಾಗಿ ಪ್ರಧಾನಿ ಮೋದಿ ಅವರನ್ನು ಭೇಟಿ ಮಾಡುವ ಎನ್‌ಸಿಪಿ ನಾಯಕ ಪವಾರ್ ಅವರು ಜಾರಿ ನಿರ್ದೇಶನಾಲಯದಿಂದ ಬಂಧನಕ್ಕೊಳಗಾಗಿರುವ ರಾಜ್ಯದ ಸಚಿವ ನವಾಬ್ ಮಲಿಕ್ ಪರವಾಗಿ ಮೋದಿ ಅವರನ್ನು ಏಕೆ ಭೇಟಿ ಮಾಡಿಲ್ಲ?' ಎಂದು ಪ್ರಶ್ನಿಸಿದರು.

ಕಾಂಗ್ರೆಸ್, ಬಿಜೆಪಿ, ಶಿವಸೇನಾ ಮತ್ತು ಎನ್‌ಸಿಪಿ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಅವರು, ಈ ಎಲ್ಲಾ ಪಕ್ಷಗಳಿಗೆ ತಮ್ಮ ಮತ ಬ್ಯಾಂಕ್ ರಕ್ಷಣೆ ಮುಖ್ಯ. ಆದರೆ, ಅಲ್ಪಸಂಖ್ಯಾತ ಸಮುದಾಯವನ್ನು ಗುರಿಯಾಗಿಸಿಕೊಂಡಾಗ ಯಾರೂ ಪ್ರತಿಕ್ರಿಯಿಸುವುದಿಲ್ಲ.

‘ಈ ದೇಶ ಯಾರಿಗಾದರೂ ಸೇರುವುದಾಗಿದ್ದರೆ, ಅದು ದ್ರಾವಿಡರು ಮತ್ತು ಆದಿವಾಸಿಗಳಿಗೆ ಮಾತ್ರ. ಅವರು 600 ವರ್ಷಗಳ ಇತಿಹಾಸದ ಉದಾಹರಣೆ ಕೇಳುತ್ತಾರೆ. ಆದರೆ, ಈ ದೇಶ ಪವಾರ್, ಠಾಕ್ರೆ, ಒವೈಸಿ, ಮೋದಿ ಅಥವಾ ಅಮಿತ್ ಶಾ ಅವರಿಗೆ ಸೇರಿದ್ದಲ್ಲ ಎಂಬ ಬಗ್ಗೆ ನಾನು 65,000 ವರ್ಷಗಳ ಇತಿಹಾಸ ನೀಡುತ್ತೇನೆ’ ಎಂದು ಅವರು ಸವಾಲು ಹಾಕಿದರು.

ಗಗನನೌಕೆ ವಿನ್ಯಾಸಕ್ಕೆ ವೈದ್ಯರ ನೆರವು: ಇಸ್ರೊ ಆಸಕ್ತಿ

ನವದೆಹಲಿ (ಪಿಟಿಐ): ಮಾನವ ಸಹಿತ ಬಾಹ್ಯಾಕಾಶ ಕಾರ್ಯಕ್ರಮ ‘ಗಗನಯಾನ’ಕ್ಕೆ ಸಿದ್ಧತೆ ನಡೆಸುತ್ತಿರುವ ಇಸ್ರೊ, ಗಗನನೌಕೆ ವಿನ್ಯಾಸಕ್ಕೆ ವೈದ್ಯರ ನೆರವು ಪಡೆಯಲು ಮುಂದಾಗಿದೆ.

ಮಾನವನ ಮೇಲೆ ಗಗನನೌಕೆ ಬೀರುವ ಪರಿಣಾಮಗಳನ್ನು ತಿಳಿದುಕೊಂಡು, ಅದಕ್ಕೆ ಪೂರಕವಾಗಿ ಗಗನನೌಕೆಯನ್ನು ವಿನ್ಯಾಸಗೊಳಿಸುವ ಉದ್ದೇಶದಿಂದ ವೈದ್ಯರೊಂದಿಗೆ ವ್ಯಾಪಕ ಸಮಾಲೋಚನೆ ಕೈಗೊಳ್ಳಲಾಗಿದೆ ಎಂದು ಇಸ್ರೊ ಮುಖ್ಯಸ್ಥ ಎಸ್. ಸೋಮನಾಥ್ ತಿಳಿಸಿದ್ದಾರೆ.

ತುರ್ತು ವೈದ್ಯಕೀಯ ಸೇವೆಗಳಲ್ಲಿ ಬಾಹ್ಯಾಕಾಶ ತಂತ್ರಜ್ಞಾನದ ಬಳಕೆ ಕುರಿತು ಚರ್ಚಿಸಲು ತಜ್ಞವೈದ್ಯರೊಂದಿಗೆ ನಡೆಸಿದ ಸಭೆಯಲ್ಲಿ ಅವರು ಈ ವಿಷಯ ತಿಳಿಸಿದರು.

‘ಗಗನಯಾನ’ ಕಾರ್ಯಕ್ರಮಕ್ಕೆ ಆಯ್ಕೆಯಾಗಿರುವ ನಾಲ್ವರು ಗಗನಯಾನಿಗಳನ್ನು ಗಗನನೌಕೆಯ ಕಾಕ್‌ಪಿಟ್‌ನಲ್ಲಿ ಕುಳ್ಳಿರಿಸಲಾಗುತ್ತದೆ. ನೌಕೆಯಲ್ಲಿನ ಸಾಧನಗಳನ್ನು ಸಮರ್ಪಕವಾಗಿ ಜೋಡಿಸಲಾಗಿದೆಯೇ, ಬೆಳಕಿನ ವ್ಯವಸ್ಥೆ ಸರಿಯಾಗಿದೆಯೇ ಅಥವಾ ವಿವಿಧ ಉಪಕರಣಗಳ ಅಂಚುಗಳಿಂದಾಗಿ ತೊಂದರೆಯಾಗತ್ತಿದೆಯೇ ಎಂಬ ಬಗ್ಗೆ ಗಗನಯಾನಿಗಳಿಂದ ಮಾಹಿತಿ ಪಡೆಯಲಾಗುತ್ತದೆ’ ಎಂದು ಅವರು ತಿಳಿಸಿದರು.

ಅನಾಥ ಮಕ್ಕಳಿಗೆ ಪಿಎಂ ಕೇರ್ಸ್ ಸೌಲಭ್ಯ ಇಂದು

ನವದೆಹಲಿ (ಪಿಟಿಐ): ಪಿಎಂ–ಕೇರ್ಸ್ ನಿಧಿಯಡಿ ಮಕ್ಕಳಿಗೆ ವಿವಿಧ ಸೌಲಭ್ಯಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಬಿಡುಗಡೆ ಮಾಡಲಿದ್ದಾರೆ ಎಂದು ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ತಿಳಿಸಿದೆ.

ಮಾರ್ಚ್ 11,2020 ಮತ್ತು ಫೆಬ್ರುವರಿ 28, 2022ರ ನಡುವೆ ಕೋವಿಡ್ ಸಾಂಕ್ರಾಮಿಕದ ಕಾರಣ ತಂದೆ–ತಾಯಿ, ಪೋಷಕರನ್ನು ಕಳೆದುಕೊಂಡ ಮಕ್ಕಳಿಗೆ ನೆರವಾಗಲು ಸರ್ಕಾರ ಕಳೆದ ವರ್ಷ ಮೇ 29ರಂದು ಕಾರ್ಯಕ್ರಮ ಪ್ರಕಟಿಸಿತ್ತು. ಈ ಕುರಿತು ಹೇಳಿಕೆಯಲ್ಲಿ ಸಚಿವಾಲಯ, ‘ಪ್ರಧಾನ ಮಂತ್ರಿಗಳು, ಗುರುತಿಸಲಾದ, ಶಾಲೆಗೆ ತೆರಳುತ್ತಿರುವ ಮಕ್ಕಳಿಗೆ ಸೌಲಭ್ಯ ವರ್ಗಾಯಿಸುವರು ಎಂದು ತಿಳಿಸಿದೆ.

ಬಾಲಚಂದ್ರ ಸಾಯಿಮನೆಗೆ ‘ಪಾವನಾ ಪರಿಸರ ಪ್ರಶಸ್ತಿ’



ಶಿರಸಿ: ಇಲ್ಲಿನ ಪಾವನಾ ಪರಿಸರ ಪ್ರತಿಷ್ಠಾನದ ‘ಪಾವನಾ ಪರಿಸರ ಪ್ರಶಸ್ತಿ’ಗೆ ಈ ಬಾರಿ ಕೃಷಿಕ-ವಿಜ್ಞಾನಿ ಬಾಲಚಂದ್ರ ಸಾಯಿಮನೆ ಅವರನ್ನು ಆಯ್ಕೆಮಾಡಲಾಗಿದೆ.

ಪ್ರಶಸ್ತಿ ₹50 ಸಾವಿರ ಗೌರವಧನ ಹಾಗೂ ಸ್ಮರಣಿಕೆ ಒಳಗೊಂಡಿದೆ. ಜೂ.5 ರಂದು ಶಿರಸಿಯಲ್ಲಿ ನಡೆಯುವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್‌. ನಾಗಮೋಹನ ದಾಸ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ನ್ಯಾಷನಲ್ ಜಿಯಾಗ್ರಫಿಕ್ ಸಂಸ್ಥೆಯ ಅನ್ವೇಷಕಿ ಆರತಿ ಕುಮಾರ್‌ರಾವ್ ‘ಪಶ್ಚಿಮಘಟ್ಟದ ಪರಿಸರ ಮತ್ತು ವಿಜ್ಞಾನ’ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಬಾಲಚಂದ್ರ ಏಳು ದೇಶಗಳ ಎಂಟು ವಿಶ್ವವಿದ್ಯಾಲಯಗಳಲ್ಲಿ ಪರಿಸರ ವಿಜ್ಞಾನ ಕುರಿತು ವಿಶೇಷ ಅಧ್ಯಯನ ನಡೆಸಿದ್ದಾರೆ. ಪ್ರಸ್ತುತ ಶಿರಸಿಯ ಬಳಿ ಕೃಷಿ ಕಾಯಕ ಮಾಡುತ್ತಲೇ ‘ಜಾಗತಿಕ ಹವಾಗುಣ ಬದಲಾವಣೆಗೆ ಪಶ್ಚಿಮಘಟ್ಟಗಳು ಹೇಗೆ ಸ್ಪಂದಿಸುತ್ತಿವೆ’ ಎಂಬುದರ ಕುರಿತು ಪ್ರಯೋಗ ನಡೆಸುತ್ತಿದ್ದಾರೆ ಎಂದು ಪ್ರತಿಷ್ಠಾನದ ಪ್ರಕಟಣೆ ತಿಳಿಸಿದೆ.

ಬಕ್ಕೆಮನೆಯ ಸ್ವಾತಂತ್ರ್ಯಯೋಧ ನಾರಾಯಣ ಹೆಗಡೆ ದಂಪತಿಯ ಹೆಸರಿನಲ್ಲಿ ಅವರ ಮಕ್ಕಳು ‘ಪಾವನಾ ಪರಿಸರ ಪ್ರತಿಷ್ಠಾನ’ ಪ್ರಶಸ್ತಿ ಸ್ಥಾಪಿಸಿದ್ದಾರೆ.

ಜೂ.29ರಂದು ಸಿಎಂ ನಿವಾಸದ ಎದುರು ಧರಣಿ: ಕೂಡಲಸಂಗಮಶ್ರೀ

ಪ್ರಜಾವಾಣಿ ವಾರ್ತೆ

ಹಾವೇರಿ: ‘ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಗೆ ಆಗ್ರಹಿಸಿ ಜೂ.29ರಂದು ಶಿಗ್ಗಾವಿಯಲ್ಲಿ ಸಿಎಂ ಬಸವರಾಜ ಬೊಮ್ಮಾಯಿ ನಿವಾಸದ ಎದುರು ಧರಣಿ ಹಮ್ಮಿಕೊಳ್ಳಲಾಗಿದೆ’ ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

ಭಾನುವಾರ ನಡೆದ ಪಂಚಮಸಾಲಿ ಸಮಾಜದ ಪೂರ್ವಭಾವಿ ಸಭೆ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ‘2ಎ ಮೀಸಲಾತಿಗೆ ಆಗ್ರಹಿಸಿ ಕಳೆದ ವರ್ಷ ಪಾದಯಾತ್ರೆ ನಡೆಸಿ ಹಕ್ಕೊತ್ತಾಯ ಮಾಡಲಾಗಿತ್ತು. ಆಗಿನ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ, ಮುಖ್ಯಮಂತ್ರಿ ಹುದ್ದೆಗೇರಿದ ಬಸವರಾಜ ಬೊಮ್ಮಾಯಿ ಮೀಸಲಾತಿ ನೀಡುವ ಭರವಸೆ ನೀಡಿದ್ದರು. ಇನ್ನೂ ಈಡೇರಿಲ್ಲ’ ಎಂದರು.

‘ಈಗಾಗಲೇ ನಾಲ್ಕು ಹಂತದ ಹೋರಾಟ ಮುಗಿದಿದ್ದು, ಸರ್ಕಾರ ನಮ್ಮ ಬೇಡಿಕೆಗೆ ಸ್ಪಂದಿಸುವ ಕೆಲಸ ಮಾಡಿಲ್ಲ. ಈಗ ಸತ್ಯಾಗ್ರಹ ನಡೆಸುವ ಮೂಲಕ ರಾಜ್ಯದಾದ್ಯಂತ ಎಲ್ಲ ಜಿಲ್ಲಾಧಿಕಾರಿಗಳ ಕಚೇರಿ ಎದುರು ಹೋರಾಟಕ್ಕೆ ಹಾವೇರಿಯಿಂದ ಚಾಲನೆ ನೀಡಲಾಗುವುದು’ ಎಂದರು.

ಪಿಎಸ್‌ಐ ಅಕ್ರಮ: ಮಧ್ಯವರ್ತಿಗಳ ಪಟ್ಟಿ ಸಿದ್ಧ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಐಡಿ ಅಧಿಕಾರಿಗಳು, ಅಭ್ಯರ್ಥಿಗಳಿಂದ ಹಣ ಪಡೆದಿದ್ದ ಮಧ್ಯವರ್ತಿಗಳ ಪಟ್ಟಿ ಸಿದ್ಧಪಡಿಸಿದ್ದಾರೆ. ಅವರೆಲ್ಲರಿಗೂ ನೋಟಿಸ್ ನೀಡಿ ವಿಚಾರಣೆ ನಡೆಸುವ ಸಾಧ್ಯತೆ ಇದೆ.

ಪ್ರಕರಣದಲ್ಲಿ ಬಂಧಿಸಿರುವ ಪೊಲೀಸ್ ನೇಮಕಾತಿ ವಿಭಾಗದ ಡಿವೈಎಸ್ಪಿ ಶಾಂತಕುಮಾರ್ ಹಾಗೂ ಇತರೆ ನೌಕರರು, ಹಲವು ಮಧ್ಯವರ್ತಿಗಳ ಹೆಸರು ಬಾಯ್ಬಿಟ್ಟಿದ್ದಾರೆ. ಇತ್ತೀಚೆಗೆ ವಿಚಾರಣೆ ಎದುರಿಸಿದ್ದ ಎಡಿಜಿಪಿ ಅಮ್ರಿತ್ ಪೌಲ್ ಅವರಿಂದಲೂ ಮಧ್ಯವರ್ತಿಗಳ ಬಗ್ಗೆ ಅಧಿಕಾರಿಗಳು ಮಾಹಿತಿ ಪಡೆದುಕೊಂಡಿರುವುದಾಗಿ ಮೂಲಗಳು ಹೇಳಿವೆ.

‘ನಾಲ್ಕಕ್ಕಿಂತ ಹೆಚ್ಚು ತಂಡಗಳು, ಪ್ರತ್ಯೇಕವಾಗಿ ಅಭ್ಯರ್ಥಿಗಳನ್ನು ಸಂಪರ್ಕಿಸಿ ಅಕ್ರಮ ಎಸಗಿರುವುದು ಗೊತ್ತಾಗಿದೆ. ಕೆಲವರು, ಪಿಎಸ್‌ಐ ನೇಮಕಾತಿ ಅಧಿಸೂಚನೆ ಹೊರಡಿಸುವುದಕ್ಕೂ ಮುನ್ನವೇ ಅಭ್ಯರ್ಥಿಗಳಿಂದ ಹಣ ಪಡೆದಿದ್ದ ಮಾಹಿತಿಯೂ ಇದೆ’ ಎಂದು ಸಿಐಡಿ ಮೂಲಗಳು ತಿಳಿಸಿವೆ.

‘ಅಕ್ರಮವಾಗಿ ಹಣ ಗಳಿಸುವ ಉದ್ದೇಶದಿಂದ ಹಲವರು ಮಧ್ಯವರ್ತಿಗಳಾಗಿ ಕೆಲಸ ಮಾಡಿದ್ದಾರೆ. ಕೆಲ ಪೊಲೀಸರು, ಕೆಲ ಸರ್ಕಾರಿ ನೌಕರರು, ಕೆಲ ರಾಜಕಾರಣಿಗಳು ಪ್ರಕರಣದಲ್ಲಿ ಭಾಗಿಯಾಗಿದ್ದಾರೆ. ಇವರಿಗೆ ಹಣ ನೀಡಿದ್ದ ಅಭ್ಯರ್ಥಿಗಳನ್ನು ಈಗಾಗಲೇ ಬಂಧಿಸಲಾಗಿದ್ದು, ಅವರ ಹೇಳಿಕೆ ಆಧರಿಸಿ ಮಧ್ಯವರ್ತಿಗಳ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ’ ಎಂದೂ ಹೇಳಿವೆ.

‘ಮಧ್ಯವರ್ತಿಗಳ ಪೈಕಿ ಕೆಲವರು ಉನ್ನತ ಸ್ಥಾನದಲ್ಲಿದ್ದಾರೆ. ಅವರೆಲ್ಲರನ್ನೂ ವಿಚಾರಣೆ ಮಾಡಬೇಕಾದರೆ ಸೂಕ್ತ ಪುರಾವೆ ಅಗತ್ಯವಿದೆ. ಹೀಗಾಗಿ, ಪುರಾವೆ ಸಂಗ್ರಹಿಸಲು ವಿಶೇಷ ತಂಡಗಳು ಕೆಲಸ ಮಾಡುತ್ತಿವೆ’ ಎಂದೂ ತಿಳಿಸಿವೆ.

‘ಇರುವೆ ಗೂಡಲ್ಲಿ ಹಾವಿನಂತೆ ಹೊಕ್ಕಿರುವ ಸಿದ್ದರಾಮಯ್ಯ’

ಹುಬ್ಬಳ್ಳಿ: ‘ಸಿದ್ದರಾಮಯ್ಯ ಅವರು ಇರುವೆಗಳು ಕಟ್ಟಿದ ಗೂಡಿಗೆ ಹಾವಿನಂತೆ ಹೊಕ್ಕಿದ್ದಾರೆ. ಒರಿಜಿನಲ್ ಕಾಂಗ್ರೆಸ್ ಎಂದೋ ಹೋಗಿದೆ. ಸಿದ್ದರಾಮಯ್ಯ ಕೂಡ ಒರಿಜಿನಲ್ ಕಾಂಗ್ರೆಸ್ಸಿಗರಲ್ಲ. ಈಗಿನ ನಕಲಿ ಕಾಂಗ್ರೆಸ್‌ನಲ್ಲಿರುವ ನಕಲಿ ಲೀಡರ್ ಅವರು’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವ್ಯಂಗ್ಯವಾಡಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸಿದ್ದರಾಮಯ್ಯ ಅವರು, ಕಾಂಗ್ರೆಸ್ ಪಕ್ಷದಲ್ಲಿದ್ದ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಂತಹವರನ್ನು ಬದಿಗೊತ್ತಿ ಮುಖ್ಯಮಂತ್ರಿಯಾದರು. ಆದರೂ ಕಾಂಗ್ರೆಸ್ ಬಗ್ಗೆ ಅವರಿಗೆ ನಿಷ್ಠೆ ಇಲ್ಲ’ ಎಂದು ಕಾಲೆಳೆದರು.

‘ಆರೆಸ್ಸೆಸ್ ತನ್ನ ವಿರುದ್ಧದ ಟೀಕೆಗಳಿಗೆ ಯಾವತ್ತೂ ಪ್ರತಿಕ್ರಿಯಿಸುವುದಿಲ್ಲ. ನಾವು ಆರೆಸ್ಸೆಸ್‌ನವರಾದ್ದರಿಂದ ಉತ್ತರ ಕೊಡುತ್ತೇವೆ. ಸಿದ್ದರಾಮಯ್ಯ ಅವರು ತಮ್ಮ ಹಾಗೂ ತಮ್ಮ ಪಕ್ಷದ ಅಧ್ಯಕ್ಷರ ಮೂಲದ ಬಗ್ಗೆ, ಅವರು ಎಲ್ಲಿಗೆ ಹೋಗಿ ಬರುತ್ತಾರೆ ಎಂಬುದರ ಕುರಿತು ಮಾತನಾಡುತ್ತಾರೆಯೇ? ಹೊಟ್ಟೆಪಾಡಿಗಾಗಿ ಆರೆಸ್ಸೆಸ್ ವಿರುದ್ಧ ಟೀಕೆ ಮಾಡುತ್ತಿದ್ದಾರೆ ಎಂದು ಅವರು ಟೀಕಿಸಿದರು.

ಪಂಪ್‌ಸೆಟ್ ಕದ್ದ ಆರೋಪ ಹೂರಿಸಿ ಹಲ್ಲೆ: ಇಬ್ಬರ ಬಂಧನ

ಕೈ–ಕಾಲು ಕಟ್ಟಿ ಥಳಿಸಿ ಕಾರ್ಮಿಕನ ಕೊಲೆ

ಪ್ರಜಾವಾಣಿ ವಾರ್ತೆ



ಅಶ್ವಥ್

ಬೆಂಗಳೂರು: ಪಂಪ್‌ಸೆಟ್ ಕದ್ದರೆಂಬ ಆರೋಪ ಹೊರಿಸಿ ಕಾರ್ಮಿಕ ಅಶ್ವಥ್ (48) ಅವರನ್ನು ಅಮಾನವೀಯವಾಗಿ ಥಳಿಸಿ ಕೊಲೆ ಮಾಡಲಾಗಿದ್ದು, ಈ ಸಂಬಂಧ ಇಬ್ಬರು ಆರೋಪಿಗಳನ್ನು ರಾಮಮೂರ್ತಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಪರಿಶಿಷ್ಟ ಜಾತಿಗೆ ಸೇರಿದ್ದ ಅಶ್ವಥ್, ಸ್ಥಳೀಯ ಮುನೇಶ್ವರ ನಗರದಲ್ಲಿ ಪತ್ನಿ ಮಂಜುಳಾ ಹಾಗೂ ಇಬ್ಬರು ಮಕ್ಕಳ ಜೊತೆ ವಾಸವಿದ್ದರು. ಕಟ್ಟಡ ನಿರ್ಮಾಣದಲ್ಲಿ ಗಾರೆ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದರು. ಅಶ್ವಥ್ ಕೊಲೆ ಪ್ರಕರಣದಲ್ಲಿ ಆರೋಪಿಗಳಾದ ಶ್ರೀನಿವಾಸ್ ರೆಡ್ಡಿ (68), ಸುಬ್ಬಯ್ಯ ನಾಯ್ಡು ಅಲಿಯಾಸ್ ಜೈ ಶ್ರೀರಾಮ (68) ಎಂಬುವರನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

> ಪಂಪ್‌ಸೆಟ್ ಕದ್ದರೆಂಬ ಆರೋಪ ಮಾತ್ರವೇ ಕೊಲೆಗೆ ಕಾರಣವಾಯಿತಾ ಅಥವಾ ಬೇರೆ ಏನಾದರೂ ಕಾರಣವಿದೆಯಾ ಎಂಬುದು ತನಿಖೆಯಿಂದ ತಿಳಿಯಬೇಕಿದೆ
>
> **ಭೀಮಾಶಂಕರ್ ಗುಳೇದ**
> ಪೂರ್ವ ವಿಭಾಗದ ಡಿಸಿಪಿ

‘ರಾಮಮೂರ್ತಿನಗರ ಠಾಣೆ ವ್ಯಾಪ್ತಿಯ ಹೊಯ್ಸಳ ನಗರದ ಮನೆಯೊಂದರ ಎದುರಿನ ಪಾದಚಾರಿ ಮಾರ್ಗದಲ್ಲಿ ಶನಿವಾರ (ಮೇ 28) ಬೆಳಿಗ್ಗೆ ಅಶ್ವಥ್ ಮೃತದೇಹ ಪತ್ತೆಯಾಗಿತ್ತು. ಮೈ ಮೇಲೆ ಗಾಯದ ಗುರುತುಗಳು ಹಾಗೂ ರಕ್ತದ ಕಲೆಗಳು ಇದ್ದಿದ್ದರಿಂದ, ಇದೊಂದು ಕೊಲೆ ಎಂಬುದು ಗೊತ್ತಾಗಿತ್ತು’ ಎಂದೂ ತಿಳಿಸಿದರು.

ವಿಡಿಯೊ ಪುರಾವೆ

‘ಆರೋಪಿಗಳಾದ ಶ್ರೀನಿವಾಸ್ ರೆಡ್ಡಿ ಹಾಗೂ ಸುಬ್ಬಯ್ಯ ನಾಯ್ಡು ಇಬ್ಬರೂ ಸೇರಿ ಅಶ್ವಥ್ ಅವರನ್ನು ಅಮಾನವೀಯವಾಗಿ ಥಳಿಸಿ ಹಲ್ಲೆ ಮಾಡಿರುವ ದೃಶ್ಯವನ್ನು ಸ್ಥಳೀಯ ಯುವಕರೊಬ್ಬರು ಮೊಬೈಲ್ ಕ್ಯಾಮೆರಾದಲ್ಲಿ ಚಿತ್ರೀಕರಿಸಿದ್ದಾರೆ. ವಿಡಿಯೊವನ್ನು ಸುಪರ್ದಿಗೆ ಪಡೆದು ಪರಿಶೀಲಿಸಲಾಗುತ್ತಿದ್ದು, ಇದನ್ನೇ ಪುರಾವೆಯನ್ನಾಗಿ ಪರಿಗಣಿಸಲಾಗುವುದು’ ಎಂದು ಪೊಲೀಸರು ಹೇಳಿದರು.

‘ಅಶ್ವಥ್ ಕೊಲೆ ಬಗ್ಗೆ ಪತ್ನಿ ಮಂಜುಳಾ ಅವರಿಂದ ದೂರು ಪಡೆಯಲಾಗಿತ್ತು. ‘ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ ಹಾಗೂ ಕೊಲೆ ಆರೋಪದಡಿ ಪ್ರಕರಣ ದಾಖಲಿಸಿಕೊಂಡು, ಆರೋಪಿಗಳನ್ನು ಬಂಧಿಸಲಾಗಿದೆ’ ಎಂದರು

ಕಬ್ಬಿಣದ ರಾಡ್, ಕಟ್ಟಿಗೆಯಿಂದ ಹಲ್ಲೆ: ‘ಆರೋಪಿ ಶ್ರೀನಿವಾಸ್ ರೆಡ್ಡಿ, ಹೊಯ್ಸಳನಗರದಲ್ಲಿರುವ ತನ್ನ ಜಾಗದಲ್ಲಿ ಬಹುಮಹಡಿ ಕಟ್ಟಡ ನಿರ್ಮಿಸುತ್ತಿದ್ದ. ಇದೇ ಸ್ಥಳದಲ್ಲಿ ಅಶ್ವಥ್ ಸೇರಿ ಹಲವು ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಇನ್ನೊಬ್ಬ ಆರೋಪಿ ಸುಬ್ಬಯ್ಯ ನಾಯ್ಡು ಸಹ ಕಾರ್ಮಿಕನಾಗಿದ್ದ’ ಎಂದು ಪೊಲೀಸರು ತಿಳಿಸಿದರು.

‘ನಿರ್ಮಾಣ ಹಂತದ ಕಟ್ಟಡದ ನೀರಿನ ಸಂಪ್‌ಗೆ ಪಂಪ್‌ಸೆಟ್ ಅಳವಡಿಸಲಾಗಿತ್ತು. ಯಾರೋ ಅಪರಿಚಿತರು, ಪಂಪ್‌ಸೆಟ್ ಕದ್ದೊಯ್ದಿದ್ದರು. ಇದರಿಂದ ಸಿಟ್ಟಾಗಿದ್ದ ಶ್ರೀನಿವಾಸ್, ಪರಿಶಿಷ್ಟ ಜಾತಿಗೆ ಸೇರಿದ್ದವರೆಂಬ ಕಾರಣಕ್ಕೆ ಕಾರ್ಮಿಕ ಅಶ್ವಥ್ ಮೇಲೆಯೇ ಕಳ್ಳತನ ಆರೋಪ ಹೊರಿಸಿದ್ದ. ‘ನೀನೇ ಪಂಪ್‌ಸೆಟ್ ಕದ್ದಿದ್ದಿಯಾ. ಅದನ್ನು ವಾಪಸು ತಂದು ಕೊಡು. ಇಲ್ಲದಿದ್ದರೆ, ಜೀವಂತ ಬಿಡುವುದಿಲ್ಲ’ ಎಂದು ಹೆದರಿಸಿದ್ದರು ಎಂದರು. ‘ನಾನು ಪಂಪ್‌ಸೆಟ್ ಕದ್ದಿಲ್ಲ’ ಎಂದು ಅಶ್ವಥ್ ಹೇಳಿದ್ದರು. ಅಷ್ಟಕ್ಕೆ ಸುಮ್ಮನಾಗದ ಶ್ರೀನಿವಾಸ್, ಅವಾಚ್ಯ ಶಬ್ದಗಳಿಂದ ಬೈಯ್ದು ಜಾತಿ ನಿಂದನೆ ಮಾಡಿದ್ದ. ಹಗ್ಗ ಹಾಗೂ ತಂತಿಯಿಂದ ಅಶ್ವಥ್ ಅವರ ಕೈ – ಕಾಲು ಕಟ್ಟಿ ಹಾಕಿದ್ದ. ಕಿರುಚಾಡಿದರೂ ಬಿಡದೇ ಥಳಿಸಿದ್ದ. ರಾಡ್ ಹಾಗೂ ಕಟ್ಟಿಗೆಯಿಂದ ತಲೆ, ಬೆನ್ನು, ಕೈ ಹಾಗೂ ಕಾಲುಗಳಿಗೆ ಹೊಡೆದಿದ್ದ. ಇನ್ನೊಬ್ಬ ಆರೋಪಿ ಸುಬ್ಬಯ್ಯ ರೆಡ್ಡಿ ಸಹ ಅಶ್ವಥ್ ಅವರನ್ನು ಎಳೆದಾಡಿ ಕಾಲಿನಿಂದ ಒದ್ದು ಥಳಿಸಿದ್ದನೆಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದೂ ಪೊಲೀಸರು ಹೇಳಿದರು.

ಬೇರೊಬ್ಬರ ಮನೆ ಎದುರು ಮೃತದೇಹ: ‘ಥಳಿತದಿಂದ ತೀವ್ರ ಗಾಯಗೊಂಡ ಅಶ್ವಥ್, ಕಟ್ಟಡದಲ್ಲೇ ಮೃತಪಟ್ಟಿದ್ದರು. ಕೊಲೆ ಆರೋಪ ತಮ್ಮ ಮೇಲೆ ಬರುತ್ತದೆಂದು ತಿಳಿದ ಆರೋಪಿಗಳು, ಬೇರೊಬ್ಬರ ಮನೆ ಎದುರಿನ ಪಾದಚಾರಿ ಮಾರ್ಗದಲ್ಲಿ ಮೃತದೇಹ ಎಸೆದು ಹೋಗಿದ್ದರು ಎಂದು ತಿಳಿಸಿದರು.

ರಾಜಸ್ಥಾನದ ಬುಂಡಿಯಲ್ಲಿ ಅಮಾನವೀಯ ಘಟನೆ

ಸರಪಳಿ ಬಿಗಿದು ಕಾರ್ಮಿಕನಿಗೆ ಹಿಂಸೆ

ಕೋಟಾ (ಪಿಟಿಐ): ಸಾಲ ವಸೂಲಿ ವಿಚಾರಕ್ಕೆ 35 ವರ್ಷದ ದಲಿತ ಕಾರ್ಮಿಕನನ್ನು ಅಪಹರಿಸಿ, ದನದ ಕೊಟ್ಟಿಗೆಯಲ್ಲಿ ಸರಪಳಿಯಿಂದ ಕಟ್ಟಿಹಾಕಿ ಚಿತ್ರಹಿಂಸೆ ನೀಡಿದ ಘಟನೆ ರಾಜಸ್ಥಾನದ ಬುಂಡಿ ಜಿಲ್ಲೆಯಲ್ಲಿ ನಡೆದಿದೆ.

ವಾರ ಕಳೆದರೂ ಇನ್ನೂ ಆರೋಪಿಗಳ ಬಂಧನವಾಗಿಲ್ಲ. ‘ಘಟನೆಯ ಹಿಂದೆ ಹಣದ ವಿವಾದವಿದೆ. ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗೆ ಎರಡು ತಂಡಗಳನ್ನು ರಚಿಸಲಾಗಿದೆ’ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

‘ಮೇ 22ರಂದು ಪರಮ್‌ಜಿತ್ ಸಿಂಗ್ ಮತ್ತು ಇತರ ಐವರು ನನ್ನನ್ನು ಅಪಹರಿಸಿ, ಅಲ್ಫಾ ನಗರದಲ್ಲಿರುವ ಅವರ ಮನೆಗೆ ಕರೆದೊಯ್ದು, ದನದ ಕೊಟ್ಟಿಗೆಯಲ್ಲಿ ಕಟ್ಟಿಹಾಕಿ, ಆಹಾರ ಮತ್ತು ನೀರು ಕೊಡದೆ, ಸುಮಾರು 31 ಗಂಟೆಗಳ ಕಾಲ ಚಿತ್ರಹಿಂಸೆ ನೀಡಿದ್ದರು’ ಎಂದು ರಾಧೇಶ್ಯಾಮ್ ಮೇಘವಾಲ್ ಎಂಬುವವರು ಮೇ 24ರಂದು ಪೊಲೀಸರಿಗೆ ದೂರು ನೀಡಿದ್ದಾರೆ.

ಸಿಂಗ್ ಮತ್ತು ಇತರ ಐವರ ವಿರುದ್ಧ ಐಪಿಸಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯ್ದೆಯ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಲಾಗಿದೆ ಎಂದು ಡಿವೈಎಸ್‌ಪಿ ಶಂಕರ್ ಲಾಲ್ ತಿಳಿಸಿದ್ದಾರೆ.

ಘಟನೆ ಹಿನ್ನೆಲೆ: ಜಿಲ್ಲೆಯ ತಲೇರಾ ಪೊಲೀಸ್ ಠಾಣಾ ವ್ಯಾಪ್ತಿಯ ಬಿಲುಬಾ ಗ್ರಾಮದ ರಾಧೇಶ್ಯಾಮ್ ಮೇಘವಾಲ್ ಅವರನ್ನು ಮೂರು ವರ್ಷಗಳ ಹಿಂದೆ ₹70,000 ಮುಂಗಡ ನೀಡಿ, ಪರಮ್‌ಜಿತ್ ಸಿಂಗ್ ಅವರು ತಮ್ಮ ಫಾರ್ಮ್‌ಹೌಸ್‌ನಲ್ಲಿ ಕೆಲಸಕ್ಕೆ ನೇಮಿಸಿಕೊಂಡಿದ್ದರು. ತರುವಾಯ, ಮೇಘವಾಲ್ ತನ್ನ ಸಹೋದರಿಯ ಮದುವೆಗಾಗಿ ಸಿಂಗ್ ಅವರಿಂದ ₹30 ಸಾವಿರ ಹೆಚ್ಚುವರಿಯಾಗಿ ಪಡೆದಿದ್ದರು.’

‘ಸಿಂಗ್ ಅವರಿಗೆ ₹50 ಸಾವಿರ ಮರುಪಾವತಿಸಿ, ಅವರ ಫಾರ್ಮ್‌ಹೌಸ್‌ನಲ್ಲಿ 10 ದಿನ ಕೂಲಿ ಪಡೆಯದೇ ಕೆಲಸ ಮಾಡಿದ್ದೆ. ಬಾಕಿ ಹಣ ಹಿಂತಿರುಗಿಸಲು ಸಾಧ್ಯವಿಲ್ಲವೆಂದೆ. ಆಗ ಸಿಂಗ್ ₹1.10 ಲಕ್ಷ ಬಾಕಿ ಮರುಪಾವತಿಸಲು ಒತ್ತಡ ಹೇರಿ, ನನ್ನನ್ನು ಅಪಹರಿಸಿದ್ದರು. ನನ್ನ ತಮ್ಮ ಸಿಂಗ್ ಅವರಿಗೆ ಸ್ವಲ್ಪ ಹಣ ನೀಡಿದ ಮೇಲೆ ನನ್ನನ್ನು ಬಿಡುಗಡೆ ಮಾಡಿದರು’ ಎಂದು ಮೇಘವಾಲ್ ಪೊಲೀಸರಿಗೆ ನೀಡಿರುವ ದೂರಿನಲ್ಲಿ ಹೇಳಿಕೊಂಡಿದ್ದಾರೆ.

ಸೋಮವಾರ, ಮೇ 30, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 149 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಬೆಂಗಳೂರು ವಿವಿಯಲ್ಲಿ ಇದೇ ಶೈಕ್ಷಣಿಕ ವರ್ಷದಿಂದ ಆರಂಭವಾಗುತ್ತಿರುವ ಭೂಗೋಳ ವಿಜ್ಞಾನ ವಿಷಯದ ಬಿ.ಎಸ್ಸಿ – ಎಂ.ಎಸ್ಸಿ ಇಂಟಿಗ್ರೇಟೆಡ್ ಕೋರ್ಸ್‌ನಲ್ಲಿ ವೈಶಿಷ್ಟ್ಯ ಏನಿದೆ?



ಆಳ-ಅಗಲ ಮೋದಿ ಆಳ್ವಿಕೆಯ 8 ವರ್ಷಗಳು

ಕಲ್ಲಿದ್ದಲು ಕೊರತೆ: ವಿದ್ಯುತ್ ಸಮಸ್ಯೆ? 9

ಗಾಯಕ ಸಿಧು ಮೂಸೆವಾಲಾ ಹತ್ಯೆ 5

ಏಷ್ಯಾ ಕಪ್ ಹಾಕಿ ಟೂರ್ನಿ

ಭಾರತ–ಮಲೇಷ್ಯಾ ಪಂದ್ಯ ರೋಚಕ ಡ್ರಾ 9

ಒಳ ಪುಟಗಳು



ಚಿನಕುರಳಿ

ಪ್ರಕಾಶ್ ಶೆಟ್ಟಿ



ಯಾರೊಂದಿಗೂ ಪ್ರತಿ ಹಂಚಿಕೊಳ್ಳಬೇಡಿ ಎಂಬ ಸೂಚನೆ ಹಿಂದಕ್ಕೆ

ಆಧಾರ್: ನಿಲುವು ಬದಲು

ಪ್ರಜಾವಾಣಿ ವಾರ್ತೆ

ನವದೆಹಲಿ: ಆಧಾರ್ ಕಾರ್ಡ್‌ನ ಪ್ರತಿಯನ್ನು ಯಾವುದೇ ಸಂಸ್ಥೆಯೊಂದಿಗೆ ಹಂಚಿಕೊಳ್ಳಬೇಡಿ ಎಂದು ನೀಡಿದ್ದ ಎಚ್ಚರಿಕೆಯನ್ನು ಕೇಂದ್ರ ಸರ್ಕಾರವು ಭಾನುವಾರ ಹಿಂದಕ್ಕೆ ಪಡೆದಿದೆ. ಹೀಗೆ ಹಂಚಿಕೊಂಡರೆ ಆ ಸಂಸ್ಥೆಯು ಆಧಾರ್ ಅನ್ನು ದುರುಪಯೋಗ ಮಾಡಿಕೊಳ್ಳಬಹುದು ಎಂದು ಕೇಂದ್ರ ಸರ್ಕಾರವು ಈ ಹಿಂದೆ ನೀಡಿದ್ದ ಸೂಚನೆಯಲ್ಲಿ ಹೇಳಿತ್ತು.

ಬಳಕೆದಾರರ ಗುರುತು ಮತ್ತು ಖಾಸಗಿತನವನ್ನು ರಕ್ಷಿಸಿಕೊಳ್ಳಲು ಅಗತ್ಯವಾದ ಎಲ್ಲ ಪರಿಕರಗಳು ಆಧಾರ್ ವ್ಯವಸ್ಥೆಯಲ್ಲಿ ಇವೆ. ಆಧಾರ್ ಬಳಕೆ ಮತ್ತು ಹಂಚಿಕೆಯ ಸಂದರ್ಭದಲ್ಲಿ ‘ಸಾಮಾನ್ಯ ವಿವೇಕ’ ಬಳಸಿ ಎಂದಷ್ಟೇ ಹೇಳಲಾಗಿದೆ ಎಂದು ಸರ್ಕಾರದ ಹೊಸ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಆಧಾರ್ ಪ್ರತಿಯನ್ನು ಹಂಚಿಕೊಳ್ಳಬೇಡಿ ಎಂದು ಸರ್ಕಾರ ನೀಡಿದ್ದ ಸೂಚನೆಯು ಜನರಲ್ಲಿ ಗೊಂದಲ ಮತ್ತು ದಿಗಿಲು ಮೂಡಲು ಕಾರಣವಾಗಿತ್ತು. ಹಾಗಾಗಿ ಹೊಸ ಹೇಳಿಕೆಯ ಮೂಲಕ ಭಾರತದ ವಿಶಿಷ್ಟ ಗುರುತು ಚೀಟಿ ಪ್ರಾಧಿಕಾರವು (ಯುಐಡಿಎಐ) ಈ ಸ್ಪಷ್ಟೀಕರಣ ನೀಡಿದೆ.

ಆಧಾರ್ ಸಂಖ್ಯೆಯ ಕೊನೆಯ ನಾಲ್ಕು ಅಂಕೆಗಳು ಮಾತ್ರ ಕಾಣುವಂತಹ ಆಧಾರ್ ಕಾರ್ಡ್‌ನ ಪ್ರತಿಯನ್ನು ಹಂಚಿಕೊಳ್ಳಿ, ಅಲ್ಲ ಅಂಕೆಗಳೂ ಕಾಣುವ ಆಧಾರ್ ಕಾರ್ಡ್‌ನ ಪ್ರತಿಯನ್ನು ಎಲ್ಲ ಸಂಸ್ಥೆಗಳ ಜತೆಗೆ ಹಂಚಿಕೊಳ್ಳಬೇಡಿ ಎಂದು ಯುಐಡಿಎಐ ಶುಕ್ರವಾರ ಹೊರಡಿಸಿದ್ದ ಹೇಳಿಕೆಯಲ್ಲಿ ತಿಳಿಸಿತ್ತು. ಹೋಟೆಲ್ ಅಥವಾ ಸಿನಿಮಾ ಮಂದಿರದಂತಹ ಖಾಸಗಿ ಸಂಸ್ಥೆಗಳಿಗೆ ಆಧಾರ್‌ನ ಪ್ರತಿ ಪಡೆದುಕೊಳ್ಳಲು ಪರವಾನಗಿ ಇಲ್ಲ. ಹಾಗಾಗಿ ಇಂತಹ ಸಂಸ್ಥೆಗಳಿಗೆ ಆಧಾರ್ ಪ್ರತಿ ನೀಡಬಾರದು ಎಂದೂ ಶುಕ್ರವಾರದ ಹೇಳಿಕೆಯಲ್ಲಿ ತಿಳಿಸಲಾಗಿತ್ತು.

ಆಧಾರ್ ಕಾರ್ಡ್‌ನ ಪ್ರತಿಯನ್ನು ಹಂಚಿಕೊಳ್ಳುವುದು ದುರ್ಬಳಕೆಗೆ ಕಾರಣವಾಗಬಹುದು ಎಂಬ ಹೇಳಿಕೆಯು ತಪ್ಪು ಗ್ರಹಿಕೆಗೆ ಅವಕಾಶ ಮಾಡಿಕೊಡಬಹುದು ಎಂಬ ಕಾರಣಕ್ಕೆ ಆ ಸೂಚನೆಯನ್ನು ಹಿಂದಕ್ಕೆ ಪಡೆಯಲಾಗಿದೆ ಎಂದು ಯುಐಡಿಎಐ ಹೇಳಿದೆ.

ಯುಐಡಿಎಐನ ಸೂಚನೆಯು ಸಾಮಾಜಿಕ ಜಾಲತಾಣಗಳಲ್ಲಿ ಸಂಚಲನ ಮೂಡಿಸಿತ್ತು. ಮಾಧ್ಯಮ ಹೇಳಿಕೆಯ ಪ್ರತಿ, ವರದಿಯ ಫೋಟೊಗಳು ವೈರಲ್ ಆಗಿದ್ದವು. ಟ್ವಿಟರ್‌ನಲ್ಲಿ ಭಾನುವಾರ ಇದು ಭಾರತದಲ್ಲಿ ಸಂಚಲನ ಮೂಡಿಸಿದ ಮೊದಲ ಹತ್ತು ವಿಚಾರಗಳಲ್ಲಿ ಒಂದಾಗಿತ್ತು.

ಹೋರಾಟಗಾರರಿಂದ ಆಕ್ಷೇಪ



ಯುಐಡಿಎಐ ನೀಡಿದ ಹೇಳಿಕೆ ಬಗ್ಗೆ ತೀವ್ರ ಟೀಕೆ ವ್ಯಕ್ತವಾಗಿದೆ. ಬಳಕೆದಾರರ ಖಾಸಗಿತನ ರಕ್ಷಣೆಯ ಬಗ್ಗೆ ಯುಐಡಿಎಐ ಬಹಳ ಹಿಂದೆಯೇ ಕ್ರಮಗಳನ್ನು ಕೈಗೊಳ್ಳಬೇಕಿತ್ತು ಮತ್ತು ಬಳಕೆದಾರರಿಗೆ ಈ ಬಗ್ಗೆ ಮಾಹಿತಿಯನ್ನೂ ನೀಡಬೇಕಿತ್ತು ಎಂದು ಖಾಸಗಿತನದ ಹಕ್ಕುಗಳ ಪರ ಹೋರಾಟಗಾರರು ಹೇಳಿದ್ದಾರೆ.

‘ನಾನು ಸುಮಾರು ನೂರು ಹೋಟೆಲ್‌ಗಳಲ್ಲಿ ವಾಸ್ತವ್ಯ ಹೂಡಿದ್ದೇನೆ ಮತ್ತು ಎಲ್ಲರೂ ನನ್ನ ಆಧಾರ್‌ನ ಪ್ರತಿಯನ್ನು ಇರಿಸಿಕೊಂಡಿದ್ದಾರೆ. ಈಗ ಇದೇನು’ ಎಂದು ವ್ಯಕ್ತಿಯೊಬ್ಬರು ಟ್ವೀಟ್ ಮಾಡಿದ್ದಾರೆ.

‘ಗುರುತು ದೃಢೀಕರಣಕ್ಕೆ ನೀವು ಆಧಾರ್ ಅನ್ನು ಬಳಸಿದ್ದರೆ, ಅದನ್ನು ಬೇರೊಬ್ಬರು ದುರ್ಬಳಕೆ ಮಾಡಿಕೊಳ್ಳಲು ಸಾಧ್ಯವೇ ಇಲ್ಲ’ ಎಂದು ಯುಐಡಿಎಐ ವೆಬ್‌ಸೈಟ್‌ನಲ್ಲಿ ಇದೆ.

ಖಾಸಗಿತನದ ಹಕ್ಕಿನ ವಿಚಾರವು 2018ರಲ್ಲಿ ಸುಪ್ರೀಂ ಕೋರ್ಟ್ ಮೆಟ್ಟಿಲು ಏರಿತ್ತು. ಆಧಾರ್‌ನ ಸಿಂಧುತ್ವವನ್ನು ಕೋರ್ಟ್ ಎತ್ತಿ ಹಿಡಿದಿತ್ತು. ಆದರೆ, ಖಾಸಗಿತನದ ರಕ್ಷಣೆಯ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದಿತ್ತು. ಎಲ್ಲ ಸೇವೆಗಳಿಗೂ ಆಧಾರ್ ಕಡ್ಡಾಯ ಮಾಡಬಾರದು ಎಂದಿತ್ತು. ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಲು ಆಧಾರ್ ಕಡ್ಡಾಯಗೊಳಿಸಲು ಅವಕಾಶ ಕೊಟ್ಟಿತ್ತು.

ಕೇರಳಕ್ಕೆ ನೈರುತ್ಯ ಮುಂಗಾರು ಪ್ರವೇಶ



ನವದೆಹಲಿ (ಪಿಟಿಐ): ನೈರುತ್ಯ ಮುಂಗಾರು ಈ ಬಾರಿ ವಾಡಿಕೆಗಿಂತ ಮೂರು ದಿನ ಮುನ್ನವೇ ಕೇರಳಕ್ಕೆ ಪ್ರವೇಶಿಸಿದ್ದು, ಮಾರುತಗಳು ರಾಜ್ಯದ ಕರಾವಳಿಗೆ ಅಪ್ಪಳಿಸಿವೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಭಾನುವಾರ ತಿಳಿಸಿದೆ.

‘ನೈರುತ್ಯ ಮುಂಗಾರು ಮಾರುತಗಳು ವಾಡಿಕೆಯಂತೆ ಜೂನ್ 1ರಂದು ಪ್ರವೇಶಿಸುತ್ತವೆ. ಆದರೆ, ಈ ಬಾರಿ 3 ದಿನ ಮುನ್ನವೇ ಅಂದರೆ ಮೇ 29ರಂದೇ ಕೇರಳ ಕರಾವಳಿ ಪ್ರವೇಶಿಸಿವೆ’ ಎಂದು ಇಲಾಖೆಯ ಮುಖ್ಯ ನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ಹೇಳಿದ್ದಾರೆ.

ನೈರುತ್ಯ ಮುಂಗಾರು ಇದೇ 27ರಂದು ಕೇರಳ ಪ್ರವೇಶಿಸುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಈ ಹಿಂದೆ ಹೇಳಿತ್ತು. ಬಂಗಾಳ ಕೊಲ್ಲಿಯಲ್ಲಿ ಅಬ್ಬರಿಸಿದ್ದ ‘ಅಸನಿ’ ಚಂಡಮಾರುತದಿಂದಾದ ಪರಿಣಾಮದ ಆಧಾರದಲ್ಲಿ ಈ ಮುನ್ಸೂಚನೆ ನೀಡಿತ್ತು.

ಮುಂದಿನ ಎರಡು ದಿನಗಳಲ್ಲಿ ಕೇರಳ, ಲಕ್ಷದ್ವೀಪದಲ್ಲಿ ವ್ಯಾಪಕ ಮಳೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆ ಹೇಳಿದೆ.

ನಿರ್ಮಲಾನಂದ ಶ್ರೀಗಳ ಬೇಡಿಕೆ ಸೂಕ್ತ ತೀರ್ಮಾನ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುವೆಂಪು ವಿರಚಿತ ನಾಡಗೀತೆಯನ್ನು ತಿರುಚಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂಬ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿಯವರ ಬೇಡಿಕೆ ಕುರಿತು ಸರ್ಕಾರ ಸೂಕ್ತ ತೀರ್ಮಾನ ಕೈಗೊಳ್ಳಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ನಿರ್ಮಲಾನಂದನಾಥ ಶ್ರೀಗಳು ಕುವೆಂಪು ಅವರಿಗೆ ಸಂಬಂಧಿಸಿದಂತೆ ಗಂಭೀರವಾದ ವಿಚಾರವನ್ನು ಮುಂದಿಟ್ಟಿದ್ದಾರೆ. ಆ ಕುರಿತು ಶಿಕ್ಷಣ ಸಚಿವರ ಜತೆ ಸಭೆ ನಡೆಸುತ್ತೇನೆ. ಚರ್ಚೆಗೆ ಬರುವಂತೆ ಸಚಿವರಿಗೆ ಈಗಾಗಲೇ ಸೂಚಿಸಿದ್ದೇನೆ. ಚರ್ಚಿಸಿದ ಬಳಿಕ ಸೂಕ್ತ ನಿರ್ಧಾರವನ್ನು ಕೈಗೊಳ್ಳಲಾಗುವುದು’ ಎಂದರು.

ರಾಜ್ಯ ಪಠ್ಯ ಪುಸ್ತಕ ಪರಿಷ್ಕರಣೆ ಸಮಿತಿ ಅಧ್ಯಕ್ಷರಾಗಿರುವ ರೋಹಿತ್ ಚಕ್ರತೀರ್ಥ ಅವರು ನಾಡಗೀತೆ ಮತ್ತು ಕುವೆಂಪು ಕುರಿತು ತಮ್ಮ ಫೇಸ್ ಬುಕ್ ಖಾತೆಯಲ್ಲಿ ಬರಹವೊಂದನ್ನು ಪ್ರಕಟಿಸಿದ್ದರು. ಚಕ್ರತೀರ್ಥ ಅವರು ಕುವೆಂಪು ಮತ್ತು ನಾಡಗೀತೆಯನ್ನು ಅವಮಾನಿಸಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಹಲವರು ಆಗ್ರಹಿಸುತ್ತಿದ್ದಾರೆ. ಕುವೆಂಪು ಮತ್ತು ನಾಡಗೀತೆಯನ್ನು ನಿಂದಿಸಿದವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ನಿರ್ಮಲಾನಂದನಾಥ ಸ್ವಾಮೀಜಿ ಆಗ್ರಹಿಸಿದ್ದರು.

ಪ್ರಥಮ ಸ್ಥಾನಕ್ಕೆ ಅಮೆರಿಕ

ನವದೆಹಲಿ: ಭಾರತದ ಜೊತೆಗೆ ಅತಿ ಹೆಚ್ಚು ವ್ಯಾಪಾರ ನಡೆಸಿದ ದೇಶಗಳ ಸಾಲಿನಲ್ಲಿ 2021–22ರಲ್ಲಿ ಅಮೆರಿಕವು ಚೀನಾವನ್ನು ಹಿಂದಿಕ್ಕಿ ಮೊದಲ ಸ್ಥಾನಕ್ಕೆ ಬಂದಿದೆ. ಭಾರತ–ಅಮೆರಿಕ ಮಧ್ಯೆ ಆರ್ಥಿಕ ಒಪ್ಪಂದಗಳು ಬಲಗೊಳ್ಳುತ್ತಿರುವುದನ್ನು ಇದು ಸೂಚಿಸುತ್ತಿದೆ ಎಂದು ಕೇಂದ್ರ ವಾಣಿಜ್ಯ, ಕೈಗಾರಿಕಾ ಸಚಿವಾಲಯ ಹೇಳಿದೆ.

8

ಬಹುತೇಕರ ಆದಾಯ ₹ 10 ಸಾವಿರಕ್ಕಿಂತ ಕಡಿಮೆ

ನವದೆಹಲಿ: ಅಸಂಘಟಿತ ವಲಯದ 27.69 ಕೋಟಿ ಕಾರ್ಮಿಕರು ಇ–ಶ್ರಮ್ ಪೋರ್ಟಲ್‌ನಲ್ಲಿ ನೋಂದಾಯಿತರಾಗಿದ್ದು, ಇವರ ಪೈಕಿ ಶೇಕಡ 94.11ರಷ್ಟು ಮಂದಿಯ ತಿಂಗಳ ಆದಾಯ ₹ 10 ಸಾವಿರಕ್ಕಿಂತ ಕಡಿಮೆ. ಅಲ್ಲದೆ, ಇಷ್ಟು ಮಂದಿಯಲ್ಲಿ ಶೇ 74ರಷ್ಟು ಮಂದಿ ಎಸ್‌ಸಿ, ಎಸ್‌ಟಿ, ಒಬಿಸಿಗೆ ಸೇರಿದವರು.

8

2024ರ ಜ.24ರಂದು ರಾಮಲಲ್ಲಾ ಪ್ರತಿಷ್ಠಾಪನೆ

ಲಖನೌ: ಉತ್ತರಪ್ರದೇಶದ ಅಯೋಧ್ಯೆಯಲ್ಲಿ ನಿರ್ಮಾಣವಾಗಿರುವ ರಾಮ ಮಂದಿರದ ಗರ್ಭಗುಡಿಯಲ್ಲಿ 2024ರ ಜನವರಿ 24 ರಂದು ರಾಮಲಲ್ಲಾ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಲು ದಿನಾಂಕ ನಿಗದಿಪಡಿಸಲಾಗದೆ.

8



ವಿಜಯೋತ್ಸವ ಅಹಮದಾಬಾದ್‌ನಲ್ಲಿ ಭಾನುವಾರ ನಡೆದ ಐಪಿಎಲ್ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಜಯಗಳಿಸಿದ ಗುಜರಾತ್ ಟೈಟನ್ಸ್ ತಂಡದ ಆಟಗಾರ ಶುಭಮನ್ ಗಿಲ್ ಮತ್ತು ಸಹ ಆಟಗಾರರು ಸಂಭ್ರಮಿಸಿದರು – ಐಪಿಎಲ್ ಟ್ವಿಟ್ಟರ್ ಚಿತ್ರ 10

ಇಂದು ಮೂವರೂ ನಾಮಪತ್ರ ಸಲ್ಲಿಸುವ ಸಾಧ್ಯತೆ


ರಾಜ್ಯಸಭೆಗೆ ನಿರ್ಮಲಾ, ಜಗ್ಗೇಶ್, ಜೈರಾಂ ರಮೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಸಭೆ ಚುನಾವಣೆಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ನಿರೀಕ್ಷೆಯಂತೆಯೇ ಮೊದಲ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿರುವ ಬಿಜೆಪಿ, ಎರಡನೇ ಅಭ್ಯರ್ಥಿಯನ್ನಾಗಿ ಚಿತ್ರನಟ ಜಗ್ಗೇಶ್ ಅವರನ್ನು ಕಣಕ್ಕಿಳಿಸುವ ಅಚ್ಚರಿಯ ತೀರ್ಮಾನವನ್ನು ಭಾನುವಾರ ಪ್ರಕಟಿಸಿದೆ. ಕಾಂಗ್ರೆಸ್ ಹಾಲಿ ಸದಸ್ಯ ಜೈರಾಂ ರಮೇಶ್ ಅವರನ್ನೇ ಕಣಕ್ಕಿಳಿಸುವ ತೀರ್ಮಾನ ಕೈಗೊಂಡಿದೆ.



ನಿರ್ಮಲಾ ಸೀತಾರಾಮನ್



ಜೈರಾಂ ರಮೇಶ್

ನಿರ್ಮಲಾ ಸೀತಾರಾಮನ್ ಕರ್ನಾಟಕದಿಂದಲೇ ರಾಜ್ಯಸಭೆಗೆ ಆಯ್ಕೆಯಾಗಿದ್ದರು. ಈ ಬಾರಿಯೂ ಅವರನ್ನೇ ಮೊದಲ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸುವಂತೆ ಬಿಜೆಪಿ ರಾಜ್ಯ ಘಟಕದ ಪ್ರಮುಖರ ಸಮಿತಿಯೂ ಶಿಫಾರಸು ಮಾಡಿತ್ತು. ಮೊದಲ ಸ್ಥಾನಕ್ಕೆ ಅವರೊಬ್ಬರ ಹೆಸರನ್ನು ಮಾತ್ರ ಬಿಜೆಪಿ ರಾಷ್ಟ್ರೀಯ ಘಟಕಕ್ಕೆ ಕಳುಹಿಸಲಾಗಿತ್ತು. ತಮಿಳುನಾಡು ಮೂಲದವರಾದ ನಿರ್ಮಲಾ ಎರಡನೇ ಬಾರಿಗೆ ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಲಿದ್ದಾರೆ.

ಎರಡನೇ ಅಭ್ಯರ್ಥಿ ಆಯ್ಕೆಗೆ ಬಿಜೆಪಿ ರಾಜ್ಯ ಘಟಕದ ಪ್ರಮುಖರ ಸಮಿತಿ ರಾಜ್ಯಸಭೆಯ ಹಾಲಿ ಸದಸ್ಯ ಕೆ.ಸಿ. ರಾಮಮೂರ್ತಿ, ವಿಧಾನ ಪರಿಷತ್ ಮಾಜಿ ಸದಸ್ಯ ಲಹರ್ ಸಿಂಗ್ ಸಿರೋಯ, ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನಾ ಮತ್ತು ಉದ್ಯಮಿ ಪ್ರಕಾಶ್ ಶೆಟ್ಟಿ ಹೆಸರುಗಳನ್ನು ಶಿಫಾರಸು ಮಾಡಿತ್ತು.

5ನೇ ಪುಟ ನೋಡಿ

ನನಗೂ ಅಚ್ಚರಿಯಾಗಿದೆ: ಜಗ್ಗೇಶ್



‘ರಾಜ್ಯಸಭೆ ಚುನಾವಣೆಗೆ ನನ್ನನ್ನು ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿರುವುದು ಅಚ್ಚರಿ ಮೂಡಿಸಿದೆ. ಪಕ್ಷದಲ್ಲಿ ನಾನೊಬ್ಬ ಸಾಮಾನ್ಯ ಕಾರ್ಯಕರ್ತ. ಪಕ್ಷ ಮತ್ತು ಸರ್ಕಾರದಲ್ಲಿ ಯಾವುದೇ ಸ್ಥಾನಮಾನಗಳ ಕನಸು ಕಂಡವನಲ್ಲ’ ಎಂದು ಜಗ್ಗೇಶ್ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ರಾಷ್ಟ್ರಕ್ಕಾಗಿ ತನ್ನನ್ನೇ ಸಮರ್ಪಿಸಿಕೊಂಡು ಕೆಲಸ ಮಾಡುತ್ತಿರುವ ಬಿಜೆಪಿಯಲ್ಲಿ ಸಾಮಾನ್ಯ ಕಾರ್ಯಕರ್ತನೆಂದು ಗುರುತಿಸಿಕೊಳ್ಳಲು ನನಗೆ ಹೆಮ್ಮೆ ಇದೆ. ಆದರೆ ಪಕ್ಷ ಒಬ್ಬ ಸಾಮಾನ್ಯ ಕಾರ್ಯಕರ್ತನನ್ನು ಗುರುತಿಸಿದೆ. ಇದು ನನಗೆ ಸಂತಸ ಉಂಟು ಮಾಡಿದೆ. ಮುಂದೆಯೂ ಪಕ್ಷ ಹೇಳುವ ಕೆಲಸಗಳನ್ನು ಮಾಡುತ್ತೇನೆ’ ಎಂದು ತಿಳಿಸಿದರು.

ನಾಲ್ಕನೇ ಅಭ್ಯರ್ಥಿಯಾಗಲು ಕಸರತ್ತು

ವಿಧಾನಸಭೆಯಲ್ಲಿರುವ ಸದಸ್ಯಬಲದ ಆಧಾರದಲ್ಲಿ ರಾಜ್ಯಸಭೆಗೆ ಬಿಜೆಪಿಯಿಂದ ಇಬ್ಬರು ಮತ್ತು ಕಾಂಗ್ರೆಸ್‌ನಿಂದ ಒಬ್ಬರು ನಿರಾಯಾಸವಾಗಿ ಆಯ್ಕೆಯಾಗಬಹುದು. ಜೆಡಿಎಸ್‌ಗೆ ಮತಗಳ ಕೊರತೆ ಇದೆ. ಹೀಗಾಗಿ ನಾಲ್ಕನೇ ಅಭ್ಯರ್ಥಿ ಯಾರು ಎಂಬುದು ಇನ್ನೂ ಅಂತಿಮಗೊಂಡಿಲ್ಲ.

ಉದ್ಯಮಿ ಪ್ರಕಾಶ್ ಶೆಟ್ಟಿ ಅವರನ್ನು ಕಣಕ್ಕಿಳಿಸಿ ಇತರ ಪಕ್ಷಗಳ ಸದಸ್ಯರ ಬೆಂಬಲದಲ್ಲಿ ಆಯ್ಕೆಮಾಡುವ ಯೋಜನೆ ಬಿಜೆಪಿ ನಾಯಕರಲ್ಲಿದೆ. ಇನ್ನೊಂದೆಡೆ ಜೆಡಿಎಸ್ ಬೆಂಬಲಿತ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ರಾಜ್ಯಸಭೆಯ ಮಾಜಿ ಸದಸ್ಯ ಕುಪೇಂದ್ರ ರೆಡ್ಡಿ ಯತ್ನಿಸುತ್ತಿದ್ದಾರೆ. ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಸೇರಿದಂತೆ ಹಲವು ಪ್ರಮುಖರನ್ನು ಭಾನುವಾರ ಭೇಟಿಮಾಡಿ ಅವರು ಚರ್ಚಿಸಿದ್ದಾರೆ.

ಉತ್ತರ ಪ್ರದೇಶದಲ್ಲಿ ಭೀಕರ ಅಪಘಾತ ಬೀದರ್‌ನ 7, ಕಲಬುರಗಿಯ ಒಬ್ಬ ಸಾವು

ಪ್ರಜಾವಾಣಿ ವಾರ್ತೆ

ಬೀದರ್: ಉತ್ತರ ಪ್ರದೇಶದ ಲಖಿಂಪುರ ಖೇರಿ ಮತ್ತು ಮೋತಿಪುರ ನಡುವಿನ ನೌನಿಹಾಲ್‌ನ ಖೇರಿ-ನನ್‌ಪಾರಾ ಹೆದ್ದಾರಿಯಲ್ಲಿ ಟೆಂಪೊ ಟ್ರಾವೆಲರ್ ಮತ್ತು ಲಾರಿ ಮಧ್ಯೆ ಸಂಭವಿಸಿದ ಭೀಕರ ಅಪಘಾತದಲ್ಲಿ ರಾಜ್ಯದ 8 ಮಂದಿ ಮೃತಪಟ್ಟಿದ್ದು, ಎಂಟು ಜನ ಗಾಯಗೊಂಡಿದ್ದಾರೆ.

ಬೀದರ್‌ನ ಜಗದೇವಿ ಥೇವಣಿ (52) ಮನ್ಮಥ ಮಾರುತಿ (36), ಅನಿಲ್ ವಿಜಯಕುಮಾರ್ (30), ಸಂತೋಷ ಕಾಶಿನಾಥ್ (38), ಶಶಿಕಲಾ ರಾಜಕುಮಾರ್ (38), ಸರಸ್ವತಿ ಜಗನ್ನಾಥ (47), ಶಿವಾನಿ ಅನಿಲ್ (25) ಮತ್ತು ಕಲಬುರಗಿಯ ಶಿವಕುಮಾರ್ ಪೂಜಾರಿ ಶಿವಶರಣಪ್ಪ (28) ಮೃತಪಟ್ಟವರು.

ಟೆಂಪೊ ಟ್ರಾವೆಲರ್‌ನಲ್ಲಿ 16 ಪ್ರಯಾಣಿಕರಿದ್ದರು. ಖೇರಿಯಿಂದ ಅಯೋಧ್ಯೆಗೆ ಹೊರಟ್ಟಿದ್ದಾಗ ಅವಘಡ ನಡೆದಿದೆ. ಎಲ್ಲರೂ ಉತ್ತರ ಭಾರತ ಪ್ರವಾಸದಲ್ಲಿದ್ದರು. ಮೃತದೇಹಗಳನ್ನು ಬಹರೇಚ್ ಜಿಲ್ಲಾ ಆಸ್ಪತ್ರೆಯ ಶವಾಗಾರದಲ್ಲಿ ಇಡಲಾಗಿದೆ ಎಂದು ಮೋತಿಪುರ ಬಹರೇಚ್ ಠಾಣೆ ಪೊಲೀಸರು ತಿಳಿಸಿದ್ದಾರೆ.

‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉತ್ತರ ಪ್ರದೇಶದ ಮುಖ್ಯಮಂತ್ರಿ ಜೊತೆ ಮಾತನಾಡಿದ್ದು, ಮೃತದೇಹಗಳನ್ನು ಹೈದರಾಬಾದ್‌ಗೆ ವಿಮಾನದ ಮೂಲಕ ಕಳುಹಿಸಲು ಅಲ್ಲಿನ ಸರ್ಕಾರ ವ್ಯವಸ್ಥೆ ಮಾಡಿದೆ’ ಎಂದು ಬೀದರ್ ಜಿಲ್ಲಾಧಿಕಾರಿ ಗೋವಿಂದ ರಡ್ಡಿ ‘ಪ್ರಜಾವಾಣಿ’ಗೆ ತಿಳಿಸಿದರು.



ಪತನಗೊಂಡ ವಿಮಾನದಲ್ಲಿದ್ದ ಪ್ರಯಾಣಿಕರ ಸಂಬಂಧಿಕರು ನೇಪಾಳದ ಪೋಖರಾ ವಿಮಾನ ನಿಲ್ದಾಣದಲ್ಲಿ ರೋದಿಸಿದರು –ಎಎಫ್‌ಪಿ ಚಿತ್ರ

ಮುಂಬೈನ ನಾಲ್ವರು ಸೇರಿ 22 ಪ್ರಯಾಣಿಕರು

ನೇಪಾಳ: ವಿಮಾನ ಪತನ ರಕ್ಷಣಾ ಕಾರ್ಯ ವಿಳಂಬ

ಕಠ್ಮಂಡು/ಮುಂಬೈ (ಪಿಟಿಐ): ಮುಂಬೈನ ನಾಲ್ವರು ಸೇರಿ 22 ಮಂದಿ ಪ್ರಯಾಣಿಸುತ್ತಿದ್ದ ನೇಪಾಳದ ಲಘು ವಿಮಾನವೊಂದು ಭಾನುವಾರ ಪತನಗೊಂಡಿದೆ.

‘ಪ್ರತಿಕೂಲ ಹವಾಮಾನ ಇದೆ. ಹೀಗಾಗಿ, ಪತನಗೊಂಡಿರುವ ವಿಮಾನವನ್ನು ಪತ್ತೆ ಹಚ್ಚುವ ಕಾರ್ಯಾಚರಣೆಗೆ ಅಡ್ಡಿಯುಂಟಾಗಿದ್ದು, ವಿಮಾನದಲ್ಲಿದ್ದವರ ಸ್ಥಿತಿ ಏನಾಗಿದೆ ಎಂಬುದು ತಕ್ಷಣಕ್ಕೆ ಗೊತ್ತಾಗಿಲ್ಲ’ ಎಂದು ಅಧಿಕಾರಿಗಳು ಹೇಳಿದ್ದಾರೆ.

ವಿಮಾನದ ಪೈಲಟ್ ಅವರ ಮೊಬೈಲ್ ಸಿಗ್ನಲ್‌ಗಳು ಅಪಘಾತ ಸಂಭವಿಸಿದ ಸ್ಥಳದ ಬಗ್ಗೆ ಸುಳಿವು ನೀಡಬಹುದು. ಆಗ ರಕ್ಷಣಾ ಕಾರ್ಯವನ್ನು ಚುರುಕುಗೊಳಿಸಲು ಸಾಧ್ಯವಾಗಲಿದೆ ಎಂದು ನೇಪಾಳದ ನಾಗರಿಕ ವಿಮಾನಯಾನ ಪ್ರಾಧಿಕಾರ ಹೇಳಿದೆ.

ತಾರಾ ಏರ್ ಎಂಬ ಖಾಸಗಿ ವಿಮಾನ ಸಂಸ್ಥೆಗೆ ಸೇರಿದ ‘9ಎನ್–ಎಇಟಿ’ ವಿಮಾನವು ಪೋಖರಾದಿಂದ ಜೋಮ್‌ಸೊಮ್ ಎಂಬಲ್ಲಿಗೆ ಹೊರಟಿತ್ತು. ಇಬ್ಬರು ಜರ್ಮನ್ ಪ್ರಜೆಗಳು, 13 ಮಂದಿ ನೇಪಾಳಿಯರು, ಮೂವರು ಸಿಬ್ಬಂದಿಯೂ ವಿಮಾನದಲ್ಲಿದ್ದರು ಎಂದು ತಾರಾ ಏರ್ ಪ್ರಕಟಣೆಯಲ್ಲಿ ತಿಳಿಸಿದೆ.

ಪೋಖರಾ ವಿಮಾನನಿಲ್ದಾಣದಿಂದ ಬೆಳಿಗ್ಗೆ 9.55ಕ್ಕೆ ಟೇಕಾಫ್ ಆಗಿದ್ದ ವಿಮಾನವು ಜೋಮ್‌ಸೊಮ್ ವಿಮಾನನಿಲ್ದಾಣವನ್ನು 10.15ಕ್ಕೆ ತಲುಪಬೇಕಿತ್ತು.

‘ಟೇಕಾಫ್ ಆದ 15 ನಿಮಿಷಗಳ ನಂತರ ವಿಮಾನವು ನಿಯಂತ್ರಣ ಗೋಪುರದಿಂದ ಸಂಪರ್ಕ ಕಳೆದುಕೊಂಡಿತು’ ಎಂದು ತಾರಾ ಏರ್‌ನ ವಕ್ತಾರ ತಿಳಿಸಿದ್ದಾರೆ.

ನೇಪಾಳ ಸೇನೆಯ 10 ಸೈನಿಕರನ್ನು ಒಳಗೊಂಡ ತಂಡವನ್ನು ಹೊತ್ತ ಹೆಲಿಕಾಪ್ಟರ್ ರಕ್ಷಣಾ ಕಾರ್ಯಕ್ಕೆ ತೆರಳಿದೆ ಎಂದು ನಾಗರಿಕ ವಿಮಾನಯಾನ ಪ್ರಾಧಿಕಾರ ತಿಳಿಸಿದೆ.

ನಾಲ್ವರು ಠಾಣೆ ನಿವಾಸಿಗಳು (ಮುಂಬೈ ವರದಿ): ಮಹಾರಾಷ್ಟ್ರದ ಠಾಣೆ ನಿವಾಸಿಗಳಾದ ಅಶೋಕ ಕುಮಾರ್ ತ್ರಿಪಾಠಿ, ಪತ್ನಿ ವೈಭವಿ ತ್ರಿಪಾಠಿ, ಮಕ್ಕಳಾದ ಧನುಷ್ ಹಾಗೂ ರಿತಿಕಾ ಈ ನತದೃಷ್ಟ ವಿಮಾನದಲ್ಲಿ ಪ್ರಯಾಣಿಸುತ್ತಿದ್ದರು. ವಿಮಾನ ನಾಪತ್ತೆಯಾದ ಬೆನ್ನಲ್ಲೇ, ನೇಪಾಳದಲ್ಲಿರುವ ಭಾರತದ ರಾಯಭಾರ ಕಚೇರಿ ಅಧಿಕಾರಿಗಳು ಸ್ಥಳೀಯ ಪೊಲೀಸರನ್ನು ಸಂಪರ್ಕಿಸಿ, ತ್ರಿಪಾಠಿ ಕುಟುಂಬದ ಬಗ್ಗೆ ವಿವರಗಳನ್ನು ಸಂಗ್ರಹಿಸಿದರು ಎಂದು ಮೂಲಗಳು ಹೇಳಿವೆ.

ಇನ್ನೊಂದು ಸುದ್ದಿ 8

ತಿರುಪತಿ: ಭಕ್ತರ ದಟ್ಟಣೆ, 48 ಗಂಟೆ ಕಳೆದರೂ ಸಿಗದ ‘ದರ್ಶನ’

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಸುಪ್ರಸಿದ್ಧ ಧಾರ್ಮಿಕ ಸ್ಥಳ ತಿರುಪತಿಯ ತಿರುಮಲ ವೆಂಕಟೇಶ್ವರ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡುವವರ ಸಂಖ್ಯೆ ವಿಪರೀತ ಏರಿದೆ. ಭಕ್ತರ ದಟ್ಟಣೆಯಿಂದಾಗಿ ದರ್ಶನಕ್ಕಾಗಿ 48 ಗಂಟೆಗೂ ಹೆಚ್ಚು ಕಾಲ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಶನಿವಾರ 89,318 ಭಕ್ತರಿಗಷ್ಟೇ ದರ್ಶನ ಭಾಗ್ಯ ದೊರೆತಿದ್ದು, ಬೆಟ್ಟದಲ್ಲಿ 30 ಸಾವಿರಕ್ಕೂ ಹೆಚ್ಚು ಭಕ್ತರು ತಮ್ಮ ಸರದಿಗೆ ಕಾಯುತ್ತಿದ್ದರು. ಭಕ್ತರು ದೇಗುಲಕ್ಕೆ ಭೇಟಿ ನೀಡುವ ದಿನದಲ್ಲಿ ಬದಲಾವಣೆ ಮಾಡಿಕೊಳ್ಳಬೇಕು ಎಂದು ದೇವಸ್ಥಾನದ ಅಧಿಕಾರಿಗಳು ಮನವಿ ಮಾಡಿದ್ದಾರೆ.

ಭಕ್ತರ ಅನಿರೀಕ್ಷಿತ ದಟ್ಟಣೆ ಹಿನ್ನೆಲೆಯಲ್ಲಿ ಅಧಿಕಾರಿಗಳು ಬುಧವಾರದವರೆಗೆ ‘ವಿಐಪಿ ಬ್ರೇಕ್’ ದರ್ಶನ ಸೌಲಭ್ಯವನ್ನೂ ರದ್ದುಪಡಿಸಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರಿಗೆ ದೇವಾಲಯದ ಒಳಾವರಣ ಪ್ರವೇಶಿಸಲು ಅನುವು ಮಾಡಿಕೊಟ್ಟಿದ್ದಾರೆ.



‘ಗಂಟೆಗೆ 4,500 ಭಕ್ತರಿಗಷ್ಟೇ ಅವಕಾಶ ಕಲ್ಪಿಸಲು ಸಾಧ್ಯವಿದೆ. ಆದರೆ, ಪ್ರತಿ ಗಂಟೆಗೆ ಸರದಿಗೆ ಸುಮಾರು 8,000 ಭಕ್ತರು ಸೇರ್ಪಡೆ ಆಗುತ್ತಿದ್ದಾರೆ. ಇನ್ನೂ ಕೆಲವು ದಿನ ಹೀಗೇ ಭಕ್ತರ ದಟ್ಟಣೆ ಇರುವ ಸಾಧ್ಯತೆಯಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಶನಿವಾರ ದೇಗುಲದ ಹುಂಡಿಯಲ್ಲಿ ₹ 3.76 ಕೋಟಿ ಸಂಗ್ರಹವಾಗಿತ್ತು. ಅದಕ್ಕೂ ಹಿಂದೆ ಗುರುವಾರ ಹುಂಡಿಯಲ್ಲಿನ ಸಂಗ್ರಹವಾದ ಮೊತ್ತ ₹ 5.43 ಕೋಟಿ ಆಗಿತ್ತು’ ಎಂದು ವಿವರಿಸಿದ್ದಾರೆ.

ಕೋವಿಡ್ ಸಾಂಕ್ರಾಮಿಕದ ಕಾರಣ ಎರಡು ವರ್ಷ ದೇಗುಲಕ್ಕೆ ಭೇಟಿ ನೀಡುವುದಕ್ಕೆ ನಿರ್ಬಂಧವಿತ್ತು. ಪರಿಣಾಮ, ಈಗ ನಿರ್ಬಂಧ ಸಡಿಲಿಕೆಯ ಹಂತದ ನಂತರ ಈಗ ಬೇಸಿಗೆ ರಜೆ ಅವಧಿ ಹಾಗೂ ವಾರಾಂತ್ಯದಲ್ಲಿ ದೇಗುಲಕ್ಕೆ ಭೇಟಿ ನೀಡುವವರ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿದೆ.

ಸಾಮಾನ್ಯವಾಗಿ ವೈಕುಂಠ ಏಕಾದಶಿ, ಗರುಡ ಸೇವಾ ಅಂತಹ ದಿನಗಳಿಗಿಂತಲೂ ಹೆಚ್ಚಿನ ದಟ್ಟಣೆ ಇದೆ. ಇದೇ ಕಾರಣದಿಂದ ‘ಶ್ರೀವಾರಿ ದರ್ಶನ’ 48 ಗಂಟೆಯಷ್ಟು ವಿಳಂಬವಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದರ್ಶನಕ್ಕಾಗಿ ಇರುವ ಎಲ್ಲ ಸರದಿ ಸಾಲುಗಳ ಭರ್ತಿಯಾಗಿದ್ದು, ಕಾಯ್ದು ನಿಲ್ಲುವ 30 ವಿಭಾಗಗಳು ಭರ್ತಿಯಾಗಿವೆ. ಇವುಗಳ ಹೊರತೆ 2 ಕಿ.ಮೀನಷ್ಟು ಭಕ್ತರ ಸಾಲು ಇದೆ. ಬೆಟ್ಟದ ಪ್ರವೇಶ ಮಾರ್ಗ ಅಲಿಪಿರಿ ಟೋಲ್‌ಗೇಟ್ ಬಳಿಯೂ ವಾಹನಗಳ ಉದ್ದನೆಯ ಸಾಲಿದೆ.

ಭಕ್ತರ ದಟ್ಟಣೆಯ ಹಿನ್ನೆಲೆಯಲ್ಲಿ ಕುಡಿಯುವ ನೀರು, ಹಾಲು, ಅನ್ನಪ್ರಸಾದಕ್ಕೆ ಸೌಲಭ್ಯ ಕಲ್ಪಿಸಲು ಹೆಚ್ಚಿನ ಸಿದ್ಧತೆ ಆಗಿದೆ ಎಂದು ಅಧಿಕಾರಿಗಳು ಹೇಳಿದರು. ಆದರೆ, ಕೆಲ ಭಕ್ತರು ನಮಗೆ ಅನ್ನ ಪ್ರಸಾದ ವಿಳಂಬವಾಗಿ ದೊರೆಯಿತು, ಇತರೆ ಸೌಲಭ್ಯ ಸಿಗಲಿಲ್ಲ ಎಂದು ದೂರಿದರು.

ಅಭಿವೃದ್ಧಿ ಆಯುಕ್ತರಾಗಿ ಐ.ಎಸ್.ಎನ್. ಪ್ರಸಾದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 11 ಐಎಎಸ್ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ ಭಾನುವಾರ ರಾತ್ರಿ ಆದೇಶ ಹೊರಡಿಸಿದ್ದು, ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್. ಪ್ರಸಾದ್ ಅವರನ್ನು ಅಭಿವೃದ್ಧಿ ಆಯುಕ್ತರನ್ನಾಗಿ ನೇಮಿಸಲಾಗಿದೆ.

ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ ಡಾ. ರಜನೀಶ್ ಗೋಯಲ್ ಅವರನ್ನು ರಾಜ್ಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ನೂತನ ಮುಖ್ಯ ಕಾರ್ಯದರ್ಶಿಯಾಗಿ ನೇಮಕಗೊಂಡಿರುವ ವಂದಿತಾ ಶರ್ಮ ಈ ಹುದ್ದೆಯಲ್ಲಿದ್ದರು.

ಇತರ ವರ್ಗಾವಣೆಗಳ ವಿವರ: ಆರ್. ಉಮಾಶಂಕರ್– ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ, ರಶ್ಮಿ ವಿ. ಮಹೇಶ್– ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ, ಪಂಕಜ್ ಕುಮಾರ್ ಪಾಂಡೆ– ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಕಾರ್ಯದರ್ಶಿ (ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ), ಡಾ. ರಾಮ್ ಪ್ರಸಾದ್ ಮನೋಹರ್ ವಿ. – ವಿಶೇಷ ಆಯುಕ್ತರು ಬಿಬಿಎಂಪಿ (ಎಸ್ಟೇಟ್ಸ್ ವಿಭಾಗ), ವಿನೋದ್ ಪ್ರಿಯಾ ಆರ್.– ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೌಶಲ ಅಭಿವೃದ್ಧಿ ನಿಗಮ.

ರಮೇಶ್ ಡಿ.ಎಸ್.– ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಶರತ್ ಬಿ.– ಆಯುಕ್ತರು, ಕೃಷಿ ಇಲಾಖೆ, ಸತ್ಯಭಾಮಾ ಸಿ.–ನಿರ್ದೇಶಕರು, ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ವಿಭಾಗ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಸೋಮಶೇಖರ್ ಎಸ್.ಜೆ.– ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ.

ಬ್ರಹ್ಮ ರಥೋತ್ಸವ ಜೂನ್ 7ಕ್ಕೆ

ಬೆಂಗಳೂರು: ಧಾರ್ಮಿಕ ದತ್ತಿ ಇಲಾಖೆಯು ನಗರದ ಕೋಟೆ ಪ್ರದೇಶದಲ್ಲಿರುವ ಪ್ರಸನ್ನ ವೆಂಕಟರಮಣ ಸ್ವಾಮಿಯ ಬ್ರಹ್ಮ ರಥೋತ್ಸವವನ್ನು ಜೂನ್ 7ರಂದು ಹಮ್ಮಿಕೊಂಡಿದೆ.

ಬೆಳಿಗ್ಗೆ 10ರಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದ್ದು, ಸಂಜೆ 7ಕ್ಕೆ ಹೂವಿನ ಚಕ್ರ ಉತ್ಸವ ಜರುಗಲಿದೆ. ಭಕ್ತಾದಿಗಳು ದೇವರ ದರ್ಶನ ಪಡೆದು, ತೀರ್ಥ ಪ್ರಸಾದ ಸ್ವೀಕರಿಸುವಂತೆ ಇಲಾಖೆ ಪ್ರಕಟಣೆ ತಿಳಿಸಿದೆ.

ಡಾ.ತೀ.ನಂ. ಶಂಕರನಾರಾಯಣ, ಚಿತ್ತಪ್ಪಗೆ ‘ಸಿರಿ ಬೆಳಗು’ ಪ್ರಶಸ್ತಿ ಪ್ರದಾನ

‘ದೇಸಿ ಸಂಗೀತ: ಪ್ರತಿಷ್ಠಾನಗಳು ಒಗ್ಗೂಡಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿರುವ ಎಲ್ಲ ಸಾಂಸ್ಕೃತಿಕ ಪ್ರತಿಷ್ಠಾನಗಳು ಒಗ್ಗೂಡಿ ದೇಸಿ ಸಂಗೀತದ ಮರು ಹುಟ್ಟಿಗೆ ಕಾರಣವಾಗುವ ರೀತಿಯಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕು’ ಎಂದು ಸಂಗೀತ ನಿರ್ದೇಶಕ ಹಂಸಲೇಖ ಅಭಿಪ್ರಾಯಪಟ್ಟರು.

ನಾಡೋಜ ಸಿರಿಯಜ್ಜಿ ಸಾಂಸ್ಕೃತಿಕ ಪ್ರತಿಷ್ಠಾನ ನಗರದಲ್ಲಿ ಭಾನುವಾರ ಆಯೋಜಿಸಿದ್ದ ‘ಸಿರಿ ಬೆಳಗು’ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ‘ದೇಸಿ ಸಂಗೀತದ ಪುನರುಜ್ಜೀವನದ ಅಗತ್ಯವಿದೆ. ಈ ನಿಟ್ಟಿನಲ್ಲಿ ರೂಪಿಸುವ ಯೋಜನೆಗಳಿಗೆ ತಮ್ಮ ದೇಸಿ ಸಂಸ್ಥೆ ಸಹ ಸಹಕಾರ ನೀಡಲಿದೆ’ ಎಂದರು.

‘ಜಾನಪದ ವಿಶ್ವಕೋಶ ಎಂದೇ ಖ್ಯಾತನಾಮರಾಗಿದ್ದ ಸಿರಿಯಜ್ಜಿ ನಿಜಕ್ಕೂ ನಾಡಿನ ದೇಸಿ ಪ್ರತಿನಿಧಿಯಾಗಿದ್ದರು. ಜಾನಪದವನ್ನು ಉಚ್ಛ್ರಾಯ ಸ್ಥಿತಿಗೆ ಕೊಂಡೊಯ್ದ ಮಹಾನ್ ದೇಸಿ ಕಲಾವಿದೆಯಾಗಿದ್ದರು. ತಿಳಿವಳಿಕೆ ಮತ್ತು ಅನುಭವದ ಅಕ್ಷರಗಳನ್ನು ಇರಿಸಿಕೊಂಡಿದ್ದ ಮಹಾಜ್ಞಾನಿ ಮತ್ತು ಪ್ರತಿಭೆಯಾಗಿದ್ದರು’ ಎಂದು ಸ್ಮರಿಸಿದರು.

ನಿವೃತ್ತ ಐಪಿಎಸ್ ಅಧಿಕಾರಿ ಡಿ.ಎನ್. ಮುನಿಕೃಷ್ಣ ಮಾತನಾಡಿ, ‘ಸಾಧನೆ ವೈಯಕ್ತಿಕವಾದರೂ ಸಾರ್ವಜನಿಕವಾಗಿ ಮನ್ನಣೆ ಪಡೆಯಬೇಕು. ಈ ನಿಟ್ಟಿನಲ್ಲಿ ಸಿರಿಯಜ್ಜಿಯ ಸಾಹಿತ್ಯದ ಮೌಲ್ಯಗಳು ಆದರ್ಶಪ್ರಾಯವಾಗಿದ್ದು, ಹೆಚ್ಚು ಜನಪ್ರಿಯಗೊಳಿಸುವ ಅಗತ್ಯವಿದೆ’ ಎಂದು ಸಲಹೆ ನೀಡಿದರು.

ನಾಡೋಜ ಸಿರಿಯಜ್ಜಿ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ನೀಡುವ ‘ಸಿರಿಬೆಳಗು’ ಪ್ರಶಸ್ತಿಯನ್ನು ಬುಡಕಟ್ಟು ಪದಗಾರ ದಳವಾಯಿ ಚಿತ್ತಪ್ಪ ಮತ್ತು ಜಾನಪದ ವಿದ್ವಾಂಸರಾಗಿದ್ದ ದಿವಂಗತ ಡಾ.ತೀ.ನಂ. ಶಂಕರನಾರಾಯಣ ಅವರಿಗೆ ಪ್ರದಾನ ಮಾಡಲಾಯಿತು. ಪ್ರಶಸ್ತಿಯು ₹10 ಸಾವಿರ ನಗದು ಮತ್ತು ಸ್ಮರಣಿಕೆ ಒಳಗೊಂಡಿದೆ.

ಡಾ. ತೀ.ನಂ. ಶಂಕರನಾರಾಯಣ ಪರವಾಗಿ ಪ್ರಶಸ್ತಿ ಪಡೆದ ಅವರ ಪುತ್ರಿಯರಾದ ಅಪರ್ಣಾ ಮತ್ತು ಪೂರ್ಣಿಮಾ ಅವರು ಪ್ರಶಸ್ತಿ ಮೊತ್ತವನ್ನು ಪ್ರತಿಷ್ಠಾನಕ್ಕೆ ಹಿಂತಿರುಗಿಸುವ ಜತೆಗೆ ₹90 ಸಾವಿರ ಮೊತ್ತವನ್ನು ತಾವೇ ದೇಣಿಗೆಯಾಗಿ ನೀಡಿದರು. ಒಟ್ಟು ₹1 ಲಕ್ಷ ಮೊತ್ತದಲ್ಲಿ ತಮ್ಮ ತಂದೆ ಹೆಸರಿನಲ್ಲಿ ದತ್ತಿ ನಿಧಿ ಸ್ಥಾಪಿಸುವಂತೆ ಕೋರಿದರು.

ಡಾ. ಕೃಷ್ಣಮೂರ್ತಿ ಹನೂರು ಅವರ ‘ಬುಡಕಟ್ಟು ಪ್ರತಿಭೆ ಸಿರಿಯಜ್ಜಿ’ ಕೃತಿಯನ್ನು ಡಿ.ಎನ್. ಮುನಿಕೃಷ್ಣ ಬಿಡುಗಡೆ ಮಾಡಿದರು. ಕರ್ನಾಟಕ ರಾಜ್ಯ ಕಾಡುಗೊಲ್ಲರ ಸಂಘದ ಅಧ್ಯಕ್ಷ ರಾಜಣ್ಣ, ಪ್ರತಿಷ್ಠಾನದ ಅಧ್ಯಕ್ಷ ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ ಇದ್ದರು.



ಬುಡಕಟ್ಟು ಗಾಯಕ ದಳವಾಯಿ ಚಿತ್ತಪ್ಪ ಅವರಿಗೆ 'ಸಿರಿ ಬೆಳಗು' ಪ್ರಶಸ್ತಿ ನೀಡಿ ಗೌರವಿಸಲಾಯಿತು. (ಎಡದಿಂದ) ಪ್ರೊ. ಬೆಳಗೆರೆ ಜಿ. ರಾಜಶೇಖರಯ್ಯ, ಸಂಗೀತ ನಿರ್ದೇಶಕ ಹಂಸಲೇಖ, ನಿವೃತ್ತ ಐಪಿಎಸ್ ಅಧಿಕಾರಿ ಡಿ.ಎನ್.ಮುನಿಕೃಷ್ಣ, ಪ್ರಾದೇಶಿಕ ಪಾಸ್‌ಪೋರ್ಟ್ ಅಧಿಕಾರಿ ಕೆ. ಕೃಷ್ಣ, ಕರ್ನಾಟಕ ರಾಜ್ಯ ಕಾಡುಗೊಲ್ಲರ ಸಂಘದ ಅಧ್ಯಕ್ಷ ರಾಜಣ್ಣ, ಡಿ.ಕೆ. ಚಿತ್ತಯ್ಯ ಪೂಜಾರ್ ಮತ್ತು ನಾಡೋಜ ಸಿರಿಯಜ್ಜಿ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷ ಮಲ್ಲಿಕಾರ್ಜುನ ಕಲಮರಹಳ್ಳಿ ಇದ್ದರು — ಪ್ರಜಾವಾಣಿ ಚಿತ್ರ

> ಸಾಮಾಜಿಕ ಜಾಲತಾಣಗಳಲ್ಲಿ ಜಾನಪದ ಸಂಗೀತ ಸ್ಪರ್ಶವಾಗಬೇಕು. 32 ದೇಶ ಸುತ್ತಿರುವ ನನಗೆ ಕಾಡುಗೊಲ್ಲರ ಜಾನಪದದ ಶ್ರೀಮಂತಿಕೆ ಎಲ್ಲಿಯೂ ಕಾಣಲಿಲ್ಲ
> **ಕೆ. ಕೃಷ್ಣ,** ಪ್ರಾದೇಶಿಕ ಪಾಸ್‌ಪೋರ್ಟ್ ಅಧಿಕಾರಿ

ನಗರದಲ್ಲಿ ಇಂದು

ಶನೈಶ್ವರ ಸ್ವಾಮಿ ಜಯಂತಿ: ಸ್ವಾಮಿಗೆ ಬೆಳ್ಳಿ ಕವಚ ಧಾರಣೆ ಹಾಗೂ ವಿಶೇಷ ಹೂವಿನ ಅಲಂಕಾರ, ಆದಿತ್ಯಾದಿ ನವಗ್ರಹ ಪೂಜೆ ಕಳಶ ಸ್ಥಾಪನೆ. ಬೆಳಿಗ್ಗೆ 9ಕ್ಕೆ. ಶನೈಶ್ವರ ಸ್ವಾಮಿಯ ಉತ್ಸವ ಮೂರ್ತಿಯ ವಿಶೇಷ ಹೂವಿನ ಪಲ್ಲಕ್ಕಿಯೊಂದಿಗೆ ಮೆರವಣಿಗೆ, ನಾದಸ್ವರ: ವಿದ್ವಾನ್ ಎನ್.ಕುಮಾರ್, ಸಾಗರಂ ಕಲಾಸಮಿತಿಯಿಂದ ಕೇರಳ ಚೆಂಡೆ ವಾದ್ಯ, ಆಯೋಜನೆ: ಶನಿದೇವರ ದೇವಾಲಯದ ಸಮಿತಿ, ಸ್ಥಳ: ಶನಿದೇವರ ದೇವಾಲಯ ಮತ್ತು ರಾಮಕೃಷ್ಣ ಭಜನಾ ಮಂದಿರ ನಂ.3, 2ನೇ ಅಡ್ಡ ರಸ್ತೆ ಮುನೇಶ್ವರ ಬ್ಲಾಕ್, ಪ್ಯಾಲೇಸ್ ಗುಟ್ಟಹಳ್ಳಿ. ಸಂಜೆ 6.30

ವಿಶ್ವ ಸ್ಕ್ಲೆರೋಸಿಸ್ ದಿನ: ಅತಿಥಿಗಳು: ಡಾ.ಕರ್ಸ್ಟಿನ್ ಹೆಲ್ವಿಂಗ್, ಅಧ್ಯಕ್ಷತೆ: ಡಾ.ಪ್ರತಿಮಾ ಮೂರ್ತಿ, ಆಯೋಜನೆ: ನಿಮ್ಹಾನ್ಸ್. ಸ್ಥಳ: ನಿಮ್ಹಾನ್ಸ್ ಸಭಾಂಗಣ. ಬೆಳಿಗ್ಗೆ 10

ರಾಜ್ಯ ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳು: ಕ್ರೀಡಾಕೂಟದ ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ಬಿ.ಎಸ್. ಯಡಿಯೂರಪ್ಪ, ಕೆ.ಸಿ. ನಾರಾಯಣಗೌಡ, ಆರ್.ಅಶೋಕ್, ಅಧ್ಯಕ್ಷತೆ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ. ಆಯೋಜನೆ: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಸ್ಥಳ: ಕಂಠೀರವ ಕ್ರೀಡಾಂಗಣ, ಸಂಜೆ 4.30

ಎಂ.ಆರ್. ಜಯರಾಂ ಅಭಿನಂದನಾ ಕಾರ್ಯಕ್ರಮ: ಉಪಸ್ಥಿತಿ: ಡಾ.ಕೆ. ಕಸ್ತೂರಿ ರಂಗನ್, ಡಾ. ಕೆ. ಕರಿಸಿದ್ದಪ್ಪ, ಡಾ. ಎಂ.ಕೆ.ರಮೇಶ, ಡಾ.ಜೆ.ಎನ್.ರೆಡ್ಡಿ, ಸ್ಥಳ: ರಾಮಯ್ಯ ವೈದ್ಯಕೀಯ ಕಾಲೇಜು ಸಭಾಂಗಣ ಮಧ್ಯಾಹ್ನ: 3.30.


ಪಿಇಜಿಎ ಉತ್ಕೃಷ್ಟ ಕೇಂದ್ರ ಉದ್ಘಾಟನೆ: ಅಧ್ಯಕ್ಷತೆ: ಗಾಳಿಸ್ವಾಮಿ, ತಿಂತಿಶಾ.ಎಚ್. ಸಾಗರ, ಆಯೋಜಕರು: ದಯಾನಂದ್ ಸಾಗರ ಎಂಜಿನಿಯರಿಂಗ್ ಕಾಲೇಜು, ಸ್ಥಳ: ಡಾ.ಡಿ.ಪ್ರೇಮಚಂದ್ರ ಸಾಗರ್ ಸಭಾಂಗಣ. ಬೆಳಿಗ್ಗೆ 10.30.

ಸುದ್ದಿ 2 ನಿಮಿಷ

ಕಾಂಗ್ರೆಸ್ ಸೇರಲು ತೇಜಸ್ವಿ ಪಟೇಲ್ ನಿರ್ಧಾರ

ಬಸವಾಪಟ್ಟಣ: ರೈತ ಮುಖಂಡ ತೇಜಸ್ವಿ ಪಟೇಲ್ ಕಾಂಗ್ರೆಸ್ ಪಕ್ಷ ಸೇರಲು ಒಲವು ತೋರಿದ್ದು, ಭಾನುವಾರ ಸಂಜೆ ಮಾಜಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರನ್ನು ಭೇಟಿ ಈ ಬಗ್ಗೆ ಚರ್ಚಿಸಿದ್ದಾರೆ.

‘ನನ್ನ ರಾಜಕೀಯ ಹಿತೈಷಿಗಳು ಕಾಂಗ್ರೆಸ್ ಪಕ್ಷವನ್ನು ಸೇರುವಂತೆ ಬಹಳ ದಿನಗಳಿಂದ ಒತ್ತಾಯಿಸುತ್ತಿದ್ದರು. ಈ ಬಗ್ಗೆ ಎಸ್.ಎಸ್. ಮಲ್ಲಿಕಾರ್ಜುನ್ ಅವರೊಂದಿಗೆ ಮಾತನಾಡಿದ್ದೇನೆ. ಇದಕ್ಕೆ ಅವರು ಸಮ್ಮತಿಸಿದ್ದಾರೆ. ನನ್ನ ಸಹೋದರ ಮಹಿಮ ಪಟೇಲ್ ಮತ್ತು ಮಾಜಿ ಶಾಸಕ ವಡ್ನಾಳ್ ರಾಜಣ್ಣ ಅವರೊಂದಿಗೆ ಕೂಲಂಕಶವಾಗಿ ಈ ಬಗ್ಗೆ ಚರ್ಚಿಸಿ ಕಾಂಗ್ರೆಸ್ ಸೇರುವ ನನ್ನ ನಿರ್ಧಾರವನ್ನು ಅಧಿಕೃತವಾಗಿ ಪ್ರಕಟಿಸುತ್ತೇನೆ. ಮಹಾತ್ಮ ಗಾಂಧಿ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಅವರ ಸಿದ್ಧಾಂತಗಳನ್ನು ಪ್ರತಿಪಾದಿಸುವ ಕಾಂಗ್ರೆಸ್ ಪಕ್ಷವನ್ನು ಸೇರುವುದು ನನ್ನ ಉದ್ದೇಶವಾಗಿದೆ’ ಎಂದು ತೇಜಸ್ವಿಪಟೇಲ್ ‘ಪ್ರಜಾವಾಣಿ’ಗೆ ತಿಳಿಸಿದರು.



ಜೂನ್ 20ರಿಂದ ಧರಣಿ: ಸ್ವಾಮೀಜಿ

ಕಲಬುರಗಿ: ‘ಆರ್ಯ ಈಡಿಗ ಸಮುದಾಯದ ವಿವಿಧ ಬೇಡಿಕೆಗಳ ಈಡೇರಿಕೆಗೆ ಸರ್ಕಾರ ಒಪ್ಪದಿದ್ದರೆ ಜೂನ್ 20ರಿಂದ ಕಲಬುರಗಿ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಆಮರಣಾಂತ ಉಪವಾಸ ಸತ್ಯಾಗ್ರಹ ಆರಂಭಿಸಲಾಗುವುದು’ ಎಂದು ರಾಷ್ಟ್ರೀಯ ಈಡಿಗ ಮಹಾ ಮಂಡಳದ ಅಧ್ಯಕ್ಷ ಪ್ರಣವಾನಂದ ಸ್ವಾಮೀಜಿ ತಿಳಿಸಿದ್ದಾರೆ.

‘ಬ್ರಹ್ಮಶ್ರೀ ನಾರಾಯಣಗುರು ನಿಗಮ ಸ್ಥಾಪನೆ, ಸೇಂದಿ ವೃತ್ತಿ ಪುನರಾರಂಭ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮೊದಲ ಹಂತದಲ್ಲಿ 151 ಕಿ.ಮೀ. ಪಾದಯಾತ್ರೆ ನಡೆಸಲಾಗಿದೆ. ಎರಡನೇ ಹಂತದ ಹೋರಾಟಕ್ಕೆ ಕಲ್ಯಾಣ ಕರ್ನಾಟಕದ 39 ತಾಲ್ಲೂಕುಗಳಲ್ಲಿ ಪೂರ್ವತಯಾರಿ ಸಭೆ ಮಾಡಲಾಗಿದೆ’ ಎಂದ ಅವರು ತಿಳಿಸಿದ್ದಾರೆ.

‘ಜೂನ್ 20ರ ಬೆಳಿಗ್ಗೆ 9ಕ್ಕೆ ತೆಲಂಗಾಣ ಸರ್ಕಾರದ ಅಬಕಾರಿ ಮತ್ತು ಪ್ರವಾಸೋದ್ಯಮ ಸಚಿವ ಶ್ರೀನಿವಾಸ ಗೌಂಡರ್ ಸತ್ಯಾಗ್ರಹಕ್ಕೆ ಚಾಲನೆ ನೀಡುವರು. ನಟ ಸುಮನ್, ಶಾಸಕ ಸುಭಾಷ್ ಗುತ್ತೇದಾರ್, ಕಾಂಗ್ರೆಸ್ ನಾಯಕ ಯು.ಟಿ. ಖಾದರ್, ಬಿಜೆಪಿ ನಾಯಕ ಮಾಲೀಕಯ್ಯ ಗುತ್ತೇದಾರ್, ಜೆಡಿಎಸ್ ನಾಯಕ ಬಾಲರಾಜ ಗುತ್ತೇದಾರ ಭಾಗವಹಿಸುವರು’ ಎಂದರು.

ಪ್ರತಿಭಾ ವೇದಿಕೆ ವಿಶೇಷ ಸ್ಪರ್ಧೆಗಳು

ಬೆಂಗಳೂರು: ಕಲಾದರ್ಪಣ - ಆರ್ಟ್ ರಿಫ್ಲೆಕ್ಟ್ಸ್ ಸಂಸ್ಥೆಯು ಪ್ರತಿಭಾ ವೇದಿಕೆ ‘ಸೀಸನ್-2’ ಕಾರ್ಯಕ್ರಮವನ್ನು ಜೂನ್ 11ರಂದು ನಗರದಲ್ಲಿ ಆಯೋಜಿಸಿದೆ.

ಈ ಕಾರ್ಯಕ್ರಮದ ಅಂಗವಾಗಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ನೃತ್ಯ, ಚಿತ್ರಕಲೆ, ವಾದ್ಯ ನುಡಿಸುವುದು, ರಂಗೋಲಿ, ಭರತನಾಟ್ಯ, ವೇಷಭೂಷಣ, ಜನಪದ, ಭಾವಗೀತೆಗಳನ್ನು ಹಾಡಲು ತಿಂಗಳು ಜೂನ್ 5ರ ಒಳಗೆ ಹೆಸರು ನೋಂದಾಯಿಸಿಕೊಳ್ಳಲು ಕೋರಲಾಗಿದೆ.

ಮಾಹಿತಿಗೆ ಸಂಪರ್ಕಿಸಿ: 93806 71947.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು.

‘ತ್ಯಾಜ್ಯ ತೆರವುಗೊಳಿಸಿ’



ಹೆಗ್ಗನಹಳ್ಳಿ 1ನೇ ಮುಖ್ಯರಸ್ತೆ ಹಾಗೂ 2ನೇ ಅಡ್ಡರಸ್ತೆಯ ಬದಿ (ಮೋಹನ್ ಚಿತ್ರ ಮಂದಿರದ ಸಮೀಪ) ‘ಕಸ ಹಾಕಬಾರದು’ ಎಂಬ ಫಲಕ ಅಳವಡಿಸಲಾಗಿದೆ. ಆದರೆ, ಕೆಲವರು ಅಲ್ಲಿಯೇ ಕಸ ಹಾಕುತ್ತಿದ್ದಾರೆ. ರಸ್ತೆಯಲ್ಲೆಲ್ಲ ತ್ಯಾಜ್ಯ ಹರಡಿ, ವಾಹನ ಸವಾರರು ಮತ್ತು ಪಾದಚಾರಿಗಳಿಗೆ ತೊಂದರೆಯಾಗುತ್ತಿದೆ. ತ್ಯಾಜ್ಯವೆಲ್ಲ ಕೊಳೆತು ದುರ್ನಾತ ಬರುವ ಮುನ್ನವೇ ಸಂಬಂಧಪಟ್ಟ ಅಧಿಕಾರಿಗಳು ವಿಲೇವಾರಿಗೆ ಕ್ರಮ ಕೈಗೊಳ್ಳಬೇಕು

ಎಸ್. ಶ್ರೀಧರ್, ಲಕ್ಷ್ಮಣನಗರ ನಿವಾಸಿ

‘ರಸ್ತೆ ಗುಂಡಿ ಮುಚ್ಚಿ’



‘ಹೆಸರುಘಟ್ಟ ಮುಖ್ಯರಸ್ತೆಯು ಗುಂಡಿಮಯವಾಗಿದ್ದು, ಎಲ್ಲ ಕಡೆಯೂ ತಗ್ಗುಗಳು ಬಿದ್ದಿವೆ. ನಿತ್ಯ ಸಾವಿರಾರು ವಾಹನಗಳು ಈ ರಸ್ತೆಯಲ್ಲಿ ಸಂಚರಿಸುತ್ತವೆ. ಗುಂಡಿಗಳಿಂದಾಗಿ ನಿತ್ಯವೂ ಅಪಘಾತಗಳು ಸಂಭವಿಸುತ್ತಿದ್ದು, ವಾಹನ ಸವಾರರು ಗಾಯಗೊಂಡು ಆಸ್ಪತ್ರೆ ಸೇರುತ್ತಿದ್ದಾರೆ. ಮಳೆ ಬಂದರೆ ಗುಂಡಿಗಳಲ್ಲಿ ಕೊಳಚೆ ನೀರು ಸಂಗ್ರಹವಾಗುತ್ತಿದೆ. ದ್ವಿಚಕ್ರ ವಾಹನ ಸವಾರರು, ರಸ್ತೆ ಕಾಣದೆ ಗುಂಡಿಯೊಳಗೆ ವಾಹನ ಇಳಿಸುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ವಾಹನಗಳು ಉರುಳಿ ಬೀಳುತ್ತಿವೆ. ಮಳೆಗಾಲ ಆರಂಭಕ್ಕೂ ಮುನ್ನವೇ ಗುಂಡಿಗಳನ್ನು ಮುಚ್ಚಲು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು

ಎಚ್.ಎಸ್.ಅಭಿಷೇಕ, ಚಿಕ್ಕಬಾಣಾವರ ನಿವಾಸಿ

‘ಬಸ್ ತಂಗುದಾಣ ಪಕ್ಕವೇ ಮೂತ್ರವಿಸರ್ಜನೆ’

ಸುಲ್ತಾನ್ ಪಾಳ್ಯ ವಾರ್ಡ್ ಸಂಖ್ಯೆ 32ರ ಬಸ್ ತಂಗುದಾಣದ ಶೌಚಾಲಯವನ್ನು ನಾಲ್ಕು ವರ್ಷಗಳಿಂದ ಬಂದ್ ಮಾಡಲಾಗಿದೆ. ಬಸ್ ಚಾಲಕರು, ನಿರ್ವಾಹಕರು, ಪ್ರಯಾಣಿಕರು ಹಾಗೂ ಇತರರು, ತಂಗುದಾಣದ ಅಕ್ಕ–ಪಕ್ಕದ ಜಾಗದಲ್ಲೇ ಮೂತ್ರ ವಿಸರ್ಜನೆ ಮಾಡುತ್ತಿದ್ದಾರೆ. ಇದರಿಂದಾಗಿ ಇಡೀ ಪ್ರದೇಶ ದುರ್ನಾತ ಬೀರುತ್ತಿದ್ದು, ಸೊಳ್ಳೆಗಳ ಕಾಟವೂ ಹೆಚ್ಚಾಗಿದೆ. ಮಹಿಳೆಯರು, ಮಕ್ಕಳು ಬಸ್ ತಂಗುದಾಣದಲ್ಲಿ ಮೂಗು ಮುಚ್ಚಿಕೊಂಡು ನಿಲ್ಲುವಂತಹ ಸ್ಥಿತಿ ನಿರ್ಮಾಣವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು, ತಂಗುದಾಣದ ಸ್ವಚ್ಛತೆಗೆ ಕ್ರಮ ಕೈಗೊಳ್ಳಬೇಕು

ಸೈಯದ್, ಸುಲ್ತಾನ್‌ಪಾಳ್ಯ ನಿವಾಸಿ

‘ದೊಡ್ಡಗುಬ್ಬಿ ಮುಖ್ಯರಸ್ತೆ ಗುಂಡಿಮಯ’

ವಿಮಾನ ನಿಲ್ದಾಣದ ಬಳಿಯ ದೊಡ್ಡಗುಬ್ಬಿ ಮುಖ್ಯರಸ್ತೆ ಸಂಪೂರ್ಣ ಹಾಳಾಗಿದ್ದು, ಬಹುತೇಕ ಕಡೆ ಗುಂಡಿಗಳು ಬಿದ್ದಿವೆ. ಮಳೆ ಬಂದರೆ ರಸ್ತೆ ಕೆಸರು ಗದ್ದೆಯಂತಾಗುತ್ತದೆ. ಹೆಣ್ಣೂರು–ಬಾಗಲೂರಿಗೆ ಸಂಪರ್ಕ ಕಲ್ಪಿಸುವ ದೊಡ್ಡಗುಬ್ಬಿ ರಸ್ತೆಯಲ್ಲಿ ನಿತ್ಯವೂ 8–10 ಗ್ರಾಮಗಳ ಸಾರ್ವಜನಿಕರು ಸಂಚರಿಸುತ್ತಾರೆ. ಕೆಆರ್‌ಸಿ ರಸ್ತೆಯಿಂದ ಗವಿಗುಡಿಯವರೆಗೆ ಗುಂಡಿಗಳಿರುವುದರಿಂದ ಹಲವು ಬಾರಿ ಅಪಘಾತಗಳು ಸಂಭವಿಸುತ್ತಿವೆ. ಕುಡಿಯುವ ನೀರು ಪೈಪ್ ಲೈನ್ ಅಳವಡಿಕೆ ಕಾಮಗಾರಿಗಾಗಿ ರಸ್ತೆಯನ್ನು ಅಗೆಯಲಾಗಿದ್ದು, ಕಾಮಗಾರಿ ಮುಗಿದರೂ ಗುಂಡಿಗಳನ್ನು ಸಮರ್ಪಕವಾಗಿ ಮುಚ್ಚಿಲ್ಲ. ಇದುವೇ ಸಮಸ್ಯೆಗೆ ಕಾರಣವಾಗಿದೆ.

ಲಕ್ಷ್ಮಿನರಸಿಂಹಸ್ವಾಮಿ. ಎಲ್ , ಸ್ಥಳೀಯ ನಿವಾಸಿ



‘ವಾಲಿದ ಮರಗಳನ್ನು ತೆರವುಗೊಳಿಸಿ’



ಗೆದ್ದಲಹಳ್ಳಿಯ ಎಇಸಿಎಸ್ ಲೇಔಟ್‌ನ 1ನೇ ಅಡ್ಡರಸ್ತೆಯಲ್ಲಿ ಶನಿವಾರ (ಮೇ 28) ಬೇವಿನ ಮರ ಬಿದ್ದಿದ್ದು, ಅದನ್ನು ಬಿಬಿಎಂಪಿಯವರು ತೆರವು ಮಾಡಿದ್ದಾರೆ. ಆದರೆ, ಮರ ಬಿದ್ದ ರಭಸಕ್ಕೆ ಪಕ್ಕದಲ್ಲಿದ್ದ ಎರಡು ಸಣ್ಣ ಮರಗಳು ಮನೆಯ ಕಾಂಪೌಂಡ್‌ಗೆ ವಾಲಿವೆ. ಇದರಿಂದ ಅಪಾಯ ಸಂಭವಿಸುವ ಸಾಧ್ಯತೆ ಇದೆ. ‘ಸಣ್ಣ ಮರಗಳನ್ನು ತೆರವುಗೊಳಿಸಲು ಅರ್ಜಿ ಸಲ್ಲಿಸಿದರಷ್ಟೇ ತೆರವುಗೊಳಿಸುತ್ತೇವೆ’ ಎಂದು ಬಿಬಿಎಂಪಿ ಅಧಿಕಾರಿಗಳು ಹೇಳುತ್ತಿದ್ದಾರೆ. ಮನೆ ಹಾಗೂ ನಿವಾಸಿಗಳಿಗೆ ಹಾನಿಯಾಗುವ ಮುನ್ನವೇ ಮರಗಳನ್ನು ತೆರವುಗೊಳಿಸಬೇಕು.

ಪ್ರಶಾಂತ್, ಸ್ಥಳೀಯ ನಿವಾಸಿ

ಟ್ಯಾನರಿ ರಸ್ತೆ ಕಸಾಯಿಖಾನೆ ಆಧುನೀಕರಣ

ಹಲಸೂರು ಕೆರೆಯ ಮಾಲಿನ್ಯ: ಬಿಬಿಎಂಪಿಗೆ ಸೂಚನೆ, ಗಡುವು ನೀಡಿದ ಎನ್‌ಜಿಟಿ ಸಮಿತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಹಲಸೂರು ಕೆರೆಯ ಮಾಲಿನ್ಯದ ಬಗ್ಗೆ ಅಧ್ಯಯನ ಮಾಡಲು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ (ಎನ್‌ಜಿಟಿ) ರಚಿಸಿರುವ ಜಂಟಿ ಸಮಿತಿಯು, 2024ರ ಮಾರ್ಚ್ 31ರೊಳಗೆ ಟ್ಯಾನರಿ ರಸ್ತೆಯಲ್ಲಿರುವ ಕಸಾಯಿಖಾನೆಯನ್ನು ಆಧುನೀಕರಿಸುವಂತೆ ಬಿಬಿಎಂಪಿಗೆ ಸೂಚಿಸಿದೆ.

‘ಈ ಗಡುವಿನೊಳಗೆ ಕಸಾಯಿಖಾನೆಯಿಂದ ತ್ಯಾಜ್ಯ ದ್ರವ ಮತ್ತು ಕೊಳಚೆ ನೀರು ಆಚೆ ಬರದಂತೆ ತಡೆಗಟ್ಟಬೇಕು. ಘನ ತ್ಯಾಜ್ಯ ನಿರ್ವಹಣೆಗೆ ಜೈವಿಕ ಅನಿಲ ಸ್ಥಾವರ ಮತ್ತು ಕೊಳಚೆ ನೀರಿನ ಸಂಸ್ಕರಣಾ ಘಟಕದಂತಹ ದೀರ್ಘಾವಧಿಯ ಸೌಲಭ್ಯಗಳನ್ನು ಅಳವಡಿಸಿಕೊಂಡು ಕಸಾಯಿಖಾನೆ ಸಂಪೂರ್ಣ ಆಧುನೀಕರಣಗೊಂಡಿರುವುದನ್ನು ಬಿಬಿಎಂಪಿಯು ಖಾತ್ರಿಪಡಿಸಿಕೊಳ್ಳಬೇಕು’ ಎಂದು ಜಂಟಿ ಸಮಿತಿಯು ಎನ್‌ಜಿಟಿಗೆ ಸಲ್ಲಿಸಿದ ವರದಿಯಲ್ಲಿ ತಿಳಿಸಿದೆ.



ಹಲಸೂರು ಕೆರೆ

ಮಳೆ ನೀರು ಸಂಗ್ರಹ ವ್ಯವಸ್ಥೆಯನ್ನು ಅಳವಡಿಸಿಕೊಂಡಿರುವುದನ್ನು ವಸತಿ ಕಟ್ಟಡಗಳ ಮಾಲೀಕರಿಂದ ಬಿಡಬ್ಲ್ಯು-ಎಸ್‌ಎಸ್‌ಬಿ ಖಚಿತಪಡಿಸಿಕೊಳ್ಳಬೇಕು. 2023ರ ಮಾರ್ಚ್ 31ರೊಳಗೆ ಮಳೆನೀರಿನ ಚರಂಡಿಗಳಲ್ಲಿ ಸಿಲ್ಟ್ ಟ್ರ್ಯಾಪ್‌ಗಳು (ಹೂಳು ಬಲೆ) ಮತ್ತು ಕಸದ ತಡೆಗೋಡೆಗಳ ಅಳವಡಿಕೆ, ಸಂಸ್ಕರಿಸಿದ ಕೊಳಚೆನೀರನ್ನು ಹೊರಹಾಕಲು ಕ್ಯಾಸ್ಕೇಡಿಂಗ್ ಏರೇಟರ್‌ಗಳನ್ನು ಅಳವಡಿಸುವುದನ್ನು ಪೂರ್ಣಗೊಳಿಸುವಂತೆ ಸಮಿತಿ ಹೇಳಿದೆ.

ಕಸಾಯಿಖಾನೆಯನ್ನು ಆಧುನೀಕರಿಸುವವರೆಗೆ, ಕಸಾಯಿಖಾನೆಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಕೇಂದ್ರ ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ(ಸಿಇಟಿಪಿ) ಸಾಗಿಸಿ, ಅಲ್ಲಿ ಸಂಸ್ಕರಣೆಯಾಗುವುದನ್ನು ಬಿಬಿಎಂಪಿ ಖಚಿತಪಡಿಸಿಕೊಳ್ಳಬೇಕು ಎಂದು ಸಮಿತಿಯು ತನ್ನ ಇತ್ತೀಚಿನ ಶಿಫಾರಸಿನಲ್ಲಿ ಹೇಳಿದೆ.

ಇದಕ್ಕೂ ಮೊದಲು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ದಕ್ಷಿಣ ಪೀಠವು ಜಂಟಿ ಸಮಿತಿ ರಚಿಸಿ, ಹಲಸೂರು ಕೆರೆ ಮಾಲಿನ್ಯಕ್ಕೆ ಕಾರಣ ಮತ್ತು ತಡೆಗಟ್ಟುವ ಕ್ರಮಗಳ ಕುರಿತು ವರದಿ ಸಲ್ಲಿಸಲು ಸೂಚಿಸಿತ್ತು. ಕಸಾಯಿಖಾನೆಯ ತ್ಯಾಜ್ಯ ನೀರು ಎಸ್‌ಟಿಪಿ ಕಾರ್ಯನಿರ್ವಹಿಸದ ಕಾರಣ, ಸಂಸ್ಕರಣೆಯಾಗದೆ ನೇರವಾಗಿ ಕೆರೆ ಸೇರುತ್ತಿದೆ ಎಂದು ಸಮಿತಿ ಹೇಳಿತ್ತು.

ಆಧುನಿಕ ಕಸಾಯಿಖಾನೆಗೆ ನಿಯಮಾನುಸಾರ ಕಟ್ಟಡ, ಪ್ರಾಣಿ ವಧೆ ಮತ್ತು ಮಾಂಸ ಸಂಸ್ಕರಣೆ ಘಟಕ ಸೇರಿ ಹೊಸ ಮೂಲಸೌಕರ್ಯಗಳನ್ನು ಒದಗಿಸುವ ಮೂಲಕ ಕಸಾಯಿಖಾನೆಯನ್ನು ಆಧುನೀಕರಿಸುವುದಾಗಿ ಬಿಬಿಎಂಪಿ ಭರವಸೆ ನೀಡಿದೆ ಎಂದು ಸಮಿತಿಯ ವರದಿಯಲ್ಲಿ ಹೇಳಿದೆ.

ಹಲಸೂರು ಕೆರೆಯಲ್ಲಿರುವ ಮೀನು ಗಳಲ್ಲಿ ಭಾರಲೋಹಗಳ ಜೈವಿಕ ಶೇಖರಣೆಯ ಬಗ್ಗೆ ಅಧ್ಯಯನ ಕೈಗೊಳ್ಳಲು ಮತ್ತು ಈ ಕೆರೆ ಯಲ್ಲಿನ ನೀರಿನ ಗುಣಮಟ್ಟದ ಮೇಲ್ವಿಚಾರಣೆ ನಡೆಸುವಂತೆ ಸಮಿತಿಯು ಮೀನುಗಾರಿಕೆ ಇಲಾಖೆಗೆ ಸೂಚಿಸಿದೆ.

ನವೀನ ತಂತ್ರಜ್ಞಾನ–ಬಿಬಿಎಂಪಿ ಭರವಸೆ

ನವೀನ ತಂತ್ರಜ್ಞಾನ ಆಧರಿತ ನಿರ್ವಾತ ಆವಿಯಾಗುವಿಕೆ ವ್ಯವಸ್ಥೆ ಅಳವಡಿಸಿ ಕಸಾಯಿಖಾನೆಯಿಂದ ತ್ಯಾಜ್ಯ ದ್ರವ ವಿಸರ್ಜನೆಯನ್ನು ಸಂಪೂರ್ಣ ತಡೆಗಟ್ಟಲಾಗುವುದು. ಜತೆಗೆ ತ್ಯಾಜ್ಯ ನೀರಿನ ಸಂಸ್ಕರಣಾ ಘಟಕ ಸ್ಥಾಪಿಸಲಾಗುವುದು. ಘನ ತ್ಯಾಜ್ಯ ಸಂಸ್ಕರಿಸುವ ಜೈವಿಕ ಅನಿಲ ಘಟಕ ಸ್ಥಾಪಿಸುವ ಜತೆಗೆ, ಉತ್ಪಾದಿಸಿದ ಅನಿಲವನ್ನು ಆಧುನೀಕರಿಸಿದ ಕಸಾಯಿಖಾನೆಯ ಬಳಕೆಗಾಗಿ ವಿದ್ಯುತ್ ಉತ್ಪಾದಿಸಲು ಬಳಸಲಾಗುತ್ತದೆ ಎಂದು ಬಿಬಿಎಂಪಿಯು ಎನ್‌ಜಿಟಿಗೆ ತಿಳಿಸಿದೆ.

ಬಿಜಿಎಸ್ ಆಸ್ಪತ್ರೆಯಲ್ಲಿ ಅಭಿಯಾನಕ್ಕೆ ಚಾಲನೆ

‘ಕೋವಿಡ್: ರಕ್ತದ ಆಕರ ಕೋಶ ದಾನ ಇಳಿಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ಕಾಣಿಸಿಕೊಂಡ ಬಳಿಕ ರಕ್ತದ ಆಕರ ಕೋಶ ದಾನಿಗಳ ಸಂಖ್ಯೆ ಇಳಿಕೆಯಾಗಿದೆ. ಇದರಿಂದಾಗಿ ಅಸ್ಥಿ ಮಜ್ಜೆ ಕಸಿಗೆ ಎದುರು ನೋಡುತ್ತಿರುವವರ ಸಂಖ್ಯೆ ಹೆಚ್ಚಳವಾಗುತ್ತಿದೆ’ ಎಂದು ಬಿಜಿಎಸ್ ಗ್ಲೆನಿಗಲ್ಸ್ ಗ್ಲೋಬಲ್ ಆಸ್ಪತ್ರೆಯ ವೈದ್ಯಕೀಯ ಸಲಹೆಗಾರ ಡಾ. ಗೋವಿಂದ ಎರಿಯೆಟ್ ತಿಳಿಸಿದರು.

ಡಿಕೆಎಂಎಸ್ ಬಿಎಂಎಸ್‌ಟಿ ಫೌಂಡೇಷನ್ ಇಂಡಿಯಾ ಸಹಯೋಗದಲ್ಲಿ ಆಸ್ಪತ್ರೆ ನಗರದರಲ್ಲಿ ಹಮ್ಮಿಕೊಂಡ ರಕ್ತದ ಆಕರ ಕೋಶ ದಾನ ಅಭಿಯಾನದಲ್ಲಿ ಪಾಲ್ಗೊಂಡು ಮಾತನಾಡಿದರು. ‘ರಕ್ತ ಕ್ಯಾನ್ಸರ್‌ನಿಂದ ಬಳಲುತ್ತಿರುವ ರೋಗಿಗಳನ್ನು ಕಾಪಾಡಲು ರಕ್ತದ ಆಕರ ಕೋಶ ಸಹಾಯಕ. ದೇಶದಲ್ಲಿ ಕ್ಯಾನ್ಸರ್ ಪ್ರಕರಣಗಳು ಹೆಚ್ಚುತ್ತಿದ್ದು, ದಾನಿಗಳ ಕೊರತೆಯಿಂದಾಗಿ ಹಲವು ಮಂದಿ ಕಸಿಗೆ ಎದುರು ನೋಡುತ್ತಿದ್ದಾರೆ. ಆರಂಭಿಕ ಹಂತದಲ್ಲಿಯೆ ರೋಗಿಗೆ ಹೊಂದಾಣಿಕೆಯಾಗುವ ದಾನಿ ಸಿಕ್ಕಲ್ಲಿ ವ್ಯಕ್ತಿ ಬೇಗ ಚೇತರಿಸಿಕೊಳ್ಳುತ್ತಾನೆ’ ಎಂದು ಹೇಳಿದರು.



ರಕ್ತದ ಆಕರ ಕೋಶ ದಾನಕ್ಕೆ ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಂಡರು

‘ರಕ್ತದ ಆಕರ ಕೋಶಗಳು ಆರು ವಾರಗಳಲ್ಲಿ ಮತ್ತೆ ಬೆಳೆಯುತ್ತವೆ. ರಕ್ತದಿಂದ ಆಕರ ಕೋಶಗಳನ್ನು ಪಡೆಯುವ ಪ್ರಕ್ರಿಯೆ 4ರಿಂದ 5 ಗಂಟೆಗಳಲ್ಲಿ ಮುಕ್ತಾಯವಾಗಲಿದೆ. ಕೇವಲ 200ರಿಂದ 250 ಎಂ.ಎಲ್ ರಕ್ತವನ್ನು ಮಾತ್ರ ಪಡೆಯಲಾಗುತ್ತದೆ. ದಾನಿಗೆ ಯಾವುದೇ ಸಮಸ್ಯೆಯಾಗುವುದಿಲ್ಲ’ ಎಂದು ವಿವರಿಸಿದರು.

ಡಿ ಕೆ ಎ ಂ ಎ ಸ್ - ಬಿ ಎ ಂ ಎ ಸ್ ಟಿ ಫೌಂಡೇಷನ್ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಪ್ಯಾಟ್ರಿಕ್ ಪಾಲ್, ‘ಶೇ 30ರಷ್ಟು ರೋಗಿಗಳಿಗೆ ಮಾತ್ರ ಕುಟುಂಬದ ಸದಸ್ಯರು ಅಥವಾ ಸಂಬಂಧಿಗಳ ರಕ್ತದ ಆಕರ ಕೋಶ ಹೊಂದಾಣಿಕೆಯಾಗುತ್ತದೆ. ಶೇ 70ರಷ್ಟು ರೋಗಿಗಳಿಗೆ ರಕ್ತದ ಆಕರ ಕೋಶ ಹೊಂದಾಣಿಕೆಯಾಗುವ ದಾನಿಗಳನ್ನು ಹುಡುಕಬೇಕಾಗುತ್ತದೆ. ರಕ್ತ ಕ್ಯಾನ್ಸರ್‌ನಿಂದ ಬಳಲುತ್ತಿರುವ ರೋಗಿಗಳನ್ನು ಕಾಪಾಡಲು ರಕ್ತದ ಆಕರ ಕೋಶ ಸಹಾಯಕ’ ಎಂದು ಹೇಳಿದರು.



ಮುದ್ದಿನ ಬೆಕ್ಕು

ಬೆಂಗಳೂರಿನಲ್ಲಿ ಭಾನುವಾರ ಕ್ಯಾಟ್ ಕ್ಲಬ್ ಆಫ್ ಇಂಡಿಯಾ ವತಿಯಿಂದ ನಡೆದ 2ನೇ ಅಂತರರಾಷ್ಟ್ರೀಯ ಬೆಕ್ಕು ಪ್ರದರ್ಶನದಲ್ಲಿ ಬೆಕ್ಕೊಂದನ್ನು ಮಕ್ಕಳು ಕುತೂಹಲದಿಂದ ವೀಕ್ಷಿಸಿದರು -ಪ್ರಜಾವಾಣಿ ಚಿತ್ರ

ಬೆಂಗಳೂರು ವಿ.ವಿ. ಬಂದ್‌ಗೆ ಕರೆ

ಬೆಂಗಳೂರು: ವಿದ್ಯಾರ್ಥಿಗಳ ವಿರುದ್ಧ ಹಣಕಾಸು ಅಧಿಕಾರಿಗಳು ಪೊಲೀಸರಿಗೆ ದೂರು ನೀಡಿರುವುದನ್ನು ಖಂಡಿಸಿ ಸಂಶೋಧನಾ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳ ಒಕ್ಕೂಟ ಸೋಮವಾರ ಬೆಂಗಳೂರು ವಿಶ್ವವಿದ್ಯಾಲಯ ಬಂದ್‌ಗೆ ಕರೆ ನೀಡಿದೆ. ವಿಶ್ವವಿದ್ಯಾಲಯ ಆಡಳಿತ ಕಚೇರಿ ಮುಂಭಾಗ ಧರಣಿ ನಡೆಸಲು ನಿರ್ಧರಿಸಲಾಗಿದೆ.

ವಿಶ್ವವಿದ್ಯಾಲಯದ ಅಭಿವೃದ್ಧಿ ಚಟುವಟಿಕೆಗಳಿಗೆ ಮೀಸಲಿಟ್ಟಿದ್ದ ಹಣವನ್ನು ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯದ (ಯುವಿಸಿಇ) ಮೆಕ್ಯಾನಿಕಲ್ ವಿಭಾಗದ ಕಟ್ಟಡ ನಿರ್ಮಾಣಕ್ಕೆ ವರ್ಗಾಯಿಸಲು ನಿರ್ಧಾರ ಕೈಗೊಂಡಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಮೇ 27ರಂದು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದರು.

ಈ ಸಂದರ್ಭದಲ್ಲಿ ಸಂಶೋಧನಾ ವಿದ್ಯಾರ್ಥಿಗಳಾದ ಲೋಕೇಶ್, ಸತೀಶ್ ಹಾಗೂ ಇತರರು ಮಹಿಳಾ ಅಧಿಕಾರಿಯನ್ನು ನಿಂದಿಸಿ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿ ಅಮಾನವೀಯವಾಗಿ ವರ್ತಿಸಿದ್ದಾರೆ ಎಂದು ಹಣಕಾಸು ಅಧಿಕಾರಿ (ಪ್ರಭಾರ) ಆರ್. ಜಯಲಕ್ಷ್ಮಿ ದೂರು ನೀಡಿದ್ದರು. ಇದಕ್ಕೆ ಪ್ರತಿಯಾಗಿ ವಿದ್ಯಾರ್ಥಿಗಳು ಸಹ ದೂರು ಸಲ್ಲಿಸಿದ್ದರು.

ಎಫ್‌ಐಆರ್ ದಾಖಲು: ‘ಹಣಕಾಸು ಅಧಿಕಾರಿ ನೀಡಿರುವ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳ ಪಟ್ಟಿಯಲ್ಲಿ ವಿದ್ಯಾರ್ಥಿಗಳು ಎಂದಷ್ಟೇ ನಮೂದಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಚಿತ್ರಾವಳಿ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಗುರುವಂದನೆ ಕಾರ್ಯಕ್ರಮದಲ್ಲಿ ಶೃಂಗೇರಿ ಶಾರದಾ ಪೀಠದ ವಿಧುಶೇಖರ ಭಾರತೀ ಸ್ವಾಮೀಜಿ ಅವರು ಆಶೀರ್ವಚನ ನೀಡಿ, ಭಕ್ತಾದಿಗಳಿಗೆ ಪ್ರಸಾದ ವಿತರಿಸಿದರು –ಪ್ರಜಾವಾಣಿ ಚಿತ್ರ



ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಶಿಕ್ಷಕೇತರ ನೌಕರರ ಸಂಘದ ನೂತನ ಕಚೇರಿಯನ್ನು ಕುಲಪತಿ ಪ್ರೊ.ಕೆ.ಆರ್. ವೇಣುಗೋಪಾಲ್ ಉದ್ಘಾಟಿಸಿದರು. ಕುಲಸಚಿವ ಪ್ರೊ. ಎಂ. ಕೊಟ್ರೇಶ್, ವಿಶ್ವವಿದ್ಯಾಲಯದ ಎಂಜಿನಿಯರ್ ಬಿ.ಟಿ. ಚಂದ್ರಶೇಖರ್, ಕುಲಸಚಿವ (ಮೌಲ್ಯಮಾಪನ) ಪ್ರೊ. ಜಿ.ಟಿ. ದೇವರಾಜ್, ವಿತ್ತಾಧಿಕಾರಿ(ಪ್ರಭಾರ) ಜಯಲಕ್ಷ್ಮಿ, ಸಂಘದ ಅಧ್ಯಕ್ಷ ಪಿ. ಶಿವಪ್ಪ, ಕಾರ್ಯದರ್ಶಿ ಎಚ್. ಕೃಷ್ಣಪ್ಪ ಇದ್ದರು.



ದಾಸನಪುರ ಹೋಬಳಿಯ ಹೊಂಗಸಂದ್ರದ ಕೊಳೆಗೇರಿಯ 50 ಮನೆಗಳಿಗೆ ಶಾರ್ಪ್ ಇಂಡಿಯಾ ಸಂಸ್ಥೆಯ ಸಹಯೋಗದಲ್ಲಿ ಸೆಲ್ಕೋ ಫೌಂಡೇಷನ್‌ಅಳವಡಿಸಿದ ಸೋಲಾರ್ ದೀಪ ವ್ಯವಸ್ಥೆಗೆ ಕೊಳೆಗೇರಿ ಮಂಡಳಿಯ ಆಯುಕ್ತ ಬಿ. ವೆಂಕಟೇಶ್ ಚಾಲನೆ ನೀಡಿದರು. ಶಾರ್ಪ್ ಸಂಸ್ಥೆಯ ಬ್ಯುಸಿನೆಸ್ ವಿಭಾಗದ ರಾಷ್ಟ್ರೀಯ ವ್ಯವಸ್ಥಾಪಕ ಅನೂಪ್ ಕುಮಾರ್, ಸೆಲ್ಕೋ ಫೌಂಡೇಷನ್ ಮುಖ್ಯ ಹಣಕಾಸು ಅಧಿಕಾರಿ ವಿ.ಕೆ. ಜೋಬಿ, ಎಸ್‌ಡಿಜಿಸಿಸಿಯ ರಾಜ್ಯ ಮುಖ್ಯಸ್ಥ ರೂಪಾ ಎಸ್. ಗೌಡ, ಗ್ರಾಮ ಪಂಚಾಯಿತಿ ಸದಸ್ಯ ಲೋಕೇಶ್, ಸೆಲ್ಕೋ ಫೌಂಡೇಷನನ್‌ನ ಸಿಎಸ್‌ಆರ್ ವಿಭಾಗದ ವ್ಯವಸ್ಥಾಪಕ ಅಮೋಘ್ ಮತ್ತಿತರರಿದ್ದರು.

ಸಿದ್ದರಾಮಯ್ಯ ವಿರುದ್ಧ ನಳಿನ್ ಕುಮಾರ್ ಕಟೀಲ್ ವಾಗ್ದಾಳಿ

‘ರಾಮನ ಮುಖ, ರಾವಣನ ಬುದ್ಧಿ’

ಪ್ರಜಾವಾಣಿ ವಾರ್ತೆ

ತುಮಕೂರು: ‘ಸಿದ್ದರಾಮಯ್ಯ ಅವರ ಮುಖ ರಾಮನದ್ದು. ಚಿಂತನೆ ಮತ್ತು ಬುದ್ಧಿ ಮಾತ್ರ ರಾವಣನದ್ದು. ಹಾಗಾಗಿ ಸಿದ್ದರಾಮಯ್ಯ ಅವರು ಸಿದ್ದರಾವಣ ಎಂದು ಹೆಸರು ಬದಲಾವಣೆ ಮಾಡಿಕೊಳ್ಳಬೇಕು’ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳೀನ್‌ಕುಮಾರ್ ಕಟೀಲ್ ಸಲಹೆ ಮಾಡಿದ್ದಾರೆ.

ನಗರದಲ್ಲಿ ಭಾನುವಾರ ಬಿಜೆಪಿ ರೈತ ಮೋರ್ಚಾ ರಾಜ್ಯ ಘಟಕದಿಂದ ಹಮ್ಮಿಕೊಂಡಿದ್ದ ರಾಜ್ಯ ಕಾರ್ಯಕಾರಿಣಿಯಲ್ಲಿ ಅವರು ಮಾತನಾಡಿದರು.

‘ಜಿ.ಪರಮೇಶ್ವರ ಅವರನ್ನು ಮುಖ್ಯಮಂತ್ರಿಯಾಗಲು ಬಿಡಲಿಲ್ಲ. ಈಗ ಡಿ.ಕೆ.ಶಿವಕುಮಾರ್ ಅವರನ್ನು ರಾಜಕೀಯವಾಗಿ ಮುಗಿಸುವ ಪ್ರಯತ್ನಕ್ಕೆ ಕೈ ಹಾಕಿದ್ದಾರೆ. ಮತ್ತೊಮ್ಮೆ ಮುಖ್ಯಮಂತ್ರಿಯಾಗಲು ಕುರ್ಚಿಯ ಮೇಲೆ ಟವೆಲ್ ಹಾಕಿದ್ದಾರೆ. ಆದರೆ, ಅವರು ಮತ್ತೆ ಮುಖ್ಯಮಂತ್ರಿ ಆಗುವುದಿಲ್ಲ' ಎಂದು ಭವಿಷ್ಯ ನುಡಿದರು.

‘ಖರ್ಗೆ, ಪರಮೇಶ್ವರ ಅವರನ್ನು ರಾಜಕೀಯವಾಗಿ ಮುಗಿಸಿ ಪರಿಶಿಷ್ಟರಿಗೆ ಅನ್ಯಾಯ ಮಾಡಿದರು. ರಾಜಕೀಯವಾಗಿ ಬೆಳೆಸಿದ ದೇವೇಗೌಡರನ್ನು ತುಳಿಯುವ ಕೆಲಸ ಮಾಡಿದರು. ಅವರಿಂದಾಗಿ ರಾಜ್ಯ ಈಗ ಕಾಂಗ್ರೆಸ್ ಮುಕ್ತ ಕರ್ನಾಟಕವಾಗಿದೆ. ಅವರಿಗೆ ಧನ್ಯವಾದಗಳು’ ಎಂದರು.

ಸಮಾಜವಾದದ ಹೆಸರಲ್ಲಿ ರಾಜಕೀಯಕ್ಕೆ ಬಂದು, ಜಾತಿ ಹೆಸರಿನಲ್ಲಿ ಸಮಾಜ ಒಡೆಯುತ್ತಿದ್ದಾರೆ. ಸಿದ್ದರಾಮಯ್ಯಗೆ ಕುರುಬ ಸಮುದಾಯದ ಬಗ್ಗೆ ಕಾಳಜಿಯಿಲ್ಲ. ಅಲ್ಪಸಂಖ್ಯಾತರಮತಬ್ಯಾಂಕ್‌ಗಾಗಿಟಿಪ್ಪು ಜಯಂತಿ ಮಾಡಿ ಹಿಂದೂ ಮುಸ್ಲಿಮರು ಹೊಡೆದಾಡುವಹಾಗೆ ಮಾಡಿದರು ಎಂದು ಹೇಳಿದರು.

ಸಿದ್ದರಾಮಯ್ಯ ಕದ್ದು ತಿನ್ನುವ ಭ್ರಷ್ಟಾಚಾರಿ ಎಂದ ಕಟೀಲ್

ಚಿತ್ರದುರ್ಗ: ‘ಕೋಟಿ ಬೆಲೆಯ ವಾಚ್ ತೆಗೆದುಕೊಂಡ ಸಿದ್ದರಾಮಯ್ಯ ಯಾರಿಗೂ ಗೊತ್ತಿಲ್ಲದೆ ಕದ್ದು ತಿನ್ನುವ ದೊಡ್ಡ ಭ್ರಷ್ಟಾಚಾರಿ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಕುಟುಕಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಅಧಿಕಾರಕ್ಕಾಗಿ ರಾಷ್ಟ್ರವನ್ನು ವಿಭಜನೆ ಮಾಡಿದ ಕಾಂಗ್ರೆಸ್‌ನಲ್ಲಿ ರಾಷ್ಟ್ರೀಯ, ರಾಜ್ಯ ಹಾಗೂ ಯುವ ಕಾಂಗ್ರೆಸ್ ಅಧ್ಯಕ್ಷರು ಜಾಮೀನಿನ ಮೇಲೆ ಹೊರಗಿದ್ದಾರೆ’ ಎಂದು ದೂರಿದರು.

‘ಪದವಿ ಸಿಗುತ್ತದೆ ಎಂಬ ಕಾರಣಕ್ಕೆ ಸಿದ್ದರಾಮಯ್ಯ ಕಾಂಗ್ರೆಸ್‌ಗೆ ಬಂದರು. ಲಿಂಗಾಯತರನ್ನು ವಿಭಜನೆ ಮಾಡಲು ಮುಂದಾಗಿದ್ದರು. ನಮ್ಮ ಆಡಳಿತದಲ್ಲಿ ವಿಭಜನೆಗಳಿಲ್ಲ’ ಎಂದು ತಿರುಗೇಟು ನೀಡಿದರು.

‘ಪಠ್ಯಪುಸ್ತಕದ ವಿಚಾರದಲ್ಲಿ ಯಾವ ಜಾತಿ, ಮತ, ಪಂಥ ಮುಖ್ಯವಲ್ಲ. ರಾಮಾಯಣ ವಾಲ್ಮೀಕಿ ಬರೆದಿದ್ದು, ಆದರ್ಶಗಳಷ್ಟೇ ಮುಖ್ಯ. ಭಗವತ್ ಗೀತೆ ಬ್ರಾಹ್ಮಣ, ವೈಶ್ಯ, ಶೂದ್ರರ ಮನೆಯಲ್ಲೂ ಇವೆ. ಮೌಲ್ಯಧಾರಿತ ಶಿಕ್ಷಣ ಮುಖ್ಯ’ ಎಂದು ತಿಳಿಸಿದರು



ಆರ್.ಕೆ. ರಮೇಶ್ ಅವರು ಕ್ರೀಡಾಪಟುಗಳಿಗೆ ಶುಭ ಹಾರೈಸಿದರು

‘ಕ್ರೀಡಾಂಗಣಕ್ಕೆ ಜಮೀನು ನೀಡದ ಸರ್ಕಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಖಾಸಗಿ ಸಂಸ್ಥೆಗಳಿಗೆ ನೂರಾರು ಎಕರೆ ಜಮೀನು ಮಂಜೂರು ಮಾಡುವ ಸರ್ಕಾರ, ಕ್ರೀಡಾಂಗಣ, ಸಮುದಾಯ ಭವನ, ಶಾಲಾ-ಕಾಲೇಜು, ಆಸ್ಪತ್ರೆಗಳಿಗೆ ಮಾತ್ರ ಜಮೀನು ಮೀಸಲಿಡುತ್ತಿಲ್ಲ’ ಎಂದು ಬೆಂಗಳೂರು ಸಹಕಾರಿ ಹಾಲು ಒಕ್ಕೂಟದ (ಬಮೂಲ್) ಮಾಜಿ ಅಧ್ಯಕ್ಷ ಆರ್.ಕೆ. ರಮೇಶ್ ಆರೋಪಿಸಿದರು.

ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಾರಗದ್ದೆ ಗ್ರಾಮ ಪಂಚಾಯಿತಿಯ ಎಚ್. ವಡ್ಡರಪಾಳ್ಯದಲ್ಲಿ ಶ್ರೀವಿನಾಯಕ ವಾಲಿಬಾಲ್ ತಂಡ ಹಮ್ಮಿಕೊಂಡ ವಾಲಿಬಾಲ್ ಪಂದ್ಯಾವಳಿಗೆ ಚಾಲನೆ ನೀಡಿ, ಮಾತನಾಡಿದರು. ‘ಶಿಕ್ಷಣ, ಕ್ರೀಡೆ, ಆರೋಗ್ಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹೆಚ್ಚಿನ ಪ್ರೋತ್ಸಾಹ ಸಿಗಬೇಕು. ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಾಕಷ್ಟು ಸರ್ಕಾರಿ ಜಮೀನಿದ್ದರೂ ಸ್ಥಳೀಯ ಶಾಸಕರ ನಿರ್ಲಕ್ಷ್ಯದಿಂದ ಸುಸಜ್ಜಿತ ಕ್ರೀಡಾಂಗಣ, ಆಟದ ಮೈದಾನವಿಲ್ಲ’ ಎಂದು ಅವರು ತಿಳಿಸಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಕಾವ್ಯ ಪ್ರಭಾಕರ್, ಸ್ಥಳೀಯ ಮುಖಂಡರಾದ ಸಂಪತ್ , ಮಂಜು, ದಿನೇಶ್, ಪೃಥ್ವಿ, ಕೇಶವಮೂರ್ತಿ, ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ರಮೇಶ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಕೆ.ಎಸ್. ನಟರಾಜ್, ಮೀನಾ ಮಾರಪ್ಪ, ಎಚ್. ಎಸ್. ಅಶ್ವಥ್, ಇಂದ್ರಶಿವಕುಮಾರ್, ಜಿ. ಶ್ರೀನಿವಾಸ್ ಇದ್ದರು.



ಶಾಂತಿನಗರದ ಬಿಎಂಟಿಸಿ ನಿಲ್ದಾಣದ ಬಳಿ ವಿಲ್ಸನ್ ಗಾರ್ಡನ್ ಸಂಚಾರ ಪೊಲೀಸರು ಸಂಚಾರ ನಿಯಮಗಳ ಕುರಿತು ಜಾಗೃತಿ ಮೂಡಿಸಿದರು –ಪ್ರಜಾವಾಣಿ ಚಿತ್ರ

ಚಾಕು ತೋರಿಸಿ ಸುಲಿಗೆ: ಇಬ್ಬರ ಬಂಧನ

ಬೆಂಗಳೂರು: ನಗರದಲ್ಲಿ ಬೆಳಿಗ್ಗೆ ಹಾಗೂ ಸಂಜೆ ವಾಯುವಿಹಾರ ಮಾಡುವ ಸಾರ್ವಜನಿಕರನ್ನು ಹಿಂಬಾಲಿಸಿ ಸುಲಿಗೆ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಜ್ಞಾನಭಾರತಿ ಪೊಲೀಸರು ಬಂಧಿಸಿದ್ದಾರೆ.

‘ಚಂದ್ರಾಲೇಔಟ್ ನಿವಾಸಿ ದೀಕ್ಷಿತ್ (26) ಹಾಗೂ ಮಣಿಕಂಠ (26) ಬಂಧಿತರು. ಇವರಿಂದ ₹ 1.25 ಲಕ್ಷ ಮೌಲ್ಯದ ಚಿನ್ನಾಭರಣ, ಎರಡು ದ್ವಿಚಕ್ರ ವಾಹನ, ಚಾಕು ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು. ‘ಹಲವು ವರ್ಷಗಳಿಂದ ಸ್ನೇಹಿತರಾಗಿದ್ದ ಆರೋಪಿಗಳು, ಪದೇ ಪದೇ ಅಪರಾಧ ಕೃತ್ಯ ಎಸಗುತ್ತಿದ್ದರು. ದ್ವಿಚಕ್ರ ವಾಹನದಲ್ಲಿ ಸುತ್ತಾಡಿ ಸಾರ್ವಜನಿಕರನ್ನು ಅಡ್ಡಗಟ್ಟಿ ಚಾಕು ತೋರಿಸಿ ಬೆದರಿಸಿ ಸುಲಿಗೆ ಮಾಡುತ್ತಿದ್ದರು.’

‘ಜ್ಞಾನಭಾರತಿ ಠಾಣೆ ವ್ಯಾಪ್ತಿಯಲ್ಲಿ ದೂರುದಾರ ಇತ್ತೀಚೆಗೆ ವಾಯುವಿಹಾರಕ್ಕೆ ಹೊರಟಿದ್ದರು. ಅವರನ್ನು ಹಿಂಬಾಲಿಸಿದ್ದ ಆರೋಪಿಗಳು, ಚಾಕು ತೋರಿಸಿ ಚಿನ್ನಾಭರಣ ಕಿತ್ತುಕೊಂಡು ಹೋಗಿದ್ದರು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ’ ಎಂದೂ ತಿಳಿಸಿದರು.



‘ಜಗಜೀವನ್‌ರಾಮ್ ನಗರ ಹಾಗೂ ಅನ್ನಪೂರ್ಣೇಶ್ವರಿನಗರ ಠಾಣೆ ವ್ಯಾಪ್ತಿಯಲ್ಲೂ ಆರೋಪಿಗಳು ಕೃತ್ಯ ಎಸಗಿರುವ ಮಾಹಿತಿ ಇದೆ’ ಎಂದೂ ಹೇಳಿದರು.

ನೇಣು ಬಿಗಿದುಕೊಂಡು ಯುವತಿ ಆತ್ಮಹತ್ಯೆ

ಬೆಂಗಳೂರು: ಗೋವಿಂದರಾಜನಗರ ಠಾಣೆ ವ್ಯಾಪ್ತಿಯ ಪೇಯಿಂಗ್ ಗೆಸ್ಟ್ ಕಟ್ಟಡವೊಂದರಲ್ಲಿ ಪವಿತ್ರಾ (23) ಎಂಬುವವರು ಭಾನುವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

‘ಪಾವಗಡದ ಪವಿತ್ರಾ, ನಗರದ ಸಂಸ್ಥೆಯೊಂದರಲ್ಲಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಪಡೆಯುತ್ತಿದ್ದರು. ಪೇಯಿಂಗ್ ಗೆಸ್ಟ್ ಕಟ್ಟಡವೊಂದರ ಕೊಠಡಿಯಲ್ಲಿ ಸ್ನೇಹಿತೆಯರ ಜೊತೆ ವಾಸವಿದ್ದರು’ ಎಂದು ಪೊಲೀಸರು ಹೇಳಿದರು.

‘ಭಾನುವಾರ ಮಧ್ಯಾಹ್ನ ಕೊಠಡಿಯಲ್ಲಿ ಯುವತಿ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಶರಣಾ ಗಿದ್ದಾರೆ. ಈ ಬಗ್ಗೆ ಸ್ನೇಹಿತೆಯರಿಂದ ಹೇಳಿಕೆ ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಆತ್ಮಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ’ ಎಂದೂ ತಿಳಿಸಿದರು.

ಪತ್ನಿ ಹೆಸರಿನಲ್ಲಿ ₹ 8 ಕೋಟಿ ಸಾಲ: ವೈದ್ಯನ ವಿರುದ್ಧ ಎಫ್‌ಐಆರ್

ಬೆಂಗಳೂರು: ಪತ್ನಿಯ ಹೆಸರಿನಲ್ಲಿ ಅಕ್ರಮದಿಂದ ₹8 ಕೋಟಿ ಸಾಲ ಪಡೆದಿರುವ ಆರೋಪದಡಿ ವೈದ್ಯ ಸುನೀಲ್‌ಕುಮಾರ್ ಎಂಬುವವರ ವಿರುದ್ಧ ರಾಮಮೂರ್ತಿನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ರಾಯಚೂರು ನಿವಾಸಿಯಾಗಿರುವ ವೈದ್ಯೆ, ತಮ್ಮ ಪತಿ ಸುನೀಲ್‌ಕುಮಾರ್ ವಿರುದ್ಧ ದೂರು ನೀಡಿದ್ದರು. ಅದರನ್ವಯ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದಂಪತಿ ನಡುವೆ ಕೌಟುಂಬಿಕ ಭಿನ್ನಾಭಿಪ್ರಾಯವಿದೆ. ವೈದ್ಯೆ ತವರು ಮನೆಯಲ್ಲಿದ್ದಾರೆ. ಬೆಂಗಳೂರಿನಲ್ಲಿ ವೈದ್ಯರಾಗಿರುವ ತಮ್ಮ ಪತಿ ಮೇಲೆ ಆರೋಪ ಹೊರಿಸಿದ್ದಾರೆ’ ಎಂದು ತಿಳಿಸಿವೆ.

ದೂರಿನ ವಿವರ: ‘ಇಂಡಸ್ ಇಂಡ್ ಬ್ಯಾಂಕ್ ಬಸವನಗುಡಿ ಶಾಖೆ ಸಿಬ್ಬಂದಿ, ಸಾಲದ ಕಂತು ವಸೂಲಿ ಮಾಡಲೆಂದು ರಾಯಚೂರಿನಲ್ಲಿರುವ ನಮ್ಮ ಮನೆಗೆ ಬಂದಿದ್ದರು. ಸಾಲ ನೀಡಿರುವ ದಾಖಲೆ ಪರಿಶೀಲಿಸಿದಾಗ, ನನ್ನ ಹೆಸರಿನಲ್ಲಿ ಪತಿಯೇ ಸಾಲ ಮಾಡಿರುವುದು ತಿಳಿಯಿತು’ ಎಂದು ದೂರಿನಲ್ಲಿ ವೈದ್ಯೆ ಹೇಳಿದ್ದಾರೆ.

‘ನನ್ನ ವೈಯಕ್ತಿಕ ದಾಖಲೆ ಹಾಗೂ ಸಹಿ ದುರುಪಯೋಗಪಡಿಸಿಕೊಂಡಿರುವ ಪತಿ, 18 ಕಡೆ ₹ 8 ಕೋಟಿ ಸಾಲ ಮಾಡಿದ್ದಾರೆ. ನಂಬಿಕೆ ದ್ರೋಹ ಎಸಗಿದ್ದಾರೆ. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ’ ಎಂದೂ ತಿಳಿಸಿದ್ದಾರೆ.

ನಷ್ಟ: ಕಾರ್ಖಾನೆ ಮಾಲೀಕ ಆತ್ಮಹತ್ಯೆ

ಬೆಂಗಳೂರು: ಬಾಗಲಗುಂಟೆ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಪ್ರಕಾಶ್ ಹೆಗ್ಡೆ (45) ಎಂಬುವವರು ನೇಣು ಹಾಕಿಕೊಂಡು ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

‘ಮೂಡುಬಿದಿರೆಯ ಪ್ರಕಾಶ್, ಹಲವು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಪತ್ನಿ ಹಾಗೂ ಮಗುವಿನ ಜೊತೆ ಡಿಫೆನ್ಸ್ ಕಾಲೊನಿಯಲ್ಲಿ ವಾಸವಿದ್ದರು. ಆತ್ಮಹತ್ಯೆ ಸಂಬಂಧ ಪತ್ನಿ ಹೇಳಿಕೆ ನೀಡಿದ್ದು, ಅದರನ್ವಯ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಅಂಟಿನ ಕಾರ್ಖಾನೆ ನಡೆಸುತ್ತಿದ್ದ ಪ್ರಕಾಶ್, ಅದರ ಜೊತೆಯಲ್ಲೇ ಟ್ರಾವೆಲ್ಸ್ ಏಜೆನ್ಸಿಯನ್ನೂ ಹೊಂದಿದ್ದರು. ಉದ್ಯಮಕ್ಕಾಗಿ ಹಲವೆಡೆ ಸಾಲ ಪಡೆದಿದ್ದರು’ ಎಂದೂ ತಿಳಿಸಿದರು.

'ಉದ್ಯಮದಲ್ಲಿ ನಷ್ಟವಾಗಿದ್ದರಿಂದ, ಸಾಲ ಮರುಪಾವತಿ ಸಾಧ್ಯವಾಗಿರಲಿಲ್ಲ. ಇದರಿಂದಾಗಿ ನೊಂದಿದ್ದ ಪ್ರಕಾಶ್, ಪತ್ನಿ ಬಳಿಯೂ ಅಳಲು ತೋಡಿಕೊಂಡಿದ್ದರು. ಶನಿವಾರ ಮನೆಯ ಕೊಠಡಿಯಲ್ಲಿ ನೇಣು ಹಾಕಿಕೊಂಡು ಪ್ರಕಾಶ್ ಆತ್ಮಹತ್ಯೆಗೆ ಶರಣಾಗಿದ್ದಾರೆ’ ಎಂದೂ ಹೇಳಿದರು.

ರೋಹಿತ್ ಚಕ್ರತೀರ್ಥ ವಿರುದ್ಧ ಕ್ರಮಕ್ಕೆ ಆಗ್ರಹ

ಹೊಸ ಪಠ್ಯಕ್ರಮಕ್ಕೆ ಶಿಕ್ಷಣ ತಜ್ಞರ ವಿರೋಧ

ಪ್ರಜಾವಾಣಿ ವಾರ್ತೆ

ತುಮಕೂರು: ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯ ಹೊಸ ಪಠ್ಯ ರದ್ದುಗೊಳಿಸಿ, ಈ ಹಿಂದಿನ ಪಠ್ಯವನ್ನೇ ಮುಂದುವರಿಸಬೇಕು ಎಂದು ಶಿಕ್ಷಣ ತಜ್ಞ, ಚಿಂತಕ ಕೆ.ದೊರೈರಾಜ್ ಒತ್ತಾಯಿಸಿದರು.

ನಗರದಲ್ಲಿ ಭಾನುವಾರ ನಡೆದ ಜಾಗೃತ ನಾಗರಿಕರು ಹಾಗೂ ಪೋಷಕರ ಸಭೆಯಲ್ಲಿ ಮಾತನಾಡಿ, ರಾಷ್ಟ್ರಕವಿ ಕುವೆಂಪು ರಚನೆಯ ನಾಡಗೀತೆಗೆ ಅವಮಾನ ಮಾಡಿರುವ ರೋಹಿತ್ ಚಕ್ರತೀರ್ಥ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಿರುವುದೇ ಕಾನೂನು ಬಾಹಿರ. ಕೂಡಲೇ ಅವರ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸರ್ಕಾರ ಸಂವಿಧಾನ ಬದ್ಧವಾಗಿ ಕಾರ್ಯನಿರ್ವಹಿಸಬೇಕೇ ಹೊರತು ಯಾವುದೇ ಕೋಮು, ಧರ್ಮ, ಜಾತಿಯ ಪರವಾಗಿ ಅಲ್ಲ. ಸಂವಿಧಾನಕ್ಕೆ ವಿರುದ್ಧವಾಗಿ ನಡೆದುಕೊಳ್ಳುವ ಯಾರನ್ನೇ ಆದರೂ ಕೂಡಲೇ ಶಿಕ್ಷಿಸಿ, ಸಾಮಾಜಿಕ ಸಾಮರಸ್ಯ ಕಾಪಾಡಬೇಕು ಎಂದು ಹೇಳಿದರು.

ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಂಡು ಪ್ರಜಾಸತ್ತಾತ್ಮಕ ಮಾದರಿಯನ್ನು ಉಲ್ಲಂಘಿಸಿ, ಹೊಸ ಪಠ್ಯ ರೂಪಿಸುವ ಮೂಲಕ ಸರ್ವಾಧಿಕಾರಿ ಧೋರಣೆ ಮೆರೆದಿದೆ ಎಂದು ದೂರಿದರು.

ಲೇಖಕಿ ಬಾ.ಹ.ರಮಾಕುಮಾರಿ, ‘ಪಠ್ಯ ಸಮಿತಿ ಸಾಮಾಜಿಕ ಆರೋಗ್ಯ ಹದಗೆಡಿಸುವ ಕೆಲಸ ಮಾಡುತ್ತಿದೆ’ ಎಂದು ಮಾರ್ಮಿಕವಾಗಿ ನುಡಿದರು.

ಸಾಹಿತಿ ಎನ್.ನಾಗಪ್ಪ,‘ಇತಿಹಾಸವನ್ನು ಪುರಾಣ ಮಾಡುವ, ಪುರಾಣವನ್ನು ಇತಿಹಾಸ ಮಾಡುವ ಹುನ್ನಾರವನ್ನು ಹೊಸ ಪಠ್ಯ ಪರಿಷ್ಕರಣಾ ಸಮಿತಿ ಮಾಡಿದ್ದು, ಪಠ್ಯಪುಸ್ತಕ ಸಮಿತಿಯನ್ನು ರದ್ದುಗೊಳಿಸಬೇಕು’ ಎಂದರು.

ಉಪನ್ಯಾಸಕ್ಕೆ ಖಂಡನೆ: ಕನ್ನಡ ನಾಡು, ನುಡಿ, ನಾಡಧ್ವಜಕ್ಕೆ ಅವಮಾನಿಸಿರುವ ಚಕ್ರತೀರ್ಥ ಅವರನ್ನು ಆಹ್ವಾನ ಪತ್ರಿಕೆಯಲ್ಲಿ ಹೆಸರು ಇಲ್ಲದಿದ್ದರೂ ಸಹ ಜಿಲ್ಲಾ ಆಡಳಿತ ‘ಅಮೃತ ಭಾರತಿಗೆ ಕನ್ನಡದ ಆರತಿ’ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಲು ಅವಕಾಶ ನೀಡಿರುವುದನ್ನು ಸಭೆಯಲ್ಲಿ ಖಂಡಿಸಿದರು.

ಮಕ್ಕಳಿಗೆ ಪುಸ್ತಕ ಸಿಗುತ್ತಿಲ್ಲ

ಈಗಾಗಲೇ ಶಾಲೆಗಳು ಆರಂಭವಾಗಿದ್ದು, ಮಕ್ಕಳು ಪಠ್ಯಪುಸ್ತಕ ಸಿಗದೆ ಪರದಾಡುತ್ತಿದ್ದಾರೆ. ತಕ್ಷಣವೇ ಮಕ್ಕಳಿಗೆ ಹಳೆಯ ಪಠ್ಯಪುಸ್ತಕ ವಿತರಿಸಬೇಕು. ಕೇಂದ್ರ ಸರ್ಕಾರದ ಸಿಬಿಎಸ್‌ಇ ಪಠ್ಯದಲ್ಲಿ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರ ಸಮಿತಿಯ ಪಠ್ಯವನ್ನೇ ಮುಂದುವರಿಸಿದೆ. ರಾಜ್ಯದಲ್ಲಿ ಬದಲಾವಣೆ ಮಾಡಿರುವುದು ಏಕೆ ಎಂದು ಚಿಂತಕ ಕೆ.ದೊರೈರಾಜ್ ಪ್ರಶ್ನಿಸಿದರು.

5 ವರ್ಷಗಳ ಇಂಟಗ್ರೇಟೆಡ್ ಕೋರ್ಸ್

ಭೂಗೋಳ ಬಿ.ಎಸ್ಸಿ–ಎಂ.ಎಸ್ಸಿ



ಕೋರ್ಸ್ ವೈಶಿಷ್ಟ್ಯ



- ವಿದ್ಯಾರ್ಥಿಗಳಿಗೆ ಕ್ಷೇತ್ರ ಕಾರ್ಯದ ಕುರಿತು ಅರಿವು ಮೂಡಿಸುವುದು,
- ಗಮನಿಸುವಿಕೆಯ ಕಲಿಕೆ
- ಭೌಗೋಳಿಕ ಚಿತ್ರಣವನ್ನು ಅಳತೆ/ಅರಿವು ಮೂಡಿಸುವ ವಿಧಾನ
- ಭವಿಷ್ಯದಲ್ಲಿ ಸಂಭವಿಸುವ/ಬದಲಾಗುವ ಅಂಶಗಳನ್ನು ಕಲ್ಪನೆ ಮಾಡಿಕೊಳ್ಳಲು ಪ್ರೇರೇಪಿಸುವುದು,
- ಮನುಷ್ಯ ಮತ್ತು ಪರಿಸರದ ನಡುವಿನ ಬಾಂಧವ್ಯ ಅರ್ಥ ಮಾಡಿಕೊಳ್ಳಲು ಭೌತಿಕ, ಸಾಂಸ್ಕೃತಿಕ ಪರಿಸರ ಮತ್ತು ಜೀವ ಪರಿಸರದ ನಡುವಿರುವ ಸಂಬಂಧಗಳನ್ನು ತಿಳಿಯುವುದು
- ಭೂಮಿಯ ಮೇಲೆ ನೀರು, ಗಾಳಿ ಮತ್ತು ಮಣ್ಣಿನ ನಡುವೆ ಒಂದಕ್ಕೊಂದು ಹೇಗೆ ಸಂಪರ್ಕವೇರ್ಪಟ್ಟಿದೆ ಎಂಬುದನ್ನು ಕಲಿಸುವುದು.

ಆತ್ರೇಯ

ವಿಶ್ವವಿದ್ಯಾಲಯ ಮಟ್ಟದಲ್ಲಿ ಮೊದಲ ಬಾರಿಗೆ 'ರಾಷ್ಟ್ರೀಯ ಹೊಸ ಶಿಕ್ಷಣ ನೀತಿ 2020' ಅನುಷ್ಠಾನಗೊಳಿಸುತ್ತಿರುವ ಬೆಂಗಳೂರು ವಿಶ್ವವಿದ್ಯಾಲಯ, 'ಭೂಗೋಳ ವಿಜ್ಞಾನ'ದಲ್ಲಿ ಹೊಸದಾಗಿ 'ಬಿ.ಎಸ್ಸಿ ಮತ್ತು ಎಂ.ಎಸ್ಸಿ ಸಂಯೋಜಿತ (ಇಂಟಿಗ್ರೇಟೆಡ್–ಐಎಂ.ಎಸ್ಸಿ)' ಐದು ವರ್ಷದ ಅವಧಿಯ ಕೋರ್ಸ್ ಆರಂಭಿಸುತ್ತಿದೆ.

ವಿದ್ಯಾರ್ಥಿಗಳ ಕೌಶಲ ವೃದ್ಧಿ, ಉದ್ಯೋಗಾವಕಾಶ ಹಾಗೂ ಜಾಗತಿಕ ಮಟ್ಟದಲ್ಲಿ ಇತರರ ಜೊತೆ ಪ್ರತಿಸ್ಪರ್ಧಿಸುವ ಉದ್ದೇಶದಿಂದ ಹೊಸ ಕೋರ್ಸ್ ವಿನ್ಯಾಸಗೊಳಿಸಲಾಗಿದೆ. ಮಾತ್ರವಲ್ಲ, ಈ ಕೋರ್ಸ್‌ನಲ್ಲಿ ಕಾರ್ಟೋಗ್ರಾಫಿಕ್ ತಂತ್ರಗಳು, ಯುಟಿಲಿಟಿ ಮ್ಯಾಪಿಂಗ್, ಡ್ರೋನ್ ಮ್ಯಾಪಿಂಗ್ ಮತ್ತು ಆರ್-ಪ್ರೋಗ್ರಾಮಿಂಗ್‌ನಂತಹ ತಾಂತ್ರಿಕ ಕೌಶಲಗಳನ್ನೂ ಕಲಿಸಲಾಗುತ್ತದೆ. ಇದೇ ಈ ಸಂಯೋಜಿತ ಪದವಿಯ ವೈಶಿಷ್ಟ್ಯ.

ಹಾಗೆಯೇ, ಈ ಕೋರ್ಸ್‌ನಲ್ಲಿ ವಿದ್ಯಾರ್ಥಿಗಳಿಗೆ ಮೂರು ರೀತಿಯಲ್ಲಿ ನಿರ್ಗಮಿಸುವ (Exit Options) ಆಯ್ಕೆಯನ್ನು ನೀಡಲಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿಯ ಚೌಕಟ್ಟಿನಲ್ಲಿರುವ ಈ ಕೋರ್ಸ್, ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ (2022–23) ಆರಂಭವಾಗಲಿದೆ.

ಯಾರಿಗೆ ಪ್ರವೇಶಾವಕಾಶ

ವಿಜ್ಞಾನ ವಿಷಯದಲ್ಲಿ ಪಿಯುಸಿ ಅಥವಾ 10+2 ತರಗತಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಈ ಕೋರ್ಸ್ ಪ್ರವೇಶಕ್ಕೆ ಅರ್ಜಿ ಸಲ್ಲಿಸಬಹುದು. ಕಲಾ ಮತ್ತು ವಾಣಿಜ್ಯ ವಿಭಾಗದಲ್ಲಿ ಭೂಗೋಳ ವಿಜ್ಞಾನವನ್ನು ಒಂದು ವಿಷಯವನ್ನಾಗಿ ಓದಿದ ವಿದ್ಯಾರ್ಥಿಗಳೂ ಅರ್ಜಿ ಸಲ್ಲಿಸಲು ಅರ್ಹರು.

> ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಭೂಗೋಳ ವಿಜ್ಞಾನ ವಿಷಯದಲ್ಲಿ ಬಿ.ಎಸ್ಸಿ – ಎಂ.ಎಸ್ಸಿ ಇಂಟಗ್ರೇಟೆಡ್ ಕೋರ್ಸ್ (IMSc) ಆರಂಭವಾಗುತ್ತಿದೆ. 'ರಾಷ್ಟ್ರೀಯ ಹೊಸ ಶಿಕ್ಷಣ ನೀತಿ 2020' ಅಡಿಯಲ್ಲಿ ಅನುಷ್ಠಾನ ಗೊಳ್ಳುತ್ತಿರುವ ಈ ಕೋರ್ಸ್ ಪ್ರತ್ಯೇಕ ಪದವಿಗಳ ಕಲಿಕೆಗಿಂತ ಭಿನ್ನವಾಗಿದೆ.

ನಾನಾ ಕ್ಷೇತ್ರದಲ್ಲಿ ವಿಫುಲ ಅವಕಾಶ

ಪ್ರತ್ಯೇಕವಾಗಿ ಕಲಿಯುವ ಭೂಗೋಳ ವಿಜ್ಞಾನದ ಬಿ.ಎಸ್ಸಿ ಹಾಗೂ ಎಂ.ಎಸ್ಸಿ ಪದವಿಗಿಂತ ಈ 'ಐಎಂ.ಸ್ಸಿ ಇಂಟಿಗ್ರೇಟೆಡ್' ಕೋರ್ಸ್ ಹೆಚ್ಚು ಭಿನ್ನವಾಗಿದೆ. ಕೋರ್ಸ್ ಕಲಿಕೆಯ ಅಂತಿಮ ವರ್ಷದಲ್ಲಿ ಭೂಗೋಳ, ಜಿಯೊಇನ್‌ಫಾರ್ಮಾಟಿಕ್ಸ್ ಹಾಗೂ ನೈಸರ್ಗಿಕ ವಿಪತ್ತು ನಿರ್ವಹಣೆ ವಿಶೇಷ ವಿಷಯಗಳ (Specialisation) ಆಯ್ಕೆಗೆ ಅವಕಾಶವಿದೆ. ಈ ಮೂರರಲ್ಲಿ ಒಂದು ವಿಷಯ ಆಯ್ಕೆ ಮಾಡಿಕೊಂಡು ಅಂತಿಮ ವರ್ಷದಲ್ಲಿ ಅಧ್ಯಯನ ನಡೆಸಬಹುದಾಗಿದೆ. ಇದು ದೇಶದಲ್ಲಿ ಮೊದಲ ಪ್ರಯತ್ನವಾಗಿದ್ದು, ಈ ಕೋರ್ಸ್ ಕಲಿಕೆಯಿಂದ ನಾನಾ ಕ್ಷೇತ್ರಗಳಲ್ಲಿ ವಿಪುಲ ಅವಕಾಶಗಳು ದೊರೆಯಲಿವೆ ಎನ್ನುತ್ತಾರೆ ಬೆಂಗಳೂರು ವಿಶ್ವವಿದ್ಯಾಲಯದ ಭೂಗೋಳ ವಿಜ್ಞಾನ ವಿಭಾಗದ ಚೇರ್ಮನ್ ಅಶೋಕ ಡಿ. ಹಂಜಗಿ.

ಇಂಧನ, ನೀರು, ಜೀವ ವೈವಿಧ್ಯ, ಹವಾಮಾನ, ನೈಸರ್ಗಿಕ ವಿಪತ್ತು, ಜನಸಂಖ್ಯೆ ಮತ್ತು ಇತರೆ ಪ್ರಮುಖ ವಿಷಯಗಳನ್ನು ಕೋರ್ಸ್ ತಿಳಿಸಿಕೊಡುತ್ತದೆ. ಭೂಮಿಯ ಮೇಲ್ಮೈ ಲಕ್ಷಣಗಳು, ಅಂತರ್ಜಲಮಟ್ಟ, ಭೂ ಕುಸಿತ, ಸರೋವರ, ಜಲ ಸಂಗ್ರಹಾಗಾರಗಳು ಮತ್ತು ನದಿ ಪಾತ್ರದ ಬಗ್ಗೆ ವೈಜ್ಞಾನಿಕ ವರದಿ ಸಿದ್ಧಪಡಿಸುವ ಜ್ಞಾನವೂ ಕೋರ್ಸ್‌ನಿಂದ ಬೆಳೆಯಲಿದೆ ಎಂಬುದು ಅವರ ಅಭಿಪ್ರಾಯ.

ಕೇಂದ್ರ ಲೋಕಸೇವಾ ಆಯೋಗ, ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಅಧ್ಯಯನಕ್ಕೆ ನೆರವಾಗುವ ಜೊತೆಗೆ, ಉದ್ಯೋಗ ಪಡೆಯಲು ಕೋರ್ಸ್ ಸಹಾಯವಾಗುತ್ತದೆ ಎನ್ನುತ್ತಾರೆ ಅವರು.

ಮೂರು ನಿರ್ಗಮನದ ಆಯ್ಕೆಗಳು

5 ವರ್ಷ ಅವಧಿ 10 ಸೆಮಿಸ್ಟರ್ ಒಳಗೊಂಡ ಕೋರ್ಸ್ ಇದಾಗಿದೆ. 'ರಾಷ್ಟ್ರೀಯ ಹೊಸ ಶಿಕ್ಷಣ ನೀತಿ 2020' ಅನ್ವಯ ಮೂರು ನಿರ್ಗಮನದ ಆಯ್ಕೆಗಳು ಕೋರ್ಸ್‌ನಲ್ಲಿವೆ.

- ಆರು ಸೆಮಿಸ್ಟರ್ (ಮೂರು ವರ್ಷ) ಪೂರ್ಣಗೊಳಿಸಿ ನಿರ್ಗಮಿಸಲು ಬಯಸುವ ವಿದ್ಯಾರ್ಥಿಗಳಿಗೆ ಬಿ.ಎಸ್ಸಿ (ಭೂಗೋಳ ವಿಜ್ಞಾನ) ಪದವಿ ನೀಡಲಾಗುತ್ತದೆ.
- 8 ಸೆಮಿಸ್ಟರ್ (4 ವರ್ಷ) ಪೂರ್ಣಗೊಳಿಸುವವರಿಗೆ ಬಿ.ಎಸ್ಸಿ (ಭೂಗೋಳ ವಿಜ್ಞಾನ) ಆನರ್ಸ್ ಪದವಿ ನೀಡಲಾಗುತ್ತದೆ.
- 10 ಸೆಮಿಸ್ಟರ್ (ಐದು ವರ್ಷ) ಪೂರ್ಣಗೊಳಿಸುವ ವಿದ್ಯಾರ್ಥಿಗಳಿಗೆ ಬಿ.ಎಸ್ಸಿ–ಎಂ.ಎಸ್ಸಿ 'ಇಂಟಿಗ್ರೇಟೆಡ್' ಪದವಿ ಜೊತೆಯಲ್ಲಿ ಭೂಗೋಳ ವಿಜ್ಞಾನ ಅಥವಾ ಭೂಗೋಳ ಇನ್‌ಫಾರ್ಮೆಟಿಕ್ಸ್ ಅಥವಾ ನೈಸರ್ಗಿಕ ವಿಪತ್ತು ನಿರ್ವಹಣೆ ವಿಶೇಷ ಅಧ್ಯಯನ ಅರ್ಹತೆ ದೊರೆಯಲಿದೆ.

ಉದ್ಯೋಗಾವಕಾಶ


ಇಂಟಗ್ರೇಟೆಡ್ ಭೂಗೋಳ ವಿಜ್ಞಾನ ಪದವಿ(ಬಿ.ಎಸ್ಸಿ) ಪೂರ್ಣಗೊಳಿಸಿದವರಿಗೆ ಭಾರತೀಯ ಸರ್ವೆ ಇಲಾಖೆ, ಭಾರತೀಯ ಅರಣ್ಯ ಸರ್ವೇಕ್ಷಣಾ ಇಲಾಖೆ, ಹೈದರಾಬಾದ್‌ನಲ್ಲಿರುವ ಭಾರತೀಯ ಭತ್ತದ ತಳಿ ಸಂಶೋಧನಾ ಸಂಸ್ಥೆ, ರಾಷ್ಟ್ರೀಯ ಮಣ್ಣು ಸಮೀಕ್ಷೆ ಮತ್ತು ಭೂ ಬಳಕೆ ಯೋಜನಾ ಸಂಸ್ಥೆ, ನವದೆಹಲಿಯ ಭಾರತೀಯ ಜನಗಣತಿ ಸಂಸ್ಥೆ, ಡಿಆರ್‌ಡಿಎಓ, ಕಾಲೇಜು ಅಥವಾ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರು ಹಾಗೂ ಸರ್ಕಾರದ ವಿವಿಧ ಇಲಾಖೆ ಹುದ್ದೆಗಳಿಗೆ ಸೇರುವ ಅವಕಾಶವಿರುತ್ತದೆ.

ಕಾರ್ಟೊಗ್ರಾಫರ್, ನಿಸರ್ಗ ಸಂರಕ್ಷಣಾ ಅಧಿಕಾರಿ, ಶಾಲಾ ಶಿಕ್ಷಕರು, ಪ್ರವಾಸೋದ್ಯಮ ಅಧಿಕಾರಿ, ಸಾರಿಗೆ ಯೋಜನಾ ಅಧಿಕಾರಿ, ಸಹಾಯಕ ಪ್ರಾಧ್ಯಾಪಕ, ಭೌಗೋಳಿಕ ಸಂಶೋಧಕ ಸೇರಿ ನಾನಾ ಹುದ್ದೆಗಳಿಗೂ ಅರ್ಹತೆ ಹೊಂದಿರುತ್ತಾರೆ.

ಜಿಯೋಇನ್‌ಫಾರ್ಮೆಟಿಕ್ಸ್ ವಿಶೇಷ ವಿಷಯ ಕಲಿತವರಿಗೆ, ರಾಷ್ಟ್ರೀಯ ಸೂಕ್ಷ್ಮ ಸಂವೇದಿ ಅನ್ವಯಿಕ ಕೇಂದ್ರ, ಶಾನ್ಯ ಬಾಹ್ಯಾಕಾಶ ಅನ್ವಯಿಕ ಕೇಂದ್ರ, ರಾಜ್ಯ ಜಿಐಎಸ್ ಅಭಿವೃದ್ಧಿ ಕೋಶ, ಸಾರ್ವಜನಿಕ ಕಲ್ಯಾಣ ಇಲಾಖೆ, ಪರಿಸರ ಸರ್ವೇಕ್ಷಣಾ ಪ್ರಾಧಿಕಾರ (ಇಐಎ) ಹಾಗೂ ವಿವಿಧ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಉದ್ಯೋಗಾವಕಾಶಗಳಿವೆ.

ನೈಸರ್ಗಿಕ ವಿಪತ್ತು ನಿರ್ವಹಣೆ ವಿಷಯದೊಂದಿಗೆ ಕೋರ್ಸ್ ಪೂರ್ಣಗೊಳಿಸಿದವರಿಗೆ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆ, ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ಭಾರತೀಯ ಹವಾಮಾನ ಇಲಾಖೆ, ಸ್ವಯಂ ಸೇವಾ ಸಂಸ್ಥೆಗಳು, ಅಗ್ನಿಶಾಮಕ ಹಾಗೂ ತುರ್ತು ಸೇವೆಗಳ ಇಲಾಖೆ ಹಾಗೂ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಉದ್ಯೋಗಾವಕಾಶಗಳಿವೆ.

ಮಾಹಿತಿಗಳಿಗಾಗಿ ಈ ಲಿಂಕ್ ಕ್ಲಿಕ್ ಮಾಡಿ: https://eng.bangaloreuniversity.ac.in/science/geog, **ಇಮೇಲ್:** geography@bub.ernet.in



ವಿದ್ಯಾರ್ಥಿ ವೇತನ ಕೈಪಿಡಿ

ಎಐಸಿಟಿಇ ಇಂಟರ್ನ್‌ಶಿಪ್ ಫಾರ್ ಸಿವಿಲ್ ಇನ್ಫ್ರಾಸ್ಟ್ರಕ್ಚರ್ 2022

ವಿವರ: ಎಐಸಿಟಿಇ ಇಂಟರ್ನ್‌ಶಿಪ್ಸ್ ಫಾರ್ ಸಿವಿಲ್ ಇನ್ಫ್ರಾಸ್ಟ್ರಕ್ಚರ್ 2022, ಕೇಂದ್ರ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ವ್ಯಾಪ್ತಿಯಲ್ಲಿರುವ ವಾರಾಣಸಿ ಸ್ಮಾರ್ಟ್ ಸಿಟಿಯಲ್ಲಿ ಸಿವಿಲ್ ಇನ್ಫ್ರಾಸ್ಟ್ರಕ್ಚರ್‌ನಲ್ಲಿ ಕೆಲಸ ಮಾಡುವ ಬಿ.ಇ/ಬಿ.ಟೆಕ್. ಪದವಿ ಹೊಂದಿರುವವರಿಗೆ ಆಲ್ ಇಂಡಿಯಾ ಕೌನ್ಸಿಲ್ ಫಾರ್ ಟೆಕ್ನಿಕಲ್ ಎಜುಕೇಶನ್ (ಎಐಸಿಟಿಇ) ಇದರ ಉಪಕ್ರಮವಾಗಿದೆ.

ಅರ್ಹತೆ: ಬಿ.ಇ. / ಬಿ.ಟೆಕ್. ಪದವಿ ಮತ್ತು ಸಿವಿಲ್ ಎಂಜಿನಿಯರಿಂಗ್, ಸಿವಿಲ್ ಎಂಜಿನಿಯರಿಂಗ್ (ನಿರ್ಮಾಣ ತಂತ್ರಜ್ಞಾನದಲ್ಲಿ ಸಂಬಂಧಿತ ಕೌಶಲ್ಯ ಮತ್ತು ಆಸಕ್ತಿ) ಪರಿಣತಿ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು


ಆರ್ಥಿಕ ನೆರವು: ತಿಂಗಳಿಗೆ ₹ 10,000

ಅರ್ಜಿ ಸಲ್ಲಿಸುವ ವಿಧಾನ: ಈ **ಇಂಟರ್ನ್‌ಶಿಪ್**‌ಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು.

ಅರ್ಜಿ ಸಲ್ಲಿಕೆಗೆ ಕೊನೆ ದಿನ: ಮೇ 31, 2022.

ಹೆಚ್ಚಿನ ಮಾಹಿತಿಗೆ ಈ ಜಾಲತಾಣದ ಕೊಂಡಿಯನ್ನು ನೋಡಿ www.b4s.in/praja/AIC7

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್ ಕುಮಾರ್

'ದೂರ ಶಿಕ್ಷಣ'ದ ಪದವೀಧರರು ಐಎಎಸ್ ಪರೀಕ್ಷೆ ಬರೆಯಬಹುದಾ?

1. ನಾನು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ 86 ತೆಗೆದುಕೊಂಡಿದ್ದೇನೆ. ಪಿಯುಸಿಯಲ್ಲಿ ಯಾವ ವಿಭಾಗವನ್ನು ತೆಗೆದುಕೊಳ್ಳಬೇಕು ಎನ್ನುವ ಗೊಂದಲವಿದೆ. ಕಲಾ ವಿಭಾಗ ತೆಗೆದುಕೊಂಡು ಎಲ್‌ಎಲ್‌ಬಿ ಮಾಡಿ ಐಎಎಸ್ ಮಾಡಬೇಕು ಅಂತ ಅಂದುಕೊಂಡೆ. ಆದರೆ, ತುಂಬಾ ಜನ ಕಾಮರ್ಸ್ ತೆಗೆದುಕೊಂಡು, ಪಿಯುಸಿ ಆದ ಮೇಲೆ ಕೂಡ ಎಲ್‌ಎಲ್‌ಬಿ ಮಾಡಬಹುದು ಅಂತ ಹೇಳುತ್ತಿದ್ದಾರೆ. ಹಾಗಾಗಿ ನನಗೆ ಕಾಮರ್ಸ್ ಮತ್ತು ಕಲಾ ವಿಭಾಗಗಳಲ್ಲಿ ಯಾವುದನ್ನು ತೆಗೆದುಕೊಳ್ಳಬಹುದೆಂದು ದಯವಿಟ್ಟು ತಿಳಿಸಿ.

ಹೆಸರು, ಊರು ತಿಳಿಸಿಲ್ಲ



ನಾಗರಿಕ ಸೇವಾ ಪರೀಕ್ಷೆಯನ್ನು ಯಾವುದೇ ಪದವಿಯ ನಂತರ ಮಾಡಬಹುದು. ಮುಖ್ಯವಾಗಿ, ನಿಮ್ಮ ಆಸಕ್ತಿ, ಒಲವು, ಪ್ರತಿಭೆ, ಕೌಶಲಗಳನ್ನು ಗುರುತಿಸಿ, ಅದಕ್ಕೆ ಅನುಗುಣವಾಗಿ ವೃತ್ತಿ ಯೋಜನೆಯನ್ನು ಮಾಡಬೇಕು. ವೃತ್ತಿ ಯೋಜನೆ ಮಾಡುವ ಪ್ರಕ್ರಿಯೆ ಕುರಿತ ಲೇಖನ, ಇದೇ ತಿಂಗಳ 23ರ ಸಂಚಿಕೆಯಲ್ಲಿ ಪ್ರಕಟವಾಗಿದೆ. ಪದವಿ ಪರೀಕ್ಷೆಯ ವಿಷಯಗಳನ್ನು ಆಧರಿಸಿ, ನಾಗರಿಕ ಸೇವಾ ಪರೀಕ್ಷೆಯಲ್ಲಿ ಐಚ್ಛಿಕ ವಿಷಯವನ್ನು ಆರಿಸಿಕೊಳ್ಳುವುದರ ಬಗ್ಗೆಯೂ ಇದೇ ತಿಂಗಳ 26ರ ಸಂಚಿಕೆಯಲ್ಲಿ ಲೇಖನ ಪ್ರಕಟವಾಗಿದೆ. ಈ ಎರಡೂ ಲೇಖನಗಳನ್ನು ಓದಿಕೊಂಡರೆ, ನಿಮ್ಮ ಗೊಂದಲ ಪರಿಹಾರವಾಗುತ್ತದೆ. ಹೆಚ್ಚಿನ ಮಾರ್ಗದರ್ಶನ ಅಗತ್ಯವೆನಿಸಿದರೆ, ಈ ಅಂಕಣದ ಮೂಲಕ ನಮ್ಮನ್ನು ಸಂಪರ್ಕಿಸಿ.

2. ದೂರ ಶಿಕ್ಷಣದ ಮೂಲಕ ಪದವಿ ಪಡೆದವರಿಗೆ ಐಎಎಸ್, ಐಪಿಎಸ್ ಮಾಡಲು ಅವಕಾಶವಿದೆಯೇ? ದೂರಶಿಕ್ಷಣದಲ್ಲಿ ಯಾವ ವಿಶ್ವವಿದ್ಯಾಲಯ ಉತ್ತಮ? ದಯಮಾಡಿ ತಿಳಿಸಿ.

ಹೆಸರು, ಊರು ತಿಳಿಸಿಲ್ಲ

ದೂರ ಶಿಕ್ಷಣ ಬ್ಯೂರೊ, ಯುಜಿಸಿ ಸಂಸ್ಥೆಯ ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾಲಯದ ಪದವೀಧರರು, ಯುಪಿಎಸ್‌ಸಿ ಪರೀಕ್ಷೆಯನ್ನು ಬರೆಯಬಹುದು. ಉತ್ತಮ ವಿಶ್ವವಿದ್ಯಾಲಯದ ಮಾಹಿತಿಗಾಗಿ ಗಮನಿಸಿ: https://collegevidya.com/blog/top-distance-learning-colleges-in-india/

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಬಂಬಾರ್ಡಿಯರ್ ಬೀಟಲ್



ನೂರ್ ಸಮದ್ ಅಬ್ಬಲಗೆರೆ

ಕೀಟ ಲೋಕದಲ್ಲಿ ಅಡಗಿರುವ ವಿಸ್ಮಯಗಳನ್ನು ಹುಡುಕುತ್ತಾ ಹೋದರೆ ನಿತ್ಯ ಹೊಸ ಹೊಸ ಪುಟಗಳು ತೆರೆದುಕೊಳ್ಳುತ್ತಲೇ ಹೋಗುತ್ತವೆ. ಅದರಲ್ಲೂ ತಮ್ಮ ಜೀವ ರಕ್ಷಣೆಗಾಗಿ ವಿಚಿತ್ರ ಮಾರ್ಪಾಟುಗಳನ್ನು ಮಾಡಿಕೊಂಡಿರುವುದು ಪ್ರಾಯಶಃ ಪ್ರಾಣಿ ಪ್ರಪಂಚದಲ್ಲಿ ಕೀಟಗಳದ್ದೇ ಮೇಲುಗೈ ಎಂದರೆ ತಪ್ಪಾಗಲಾರದು. ಇಂತಹ ಪ್ರಕ್ರಿಯೆಗಳು ಚಾರ್ಲ್ಸ್ ಡಾರ್ವಿನ್‌ನ 'ಸರ್ವೈವಲ್ ಆಫ್ ದಿ ಫಿಟೆಸ್ಟ್ (Survival of the fittest)' ಎಂಬ ಜೀವ ವಿಕಾಸ ಸಿದ್ಧಾಂತವನ್ನು ಸಾಕ್ಷೀಕರಿಸುತ್ತವೆ. ಇಂತಹ ಅದ್ಭುತ ಪ್ರಕ್ರಿಯೆಯೊಂದು ವಿಸ್ಮಯ ಕೀಟ ಬಂಬಾರ್ಡಿಯರ್ ಜೀರುಂಡೆಯಲ್ಲಿ (Bombardier beetle) ಅಡಗಿರುವುದು ವಿಶೇಷ.

ಮೊನ್ನೆ ನನ್ನ ಕ್ಯಾಮೆರ ಕಣ್ಣು ನಮ್ಮ ಮನೆಯ ಬಾಲ್ಕನಿಯಲ್ಲಿ ಈ ಜೀರುಂಡೆಯನ್ನು ಸೆರೆ ಹಿಡಿಯಿತು. ಈ ಕೀಟ ತನ್ನ ಉದರದಲ್ಲಿ ಬಾಂಬ್ ತಯಾರಿಸಿ ತನ್ನ ಶತ್ರುಗಳತ್ತ ಸಿಡಿಸುತ್ತದೆ. ಹೀಗೆಂದು ಹೇಳಿದರೆ ಅಚ್ಚರಿ ಮೂಡುತ್ತದೆಯಲ್ಲವೇ?

ಒಂದು ಪುಟ್ಟ ಕೀಟದೊಳಗೆ ಇದೆಲ್ಲ ಹೇಗಾಗುತ್ತದೆ ಗಮನಿಸಿದಾಗ ಅಚ್ಚರಿ ಎನಿಸುವ ವಿಚಾರಗಳು ತೆರೆದುಕೊಳ್ಳುತ್ತವೆ. ಅವು ಹೀಗಿವೆ;

ಈ ಕೀಟಗಳ ಉದರದಲ್ಲಿ ಒಂದು ಯಂತ್ರಕ್ರಿಯೆ ರಚನಾ ವ್ಯವಸ್ಥೆಯಿದೆ. ಕೀಟವಿಜ್ಞಾನಿಗಳು ಇದನ್ನು ಬಹಳ ಸುಂದರವಾಗಿ ಸಂಶೋಧನಾತ್ಮಕವಾಗಿ ನಿರೂಪಿಸಿದ್ದಾರೆ. ಅದೇನೆಂದರೇ, ಈ ಕೀಟದ ಉದರದಲ್ಲಿ ಎರಡು ವಿಶಿಷ್ಟ ಗ್ರಂಥಿಗಳಿವೆ. ಒಂದು ಗ್ರಂಥಿಯಲ್ಲಿ ಹೈಡ್ರೋಜನ್ ಪೆರಾಕ್ಸೈಡ್ (Hydrogen peroxide), ಮತ್ತೊಂದು ಗ್ರಂಥಿಯಲ್ಲಿ ಹೈಡ್ರೊಕ್ವಿನೋನ್ಸ್ (Hydroquinones) ಎಂಬ ರಾಸಾಯನಿಕಗಳು ಉತ್ಪತ್ತಿಯಾಗುತ್ತವೆ. ನಾವು ರಸಾಯನ ವಿಜ್ಞಾನದಲ್ಲಿ ಓದಿರುವಂತೆ ಹೈಡ್ರೋಜನ್ ಪೆರಾಕ್ಸೈಡ್ ಒಂದು ಸ್ಫೋಟಕ ವಸ್ತು. ಶತ್ರು ಕೀಟಗಳು ಎದುರಾದಾಗ ಅಥವಾ ನಾವೇನಾದರೂ ಈ ಕೀಟಕ್ಕೆ ತೊಂದರೆ ಕೊಟ್ಟಾಗ, ಈ ಗ್ರಂಥಿಗಳಿಂದ ಎರಡೂ ರಾಸಾಯನಿಕಗಳು ಏಕಕಾಲಕ್ಕೆ ಸ್ರವಿಸಿ ಮುಂದಿರುವ ಸ್ಫೋಟಕ ಕೋಣೆಯಲ್ಲಿ ಮಿಶ್ರಣಗೊಳ್ಳುತ್ತವೆ. ನಂತರ ಕೆಲವು ಕಿಣ್ವಗಳ (Enzymes) ಸಹಾಯದಿಂದ ಉತ್ಕರ್ಷಣ (Oxidation) ಪ್ರಕ್ರಿಯೆಗೆ ಒಳಗಾಗಿ ಇಲ್ಲಿ ಸ್ಫೋಟಗೊಂಡು ವಿಸರ್ಜಿಸುವ ತೂಬಿನಿಂದ(Firing Jet) ಭುಸ್..ಫಟ್ ಎಂಬ ಶಬ್ದದೊಂದಿಗೆ ನೇರವಾಗಿ ಶತ್ರುಗಳ ಮೈಮೇಲೆಯೇ ಸಿಡಿಸುತ್ತದೆ. ಬಲಿಷ್ಠ ಶತ್ರು ಕೀಟಗಳು ಹೆದರಿ ಓಡಿ ಹೋಗುತ್ತವೆ. ಓಡಿ ಹೋಗಲಾಗದ ಶತ್ರು ಕೀಟಗಳು ಸ್ಥಳದಲ್ಲೇ ಸಾವನ್ನಪ್ಪುತ್ತವೆ. ಈ ರಾಸಾಯನಿಕ ಪ್ರಕ್ರಿಯೆಯಲ್ಲಿ ಅತಿ ಹೆಚ್ಚು ಶಾಖ ಉತ್ಪನ್ನವಾಗುತ್ತದೆ. ಸ್ಫೋಟಗೊಂಡಾಗ ಹೊರಹೊಮ್ಮುವ ಸ್ಫೋಟಕ ದ್ರವ್ಯವು 100 ಡಿಗ್ರಿ ಉಷ್ಣಾಂಶದಷ್ಟಿರುತ್ತದೆ ಮತ್ತು ಬಹಳ ಕೆಟ್ಟ ವಾಸನೆಯಿಂದಲೂ ಕೂಡಿರುತ್ತದೆ. ಕೋಲಿಯೋಪ್ಟರ (Coleoptera) ಗುಂಪು, ಕ್ಯಾರಾಬಿಡೆ (Carabidae) ಕುಟುಂಬದ ಬಹುತೇಕ ಸದಸ್ಯರಲ್ಲಿ ಇಂತಹ ವಿಸ್ಮಯಕರ ಆತ್ಮರಕ್ಷಣಾ ಪ್ರಕ್ರಿಯೆಯನ್ನು ನಾವು ಕಾಣಬಹುದಾಗಿದೆ.

ಬಾಂಬ್ ಸಿಡಿಸುವ ಈ ಬಂಬಾರ್ಡಿಯರ್ ಜೀರುಂಡೆಗಳನ್ನು ಸಾಮಾನ್ಯವಾಗಿ ಗ್ರೌಂಡ್ ಬೀಟಲ್ (Ground beetle)ಗಳೆಂದೂ ಕರೆಯುತ್ತಾರೆ. ನಾನು ಇದಕ್ಕೆ ನೆಲಜೀರುಂಡೆ ಎಂದು ಹೆಸರಿಸಲು ಬಯಸುತ್ತೇನೆ. ಈ ಕೀಟದ ಮರಿಹುಳುಗಳು ಮತ್ತು ಪ್ರೌಢಕೀಟಗಳು ಪರಭಕ್ಷಕ ಕೀಟ ಹಾಗೂ ನಿಶಾಚರಿಗಳಾಗಿದ್ದು ರಾತ್ರಿ ಸಮಯದಲ್ಲಿ ಇತರೇ ಕೀಟಗಳನ್ನು ತಿಂದು ಬದುಕುತ್ತವೆ. ಇಂತಹ ಬಗೆಬಗೆಯ ವಿಸ್ಮಯಗಳನ್ನು ಹೊತ್ತ ಸಾವಿರಾರು ಕೀಟಗಳು ಆಗಾಗ್ಗೆ ನಮ್ಮನ್ನು ಅಚ್ಚರಿ ಲೋಕದಲ್ಲಿ ವಿಹರಿಸುವಂತೆ ಮಾಡುತ್ತವೆ.




(ಲೇಖಕರು: ಕೃಷಿ ಅಧಿಕಾರಿ, ಬೆಂಗಳೂರು)

ಚಿತ್ರ: ಲೇಖಕರದ್ದು

ವರ್ಷಾಂತ್ಯದ ಪರೀಕ್ಷೆಗೆ ಹೀಗಿರಲಿ ಸಿದ್ಧತೆ

ಅರವಿಂದ ಚೊಕ್ಕಾಡಿ



ಶಾಲೆಗಳು ಪ್ರಾರಂಭವಾಗುತ್ತಿವೆ. ಕಳೆದ ಎರಡು ಶೈಕ್ಷಣಿಕ ವರ್ಷಗಳ ಕೊರೊನಾ ತಡೆಗಳ ನಂತರ ದೊರೆಯುತ್ತಿರುವ ಪೂರ್ಣ ರೂಪದ ಶೈಕ್ಷಣಿಕ ವರ್ಷವಿದು. ಯಶಸ್ವಿ ಕಲಿಕೆಯನ್ನು ಸಾಧಿಸುವ ದೃಷ್ಟಿಯಿಂದ ಮಾಡಿಕೊಳ್ಳಬೇಕಾದ ಸಿದ್ಧತೆಗಳನ್ನು ಈಗಲೇ ಯೋಚಿಸಬೇಕು.

ಪರೀಕ್ಷೆಯು ಶೈಕ್ಷಣಿಕ ವರ್ಷದ ಕೊನೆಯಲ್ಲಿ ಇರುತ್ತದೆ. ಆದರೆ, ಆ ಪರೀಕ್ಷೆ ಎದುರಿಸುವ ಒತ್ತಡ ಕಲಿಕಾ ವರ್ಷದ ಪ್ರಾರಂಭದಲ್ಲೇ ಇರುತ್ತದೆ. ಅದರಲ್ಲೂ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ಓದುತ್ತಿರುವ ಮಕ್ಕಳಲ್ಲಿ ಈ ಒತ್ತಡ ತುಸು ಹೆಚ್ಚು. ಇದನ್ನು ಯಶಸ್ವಿಯಾಗಿ ಸಾಧಿಸಲು ಕೆಲವು ಮಾರ್ಗಗಳನ್ನು ವರ್ಷದ ಆರಂಭದಿಂದಲೇ ಅನುಸರಿಸಬೇಕು.

- ಪರೀಕ್ಷೆಯಲ್ಲಿ ಅಂಕಗಳು ಬರುವುದು ಬರೆದದ್ದಕ್ಕೇ ಹೊರತು ತಿಳಿದಿರುವುದಕ್ಕಲ್ಲ ಎಂಬ ಅರಿವಿರಬೇಕು. ಅನೇಕ ಬಾರಿ ವಿದ್ಯಾರ್ಥಿಗಳಿಗೆ ವಿಚಾರ ತಿಳಿದಿರುತ್ತದೆ. ಅದನ್ನು ಉತ್ತರದ ರೂಪದಲ್ಲಿಯೇ ಬರೆಯಲು ವಿಫಲರಾಗುತ್ತಾರೆ. ಅಂಕಗಳು ಕಡಿಮೆಯಾಗುತ್ತವೆ. ಆದ್ದರಿಂದ ಬರವಣಿಗೆಯ ಕೌಶಲವನ್ನು ಅತ್ಯಗತ್ಯವಾಗಿ ರೂಢಿಸಿಕೊಳ್ಳಬೇಕು. ಈಗಿನಿಂದದಲೇ ಬರೆದು ಬರೆದು ಅಭ್ಯಾಸ ಮಾಡಿ.
- ಹಲವು ಬಾರಿ ವಿಷಯಗಳು ಗೊತ್ತಿದ್ದರೂ ಪಾಠ ಅಥವಾ ನೋಟ್ಸ್‌ನಲ್ಲಿ ಓದಿದ ವಾಕ್ಯಗಳೇ ನೆನಪಿರುವುದಿಲ್ಲ. ಅದರಿಂದ ಉತ್ತರ ಬರೆಯಲು ಸಾಧ್ಯವಾಗದೆ ಹೋಗುತ್ತದೆ. ಇಲ್ಲಿ ಸಮಸ್ಯೆ ಇರುವುದು ಪಠ್ಯ ವಾಕ್ಯದ ಹೊರತಾಗಿ ಸ್ವಂತ ವಾಕ್ಯವನ್ನು ರಚಿಸಿ ಬರೆಯುವ ಸಾಮರ್ಥ್ಯ ಇಲ್ಲದೆ ಇರುವುದರಿಂ, ಸ್ವಂತ ವಾಕ್ಯ ರಚನೆಯ ಸಾಮರ್ಥ್ಯವನ್ನು ಗಳಿಸಿಕೊಳ್ಳಬೇಕು. ಅದಕ್ಕೆ ಯಾವುದಾದರೊಂದು ವಿಷಯದಲ್ಲಿ ಪ್ರತಿ ದಿನ ಒಂದು ಸಣ್ಣ ಪ್ಯಾರಾಗ್ರಾಫ್ ಅನ್ನು ಸ್ವಂತ ವಾಕ್ಯದಲ್ಲಿ ಬರೆಯಬೇಕು. ಅಂತಹ ಪರಿಕಲ್ಪನೆಗಳು 'ನನ್ನ ಮನೆ', 'ನನ್ನ ಕನಸು' ಈ ರೀತಿಯ ಸ್ವಂತ ಕಲ್ಪನೆಯಾಗಬೇಕು. ಪಾಠ ಪುಸ್ತಕದಲ್ಲಿರುವ ವಿಷಯವನ್ನೆ ತೆಗೆದುಕೊಂಡರೆ ಪಾಠ ಪುಸ್ತಕದ ವಾಕ್ಯಗಳೇ ಬರುತ್ತವೆ. ಅದರಿಂದ ಉಪಯೋಗವಾಗುವುದಿಲ್ಲ. ಸ್ವಂತ ಕಲ್ಪನೆಗಳನ್ನು ಬರೆದಾದ ಮೇಲೆ 'ತಿಳಿದವರಿಗೆ' ಅದನ್ನು ತೋರಿಸಿ ಪರಿಷ್ಕರಿಸಿಕೊಂಡು ಬರೆಯುತ್ತಿರಬೇಕು. ಆಗ ನಮ್ಮಲ್ಲಿರುವ ಚಿಂತನೆಯನ್ನು ಬರಹ ರೂಪದಲ್ಲಿ ಹೇಳುವ ಸಾಮರ್ಥ್ಯ ಬರುತ್ತದೆ. ಪಠ್ಯದ ವಾಕ್ಯಗಳೇ ನೆನಪಿಗೆ ಬಾರದೆ ಇದ್ದರೂ ಪರೀಕ್ಷೆಯಲ್ಲಿ ಬರೆಯಲು ಸಾಧ್ಯವಾಗುತ್ತದೆ.
- ಪರೀಕ್ಷೆಯಲ್ಲಿ ಆಗುವ ಇನ್ನೊಂದು ಸಮಸ್ಯೆ ಎಂದರೆ ಯಾವ ಪ್ರಶ್ನೆಗೆ ಎಷ್ಟು ಬರೆಯಬೇಕು ಎಂಬ ಅಂದಾಜಿಸುವಿಕೆ ಇಲ್ಲದೆ ಇರುವುದು. ಎಸ್ಸೆಸ್ಸೆಲ್ಸಿ ತರಗತಿಯ ಮಟ್ಟವನ್ನು ಇರಿಸಿಕೊಂಡು ಹೇಳುವುದಾದರೆ ನಾಲ್ಕು ಅಂಕಗಳ ಪ್ರಶ್ನೆಗೆ ಎಂಟು ಅಂಶಗಳನ್ನು ಬರೆದರೆ ಸಾಕಾಗುತ್ತದೆ. ಸಮರ್ಪಕವಾದ ಎಂಟು ಅಂಶಗಳನ್ನು ಸ್ಪಷ್ಟವಾಗಿ ಬರೆಯುವುದನ್ನು ರೂಢಿಸಿಕೊಳ್ಳಬೇಕು. ಹಾಗೆಯೇ ವಿವಿಧ ಹಂತಗಳಲ್ಲಿ ಎಷ್ಟು ಅಂಕಗಳ ಪ್ರಶ್ನೆಗೆ ಎಷ್ಟು ಅಂಶಗಳನ್ನು ಬರೆಯಬೇಕು ಎಂಬುದನ್ನು ಅಭ್ಯಾಸ ಮಾಡಬೇಕು. ಇದನ್ನು ಬರೆದೂ ಬರೆದೂ ಅಭ್ಯಾಸ ಆಗಬೇಕೆ ಹೊರತು ಕೇವಲ ತಿಳಿದುಕೊಂಡರೆ ಸಾಲದು. ಬರೆದು ಅಭ್ಯಾಸವಾಗಿ ರೂಢಿಯಾಗದೆ ಇದ್ದರೆ ಪರೀಕ್ಷೆಗಾದಾಗ ಬರವಣಿಗೆಯನ್ನು ಶಿಸ್ತುಬದ್ಧವಾಗಿ ತರಲು ಆಗುವುದಿಲ್ಲ.
- ಬರವಣಿಗೆಯನ್ನು ಅಭ್ಯಾಸ ಮಾಡುವಾಗ ನಿರ್ದಿಷ್ಟ ಉತ್ತರಕ್ಕೆ ಸೂಕ್ತವಲ್ಲದ ವಿಷಯಗಳು ಬಾರದ ಹಾಗೆ ಬರೆದು ಅಭ್ಯಾಸ ಮಾಡಬೇಕು. ಉದಾಹರಣೆಗೆ, 'ಸತಿ ಪದ್ಧತಿ ನಿಷೇಧಿಸಿದ ಗವರ್ನರ್ ಜನರಲ್ ಯಾರು?' ಎಂದು ಕೇಳಿದರೆ, 'ಸತಿ ಪದ್ಧತಿ ನಿಷೇಧಿಸಿದ ಗವರ್ನರ್ ಜನರಲ್ ವಿಲಿಯಂ ಬೆಂಟಿಂಕ್' ಎನ್ನುವುದಷ್ಟೇ ಅಲ್ಲಿ ಉತ್ತರವಾಗಿರುತ್ತದೆ. 'ವಿಲಿಯಂ ಬೆಂಟಿಂಕನು ಇಂಗ್ಲಿಷ್ ಶಿಕ್ಷಣವನ್ನು ಜಾರಿಗೊಳಿಸಿದನು. ರಾಜಾರಾಮ್ ಮೋಹನ್ ರಾಯರು ಸತಿ ಪದ್ಧತಿ ನಿಷೇಧಕ್ಕಾಗಿ ಹೋರಾಡಿದರು. ಅವರ ಹೋರಾಟದ ಪರಿಣಾಮವಾಗಿ ವಿಲಿಯಂ ಬೆಂಟಿಂಕನು ಸತಿ ಪದ್ಧತಿ ನಿಷೇಧಿಸಿದನು' ಎಂದು ಬರೆದರೆ, ಸಮಯದ ಅಪವ್ಯಯ ಹಾಗೂ ಮೌಲ್ಯಮಾಪಕರಿಗೆ ನಿಖರ ಉತ್ತರ ಕಾಣವುದಿಲ್ಲ. ಆಗ ಅವರು ಪ್ರತಿ ವಾಕ್ಯ ಓದಿ, ಉತ್ತರ ಹುಡುಕಬೇಕು. ಪತ್ರಿಕೆಯ ತುಂಬಾ ಈ ರೀತಿ ಹುಡುಕುವ ಕೆಲಸವೇ ಆದಾಗ ಪೂರ್ಣ ಅಂಕ ಬರುವಲ್ಲಿಗೆ ಅರ್ಧ ಅಂಕ ಕಡಿಮೆ ಬೀಳಬಹುದಾದ ಸಾಧ್ಯತೆಯೂ ಇರುತ್ತದೆ. ಆದ್ದರಿಂದ ಅನಗತ್ಯದ ವಾಕ್ಯಗಳನ್ನು ಬರೆಯಬೇಡಿ.
- ಸಮರ್ಪಕ ಬರವಣಿಗೆಯು ಸಮರ್ಪಕ ಓದನ್ನು ಆಧರಿಸಿರುತ್ತದೆ. ನಮ್ಮಲ್ಲಿ ಬಹುತೇಕರು ಓದುವಾಗ ಲೇಖನ ಚಿಹ್ನೆಗಳನ್ನು ಗಮನಕ್ಕೆ ತೆಗೆದುಕೊಳ್ಳದೆ ಓದುತ್ತಾರೆ. ಅದರಿಂದಾಗಿ ಓದಿದ್ದು ನೆನಪಿನಲ್ಲಿ ಉಳಿಯದಾಗುವುದು, ಪರೀಕ್ಷೆಯಲ್ಲಿ ವಾಕ್ಯ ಮರೆತು ಹೋಗುವುದು, ತಪ್ಪಾಗಿ ಬರೆಯುವುದು ಎಲ್ಲ ನಡೆಯುತ್ತದೆ.

ಲೇಖನ ಚಿಹ್ನೆಗಳು ಹೇಗೆ ಓದಿಕೊಳ್ಳಬೇಕು ಎಂದು ಸೂಚಿಸಲು ಇರುವುದು. ಉದಾಹರಣೆಗೆ ಅಲ್ಪ ವಿರಾಮ ಇದ್ದರೆ ಅಲ್ಲಿ 'ಒಂದು ಚಿಟಿಕೆ ಹೊಡೆಯುವಷ್ಟು ಕಾಲ ನಿಲ್ಲಿಸಿ ಮುಂದಕ್ಕೆ ಓದಿಕೊಳ್ಳಬೇಕು' ಎಂದು ಅರ್ಥ. ಹಾಗೆ ನಿಲ್ಲಿಸಿ ಓದಿಕೊಂಡಾಗ ಆ ವಿಚಾರವು ಸರಿಯಾಗಿ ಅರ್ಥ ಆಗುತ್ತದೆ. ಆಶ್ಚರ್ಯ ಚಿಹ್ನೆ ಇದ್ದರೆ ಅದನ್ನು ಆಶ್ಚರ್ಯದ ಭಾವದಲ್ಲಿ ಓದಿಕೊಳ್ಳಬೇಕು ಎಂದು ಅರ್ಥ. ಹಾಗೆ ಓದಿಕೊಂಡಾಗ ಆ ವಿಚಾರವು ಸಮರ್ಪಕವಾಗಿ ಅರ್ಥವಾಗುತ್ತದೆ. ನೆನಪಿನಲ್ಲಿ ಉಳಿಯುತ್ತದೆ. ಸಮರ್ಪಕವಾಗಿ ಬರೆಯಲು ಆಗುತ್ತದೆ.

'ಮನ್ ಕಿ ಬಾತ್'ನಲ್ಲಿ ಪ್ರಧಾನಿ ಮೋದಿ ಹೇಳಿಕೆ

ಕೋವಿಡ್ ಪಿಡುಗಿನ ವೇಳೆಯೂ ಸ್ಟಾರ್ಟ್‌ಅಪ್‌ಗಳಿಂದ ಸಂಪತ್ತು ಸೃಷ್ಟಿ

ನವದೆಹಲಿ (ಪಿಟಿಐ): 'ಕೋವಿಡ್ ಪಿಡುಗಿನ ಸಂದರ್ಭದಲ್ಲಿ ಕೂಡ ದೇಶದ ಸ್ಟಾರ್ಟ್‌ಅಪ್‌ಗಳು ಸಂಪತ್ತು ಸೃಷ್ಟಿಸುವ ಜೊತೆಗೆ ತಮ್ಮ ಮೌಲ್ಯವನ್ನು ಸಹ ಹೆಚ್ಚಿಸಿಕೊಂಡಿವೆ' ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು.

ಆಕಾಶವಾಣಿಯಲ್ಲಿ ಪ್ರಸಾರವಾದ ತಿಂಗಳ 'ಮನ್ ಕಿ ಬಾತ್'ನಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, 'ದೇಶದ ಸಣ್ಣ ಪಟ್ಟಣಗಳು ಹಾಗೂ ನಗರಗಳಲ್ಲಿಯೂ ಸಹ ಉದ್ಯಮಶೀಲರು ಹೊರಹೊಮ್ಮುತ್ತಿದ್ದಾರೆ' ಎಂದರು.

'ಈ ತಿಂಗಳ 5ನೇ ತಾರೀಖಿನಂದು ಯೂನಿಕಾರ್ನ್‌ಗಳ ಸಂಖ್ಯೆ (₹ 7,500 ಕೋಟಿಗಿಂತ ಹೆಚ್ಚಿನ ಬಂಡವಾಳ ಮೌಲ್ಯ ಹೊಂದಿರುವ ನವೋದ್ಯಮ) 100ರ ಗಡಿ ದಾಟಿತು. ಈ ನವೋದ್ಯಮಗಳ ಒಟ್ಟು ಮೌಲ್ಯ ₹ 25 ಲಕ್ಷ ಕೋಟಿಗೂ ಅಧಿಕವಾಗಿದ್ದು, ಇದು ಪ್ರತಿಯೊಬ್ಬ ಭಾರತೀಯ ಹೆಮ್ಮೆಪಡುವ ವಿಷಯ' ಎಂದು ಮೋದಿ ಹೇಳಿದರು.

'ದೇಶದಲ್ಲಿರುವ ಒಟ್ಟು ಸ್ಟಾರ್ಟ್‌ಅಪ್‌ಗಳ ಪೈಕಿ 44 ನವೋದ್ಯಮಗಳು ಕಳೆದ ವರ್ಷ ಕಾರ್ಯಾರಂಭ ಮಾಡಿವೆ. ಕಳೆದ 3-4 ತಿಂಗಳ ಅವಧಿಯಲ್ಲಿಯೇ 14 ನವೋದ್ಯಮಗಳು ಅಸ್ತಿತ್ವಕ್ಕೆ ಬಂದಿವೆ ಎಂಬುದು ಅಚ್ಚರಿ ತರಿಸುತ್ತದೆ' ಎಂದರು.

'ಇ-ಕಾಮರ್ಸ್, ಫಿನ್‌ಟೆಕ್, ಎಡುಟೆಕ್ ಹಾಗೂ ಬಯೋಟೆಕ್ ಕ್ಷೇತ್ರಗಳು ಸೇರಿದಂತೆ ಈ ನವೋದ್ಯಮಗಳ ಕಾರ್ಯಾಚರಣೆಯನ್ನು ವಿವಿಧ ಕ್ಷೇತ್ರಗಳಲ್ಲಿ ಕಾಣಬಹುದು. ಬರುವ ದಿನಗಳಲ್ಲಿ ನವೋದ್ಯಮಗಳ ಸಂಖ್ಯೆಯಲ್ಲಿ ಕ್ಷಿಪ್ರ ಏರಿಕೆ ಕಂಡುಬರಲಿದೆ ಎಂದು ತಜ್ಞರು ವಿಶ್ಲೇಷಿಸಿದ್ದಾರೆ' ಎಂದು ಅವರು ಹೇಳಿದರು.

'ದೇಶದಲ್ಲಿರುವ ಭಾಷಾ ವೈವಿಧ್ಯ, ಆಹಾರ ಪದ್ಧತಿಗಳಲ್ಲಿ ವಿವಿಧತೆ, ಉಡುಗೆ-ತೊಡುಗೆ, ಸಂಸ್ಕೃತಿಯಲ್ಲಿನ ವೈವಿಧ್ಯವನ್ನು ಸಹ ಮೋದಿಯವರು ಪ್ರಸ್ತಾಪಿಸಿದರು. ಈ ವೈವಿಧ್ಯವೇ ನಮ್ಮ ಒಗ್ಗಟ್ಟನ್ನು ಬಲಪಡಿಸುತ್ತದೆ. ನಮಗೆ ಬಲವನ್ನೂ ನೀಡುತ್ತದೆ' ಎಂದೂ ಹೇಳಿದರು.

ಕರ್ನಾಟಕದ ಕಲ್ಪನಾ ಸಾಧನೆಗೆ ಮೆಚ್ಚುಗೆ



ಭಾಷಾ ವೈವಿಧ್ಯವನ್ನು ವಿವರಿಸುವ ಸಂದರ್ಭದಲ್ಲಿ ಪ್ರಧಾನಿ ಮೋದಿ ಅವರು, 10ನೇ ತರಗತಿ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ ಉತ್ತಮ ಅಂಕ ಗಳಿಸಿದ ಕರ್ನಾಟಕದ ಕಲ್ಪನಾ ಎಂಬ ವಿದ್ಯಾರ್ಥಿನಿ ಬಗ್ಗೆ ಪ್ರಸ್ತಾಪಿಸಿದರು.

'ಉತ್ತರಾಖಂಡದ ಜೋಶಿಮಠದವರಾದ ಕಲ್ಪನಾಗೆ ಇತ್ತೀಚಿನವರೆಗೂ ಕನ್ನಡವೇ ಗೊತ್ತಿರಲಿಲ್ಲ. ಆದರೆ, 3 ತಿಂಗಳಲ್ಲಿ ಆಕೆ ಕನ್ನಡ ಕಲಿತಿದ್ದಲ್ಲದೇ, ಪರೀಕ್ಷೆಯಲ್ಲಿ 92 ಅಂಕ ಗಳಿಸಿ ಗಮನ ಸೆಳೆದಿದ್ದಾಳೆ' ಎಂದು ಶ್ಲಾಘಿಸಿದರು.

'ಮೈಸೂರಿನಲ್ಲಿ ಪ್ರೊ.ತಾರಾಮೂರ್ತಿ ಅವರು ಕಲ್ಪನಾಳಿಗೆ ಮಾರ್ಗದರ್ಶನ ನೀಡಿ, ಪ್ರೋತ್ಸಾಹಿಸಿ, ಈ ಸಾಧನೆಗೆ ಕಾರಣರಾಗಿದ್ದಾರೆ. ಆಕೆಯ ಸಾಧನೆ ನಿಜಕ್ಕೂ ಸ್ಫೂರ್ತಿದಾಯಕ. ಮೂರನೇ ತರಗತಿಯಲ್ಲಿ ಓದುತ್ತಿದ್ದಾಗ ಆಕೆಗೆ ಕ್ಷಯ ಕಾಣಿಸಿಕೊಂಡಿತು. ದೃಷ್ಟಿಯನ್ನು ಕಳೆದುಕೊಂಡಳು. ಆದರೆ, ಮನಸ್ಸಿದ್ದಲ್ಲಿ ಮಾರ್ಗ ಎಂಬಂತೆ, ಆಕೆ ಎಲ್ಲ ತೊಂದರೆ ಎದುರಿಸಿ ಸಾಧನೆ ಮಾಡಿದ್ದಾಳೆ' ಎಂದರು.

'ಮನುಕುಲಕ್ಕಾಗಿ ಯೋಗ': ಈ ಬಾರಿಯ ಧ್ಯೇಯವಾಕ್ಯ

ಜೂನ್ 21ರಂದು 8ನೇ ಅಂತರರಾಷ್ಟ್ರೀಯ ಯೋಗ ದಿನ ಆಚರಿಸಲಾಗುತ್ತದೆ. ಯೋಗ ದಿನಾಚರಣೆಯ ಈ ವರ್ಷದ ಧ್ಯೇಯ ವಾಕ್ಯ 'ಮನುಕುಲಕ್ಕಾಗಿ ಯೋಗ' ಎಂದು ಎಂದು ಮೋದಿ ಹೇಳಿದರು.

ಸ್ವಾತಂತ್ರ್ಯೋತ್ಸವದ ಅಮೃತಮಹೋತ್ಸವದ ಅಂಗವಾಗಿ ದೇಶದ 75 ಪ್ರಮುಖ ಸ್ಥಳಗಳಲ್ಲಿ ಅಂತರರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಗುವುದು ಎಂದು ಹೇಳಿದ್ದಾರೆ.

'ಶಾಂತಿಗಾಗಿ ಮನವಿ ಮಾಡಿ'(ಜೈಪುರ ವರದಿ): ದೇಶದಲ್ಲಿ ನಡೆಯುತ್ತಿರುವ ಕೋಮು ಹಿಂಸಾಚಾರಕ್ಕೆ ಸಂಬಂಧಿಸಿ ಬಿಜೆಪಿಯನ್ನು ಭಾನುವಾರ ಟೀಕಿಸಿದ ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್, 'ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ 'ಮನ್ ಕಿ ಬಾತ್'ನಲ್ಲಿ ಶಾಂತಿಗಾಗಿ ಮನವಿ ಮಾಡಬೇಕು' ಎಂದು ಕಾರ್ಯಕ್ರಮ ಪ್ರಸಾರವಾಗುವುದಕ್ಕೆ ಮುನ್ನ ಟ್ವೀಟ್ ಮೂಲಕ ಕೋರಿದ್ದಾರೆ.

ಸ್ಫೋಟಕಗಳಿದ್ದ ಪಾಕ್ ಡ್ರೋನ್ ಧರೆಗುರುಳಿಸಿದ ಜಮ್ಮು ಪೊಲೀಸರು

ಜಮ್ಮು (ಪಿಟಿಐ): ಏಳು ಮ್ಯಾಗ್ನೆಟಿಕ್ ಬಾಂಬ್‌ಗಳು, ಏಳು ಯುಬಿಜಿಎಲ್ (ಅಂಡರ್ ಬ್ಯಾರೆಲ್ ಗ್ರೆನೇಡ್ ಲಾಂಚರ್) ಗ್ರೆನೇಡ್‌ಗಳನ್ನು ಹೊತ್ತ ಪಾಕಿಸ್ತಾನದ ಡ್ರೋನ್ ಅನ್ನು ಜಮ್ಮು ಮತ್ತು ಕಾಶ್ಮೀರದ ಕಥುವಾ ಜಿಲ್ಲೆಯಲ್ಲಿ ಭಾನುವಾರ ಪೊಲೀಸರ ಶೋಧನಾ ತಂಡ ಹೊಡೆದುರುಳಿಸಿದೆ.

'ತಲ್ಲಿ ಹರಿಯ ಚಕ್ ಪ್ರದೇಶದಲ್ಲಿ ಬೆಳಿಗ್ಗೆ ಅಂತರರಾಷ್ಟ್ರೀಯ ಗಡಿ ದಾಟಿ ಬಂದ ಡ್ರೋನ್ ಅನ್ನು ನಮ್ಮ ಶೋಧನಾ ತಂಡ ಗುರುತಿಸಿ, ಗುಂಡು ಹಾರಿಸಿ ಧರೆಗುರುಳಿಸಿದೆ. ಡ್ರೋನ್‌ನ ಪೇಲೋಡ್ ಅನ್ನು ಬಾಂಬ್ ನಿಷ್ಕ್ರಿಯ ದಳವು ಪರೀಕ್ಷಿಸಿದಾಗ ಮ್ಯಾಗ್ನೆಟಿಕ್ ಬಾಂಬ್‌ಗಳು ಮತ್ತು ಯುಬಿಜಿಎಲ್ ಗ್ರೆನೇಡ್‌ಗಳು ಅದರಲ್ಲಿ ಪತ್ತೆಯಾಗಿವೆ' ಎಂದು ಸಿಂಗ್ ಹೇಳಿದರು.

ಗಡಿಯಾಚೆಯಿಂದ ಆಗಾಗ ಡ್ರೋನ್ ಮೂಲಕ ಇಂತಹ ಚಟುವಟಿಕೆಗಳು ನಡೆಯುತ್ತಿದ್ದು, ಪೊಲೀಸ್ ಶೋಧನಾ ತಂಡಗಳು ಆ ಪ್ರದೇಶದಲ್ಲಿ ನಿರಂತರ ನಿಗಾವಹಿಸಿವೆ ಎಂದು ಅವರು ಹೇಳಿದರು.

ವಾರ್ಷಿಕ 43 ದಿನಗಳ ಅಮರನಾಥ ಯಾತ್ರೆಯು ಜೂನ್ 30ರಂದು ಆರಂಭವಾಗಲಿದ್ದು, ಈ ಘಟನೆಯಿಂದಾಗಿ ಭದ್ರತೆಯನ್ನು ಮತ್ತಷ್ಟು ಬಿಗಿಗೊಳಿಸಲಾಗಿದೆ.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು **'Deccan Herald-Prajavani Relief Trust'** ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು dept.finc@printersmysore.co.in ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
*A/c no. - **0404101200385***
*IFSC code - **CNRB0000404***
*MICR Code - **560015009***

ಸೂಚನೆ
ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು - 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2022ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಅಭಿಪ್ರಾಯ

ಶುಲ್ಕ ಕಟ್ಟಲು ಅನುಕೂಲವಾಯಿತು



'ಪ್ರಜಾವಾಣಿ' ನೀಡಿದ ಶೈಕ್ಷಣಿಕ ನೆರವು ನನಗೆ ಹಾಸ್ಟೆಲ್‌ನ ಶುಲ್ಕ ಕಟ್ಟಲು ಅನುಕೂಲವಾಯಿತು. ಒಂದು ವರ್ಷದ ಹಾಸ್ಟೆಲ್ ಶುಲ್ಕ ಕಟ್ಟಿ, ಉಳಿದ ಹಣದಲ್ಲಿ ಕಾಲೇಜಿಗೆ ಹೋಗಲು ಬಟ್ಟೆ ಖರೀದಿಸಿದೆ. ನಮ್ಮಂತಹ ಆರ್ಥಿಕವಾಗಿ ಹಿಂದುಳಿದವರಿಗೆ 'ಪ್ರಜಾವಾಣಿ' ನೀಡಿದ ಪ್ರೋತ್ಸಾಹಧನದಿಂದ ತುಂಬಾ ಪ್ರಯೋಜನವಾಯಿತು. ಪತ್ರಿಕೆಯ ಸಾಮಾಜಿಕ ಕಾಳಜಿ ಅನನ್ಯ. ಪತ್ರಿಕಾ ಬಳಗಕ್ಕೆ ಧನ್ಯವಾದಗಳು.

ನಿರಂಜನ ಆರ್.ಎನ್., ಕುಪ್ಪೆ ಗ್ರಾಮ, ಸೊರಬ ತಾಲ್ಲೂಕು

ಆರ್ಥಿಕವಾಗಿ ಹಿಂದುಳಿದವರ ಭರವಸೆ



'ಪ್ರಜಾವಾಣಿ' ನೀಡುತ್ತಿರುವ ವಿದ್ಯಾರ್ಥಿವೇತನವು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ತುಂಬಾ ಪ್ರಯೋಜನಕಾರಿಯಾಗಿದೆ. ಪತ್ರಿಕೆ ನೀಡಿದ ವಿದ್ಯಾರ್ಥಿವೇತನ ಕಾಲೇಜಿನ ಶುಲ್ಕ ಕಟ್ಟಲು ಸಹಕಾರಿಯಾಯಿತು. ನನ್ನಂಥ ನೂರಾರು ವಿದ್ಯಾರ್ಥಿಗಳಿಗೆ ಇಂತಹ ನೆರವು ಆಶಾದಾಯಕವಾಗಿದ್ದು, ಉತ್ತೇಜನ ನೀಡಲಿದೆ. 'ಪ್ರಜಾವಾಣಿ' ಬಳಗಕ್ಕೆ ಅಭಿನಂದನೆ ಮತ್ತು ಕೃತಜ್ಞತೆಗಳು.

ನಿಖಿತಾ ಕೆ.ಎನ್., ಭಾಶಿ, ಶಿರಸಿ ತಾಲ್ಲೂಕು

ಗಾಯಕ ಸಿಧು ಮೂಸೆವಾಲಾ ಹತ್ಯೆ



ನವದೆಹಲಿ (ಪಿಟಿಐ): ಕಾಂಗ್ರೆಸ್ ಮುಖಂಡ ಹಾಗೂ ಪಂಜಾಬಿ ಗಾಯಕ ಶುಭದೀಪ್ ಸಿಂಗ್ ಸಿಧು (ಸಿಧು ಮೂಸೆವಾಲಾ) (27) ಅವರನ್ನು ದುಷ್ಕರ್ಮಿಗಳು ಭಾನುವಾರ ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ.

ಮಾನ್ಸಾ ಜಿಲ್ಲೆಯ ಜವಾಹರ್ ಕೆ ಗ್ರಾಮದ ಬಳಿ ಈ ಘಟನೆ ನಡೆದಿದೆ. ಸಿಧು ಅವರು ಚಾಲನೆ ಮಾಡುತ್ತಿದ್ದ ಎಸ್‌ಯುವಿ ವಾಹನದ ಮೇಲೆ ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿದ್ದಾರೆ. ಆಸ್ಪತ್ರೆಗೆ ಕರೆತರುವ ಮಾರ್ಗ ಮಧ್ಯೆಯೇ ಸಿಧು ಅವರು ಸಾವನ್ನಪ್ಪಿದ್ದಾರೆ. ಸಿಧು ಅವರೊಂದಿಗೆ ಪ್ರಯಾಣಿಸುತ್ತಿದ್ದ ಇಬ್ಬರು ಮಾಜಿ ಶಾಸಕರಿಗೆ ಗಾಯಗಳಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಎರಡು ಗುಂಪುಗಳ ನಡುವಿನ ವೈಷಮ್ಯದ ಕಾರಣ ಈ ಹತ್ಯೆ ನಡೆದಿದೆ ಎಂಬ ಶಂಕೆ ಇದೆ. ಕೆನಡಾ ಮೂಲದ ಲಾರೆನ್ಸ್ ಬಿಷ್ಣೋಯಿ ಗುಂಪು ಈ ಹತ್ಯೆಯಲ್ಲಿ ಪಾಲ್ಗೊಂಡಿದೆ ಎಂದು ಪಂಜಾಬ್ ಡಿಜಿಪಿ ವಿ.ಕೆ. ಭಾವ್ರಾ ತಿಳಿಸಿದ್ದಾರೆ.

ಲಾರೆನ್ಸ್ ಬಿಷ್ಣೋಯಿ ಗುಂಪಿನ ಲಕ್ಕಿ ಎಂಬ ಸದಸ್ಯ ಈ ಹತ್ಯೆಯ ಹೊಣೆಯನ್ನು ಹೊತ್ತುಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಸಿಧು ಅವರು ಮಾನ್ಸಾ ಜಿಲ್ಲೆಯ ಮೂಸೆವಾಲಾ ಗ್ರಾಮದವರು. ಹೀಗಾಗಿ ಅವರು ಸಿಧು ಮೂಸೆವಾಲಾ ಎಂದೇ ಪ್ರಸಿದ್ಧಿ. ಕಳೆದ ಕೆಲ ವರ್ಷಗಳ ಅವಧಿಯಲ್ಲಿ ಅವರು ಹಾಡಿರುವ ಹಲವಾರು ಗೀತೆಗಳು ಜನಪ್ರಿಯವಾಗಿವೆ.

ರಾಜ್ಯದಲ್ಲಿ 'ವಿಐಪಿ ಸಂಸ್ಕೃತಿ'ಯನ್ನು ಕೊನೆಗಾಣಿಸಬೇಕು ಎಂಬ ಉದ್ದೇಶದಿಂದ, ಸಿಧು ಸೇರಿದಂತೆ 424 ಜನ ಗಣ್ಯರಿಗೆ ನೀಡಲಾಗಿದ್ದ ಭದ್ರತೆಯನ್ನು ರಾಜ್ಯ ಸರ್ಕಾರ ಹಿಂಪಡೆದ ಬೆನ್ನಲ್ಲೇ ಈ ಘಟನೆ ಸಂಭವಿಸಿದೆ.

ಕಳೆದ ವರ್ಷ ಡಿಸೆಂಬರ್‌ನಲ್ಲಿ ಕಾಂಗ್ರೆಸ್ ಸೇರಿದ್ದ ಸಿಧು, ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮಾನ್ಸಾ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಎಎಪಿಯ ಡಾ.ವಿಜಯ್ ಸಿಂಗ್ಲಾ ವಿರುದ್ಧ ಪರಾಭವಗೊಂಡಿದ್ದರು.

ಆಘಾತ-ಟೀಕೆ: ಸಿಧು ಅವರನ್ನು ಗುಂಡಿಕ್ಕಿ ಹತ್ಯೆ ಮಾಡಿದ ಘಟನೆ ಬಗ್ಗೆ ಪಂಜಾಬ್‌ನ ಕಾಂಗ್ರೆಸ್ ಮುಖಂಡರು ಆಘಾತ ವ್ಯಕ್ತಪಡಿಸಿದ್ದಾರೆ. ಗಣ್ಯರಿಗೆ ನೀಡಿದ್ದ ಭದ್ರತೆ ಹಿಂಪಡೆದ ನಿರ್ಧಾರಕ್ಕಾಗಿ ಸರ್ಕಾರವನ್ನು ವಜಾಗೊಳಿಸಬೇಕೆಂದು ಮುಖಂಡರು ಆಗ್ರಹಿಸಿದರು.

ನಾಯಿ ಮೇಲೆ ಕ್ರೌರ್ಯ: ವ್ಯಕ್ತಿ ವಿರುದ್ಧ ಪ್ರಕರಣ

ಬದೌನ್, ಉತ್ತರ ಪ್ರದೇಶ(ಪಿಟಿಐ): ನಾಯಿಯೊಂದಕ್ಕೆ ಚಿತ್ರಹಿಂಸೆ ಮಾಡುತ್ತಿರುವ ವಿಡಿಯೊವೊಂದು ಸಾಮಾಜಿಕ ಮಾಧ್ಯಮಗಳಲ್ಲಿ ಕಾಣಿಸಿಕೊಂಡ ಬಳಿಕ ಸಂಬಂಧಿಸಿದ ವ್ಯಕ್ತಿ ವಿರುದ್ಧ ಕ್ರೌರ್ಯದ ಪ್ರಕರಣ ದಾಖಲಿಸಲಾಗಿದೆ.


ಈ ಘಟನೆಯು ಕಳೆದೊಂದು ತಿಂಗಳ ಹಿಂದೆ ಸಹಸ್ವಾನ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಈ ವಿಡಿಯೊದಲ್ಲಿ ವ್ಯಕ್ತಿಯು ನಾಯಿಯ ಬಾಲವನ್ನು ಹಿಡಿದು ಎತ್ತಿ ಬಿಸಾಕುತ್ತಿರುವುದನ್ನು ಕಾಣಬಹುದು.

ಬಳ್ಳಾರಿಯಲ್ಲಿ ವಸತಿ ಉದ್ದೇಶದ ಪ್ಲಾಟ್ಸ್‌ಗಳಿಗೆ ತೀವ್ರ ಬೇಡಿಕೆ

ಮೂಲಸೌಕರ್ಯ ಸೌಲಭ್ಯಗಳ ಅಭಿವೃದ್ಧಿ, ವಾಣಿಜ್ಯ ಪ್ರಗತಿ, ಉದ್ಯಮಗಳ ಸ್ಥಾಪನೆಗೆ ಇರುವ ಪೂರಕ ವಾತಾವರಣವು ಒಳಗೊಂಡಂತೆ ವಿವಿಧ ಕಾರಣಗಳಿಂದಾಗಿ ಬಳ್ಳಾರಿ ನಗರವು ಇಂದು ಆಸ್ತಿಗಳ ಮೇಲೆ ಹಣ ಹೂಡಿಕೆಗಾಗಿ ಯುವಸಮೂಹವನ್ನು ಸೆಳೆಯುತ್ತಿದೆ.

ಲಾಕ್‌ಡೌನ್ ಪರಿಸ್ಥಿತಿಯ ನಂತರ ದಿನಗಳಲ್ಲಿ ಯುವಸಮೂಹದಲ್ಲಿ ಮನೆ ನಿರ್ಮಾಣಕ್ಕಾಗಿ ನಿವೇಶನದ ಮೇಲೆ ಹೂಡಿಕೆ ಮಾಡುವ ಮನೋಭಾವ ಹೆಚ್ಚಿದೆ. ಈ ವರ್ಗದಲ್ಲಿ ಹೆಚ್ಚಿನವರು ಈಗ ಮನೆ ಖರೀದಿ, ಸ್ಥಿರಾಸ್ತಿ ಮೇಲಿನ ಹೂಡಿಕೆಗೆ ಆಸಕ್ತಿ ತೋರಿದ್ದಾರೆ. ಯುವಸಮೂಹದ ಭಾವನೆಗಳ ಜೊತೆ ಮನೆ ಖರೀದಿ ಪ್ರಕ್ರಿಯೆಯಲ್ಲೂ ತೀವ್ರ ಬದಲಾವಣೆ ಕಂಡಿದೆ. ದೊಡ್ಡ ಪ್ರಮಾಣದ ಯುವಸಮೂಹವು 2 ಮತ್ತು 3ನೇ ಹಂತದ ನಗರಗಳಲ್ಲಿ ನಿವೇಶನ ಖರೀದಿಗೆ ಆಸಕ್ತಿ ತೋರುತ್ತಿದ್ದು, ದೊಡ್ಡ ಪ್ರಮಾಣದ ಬೇಡಿಕೆ ಇದೆ. ಜನದಟ್ಟಣೆಯ ನಗರಗಳಲ್ಲಿ ಇಕ್ಕಟ್ಟಿನ ಸ್ಥಳದ ಸಣ್ಣ ಅಪಾರ್ಟ್‌ಮೆಂಟ್‌ಗಿಂತಲೂ ದೀರ್ಘಾವಧಿಯಲ್ಲಿ ಹೆಚ್ಚಿನ ಲಾಭಕರ ಎಂಬ ಚಿಂತನೆಯೂ ಈ ಬೆಳವಣಿಗೆಗೆ ಕಾರಣ. ಬಳ್ಳಾರಿಯಂತ ನಗರದಲ್ಲಿ ಕಳೆದ ವರ್ಷದ ಇದೇ ಅವಧಿಗೆ ಹೋಲಿಕೆ ಮಾಡಿದಲ್ಲಿ ರಿಯಲ್ ಎಸ್ಟೇಟ್ ಮಾರುಕಟ್ಟೆಯಲ್ಲಿ ಶೇ 34ರಷ್ಟು ಪ್ರಗತಿ ಕಂಡುಬಂದಿದೆ. ಹೆಚ್ಚಿನ ಪ್ರಗತಿಯ ಭರವಸೆಯನ್ನು ನೀಡಿದೆ. ಈ ಕಾರಣದಿಂದಲೂ ಗಣನೀಯ ಆದಾಯವುಳ್ಳ ಯುವಜನರು ದೀರ್ಘಾವಧಿ ಹೂಡಿಕೆಯ ಭಾಗವಾಗಿ ಆಸ್ತಿಯನ್ನು ಖರೀದಿಗೆ ಆಸಕ್ತಿ ಹೊಂದಿದ್ದಾರೆ. ಮುಖ್ಯವಾಗಿ, ಅಭಿವೃದ್ಧಿ ಹೊಂದಿದ ಹಾಗೂ ಸೌಲಭ್ಯಗಳಿರುವ ನಿವೇಶನಗಳ ಮೇಲೆ ಈ ವರ್ಗ ಗಮನಹರಿಸಿದ್ದು, ಬಳ್ಳಾರಿಯಂತ ನಗರಗಳಲ್ಲಿ ಪ್ರಗತಿಗೂ ಕಾರಣವಾಗಿದೆ.

ದಕ್ಷಿಣ ಭಾರತದ 'ಉಕ್ಕಿನ ನಗರ' ಎಂದೇ ಹೆಸರಾಗಿರುವ ಬಳ್ಳಾರಿಯು ಕರ್ನಾಟಕದಲ್ಲಿ ಅತಿ ತ್ವರಿತಗತಿಯಲ್ಲಿ ಬೆಳೆಯುತ್ತಿರುವ ನಗರಗಳಲ್ಲಿ ಒಂದಾಗಿದೆ. ಕರ್ನಾಟಕದ ಪಶ್ಚಿಮ ಭಾಗದಲ್ಲಿ ಇರುವ ಈ ನಗರಕ್ಕೆ ಬೆಂಗಳೂರು-ಹೈದರಾಬಾದ್ ಹೆದ್ದಾರಿಯ ಮೂಲಕ ಸಂಪರ್ಕಕ್ಕೆ ಬರಲಿದೆ. ಈ ಹೆದ್ದಾರಿಯು ರಾಯಲಸೀಮಾ ಮತ್ತು ಕರ್ನಾಟಕದ ನಡುವೆ ಸಂಪರ್ಕವನ್ನು ಕಲ್ಪಿಸಲಿದೆ. ಪ್ರಾಕೃತಿಕ ಗಣಿ ಸಂಪತ್ತನ್ನು ಈ ನಗರವು ಹೊಂದಿದೆ. ಇದರ ಜೊತೆಗೆ ಪ್ರವಾಸೋದ್ಯಮ ಮತ್ತು ಜವಳಿ ಕ್ಷೇತ್ರದಲ್ಲಿಯೂ ಗಣನೀಯ ಪ್ರಗತಿ ಕಾಣುತ್ತಿದ್ದು, ಈ ವಲಯದಲ್ಲಿ ಹೂಡಿಕೆಗೆ ಅತ್ಯುತ್ತಮ ಅವಕಾಶಗಳನ್ನು ತೆರೆದಿದೆ. ಜಿಲ್ಲೆಯಲ್ಲಿ 18,000ಕ್ಕೂ ಹೆಚ್ಚು ಸಣ್ಣ, ಅತಿ ಸಣ್ಣ ಉದ್ದಿಮೆಗಳು, ಸುಮಾರು 700 ದೊಡ್ಡ ಮತ್ತು ಮಧ್ಯಮ ಗಾತ್ರದ ಉದ್ಯಮಗಳನ್ನು ಒಳಗೊಂಡಿದೆ. ಬಳ್ಳಾರಿ ನಗರವು ಪ್ರಗತಿಯ ಮುಂಚೂಣಿಯಲ್ಲಿದೆ. ಕಾಳು, ಎಣ್ಣೆಕಾಳುಗಳನ್ನು ಜಿಲ್ಲೆಯಲ್ಲಿ ಪ್ರಮುಖವಾಗಿ ಬೆಳೆಯಲಾಗುತ್ತದೆ. ಸಾಕ್ಷರತೆಯ ಪ್ರಮಾಣ ಶೇ 67 ಆಗಿದ್ದು, ಅನೇಕ ಎಂಜಿನಿಯರಿಂಗ್, ವೈದ್ಯಕೀಯ, ಪಾಲಿಟೆಕ್ನಿಕ್ ಶಿಕ್ಷಣ ಸಂಸ್ಥೆಗಳು ಇವೆ. ಅಭಿವೃದ್ಧಿ ಕ್ಷೇತ್ರಕ್ಕೆ ತರಬೇತಿ ಪಡೆದ ಸದೃಢ ಮತ್ತು ಪ್ರತಿವಾವಂತರನ್ನು, ವೃತ್ತಿಪರರನ್ನು ಜಿಲ್ಲೆ ನೀಡುತ್ತಿದೆ.





ಬಳ್ಳಾರಿಯ ಕೋಟೆ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ಸ್ಥಾಪನೆಗೂ ಯತ್ನ ನಡೆದಿದೆ. ರಸ್ತೆಯ ಮೂಲಕ ಜಿಲ್ಲೆಯು ಅತ್ಯುತ್ತಮ ಸಂಪರ್ಕ ಸೌಲಭ್ಯವನ್ನು ಹೊಂದಿದ್ದು, ಕರ್ನಾಟಕದ ವಿವಿಧ ಜಿಲ್ಲೆಗಳೇ ಅಲ್ಲದೆ ಆಂಧ್ರಪ್ರದೇಶ, ಮಹಾರಾಷ್ಟ್ರ, ಗೋವಾ ಜೊತೆಗೂ ಉತ್ತಮ ಸಂಪರ್ಕ ಸೌಲಭ್ಯವನ್ನು ಹೊಂದಿದೆ. ರಾಷ್ಟ್ರೀಯ ಹೆದ್ದಾರಿ 13, ರಾಷ್ಟ್ರೀಯ ಹೆದ್ದಾರಿ 63, ರಾಜ್ಯ ಹೆದ್ದಾರಿ 19, ರಾಜ್ಯ ಹೆದ್ದಾರಿ 132 ಜಿಲ್ಲೆಗೆ ಸಂಪರ್ಕ ಕಲ್ಪಿಸಲಿದ್ದು, ಭಾರತದ ವಿವಿಧ ರಾಜ್ಯಗಳ ಜೊತೆಗೂ ಸಂಪರ್ಕಕ್ಕೆ ಸಿಗಲಿದೆ. ಬಳ್ಳಾರಿಯು ನೈರುತ್ಯ ರೈಲ್ವೆ ವ್ಯಾಪ್ತಿಗೆ ಬರಲಿದ್ದು ಬೆಂಗಳೂರು, ಹೈದರಾಬಾದ್, ತಿರುಪತಿ, ಹುಬ್ಬಳ್ಳಿ, ರಾಯಚೂರು, ವಿಜಯವಾಡ, ಪುಣೆ ಮತ್ತು ಕೊಲ್ಹಾಪುರದ ನಡುವೆ ಉತ್ತಮ ರೈಲ್ವೆ ಸಂಪರ್ಕ ಸೌಲಭ್ಯವನ್ನು ಒಳಗೊಂಡಿದೆ. ಪ್ರಸ್ತುತ ಬಳ್ಳಾರಿಯಲ್ಲಿ ಎರಡು ಅಂದರೆ ಬಳ್ಳಾರಿ ಜಂಕ್ಷನ್ ಮತ್ತು ಕಂಟೋನ್ಮೆಂಟ್ ನಿಲ್ದಾಣಗಳು ಕಾರ್ಯನಿರ್ವಹಿಸುತ್ತಿವೆ.

ಯಾವುದೇ ಪ್ರಗತಿಶೀಲ ನಗರಕ್ಕೆ ಸಂಪರ್ಕ ಸೌಲಭ್ಯ ವರವಾಗಿದೆ. ಹೂಡಿಕೆದಾರರು, ವೃತ್ತಿಯಲ್ಲಿ ಅಭಿವೃದ್ಧಿ ಕಾಣ ಬಯಸುವವರು ಸಂಪರ್ಕವನ್ನೇ ಮೊದಲಿಗೆ ಅಳತೆಗೋಲಾಗಿ ಗಮನಿಸುತ್ತಾರೆ. ಅತ್ಯುತ್ತಮ ಸಂಪರ್ಕ ಸೌಲಭ್ಯ ಒಳಗೊಂಡ ನಗರವು ವಾಣಿಜ್ಯಾತ್ಮಕವಾಗಿ ಬೆಳವಣಿಗೆ ಕಾಣುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಈ ದೃಷ್ಟಿಯಿಂದ ಭವಿಷ್ಯದಲ್ಲಿ ಬಳ್ಳಾರಿ ಪ್ರಮುಖ ವಾಣಿಜ್ಯ ಕೇಂದ್ರವಾಗಿ ಮೂಡುವ ಭರವಸೆ ಮೂಡಿಸಿದೆ.

ಕರ್ನಾಟಕ ಸರ್ಕಾರವು ಕೈಗಾರಿಕಾ ಇಲಾಖೆಯ ಮೂಲಕ ಈ ಭಾಗದಲ್ಲಿ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಒತ್ತು ನೀಡಿದೆ. ಇವುಗಳಲ್ಲಿ ಆಗ್ರೊ, ತೋಟಗಾರಿಕೆ, ಪಶು ಸಂಗೋಪನಾ, ಮಿನರಲ್, ಜವಳಿ ಕ್ಷೇತ್ರಗಳು ಸೇರಿವೆ. ಅಲ್ಲದೆ, ಕರ್ನಾಟಕ ಸರ್ಕಾರವು ಇದರ ಜೊತೆಗೆ ಮೆಟಲ್, ಎಂಜಿನಿಯರಿಂಗ್, ಆಟೊಮೊಬೈಲ್, ಬಯೊಟೆಕ್ನಾಲಜಿ ಮತ್ತು ಕರಕುಶಲತೆ ಮತ್ತು ಕೈಮಗ ಕ್ಷೇತ್ರಗಳಿಗೂ ಸಂಬಂಧಿಸಿ ದಂತೆ ಹೂಡಿಕೆದಾರರನ್ನು ಆಕರ್ಷಿಸಲು ಒತ್ತು ನೀಡಿದೆ.

ಜೀವನಶೈಲಿಗೆ ವಿಸ್ತೃತವಾದ ಸ್ಥಳ, ನಿವೇಶನ ಅಗತ್ಯ ಎಂಬುದು ಇತ್ತೀಚಿನ ದಿನಗಳಲ್ಲಿ ಕಂಡುಬರುತ್ತಿರುವ ಬೆಳವಣಿಗೆ. ಡೆವಲಪರ್‌ಗಳು ಕೂಡಾ ಈ ಬೇಡಿಕೆಗೆ ಅನುಗುಣವಾಗಿಯೇ ನಿವೇಶನವನ್ನು ಒದಗಿಸಬೇಕಾಗಿದೆ. ಅಲ್ಲದೆ, ಅನೇಕ ಮಂದಿ ಸಣ್ಣ ವಿಸ್ತೀರ್ಣದ ನಿವೇಶನಗಳ ಮೇಲೆ ಹೂಡಿಕೆಗೂ ಆಸಕ್ತಿ ತಳೆದಿದ್ದಾರೆ. ಭವಿಷ್ಯದಲ್ಲಿ ಮನೆ ನಿರ್ಮಾಣ ಮಾಡಬಹುದು ಎಂಬುದು ಇದರ ಹಿಂದಿನ ಚಿಂತನೆ. ಇಂಥ ಮನೋಭಾವ ಇತ್ತೀಚಿಗೆ ಹೆಚ್ಚಾಗುತ್ತಿದೆ. ದೊಡ್ಡ ಪ್ರಮಾಣದಲ್ಲಿ ವೃತ್ತಿಪರರು, ಉದ್ಯಮಿಗಳು ಈಗ ಬಳ್ಳಾರಿಯಂತ ನಗರಗಳತ್ತ ತಮ್ಮ ಉದ್ದಿಮೆಯನ್ನು ವಿಸ್ತರಿಸಲು ಗಮನಹರಿಸುತ್ತಿದ್ದಾರೆ. ಈ ಮನೋಪ್ರವೃತ್ತಿಗೆ ಕಡಿಮೆ ದರ ಎಂಬುದು ಒಂದು ಕಾರಣವಾದರೆ, ಮೂಲಸೌಕರ್ಯಗಳ ಅಭಿವೃದ್ಧಿ ಆಗುತ್ತಿದೆ ಎಂಬ ಕಾರಣದಿಂದಲೂ ಬಳ್ಳಾರಿ ಅಭಿವೃದ್ಧಿಗೆ ಸೂಕ್ತವಾದ ಕೇಂದ್ರವಾಗಿದೆ.

ಬ್ಯಾಂಕ್‌ಗಳು ಈಗ ಕಳೆದ 2020ನೇ ಸಾಲಿನ ಕೊನೆಯ ತ್ರೈಮಾಸಿಕದಿಂದ ಅನ್ವಯವಾಗುಂತೆ ಗೃಹಸಾಲದ ಮೇಲಿನ ಬಡ್ಡಿ ದರವನ್ನು ಇಳಿಕೆ ಮಾಡಿದೆ. ಸಾಲ ಪಡೆಯುವವರಿಗೂ ಇದರ ಅನುಕೂಲ ವಿಸ್ತರಣೆಯಾಗಿದೆ. ಪರಿಣಾಮ, ಗೃಹ ಸಾಲಕ್ಕೂ ಬೇಡಿಕೆಯು ಹೆಚ್ಚಾಗಿದೆ. ಗೃಹ ಸಾಲದ ದರವು ಪ್ರಸ್ತುತ ಕಳೆದ 15 ವರ್ಷಗಳಲ್ಲಿಯೇ ಅತಿ ಕಡಿಮೆಯಾಗಿದೆ. ಅನೇಕ ದೊಡ್ಡ ಬ್ಯಾಂಕ್‌ಗಳು ಗೃಹ ಸಾಲದ ಮೇಲಿನ ಬಡ್ಡಿ ದರವನ್ನು 2021ರಲ್ಲಿ ಕಡಿಮೆ ಮಾಡಿದ್ದು, 2022ರಲ್ಲಿ ಇನ್ನಷ್ಟು ಕಡಿಮೆ ಮಾಡಿವೆ. ಇದರ ಜೊತೆಗೆ ಇನ್ನೂ ಕೆಲವು ಬ್ಯಾಂಕ್‌ಗಳು ಸೀಮಿತ ಅವಧಿಗೆ ಅನ್ವಯಿಸುವಂತೆ ವಿಶೇಷ ಬಡ್ಡಿ ದರದಲ್ಲಿ ಸಾಲ ಸೌಲಭ್ಯವನ್ನು ನೀಡುತ್ತಿವೆ.

ಕಡಿಮೆ ಬಡ್ಡಿ ದರದ ಗೃಹಸಾಲದ ಜೊತೆಗೆ, ತೆರಿಗೆದರ ರಿಯಾಯಿತಿಗೆ ಸಂಬಂಧಿಸಿದ ಆಕರ್ಷಕ ಸೌಲಭ್ಯಗಳು ಈಗ ಮನೆ ಖರೀದಿಗೆ ಸೂಕ್ತ ಕಾಲ ಎಂಬ ಸ್ಥಿತಿ ನಿರ್ಮಾಣ ಮಾಡಿವೆ. ಇದು ಕೂಡಾ ಒಟ್ಟಾರೆಯಾಗಿ ಬೇಡಿಕೆಯು ಗಣನೀಯವಾಗಿ ಏರಿಕೆ ಕಾಣಲು ಕಾರಣವಾಗಿದೆ. ಭವಿಷ್ಯದ ದೃಷ್ಟಿಯಿಂದ ಮನೆ ಖರೀದಿಸಲು ಬಯಸುವವರಿಗೆ ಬಳ್ಳಾರಿಯಲ್ಲಿ ಆಸ್ತಿ ಹೊಂದುವುದು ಹೆಚ್ಚು ಅಭ್ಯುದಯ ನೀಡಲಿದೆ.

ಕೆಎಫ್‌ಸಿಸಿ: ಭಾ.ಮ. ಹರೀಶ್ ಅಧ್ಯಕ್ಷ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ (ಕೆಎಫ್‌ಸಿಸಿ) ಅಧ್ಯಕ್ಷರಾಗಿ ನಿರ್ಮಾಪಕ ಭಾ.ಮ.ಹರೀಶ್ ಆಯ್ಕೆಯಾಗಿದ್ದಾರೆ. ಹರೀಶ್ ಅವರು ಸೇರಿದಂತೆ ಉಳಿದ ಪದಾಧಿಕಾರಿಗಳು ಭಾನುವಾರ ಅಧಿಕಾರ ಸ್ವೀಕರಿಸಿದರು.

ಶನಿವಾರ ಮಧ್ಯಾಹ್ನ 2ರಿಂದ ಸಂಜೆ 6ರವರೆಗೆ ರೇಸ್ ಕೋರ್ಸ್ ರಸ್ತೆಯಲ್ಲಿರುವ ಗುರುರಾಜ ಕಲ್ಯಾಣ ಮಂಟಪದಲ್ಲಿ 2022-23ನೇ ಸಾಲಿನ 64ನೇ ವರ್ಷದ ವಾರ್ಷಿಕ ಚುನಾವಣೆ ನಡೆದಿತ್ತು. ಶೇ 62 ರಷ್ಟು ಮತದಾನವಾಗಿತ್ತು. ಶನಿವಾರ ತಡರಾತ್ರಿ ಫಲಿತಾಂಶ ಹೊರಬಿದ್ದಿದೆ. ಮತದಾನಕ್ಕೂ ಮುನ್ನ ಅಧ್ಯಕ್ಷ ಸ್ಥಾನಕ್ಕೆ ನಿರ್ಮಾಪಕರಾದ ಸಾ.ರಾ.ಗೋವಿಂದು ಹಾಗೂ ಭಾ.ಮ.ಹರೀಶ್ ಅವರ ನಡುವೆ ತೀವ್ರ ಪೈಪೋಟಿಯಿದ್ದಂತೆ ಕಂಡುಬಂದಿತ್ತು. ಆದರೆ ಭಾ.ಮ.ಹರೀಶ್ 781 ಮತ ಪಡೆದು, 403 ಮತಗಳ ಅಂತರದಿಂದ ಗೆಲುವು ಸಾಧಿಸಿದರು.

ಉಪಾಧ್ಯಕ್ಷ ಸ್ಥಾನಕ್ಕೆ ನಿರ್ಮಾಪಕ ವಲಯದಿಂದ ನಟ ಜೈಜಗದೀಶ್, ವಿತರಕ ವಲಯದಿಂದ ಶ್ರೀನಿವಾಸ್ ಎಚ್‌.ಸಿ (ಶಿಲ್ಪಾ ಶ್ರೀನಿವಾಸ್) ಆಯ್ಕೆಯಾದರು. ಗೌರವ ಕಾರ್ಯದರ್ಶಿ ಸ್ಥಾನಕ್ಕೆ ನಿರ್ಮಾಪಕ ವಲಯದಿಂದ ಸುಂದರ್ ರಾಜನ್ ಎಂ.ಕೆ. (ಸುಂದರ್‌ರಾಜ್), ಪ್ರದರ್ಶಕ ವಲಯದಿಂದ ಕುಶಾಲ್ ಎಲ್‌.ಸಿ. ಚುನಾಯಿತರಾದರು. ಖಜಾಂಚಿಯಾಗಿ ಟಿ.ಪಿ.ಸಿದ್ಧರಾಜು (ದುನಿಯಾ) ಆಯ್ಕೆಯಾದರು. ಪ್ರದರ್ಶಕರ ವಲಯದಿಂದ ಉಪಾಧ್ಯಕ್ಷ ಸ್ಥಾನಕ್ಕೆ ಇಬ್ಬರು ಸ್ಪರ್ಧಿಸಿದ್ದು, ಈ ಪೈಕಿ ರಂಗಪ್ಪ ಎನ್ನುವವರು ನ್ಯಾಯಾಲಯದಿಂದ ತಡೆ ತಂದಿರುವ ಕಾರಣ ಈ ಫಲಿತಾಂಶವನ್ನು ಘೋಷಿಸಿಲ್ಲ. ವಿತರಕ ವಲಯದಿಂದ ಗೌರವ ಕಾರ್ಯದರ್ಶಿ ಸ್ಥಾನಕ್ಕೆ ನಡೆದ ಮತದಾನದ ಮರುಎಣಿಕೆಗೆ ಅಭ್ಯರ್ಥಿಯೊಬ್ಬರು ಅಪೇಕ್ಷಿಸಿದ ಕಾರಣ, ಈ ಸ್ಥಾನವನ್ನು ಘೋಷಿಸಿಲ್ಲ.

ಕೋವಿಡ್ ಸಾಂಕ್ರಾಮಿಕ, ಲೆಕ್ಕಪತ್ರಗಳ ನಿರ್ವಹಣೆ, ಹಾಲಿ ಆಡಳಿತ ಮಂಡಳಿಯ ವಿರುದ್ಧದ ವಿವಿಧ ಆರೋಪಗಳ ತನಿಖೆ ಹಾಗೂ ಮತ್ತಿತರರ ಕಾರಣದಿಂದಾಗಿ ಕಳೆದ ಎರಡು ವರ್ಷದಿಂದ ಚುನಾವಣೆ ಮುಂದಕ್ಕೆ ಹೋಗಿತ್ತು. 2019ರಲ್ಲಿ ಪ್ರದರ್ಶಕರ ವಲಯಕ್ಕೆ ಮೀಸಲಾಗಿದ್ದ ಮಂಡಳಿಯ ಅಧ್ಯಕ್ಷ ಸ್ಥಾನಕ್ಕೆ ಡಿ.ಆರ್. ಜೈರಾಜ್ ಅವಿರೋಧವಾಗಿ ಆಯ್ಕೆಯಾಗಿದ್ದರು. ಈ ಬಾರಿಯ ಅಧ್ಯಕ್ಷ ಸ್ಥಾನ ನಿರ್ಮಾಪಕರ ವಲಯಕ್ಕೆ ಮೀಸಲಾಗಿತ್ತು. ಚುನಾವಣಾಧಿಕಾರಿಯಾಗಿ ಮಂಡಳಿಯ ಮಾಜಿ ಅಧ್ಯಕ್ಷ ಥಾಮಸ್ ಡಿಸೋಜ ಮತದಾನ ಪ್ರಕ್ರಿಯೆ ನಡೆಸಿಕೊಟ್ಟರು. ಮತಪತ್ರ ಬಳಸಿ ಮತದಾನ ನಡೆದಿತ್ತು.



ಕೆಎಫ್‌ಸಿಸಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಭಾ.ಮ.ಹರೀಶ್ ಅವರನ್ನು ಪದಾಧಿಕಾರಿಗಳು ಸನ್ಮಾನಿಸಿದರು. ಮಂಡಳಿಯ ಗೌರವ ಕಾರ್ಯದರ್ಶಿ ಕುಶಾಲ್ ಎಲ್‌.ಸಿ, ಖಜಾಂಚಿ ಟಿ.ಪಿ.ಸಿದ್ಧರಾಜು, ಗೌರವ ಕಾರ್ಯದರ್ಶಿ ಸುಂದರ್ ರಾಜ್, ಉಪಾಧ್ಯಕ್ಷರಾದ ಜೈಜಗದೀಶ್, ಶಿಲ್ಪಾ ಶ್ರೀನಿವಾಸ್ ಇದ್ದಾರೆ.

ರಾಜ್ಯಕ್ಕೆ ಒಂದೇ ಮಂಡಳಿ ಇರಬೇಕು

ಈ ಗೆಲುವನ್ನು ನಿರೀಕ್ಷಿಸಿದ್ದೆ. ಹೊಸ ತಂಡವನ್ನು ಸದಸ್ಯರು ಬಯಸಿದ್ದರು. ಮನಃಸ್ತಾಪದಿಂದ ರಾಜ್ಯದಲ್ಲಿ ಹಲವು ಚಲನಚಿತ್ರ ವಾಣಿಜ್ಯ ಮಂಡಳಿಗಳು ಆಗಿವೆ. ರಾಜ್ಯಕ್ಕೆ ಒಂದೇ ಒಂದು ಮಂಡಳಿ ಇರಬೇಕು. ಎಲ್ಲರನ್ನೂ ಕರೆದು ಮಾತನಾಡಿಸಿ ಒಂದುಗೂಡಿಸುವ ಪ್ರಯತ್ನವನ್ನು ನಮ್ಮ ತಂಡ ಮಾಡಲಿದೆ. ಹಿರಿಯರ ಮಾರ್ಗದರ್ಶನ, ಸಲಹೆ ತೆಗೆದುಕೊಂಡು ಈ ಬಗ್ಗೆ ಹೆಜ್ಜೆ ಇಡುತ್ತೇವೆ. ಮಂಡಳಿಯಲ್ಲಿ ಯಾವುದೇ ಲೋಪದೋಷಗಳು ಆಗಬಾರದು ಎನ್ನುವ ಉದ್ದೇಶವಿಟ್ಟುಕೊಂಡೇ ನಮ್ಮ ತಂಡ ಕಾರ್ಯನಿರ್ವಹಿಸಲಿದೆ. ಎಚ್ಚರಿಕೆಯಿಂದ ಹೆಜ್ಜೆ ಇಡಲಿದ್ದೇವೆ. ಈ ಹಿಂದಿನ ಆಡಳಿತ ವ್ಯವಸ್ಥೆಯಲ್ಲಿ ಆಗುತ್ತಿದ್ದ ಅವ್ಯವಹಾರಗಳ ಬಗ್ಗೆ ಸದಸ್ಯರು ನೀಡಿದ್ದ ದೂರನ್ನು ನಾವು ಚರ್ಚೆ ಮಾಡಿದ್ದೇವೆ ವಿನಃ ನಮ್ಮ ವಿರುದ್ಧ ತಂಡದ ಮೇಲೆ ಆರೋಪ ಮಾಡಿಲ್ಲ. ನಡೆದಿರುವ ಅವ್ಯವಹಾರಗಳ ಬಗ್ಗೆ ಏನು ಕ್ರಮ ಕೈಗೊಳ್ಳಬೇಕು ಎನ್ನುವುದನ್ನು ಕಾರ್ಯಕಾರಿ ಸಮಿತಿ ಮುಂದೆ ಚರ್ಚಿಸಿ ನಿರ್ಧಾರ ಕೈಗೊಳ್ಳುತ್ತೇವೆ.

-ಭಾ.ಮ.ಹರೀಶ್, ಕೆಎಫ್‌ಸಿಸಿ ಅಧ್ಯಕ್ಷ

'ಹರಿಯಾಣದಲ್ಲೂ ಶಾಲೆ, ಆಸ್ಪತ್ರೆ ಅಭಿವೃದ್ಧಿ'

ಕುರುಕ್ಷೇತ್ರ, ಹರಿಯಾಣ (ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿಯಂತೆ ಹರಿಯಾಣದಲ್ಲಿಯೂ ಸರ್ಕಾರಿ ಶಾಲೆ ಮತ್ತು ಆಸ್ಪತ್ರೆಗಳನ್ನು ಅಭಿವೃದ್ಧಿಗೊಳಿಸುವುದಾಗಿ ಎಎಪಿ ರಾಷ್ಟ್ರೀಯ ಸಂಚಾಲಕ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಭರವಸೆ ನೀಡಿದರು.

ಭಾನುವಾರ ಕುರುಕ್ಷೇತ್ರದಲ್ಲಿ ಆಮ್ ಆದ್ಮಿ ಪಕ್ಷದ ಮೊದಲ ರಾಜ್ಯ ಮಟ್ಟದ ರ‍್ಯಾಲಿ ಉದ್ದೇಶಿಸಿದ ಮಾತನಾಡಿದ ಅವರು, ಮುಂದಿನ ತಿಂಗಳು ನಡೆಯುವ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಪಕ್ಷಕ್ಕೆ ಬೆಂಬಲ ನೀಡುವಂತೆ ಜನರಲ್ಲಿ ಮನವಿ ಮಾಡಿದರು.

ಪಂಜಾಬ್‌ನಲ್ಲಿ ಭ್ರಷ್ಟಾಚಾರ ಪ್ರಕರಣದಲ್ಲಿ ವಿಜಯ್ ಸಿಂಗ್ಲಾ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಿದ್ದನ್ನು ಉಲ್ಲೇಖಿಸಿ, 'ದೆಹಲಿ ಮತ್ತು ಪಂಜಾಬ್‌ನಲ್ಲಿ ಭ್ರಷ್ಟಾಚಾರಕ್ಕೆ ಅಂತ್ಯ ಹಾಡಿದ್ದೇವೆ. ಹರಿಯಾಣದಲ್ಲೂ ಭ್ರಷ್ಟಾಚಾರ ತೊಲಗಿಸುತ್ತೇವೆ' ಎಂದರು.

2024ರ ಚುನಾವಣೆಯಲ್ಲಿ ಹರಿಯಾಣದಲ್ಲಿ ಎಎಪಿ ಅಧಿಕಾರಕ್ಕೆ ಬಂದರೆ 24 ಗಂಟೆ ವಿದ್ಯುತ್ ನೀಡುವುದಾಗಿ ಆಶ್ವಾಸನೆ ನೀಡಿದರು.

ವಿವಾದಾತ್ಮಕ ಹೇಳಿಕೆಗೆ ಚಂದ್ರಕಾಂತ್ ಕ್ಷಮೆ

ಮುಂಬೈ(ಪಿಟಿಐ): ಮಹಾರಾಷ್ಟ್ರದ ಎನ್‌ಸಿಪಿ ಸಂಸದೆ ಸುಪ್ರಿಯಾ ಸುಳೆ ಕುರಿತಾಗಿ ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಚಂದ್ರಕಾಂತ್ ಪಾಟೀಲ್ ಅವರು 'ಮನೆಗೆ ಹೋಗಿ ಅಡುಗೆ ಮಾಡಿಕೊಂಡಿರಿ' ಎಂಬ ವಿವಾದಾತ್ಮಕ ಹೇಳಿಕೆಯನ್ನು ಭಾನುವಾರ ಹಿಂಪಡೆದಿದ್ದಾರೆ.

ಈ ಹೇಳಿಕೆ ಸಂಬಂಧ ರಾಜ್ಯ ಮಹಿಳಾ ಆಯೋಗವು ಪಾಟೀಲ್‌ಗೆ ನೋಟಿಸ್ ನೀಡಿತ್ತು. ಇದರ ಬೆನ್ನಲ್ಲೇ, ಪಾಟೀಲ್ ಅವರು ತಮ್ಮ ಹೇಳಿಕೆಗೆ ಕ್ಷಮೆ ಕೋರಿದ್ದಾರೆ ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರು ತಿಳಿಸಿದ್ದಾರೆ.

ಈ ಸಂಬಂಧ ಪ್ರತಿಕ್ರಿಯಿಸಿದ ಸುಳೆ ಅವರು, 'ತಮ್ಮ ಹೇಳಿಕೆಗೆ ಕ್ಷಮೆ ಕೇಳುವ ಮೂಲಕ ಪಾಟೀಲ್ ಅವರು ಹೃದಯ ವೈಶಾಲ್ಯತೆ ಮೆರೆದಿದ್ದಾರೆ. ಅಲ್ಲದೆ, ಈ ವಿಚಾರವನ್ನು ಇಲ್ಲಿಗೇ ಬಿಟ್ಟುಬಿಡಿ' ಎಂದು ಕೋರಿದರು.

ಒಬಿಸಿಗಳಿಗೆ ಮೀಸಲಾತಿ ಕಲ್ಪಿಸಿ. ಸಂಸದೆಯಾಗಿದ್ದರೂ, ಮುಖ್ಯಮಂತ್ರಿ ಅವರ ಭೇಟಿಗೆ ಸಮಯಾವಕಾಶ ಕೋರಲು ಗೊತ್ತಿಲ್ಲ ಎಂದರೆ ಹೇಗೆ? ಮನೆಗೆ ಹೋಗಿ ಅಡುಗೆ ಮಾಡಿಕೊಂಡಿರಿ' ಎಂದು ಪಾಟೀಲ್ ಅವರು ಈಚೆಗೆ ಹೇಳಿದ್ದರು.

16 ಅಭ್ಯರ್ಥಿಗಳ ಹೆಸರು ಪ್ರಕಟಿಸಿದ ಬಿಜೆಪಿ

ನವದೆಹಲಿ (ಪಿಟಿಐ): ಕೇಂದ್ರ ಸಚಿವ ಪೀಯೂಷ್ ಗೋಯಲ್ ಅವರಿಗೆ ರಾಜ್ಯ ಸಭೆಗೆ ಸ್ಪರ್ಧಿಸಲು ಮಹಾರಾಷ್ಟ್ರದಿಂದ ಬಿಜೆಪಿ ಟಿಕೆಟ್ ನೀಡಿದೆ. ಜತೆಗೆ ರಾಜ್ಯಸಭೆ ಚುನಾವಣೆಗೆ 16 ಅಭ್ಯರ್ಥಿಗಳ ಪಟ್ಟಿಯನ್ನು ಬಿಜೆಪಿ ಭಾನುವಾರ ಪ್ರಕಟಿಸಿದೆ. ಇದರಲ್ಲಿ ಆರು ಅಭ್ಯರ್ಥಿಗಳು ಉತ್ತರ ಪ್ರದೇಶದವರು.

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರಾದ ಗೋಯಲ್ ಮತ್ತು ಅನಿಲ್ ಸುಖದೇವ್ ರಾವ್ ಬೋಂಡೆ ಅವರನ್ನು ಮಹಾರಾಷ್ಟ್ರದಿಂದ ಕಣಕ್ಕೆ ಇಳಿಸಲಾಗುವುದು ಎಂದು ಬಿಜೆಪಿ ಪ್ರಕಟಣೆ ತಿಳಿಸಿದೆ.

ಕರ್ನಾಟಕ, ಮಹಾರಾಷ್ಟ್ರ ಮತ್ತು ಬಿಹಾರದಿಂದ ತಲಾ ಇಬ್ಬರು, ಮಧ್ಯಪ್ರದೇಶ, ರಾಜಸ್ಥಾನ, ಉತ್ತರಾಖಂಡ ಹಾಗೂ ಹರಿಯಾಣದಿಂದ ತಲಾ ಒಬ್ಬ ಅಭ್ಯರ್ಥಿ ಹೆಸರನ್ನು ಪಕ್ಷ ಘೋಷಿಸಿದೆ. ಹರಿಯಾಣದಿಂದ ಮಾಜಿ ಶಾಸಕ ಕ್ರಿಶನ್ ಲಾಲ್ ಪನ್ವಾರ್, ಮಧ್ಯಪ್ರದೇಶದಿಂದ ಕವಿತಾ ಪಾಟೀದಾರ್, ರಾಜಸ್ಥಾನದಿಂದ ಘನಶ್ಯಾಮ್ ತಿವಾರಿ, ಉತ್ತರಾಖಂಡದಿಂದ ಕಲ್ಪನಾ ಸೈನಿ, ಬಿಹಾರದಿಂದ ಸತೀಶ್ ಚಂದ್ರ ದುಬೆ ಮತ್ತು ಶಂಭು ಶರಣ್ ಪಟೇಲ್ ಅವರನ್ನು ಕಣಕ್ಕಿಳಿಸಿದೆ.

ಉತ್ತರ ಪ್ರದೇಶದಿಂದ, ರಾಜ್ಯ ಘಟಕದ ಅಧ್ಯಕ್ಷ ಲಕ್ಷ್ಮೀಕಾಂತ್ ವಾಜಪೇಯಿ, ಹಾಲಿ ರಾಜ್ಯಸಭಾ ಸದಸ್ಯ ಸುರೇಂದ್ರ ಸಿಂಗ್ ನಗರ್ ಮತ್ತು ಉತ್ತರ ಪ್ರದೇಶದ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಅಧ್ಯಕ್ಷ ಬೌಬುರಾಮ್ ನಿಶಾದ್ ಅವರನ್ನು ಕೂಡ ಕಣಕ್ಕಿಳಿಸಿದೆ. ಅಲ್ಲದೆ, ಇಬ್ಬರು ಮಹಿಳೆಯರಿಗೂ ಅವಕಾಶ ನೀಡಿದೆ. ಪಕ್ಷದ ರಾಜ್ಯ ಮಹಿಳಾ ವಿಭಾಗದ ಮಾಜಿ ಅಧ್ಯಕ್ಷೆ ದರ್ಶನಾ ಸಿಂಗ್ ಮತ್ತು ಗೋರಖ್‌ಪುರದ ಚೌರಿ ಚೌರಾ ಕ್ಷೇತ್ರದ ಮಾಜಿ ಶಾಸಕಿ ಸಂಗೀತಾ ಯಾದವ್ ಅವರನ್ನು ರಾಜ್ಯದಿಂದ ಕಣಕ್ಕಿಳಿಸಿದೆ.

ರಾಜ್ಯಸಭೆ ಸದಸ್ಯತ್ವದ ಅವಧಿ ಕೊನೆಗೊಳ್ಳುತ್ತಿರುವ ಕೇಂದ್ರ ಸಚಿವರಾದ ಮುಕ್ತಾರ್ ಅಬ್ಬಾಸ್ ನಖ್ವಿ ಮತ್ತು ವಿನಯ್ ಸಹಸ್ರಬುದ್ಧೆ ಹಾಗೂ ಹರಿಯಾಣದಿಂದ ರಾಜ್ಯಸಭೆ ಸದಸ್ಯರಾಗಿದ್ದ ಬಿಜೆಪಿ ಪ್ರಧಾನ ಕಾರ್ಯದರ್ಶಿ ದುಷ್ಯಂತ್ ಗೌತಮ್ ಅವರ ಹೆಸರು ಅಭ್ಯರ್ಥಿಗಳ ಮೊದಲ ಪಟ್ಟಿಯಲ್ಲಿ ಇಲ್ಲ.

ರಾಜ್ಯಸಭೆಗೆ ನಿರ್ಮಲಾ, ಜಗ್ಗೇಶ್, ಜೈರಾಂ ರಮೇಶ್

ಒಂದನೇ ಪುಟದಿಂದ

ಜಗ್ಗೇಶ್ ಅವರ ಹೆಸರು ಶಿಫಾರಸು ಪಟ್ಟಿಯಲ್ಲಿರಲಿಲ್ಲ. ಆದರೆ, ಕೊನೆಯ ಕ್ಷಣಗಳಲ್ಲಿ ಬಿಜೆಪಿ ವರಿಷ್ಠರು ಜಗ್ಗೇಶ್ ಅವರನ್ನು ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿದ್ದಾರೆ. ಚುನಾವಣೆಯಲ್ಲಿ ಅಭ್ಯರ್ಥಿಯಾಗುವುದಿಲ್ಲ ಎಂದು ಸುರಾನಾ ಅವರು ಪಕ್ಷದ ನಾಯಕರಿಗೆ ತಿಳಿಸಿದ್ದರು.

ನಿರ್ಮಲಾ ಅವರು ಸೋಮವಾರ ಬೆಂಗಳೂರಿಗೆ ಬರಲಿದ್ದಾರೆ. ಆ ಬಳಿಕ ಬಿಜೆಪಿಯ ಇಬ್ಬರೂ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.


ಒಕ್ಕಲಿಗರಿಗೆ ಪ್ರಾತಿನಿಧ್ಯ: ಒಕ್ಕಲಿಗರಿಗೆರಾಜಕೀಯ ಪ್ರಾತಿನಿಧ್ಯ ನೀಡುವ ಉದ್ದೇಶದಿಂದ ಜಗ್ಗೇಶ್ ಅವರನ್ನು ರಾಜ್ಯಸಭೆಗೆ ಕಳುಹಿಸುವ ತೀರ್ಮಾನವನ್ನು ಬಿಜೆಪಿ ವರಿಷ್ಠರು ಕೈಗೊಂಡಿದ್ದಾರೆ. ಈ ಕಾರಣಕ್ಕಾಗಿಯೇ ರಾಜ್ಯದಿಂದ ರವಾನೆಯಾದ ಪಟ್ಟಿಯಲ್ಲಿ ಹೆಸರು ಇಲ್ಲದಿದ್ದರೂ ಅವರಿಗೆ ಟಿಕೆಟ್ ನೀಡುವ ತೀರ್ಮಾನವನ್ನು ಕೈಗೊಳ್ಳಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಇತ್ತೀಚೆಗೆ ನಡೆದ ವಿಧಾನ ಪರಿಷತ್ ಚುನಾವಣೆ, ರಾಜ್ಯಸಭೆ ಚುನಾವಣೆ, ನಾಮನಿರ್ದೇಶನ ಪ್ರಕ್ರಿಯೆಗಳಲ್ಲಿ ಒಕ್ಕಲಿಗ ಸಮುದಾಯದವರಿಗೆ ಅವಕಾಶ ಕಲ್ಪಿಸಿರಲಿಲ್ಲ. ಲಿಂಗಾಯತರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದವರಿಗೆ ಅವಕಾಶ ನೀಡಲಾಗಿತ್ತು. ಈ ಬಾರಿ ಒಕ್ಕಲಿಗರಿಗೆ ಅವಕಾಶ ನೀಡುವ ತೀರ್ಮಾನವನ್ನು ಪಕ್ಷದ ವರಿಷ್ಠರು ಮಾಡಿದ್ದಾರೆ ಎಂದು ಬಿಜೆಪಿ ನಾಯಕರೊಬ್ಬರು ತಿಳಿಸಿದರು.

ಜಗ್ಗೇಶ್ ಗಂಗಟಕಾರ ಒಕ್ಕಲಿಗ ಸಮುದಾಯಕ್ಕೆ ಸೇರಿದವರು. ಬಿಎಸ್ಸಿ ಪದವೀಧರರಾಗಿರುವ ಅವರು 1980ರಿಂದಲೂ ಚಿತ್ರರಂಗದಲ್ಲಿದ್ದಾರೆ. ಮೊದಲು ಕಾಂಗ್ರೆಸ್ ಪಕ್ಷದಲ್ಲಿದ್ದರು. ತುರುವೇಕೆರೆ ವಿಧಾನಸಭಾ ಕ್ಷೇತ್ರದಿಂದ ಒಂದು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ನಂತರ ಬಿಜೆಪಿ ಸೇರಿ ಒಂದು ಅವಧಿಗೆ ವಿಧಾನ ಪರಿಷತ್ ಸದಸ್ಯರಾಗಿದ್ದರು. ಸದ್ಯ ಬಿಜೆಪಿಯ ರಾಜ್ಯ ವಕ್ತಾರರಾಗಿದ್ದಾರೆ.

ಜೈರಾಂಗೆ ಮತ್ತೊಂದು ಅವಕಾಶ: 2004 ರಿಂದಲೂ ರಾಜ್ಯಸಭೆಯ ಸದಸ್ಯರಾಗಿರುವ ಜೈರಾಂ ರಮೇಶ್ ಅವರನ್ನು ಮತ್ತೊಂದು ಅವಧಿಗೆ ಆಯ್ಕೆ ಮಾಡುವ ನಿರ್ಧಾರವನ್ನು ಕಾಂಗ್ರೆಸ್ ಕೈಗೊಂಡಿದೆ. ಚಿಕ್ಕಮಗಳೂರಿನವರಾದ ಜೈರಾಂ, 2004 ಮತ್ತು 2010 ರಲ್ಲಿ ನೆರೆಯ ಆಂಧ್ರಪ್ರದೇಶದಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದರು. 2016 ರಲ್ಲಿ ರಾಜ್ಯ ವಿಧಾನಸಭೆಯಿಂದ ಆಯ್ಕೆ ಮಾಡಲಾಗಿತ್ತು. ಜೈರಾಂ ಅವರನ್ನು ಮತ್ತೊಂದು ಅವಧಿಗೆ ಆಯ್ಕೆ ಮಾಡುವುದನ್ನು ಕಾಂಗ್ರೆಸ್‌ನ ಕೆಲವು ಮುಖಂಡರು ವಿರೋಧಿಸಿದ್ದರು.

ಕಾಂಗ್ರೆಸ್, ಭಾನುವಾರ ರಾತ್ರಿ ಅಧಿಕೃತವಾಗಿ ಅಭ್ಯರ್ಥಿಯ ಹೆಸರನ್ನು ಪ್ರಕಟಿಸಿತು. ಮೇ 30 ರಂದು (ಸೋಮವಾರ) ಬೆಳಿಗ್ಗೆ 10 ಗಂಟೆಗೆ ಜೈರಾಂ ರಮೇಶ್ ರಾಜ್ಯಸಭೆ ಚುನಾವಣೆಗೆ ಪಕ್ಷದ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.



ಸುಭಾಷಿತ

ಕತ್ತಲನ್ನು ಶಪಿಸಬೇಡಿ. ಬದಲಾಗಿ, ದೀಪವನ್ನು ಬೆಳಗಿ.
–ಕನ್‌ಫ್ಯೂಷಿಯಸ್

ಕಾಲೇಜುಗಳಲ್ಲಿ ಕೋಚಿಂಗ್ ಹೊರೆ ಮಾನವೀಯಗೊಳಿಸಲು ಸಕಾಲ

[illegible]



ವಿದ್ಯಾರ್ಥಿಗಳಿಗೆ ಕಲಿಕೆಯು ಶಿಕ್ಷೆಯಾಗಿ ಪರಿಣಮಿಸದಂತೆ ಸರ್ಕಾರ, ಶಿಕ್ಷಣ ಸಂಸ್ಥೆಗಳು ಹಾಗೂ ಪೋಷಕರು ಒಟ್ಟಾಗಿ ಕಾರ್ಯನಿರ್ವಹಿಸಬೇಕಾಗಿದೆ

[illegible] ಸಾಧ್ಯವಾಗಬೇಕು. ವೈಜ್ಞಾನಿಕ ನೆಲೆಗಟ್ಟಿನಲ್ಲಿ 'ಇಂಟಿಗ್ರೇಟೆಡ್ ಕೋಚಿಂಗ್'ಗೆ ಅವಕಾಶ ಕಲ್ಪಿಸುವ ದಿಸೆಯಲ್ಲಿ ಸರ್ಕಾರ ಸ್ಪಷ್ಟ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಬಹುದು ಹಾಗೂ ಅವು ಕಟ್ಟುನಿಟ್ಟಾಗಿ ಜಾರಿಗೊಳ್ಳುವಂತೆ ಕ್ರಮ ಕೈಗೊಳ್ಳಬಹುದು. ಅಧ್ಯಾಪಕರ ಕೊರತೆಯನ್ನು ನೀಗಿಸುವುದು ಹಾಗೂ ಉತ್ತಮ ಮೂಲ ಸೌಕರ್ಯಗಳನ್ನು ಒದಗಿಸುವ ಮೂಲಕ ಸರ್ಕಾರಿ ಕಾಲೇಜುಗಳನ್ನು ಬಲಪಡಿಸುವ ಕೆಲಸವೂ ನಡೆಯಬೇಕು. ವಿದ್ಯಾರ್ಥಿಗಳಿಗೆ ಕಲಿಕೆಯು ಶಿಕ್ಷೆಯಾಗಿ ಪರಿಣಮಿಸದಂತೆ ನೋಡಿಕೊಳ್ಳುವ ದಿಸೆಯಲ್ಲಿ ಸರ್ಕಾರ, ಶಿಕ್ಷಣ ಸಂಸ್ಥೆಗಳು ಹಾಗೂ ಪೋಷಕರು ಒಟ್ಟಾಗಿ ಕಾರ್ಯನಿರ್ವಹಿಸಬೇಕಾಗಿದೆ.

ದಿನದ ಟ್ವೀಟ್

ತನಿಖೆ ನಡೆಯಲಿ



ಪಂಜಾಬ್‌ನ ಎಎಪಿ ನೇತೃತ್ವದ ಸರ್ಕಾರವು ಭದ್ರತೆ ವಾಪಸ್ ಪಡೆದಿರುವ ಗಣ್ಯರ ಗೋಪ್ಯ ಯಾದಿಯನ್ನು ಯಾರು, ಹೇಗೆ ಸೋರಿಕೆ ಮಾಡಿದರು ಎಂಬ ಬಗ್ಗೆ ಕೇಂದ್ರ ಗೃಹ ಸಚಿವಾಲಯ ತನಿಖೆಗೆ ಆದೇಶಿಸಬೇಕು ಎಂದು ಒತ್ತಾಯಿಸುತ್ತೇನೆ. ಸಿಧು ಮೂಸೆವಾಲಾ ಅವರಿಗೆ ನೀಡಲಾಗಿದ್ದ ಭದ್ರತೆಯನ್ನು ಶನಿವಾರ ವಾಪಸ್ ಪಡೆಯಲಾಗಿತ್ತು. ಅವರ ಬರ್ಬರ ಹತ್ಯೆಗೆ ಅರವಿಂದ ಕೇಜ್ರಿವಾಲ್ ಮತ್ತು ಭಗವಂತ ಮಾನ್ ಅವರೇ ಹೊಣೆ.

ಮಂಜಿಂದರ್ ಸಿಂಗ್ ಸಿರ್ಸಾ, ಬಿಜೆಪಿ ಮುಖಂಡ

ಕಿಡಿನುಡಿ



ಭಾರತದ ಜನರು ನಾಚಿಕೆಯಿಂದ ತಲೆತಗ್ಗಿಸುವಂತಹ ಯಾವುದೇ ಕೆಲಸವನ್ನೂ ಈ ಎಂಟು ವರ್ಷಗಳಲ್ಲಿ ತಮ್ಮ ನೇತೃತ್ವದ ಸರ್ಕಾರ ಮಾಡಿಲ್ಲ ಎಂದು ಪ್ರಧಾನಿ ಹೇಳುತ್ತಾರೆ. ವಿನಾಶಕಾರಿಯಾದ ನೋಟು ರದ್ದತಿ ಪ್ರಕರಣ ನೆನಪಿದೆಯೇ? ಕಳೆದ ಬೇಸಿಗೆಯಲ್ಲಿ ಬಂದ ಡೆಲ್ಟಾ ಅಲೆಯನ್ನು (ಕೋವಿಡ್– 19 ಎರಡನೇ ಅಲೆ) ಅತ್ಯಂತ ಕೆಟ್ಟದಾಗಿ ನಿರ್ವಹಿಸಿದ್ದು ನೆನಪಿದೆಯೇ?

ತವ್ಲೀನ್ ಸಿಂಗ್, ಲೇಖಕಿ

25 ವರ್ಷಗಳ ಹಿಂದೆ

ಶುಕ್ರವಾರ, 30-5-1997

• ಭ್ರಷ್ಟಾಚಾರ ತನಿಖೆಗೆ ವಿಶೇಷ ಕೋರ್ಟ್

ಬರೇಲಿ, ಮೇ 29(ಪಿಟಿಐ)– ದೇಶದಲ್ಲಿ ವ್ಯಾಪಕವಾಗಿ ಹರಡಿರುವ ಭ್ರಷ್ಟಾಚಾರವು ಅಭಿವೃದ್ಧಿಗೆ ಅಡಚಣೆ ಉಂಟು ಮಾಡುತ್ತಿದೆ. ವಿಚಾರಣೆ ಬಾಕಿ ಇರುವ ಭ್ರಷ್ಟಾಚಾರ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವುದು ಒಳಿತೆಂದು ಪ್ರಧಾನಿ ಐ.ಕೆ. ಗುಜ್ರಾಲ್ ಅವರು ಅಭಿಪ್ರಾಯಪಟ್ಟಿದ್ದಾರೆ.

'ರಾಜಕಾರಣಿ ಹಾಗೂ ಅಪರಾಧಿಗಳ ನಡುವಿನ ಅಪವಿತ್ರ ಮೈತ್ರಿ ಸಡಿಲಿಸುವುದು ಈಗ ಅತ್ಯಗತ್ಯವಾಗಿದೆ. ನಾನೊಬ್ಬನೇ ಭ್ರಷ್ಟಾಚಾರದ ವಿರುದ್ಧ ಹೋರಾಡಲು ಸಾಧ್ಯವಿಲ್ಲ. ಭ್ರಷ್ಟಾಚಾರದ ಭೂತವನ್ನು ಹೊಡೆದೋಡಿಸಲು ಸರ್ಕಾರ ಹಾಗೂ ಜನತೆ ಒಂದಾಗಿ ಹೋರಾಡಬೇಕು' ಎಂದರು.

• ಎಸ್‌ಎಸ್‌ಎಲ್‌ಸಿ ಫಲಿತಾಂಶ: ಶೇ 46.14 ತೇರ್ಗಡೆ

ಬೆಂಗಳೂರು, ಮೇ 29– ಕಳೆದ ಮಾರ್ಚ್– ಏಪ್ರಿಲ್ ತಿಂಗಳಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ತೇರ್ಗಡೆ ಮತ್ತು ರ‍್ಯಾಂಕ್ ಗಳಿಕೆ ಹೀಗೆ ಎರಡರಲ್ಲೂ ಬಾಲಕಿಯರೇ ಮೇಲುಗೈ ಸಾಧಿಸಿದ್ದು, ಇದೇ ಮೊದಲ ಬಾರಿಗೆ ಮೊದಲ ಮೂರೂ ರ‍್ಯಾಂಕ್‌ಗಳನ್ನು ಅವರೇ ಮಡಿಲು ತುಂಬಿಸಿಕೊಂಡಿದ್ದಾರೆ.

ಒಟ್ಟು 20 ರ‍್ಯಾಂಕ್‌ಗಳನ್ನು 127 ವಿದ್ಯಾರ್ಥಿಗಳು ಹಂಚಿಕೊಂಡಿದ್ದು, ಇವರಲ್ಲಿ 66 ವಿದ್ಯಾರ್ಥಿನಿಯರು. ಕೇವಲ 61 ರ‍್ಯಾಂಕುಗಳನ್ನು ಬಾಲಕರು ಪಡೆದು ಇಲ್ಲಿಯೂ ಹಿಂದೆ ಬಿದ್ದಿದ್ದಾರೆ.

50 ವರ್ಷಗಳ ಹಿಂದೆ

ಮಂಗಳವಾರ, 30-5-1972

• ಭೂ ಮಿತಿ: ಸಮಾಲೋಚನೆಗೆ ನಿರ್ಧಾರ

ನವದೆಹಲಿ, ಮೇ 29 – ಕೃಷಿ ಜಮೀನಿನ ಮೇಲೆ ಮಿತಿ ವಿಧಿಸುವಾಗ ಖಾಸಗಿ ನೀರಾವರಿ ಜಮೀನನ್ನು ಸರ್ಕಾರಿ ಮೂಲದ ನೀರಾವರಿ ಭೂಮಿ ಜೊತೆ ಸಮೀಕರಿಸುವ ಬಗ್ಗೆ ಆಖೈರು ನಿರ್ಧಾರ ಕೈಗೊಳ್ಳುವ ಮುಂಚೆ ಸರ್ಕಾರವು ಮುಖ್ಯಮಂತ್ರಿಗಳ ಜೊತೆ ಸಮಾಲೋಚಿಸುವುದೆಂದು ಕೇಂದ್ರ ಕೃಷಿ ಸಚಿವ ಫಕ್ರುದ್ದೀನ್ ಅಲಿ ಅಹ್ಮದ್ ಅವರು ಇಂದು ಲೋಕಸಭೆಯಲ್ಲಿ ತಿಳಿಸಿದರು.

ಈ ಬಗ್ಗೆ ನಡೆದ ವಿಶೇಷ ಚರ್ಚೆಯಲ್ಲಿ ಮಧ್ಯ ಪ್ರವೇಶಿಸಿ ಮಾತನಾಡಿದ ಅವರು, ಕೃಷಿ ಸಚಿವ ಶಾಖೆಯು ಕೇಂದ್ರ ಭೂ ಸುಧಾರಣಾ ಸಮಿತಿಯ ಶಿಫಾರಸುಗಳನ್ನು ವಿಕೃತಗೊಳಿಸಿದೆಯೆಂಬ ಆಪಾದನೆಯನ್ನು ನಿರಾಕರಿಸಿದರು.

ಸತ್ತಂತಿಹರನು ಬಡಿದೆಬ್ಬಿಸಲು ಬೇಕು ಬಡಿಗೆ, ಅಂತಹವರಿಗೆ ಕಾಯುತ್ತಿದೆ ಕರ್ನಾಟಕ

ಎದೆಗೆ ಗುದ್ದಿದ ಅಕ್ಷರ ರಾಕ್ಷಸ!



ಅನುಸಂಧಾನ

ರವೀಂದ್ರ ಭಟ್ಟ

'ವಿಧಾನಸೌಧದಲ್ಲಿ ಇರುವವರು ಇದ್ದರೂ ಸತ್ತಂತೆ ಇದ್ದಾರೆ. ಅವರನ್ನು ಆಯ್ಕೆ ಮಾಡಿ ಕಳಿಸಿದ ಜನರಿಗೆ ಅವರು ಯಾವಾಗಲೂ ಸತ್ತಂತೆಯೇ ಇರುತ್ತಾರೆ. ಯಾಕೆಂದರೆ ಅವರಿಂದ ಮತದಾರರಿಗೆ ಯಾವುದೇ ಪ್ರಯೋಜನ ಇಲ್ಲ. ನೀನು ಇದ್ದೀಯಾ, ಸತ್ತಿದ್ದೀಯಾ ಅಂತ ಅವರು ಯಾವಾಗಲೂ ಮತದಾರರನ್ನು ಕೇಳಿಲ್ಲ. ಲಂಚ ತೆಗೆದುಕೊಳ್ಳಲು ಕೈಯಾಡಿಸುವುದರಿಂದ ಅವರು ಬದುಕಿದ್ದಾರೆ ಎಂದು ನಾವು ಅರ್ಥ ಮಾಡಿಕೊಳ್ಳಬೇಕು ಅಷ್ಟೆ' ಎಂದು ಮಾಸ್ಟರ್ ಹಿರಣ್ಣಯ್ಯ ಅವರು ತಮ್ಮ ನಾಟಕಗಳಲ್ಲಿ ಹೇಳುತ್ತಿದ್ದರು. ಅವರು ಈ ಮಾತನ್ನು ಹೇಳುತ್ತಿದ್ದುದು 20–30 ವರ್ಷಗಳ ಹಿಂದೆ. ಈಗ ಅವರು ಬದುಕಿದ್ದಿದ್ದರೆ ಏನು ಹೇಳುತ್ತಿದ್ದರೋ?

ಸದ್ಯದ ರಾಜಕೀಯ ಪರಿಸ್ಥಿತಿಯನ್ನು ನೋಡಿದರೆ ಯಾರೂ ನೈತಿಕವಾಗಿ ಬದುಕಿರುವಂತೆ ಕಾಣುತ್ತಿಲ್ಲ. ಆಳುವ ಅರಸರೂ ಅಷ್ಟೆ, ಆರಿಸುವ ಮತದಾರರೂ ಅಷ್ಟೆ. ಕೂಡಿಸಿ ಒಲಿಸಬೇಕಾದ ಮಂದಿ ಕಚ್ಚಾಡುತ್ತಿದ್ದಾರೆ. ತಾಪಕ್ಕೆ ತಣ್ಣೀರು ಸುರಿಯಬೇಕಾದ ಮಂದಿ ಹೊಟ್ಟೆ ಕಿಚ್ಚಿನಿಂದ ಬಳಲುತ್ತಿದ್ದಾರೆ. ಒಟ್ಟಿಗೆ ಬಾಳುವ ತೆರದಲಿ ಹರಸಬೇಕಾದ ಮಂದಿ ಮುಖ ತಿರುಗಿಸಿ ಕುಳಿತಿದ್ದಾರೆ. ಮಂಗಳ ಮೂಡಿಸುವ ಮತಿ ಯಾರಿಗೂ ಇಲ್ಲ. ಒಟ್ಟಿನಲ್ಲಿ, ಸತ್ತಂತಿಹರನು ಬಡಿದೆಬ್ಬಿಸಲು ಬಡಿಗೆ ತೆಗೆದುಕೊಂಡು ಬರುವವರಿಗಾಗಿ ರಾಜ್ಯ ಈಗ ಕಾಯುತ್ತಿದೆ.

ಇಡೀ ರಾಜ್ಯ ಈಗ ಮಾನಸಿಕವಾಗಿ ಪ್ರಕ್ಷುಬ್ಧವಾಗಿದೆ. ಯಾರೂ ಯಾರ ಮಾತನ್ನೂ ಕೇಳುವ ಸ್ಥಿತಿಯಲ್ಲಿ ಇಲ್ಲ. ಒಬ್ಬೊಬ್ಬರು ಒಂದೊಂದು ಹೇಳುತ್ತಿದ್ದಾರೆ. ದಿನಕ್ಕೊಂದು ವಿವಾದ ಹುಟ್ಟಿಕೊಳ್ಳುತ್ತಿದೆ. ಅಭಿವೃದ್ಧಿಗೆ ಮನಸ್ಸು ಮಾಡಬೇಕಾದ ಜನರು ಮಸೀದಿಯ ಕೆಳಗೆ ಏನಿದೆ ಎಂದು ಹುಡುಕುತ್ತಿದ್ದಾರೆ. ಒಳಗೇನಿದೆ ಎಂದು ತಡಕಾಡುತ್ತಿದ್ದಾರೆ. ಆಡಳಿತದಲ್ಲಿ ಇರುವ ಜನರು ಇಸ್ಲಾಂ ಧರ್ಮದ ಜನರನ್ನು ಹೊರಕ್ಕೆ ಕಳಿಸುವ ಹುಚ್ಚಿನಲ್ಲಿದ್ದಾರೆ. ಧರ್ಮ ಧರ್ಮದ ನಡುವೆಯೂ ತಿಕ್ಕಾಟ ನಡೆದಿದೆ. ಜಾತಿ ಜಾತಿಗಳ ನಡುವಿನ ಸಂಘರ್ಷವೂ ಮಿತಿಮೀರಿದೆ. ಕೆಲವರು ಬೆಂಕಿ ಹಚ್ಚುತ್ತಾರೆ. ಇನ್ನು ಕೆಲವರು ತುಪ್ಪ ಸುರಿಯುತ್ತಾರೆ. ಲಂಗು ಲಗಾಮಿಲ್ಲ. ಯಾರನ್ನೂ ನಿಯಂತ್ರಿಸುವ ಸ್ಥಿತಿ ಇಲ್ಲ. ಆಡಳಿತದಲ್ಲಿರುವ ಜನರನ್ನು ಸರಿದಾರಿಗೆ ತರಬೇಕಾದ ವಿರೋಧ ಪಕ್ಷಗಳು ಸಹ ಆರ್ಯ ದ್ರಾವಿಡರ ಮೂಲ ಹುಡುಕುತ್ತಿವೆ. ಒಟ್ಟಿನಲ್ಲಿ ಯಾವುದಕ್ಕೂ ತಾಳಮೇಳ ಇಲ್ಲ. ಕುಣಿದಾಟ ಮಾತ್ರ ನಡೆಯುತ್ತಲೇ ಇದೆ. ಯಾರೋ ಎಲ್ಲೋ ದಾಳ ಉರುಳಿಸುತ್ತಿದ್ದಾರೆ. ಇವರು ಇಲ್ಲಿ ಕುಣಿಯುತ್ತಿದ್ದಾರೆ.

ಹಿಜಾಬ್‌ನಿಂದ ಶುರುವಾದ ರಾಜಕೀಯ ರಗಳೆ ಈಗ ಪಠ್ಯಪುಸ್ತಕದ ರಾಮಾಯಣದವರೆಗೆ ಬಂದು ನಿಂತಿದೆ. ಜನರ ಬದುಕು ಮೂರಾಬಟ್ಟೆಯಾಗಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುತ್ತಿರುವುದು, ಹಣದುಬ್ಬರ ಹೆಚ್ಚಾಗುತ್ತಿರುವುದು, ಜನರು ಕೆಲಸ ಕಳೆದುಕೊಂಡು ತಲೆ ಮೇಲೆ ಕೈ ಇಟ್ಟುಕೊಂಡು ಕುಳಿತಿರುವುದು, ಕೆಲಸದಲ್ಲಿ ಇರುವವರಿಗೂ ವೇತನ ಕಡಿತವಾಗುತ್ತಿರುವುದು ಯಾವುದೂ ಯಾರಿಗೂ ಕಾಣುತ್ತಿಲ್ಲ. ಎಲ್ಲರೂ ಹಿಂದೆ ಏನೇನಾಗಿದೆ ಎಂಬುದನ್ನು ಪತ್ತೆ ಮಾಡಲು ಗಣಿಗಾರಿಕೆಯಲ್ಲಿ ತೊಡಗಿದ್ದಾರೆ. ತೋಡುವವರು ತೋಡುತ್ತಿದ್ದಾರೆ. ಹಳ್ಳಕ್ಕೆ ಬೀಳುವವರು ಬೀಳುತ್ತಿದ್ದಾರೆ. ಮುಂದೇನು? ಇಂದೇನು ಎನ್ನುವುದು ಗೌಣವಾಗಿದೆ. ಮತದಾರರಂತೂ ದಾರಿ ಕಾಣದಂತೆ ಕಂಗೆಟ್ಟಿದ್ದಾರೆ.


ಸಾಹಿತಿ ದೇವನೂರ ಮಹಾದೇವ 'ಎದೆಗೆ ಬಿದ್ದ ಅಕ್ಷರ ಇಂದಲ್ಲ ನಾಳೆ ಫಲ ಕೊಡುವುದು' ಎಂಬ ನಂಬಿಕೆಯನ್ನು ಹುಟ್ಟುಹಾಕಿದರು. ಆದರೆ ಈಗ ಎದೆಗೆ ಬಿದ್ದ ಅಕ್ಷರದ ಅವಾಂತರಗಳನ್ನು ಸಹಿಸಿಕೊಳ್ಳಲಾಗುತ್ತಿಲ್ಲ. ಇದು ಎದೆಗೆ ಬಿದ್ದ ಅಕ್ಷರ ಅಲ್ಲ. ಎದೆಗೆ ಗುದ್ದಿದ ರಾಕ್ಷಸ ಎನ್ನುವಂತಾಗಿದೆ. ಸ್ವಾತಂತ್ರ್ಯ ಬಂದ ಹೊಸತರಲ್ಲಿ ಒಂದು ನಂಬಿಕೆ ಇತ್ತು. ಆಗ ದೇಶದಲ್ಲಿ ಸಾಕ್ಷರರ ಪ್ರಮಾಣ ಕಡಿಮೆ ಇತ್ತು. ಎಲ್ಲರೂ ಸಾಕ್ಷರರಾದರೆ ಎಲ್ಲರ ಹೃದಯದಲ್ಲಿಯೂ ಅಕ್ಷರದ ದೀವಿಗೆ ಹೊತ್ತಿಕೊಂಡರೆ ಮೌಢ್ಯ ಕಳೆಯುತ್ತದೆ, ಜಾತಿ ಜಾತಿಗಳ ನಡುವಿನ ಸಂಘರ್ಷ ಕಳೆಯುತ್ತದೆ, ಧರ್ಮ ಧರ್ಮಗಳ ನಡುವಿನ ಕಂದರ ಕಳೆಯುತ್ತದೆ, ಅಸ್ಪೃಶ್ಯತೆಯ ಕಳಂಕ ಮಾಯವಾಗುತ್ತದೆ, ಸೌಹಾರ್ದದ ಬೆಳಕು ಮೂಡುತ್ತದೆ ಎಂಬ ನಂಬಿಕೆ ಬಲವಾಗಿತ್ತು. ಆದರೆ ಈಗ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಹೊತ್ತಿಗೆ ಅವೆಲ್ಲವನ್ನೂ ನಾವು ಸುಳ್ಳು ಮಾಡಿದ್ದೇವೆ. ಈಗಲೂ ನಮಗೆ ತಾಂಬೂಲ ಶಾಸ್ತ್ರದ ಮೇಲೆ ಇರುವ ನಂಬಿಕೆ ಶಾಸನಗಳ ಮೇಲೆ ಇಲ್ಲ. ಸನಾತನ ಧರ್ಮದ ಬಗ್ಗೆ ಇರುವ ವಿಶ್ವಾಸ ಸಂವಿಧಾನದ ಮೇಲೆ ಇಲ್ಲ.

ಎಲ್ಲ ಧರ್ಮದವರಿಗೂ ಅವರವರ ಧರ್ಮವೇ ಶ್ರೇಷ್ಠ. ಅದರ ಕಟ್ಟುಪಾಡುಗಳೇ ಮುಖ್ಯ. ಸೌಹಾರ್ದಕ್ಕಾಗಿ ಅವರೂ ಒಂದು ಹೆಜ್ಜೆ ಮುಂದೆ ಇಡುತ್ತಿಲ್ಲ, ಇವರೂ ಆಲಿಂಗನಕ್ಕೆ ಬಾಹು ಚಾಚುತ್ತಿಲ್ಲ. ಸೌಹಾರ್ದಕ್ಕಾಗಿ ತನ್ನ ಇಡೀ ಬದುಕನ್ನೇ ಸವೆಸಿದ ಮಹಾತ್ಮನ ಆದರ್ಶದಲ್ಲಿ ನಂಬಿಕೆ ಹೋಗಿ ಮಹಾತ್ಮನನ್ನು ಹತ್ಯೆ ಮಾಡಿದವನೇ ದೇಶಪ್ರೇಮಿಯಂತೆ ಕಾಣುತ್ತಿದ್ದಾನೆ. ಮನುಜ ಮತವೇ ವಿಶ್ವಪಥ ಎಂದು ಹೊಸ ದಾರಿ ತೋರಿಸಿದವರು ಈಗ ಬ್ರಾಹ್ಮಣ ವಿರೋಧಿಯಾಗಿ ಕಾಣುತ್ತಾರೆ. ಸರ್ವ ಜನಾಂಗದ ಶಾಂತಿಯ ತೋಟದ ಕಡೆಗೆ ಸಾಗುವ ಬದಲು ನಾವು ಈಗ ಏಕಬೆಳೆಯ ತೋಟದ ಕೃಷಿಯಲ್ಲಿ ತೊಡಗಿದ್ದೇವೆ. ಇದನ್ನೆಲ್ಲಾ ನೋಡುತ್ತಿದ್ದರೆ ನಮ್ಮ ಎದೆಯಲ್ಲಿ ಬಿದ್ದಿದ್ದು ಅಕ್ಷರವೋ ಅಥವಾ ರಕ್ತ ಬೀಜಾಕ್ಷರವೋ ಎಂಬ ಅನುಮಾನ ಕಾಡುತ್ತಿದೆ.

ನಮ್ಮ ಎದೆಯಲ್ಲಿ ನಿಜವಾಗಿಯೂ ಅಕ್ಷರವೇ ಬಿತ್ತನೆಯಾಗಿದ್ದರೆ ನಾವು ಮಹಾತ್ಮನನ್ನು ಹಳಿಯುತ್ತಿರಲಿಲ್ಲ. ಮನುಜಪಥ ತೋರಿದ ವ್ಯಕ್ತಿಯನ್ನು ಜಾತಿಯ ಸಂಕೋಲೆಗೆ ಸಿಲುಕಿಸುತ್ತಿರಲಿಲ್ಲ. ಅವರ ತತ್ವಗಳನ್ನು ಅನುಮಾನಿಸುತ್ತಿರಲಿಲ್ಲ. ಇತಿಹಾಸದ ಕರಾಳ ಪುಟದಲ್ಲಿ ನಡೆದ ಘಟನಾವಳಿಗೆ ಈಗ ಸೇಡು ತೀರಿಸಿಕೊಳ್ಳುವ ಮಾತನಾಡುತ್ತಿರಲಿಲ್ಲ. ಇತಿಹಾಸದ ಗರ್ಭವನ್ನು ಬಗೆದು ಬಗೆದು ವರ್ತಮಾನದ ಒಡಲಿಗೆ ಬೆಂಕಿ ಹಚ್ಚುತ್ತಿರಲಿಲ್ಲ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಕೊಟ್ಟ ಸಂವಿಧಾನವನ್ನು ಅವಮಾನಿಸುತ್ತಿರಲಿಲ್ಲ. ಸರಳ ಬದುಕಿನ ಹಾದಿಯನ್ನು ತೋರಿದ ಗಾಂಧೀಜಿಯನ್ನು ನಗೆಪಾಟಲು ಮಾಡಿ ಐಷಾರಾಮಿ ಬದುಕಿಗೆ ಹಾತೊರೆಯುತ್ತಿರಲಿಲ್ಲ. ಇಲ್ಲ, ಇಲ್ಲವೇ ಇಲ್ಲ. ನಮ್ಮ ಎದೆಯಲ್ಲಿ ಬಿದ್ದಿದ್ದು ಅಕ್ಷರ ಅಲ್ಲವೇ ಅಲ್ಲ. ಅದು ಬೆಂಕಿ. ಸುಡುತ್ತಿದೆ ಅಷ್ಟೆ. ನಮ್ಮ ಹೊಲದಲ್ಲಿ ಬಿತ್ತಿದ್ದು ಬೀಜ ಅಲ್ಲ, ಬ್ರಹ್ಮರಾಕ್ಷಸ. ಒಂದೋ ಬೀಜ ಸರಿ ಇಲ್ಲ ಅಥವಾ ಹೊಲವೇ ಸರಿ ಇಲ್ಲ. ಇದೆಲ್ಲ ಕಳೆನಾಶಕವನ್ನು ಸಿಂಪಡಿಸದೇ ಇರುವುದರ ಫಲ ಇರಬೇಕು. ಕಳೆ ಹುಲುಸಾಗಿದೆ. ಫಲ ಮಸುಕಾಗಿದೆ. ನಾವು ಕಂಗಾಲಾಗಿದ್ದೇವೆ.

ನನ್ನ ಸ್ನೇಹಿತನೊಬ್ಬ ಒಮ್ಮೆ 'ನಮ್ಮ ದೇಶದಲ್ಲಿ ಅತ್ಯುನ್ನತ ಪದವಿ ಯಾವುದು?' ಎಂದು ಕೇಳಿದ. 'ಐಎಎಸ್' ಎಂದು ನಾನು ಉತ್ತರಿಸಿದೆ. 'ಭ್ರಷ್ಟಾಚಾರ ಮಾಡಬಾರದು ಎಂಬ ಸಾಮಾನ್ಯ ತಿಳಿವಳಿಕೆಯನ್ನೂ ಕಲಿಸದ ಅದೆಂತಹ ಪದವಿ' ಎಂದು ಹಳಿದ. ನಿಜ, ನಾವು ಮಕ್ಕಳಿಗೆ ಕಲಿಸುವ ಶಿಕ್ಷಣವು ಭ್ರಷ್ಟಾಚಾರವನ್ನು ತೊಲಗಿಸುವಂತೆ ಇರಬೇಕು. ಎಲ್ಲರೂ ಒಟ್ಟಾಗಿ ಬಾಳುವಂತಹ ಹಾದಿಯನ್ನು ಕಲಿಸಬೇಕು. ಯಾವುದೇ ಧರ್ಮವನ್ನು ದ್ವೇಷ ಮಾಡಬಾರದು ಎನ್ನುವುದನ್ನು ಹೇಳಿಕೊಡಬೇಕು. ಇನ್ನೊಬ್ಬರ ಆಸ್ತಿಯನ್ನು ಕಬಳಿಸಬಾರದು ಎಂಬ ಪ್ರಜ್ಞೆಯನ್ನು ಮೂಡಿಸಬೇಕು. ನಮ್ಮ ದೇಶ, ನಮ್ಮ ಪರಿಸರವನ್ನು ಪ್ರೀತಿಸುವುದನ್ನು ಕಲಿಸಬೇಕು. ದೇಶದ ಸಂವಿಧಾನವನ್ನು, ಕಾನೂನನ್ನು ಗೌರವಿಸುವುದನ್ನು ಕಲಿಸಬೇಕು. ಅದಕ್ಕೆ ಪ್ರೀತಿ ಸಾಕು, ಪಾತಾಳ ಗರಡಿ ಬೇಡ.

ಎದೆಗೆ ಬಿದ್ದ ಅಕ್ಷರ ಇಂದಲ್ಲ ನಾಳೆ ಫಲ ಕೊಡುತ್ತದೆ ನಿಜ. ಆದರೆ ಯಾವ ಅಕ್ಷರ ಬೀಳುತ್ತದೆ ಎನ್ನುವುದು ಮುಖ್ಯ. ಭೂಮಿಗೆ ಬಿದ್ದ ಬೀಜವೂ ಒಂದಲ್ಲಾ ಒಂದು ದಿನ ಫಲ ಕೊಟ್ಟೇ ಕೊಡುತ್ತದೆ. ಆದರೆ ಬಿತ್ತುವ ಬೀಜ ಎಂತಹದ್ದು ಎನ್ನುವುದು ಮುಖ್ಯ. ಯಾರೋ ಎಂದೋ ಬಿತ್ತಿದ ನಕಲಿ ಬೀಜ ಈಗ ಫಲ ಕೊಡುತ್ತಿದೆ. ಅಸಲಿ ಬೀಜ ಬಿತ್ತುವ ಕಾಲ ಬಂದಿದೆ. ಎದೆಗೆ ಬೆಂಕಿ ಬಿದ್ದಿದೆ. ಬೆಂಕಿ ಬಿದ್ದಿದೆ ಎದೆಗೆ.



ಚುರುಮುರಿ



ಹಿಂದೂವಾದರೆ ಸಾಲದು!

• ಸುಮಂಗಲಾ

ಬೆಕ್ಕಣ್ಣ ಪೇಪರು ನೋಡುತ್ತ ಪಕಪಕನೆ ನಕ್ಕಿತು.

'ಏನಲೇ... ಹಂತಾಪರಿ ನಗೂ ಸುದ್ದಿ ಏನೈತೆ?' ಎಂದೆ.

'ಅಲ್ಲಾ... ಬರೀ ಒಂದು ಪರ್ಸೆಂಟ್ ಕಮಿಷನ್ ಕೇಳಿದ್ದಕ್ಕೇ ಪಂಜಾಬಿನಾಗೆ ಮಂತ್ರಿಯೊಬ್ಬರನ್ನು ಮನಿಗೆ ಕಳಿಸಿದರಂತೆ. ನಮ್ಮಲ್ಲಿ ನಲ್ವತ್ತು ಪರ್ಸೆಂಟ್ ನಡಿಯಾಕೆ ಹತ್ಯೈತಿ... ಇಲ್ಲೇನಾದರೂ ಹಂಗ ಮನಿಗೆ ಕಳಿಸಾಕೆ ಶುರುಮಾಡಿದ್ರ ವಿಧಾನಸೌಧದಾಗೆ ಒಬ್ಬ ಮಂತ್ರಿನೂ ಉಳಿಯಂಗಿಲ್ಲ' ಎಂದಿತು.

'ಮಂತ್ರಿಗಳಷ್ಟೇ ಅಲ್ಲಲೇ... ಆಡಳಿತ ಪಕ್ಷದ ಶಾಸಕರು, ಇನ್ನುಳಿದ ಪಕ್ಷದ ಶಾಸಕರೂ ಮನಿಗೆ ಹೋಗಬೇಕಾಗತೈತಿ. ಈ ಪರ್ಸೆಂಟೇಜ್ ಸುದ್ದಿಗೆ ಹ್ವಾದ್ರ ಜೇನುಗೂಡಿಗೆ ಕೈಹಾಕಿದಂಗೆ ಅಂತ ಎಲ್ಲಾ ಪಕ್ಷದ ರಾಜಕಾರಣಿಗಳಿಗೂ ಗೊತ್ತೈತಿ' ಅಂದೆ.

'ಎಲ್ಲಾ ಪಕ್ಷದವರೂ ಎಲ್ಲಾದ್ರಾಗೆ ಕನಿಷ್ಠ 10-20% ಕಮಿಷನ್ ತಗೊಳ್ಳೋರು... ಒಂದು ಪರ್ಸೆಂಟಿಗೇ ಭಯಂಕರ ತೃಪ್ತರಾಗೋವ್ರನ್ನ ತಗಂಡು ಏನುಪಯೋಗ ಅಂತ ಆ ಪಂಜಾಬಿ ಮಂತ್ರಿಯನ್ನ ಯಾವ ಪಕ್ಷದವರೂ ಸೇರಿಸಿಕೊಳ್ಳಂಗಿಲ್ಲ ಪಾಪ...' ಎಂದು ಲೊಚಗುಟ್ಟಿತು.

'ಮತ್ತ ಹಿಂದೂ ಆಗಬೇಕು ಅಂದ್ರ 40% ಕಮಿಷನ್ ಹೊಡೀಬೇಕೇನು ಅಂತ ಸಿದ್ದರಾಮಯ್ಯ ಅಂಕಲ್ಲು ಕೇಳ್ಯಾರ. ನೂರಕ್ಕೆ ನೂರು ಹಿಂದೂ ಆಗಿರಬಕು ಅಂದ್ರ ಎಷ್ಟು ಕಮಿಷನ್ ಹೊಡೀಬೇಕಾತು? ಈ ಕಮಿಷನ್ ಪರ್ಸೆಂಟೇಜ್ ಆಧಾರದ ಮ್ಯಾಗೆ ನೀ ಎಷ್ಟು ಪರ್ಸೆಂಟ್ ಹಿಂದೂ ಅಂತ ಲೆಕ್ಕ ಹಾಕೂದು ಅಂದ್ರ ಬ್ಯಾರೆಬ್ಯಾರೆ ಥರದ ಗಣಿತ ಗೊತ್ತಿರಬೇಕಾತು ಬಿಡು' ಬೆಕ್ಕಣ್ಣ ಆಲೋಚನೆಗೆ ಬಿದ್ದಿತು.

'ನೀ ಬರೀ ಹಿಂದೂವಾದರೆ ಸಾಲದು... ನೀ ಭಾರತೀಯನೋ ಇಲ್ಲಾ ಆರ್ಯನೋ ಇಲ್ಲಾ ದ್ರಾವಿಡನೋ ಇದನ್ನೂ ಪ್ರಮಾಣಪತ್ರ ಸಮೇತ ಸಾಬೀತು ಪಡಿಸಬೇಕಾಗತೈತಿ. ಒಬ್ಬರ ಕಣ್ಣಿನಾಗೆ ಭಾರತೀಯರಾಗಿ ಕಂಡಿದ್ದು ಇನ್ನೊಬ್ಬರ ಕಣ್ಣಿನಾಗೆ ಪರಮ ದೇಶದ್ರೋಹಿ ಆಗಬೌದು. ಯಾವುದೂ ಅಷ್ಟ್ ಸರಳ ಇಲ್ಲಲೇ'.

'ಅವೆಲ್ಲಾ ಬಿಡು... ನಾವ್ ಪ್ರಾಣಿಗಳ ಕಣ್ಣಿನಾಗಂತೂ ನೀವು ಎಂದೂ ನೂರಕ್ಕೆ ನೂರು ಪರ್ಸೆಂಟ್ ಮನಷ್ಯರಾಗಿಲ್ಲ...' ಎಂದು ಕುಟುಕಿದ ಬೆಕ್ಕಣ್ಣ ಇಲಿ ಹಿಡಿಯಲು ಓಡಿತು.

ಸಂಗತ

'ಬಂಗಾರ ಮೌನ'ದ ಹಿಂದೆ...

ಮುಸ್ಲಿಂ ತುಷ್ಟೀಕರಣ ಮತ್ತು ಹಿಂದೂ ತುಷ್ಟೀಕರಣದ ಅತಿಗಳ ದುಷ್ಪರಿಣಾಮವನ್ನು ಇಡೀ ದೇಶ ಅನುಭವಿಸಬೇಕಾಗಿ ಬಂದಿರುವುದು ದುರ್ದೈವ

• ಡಾ. ಆರ್.ಲಕ್ಷ್ಮೀನಾರಾಯಣ

ಸೆಕ್ಯುಲರ್‌ವಾದಿಗಳಿಗೆ ಸಂಬಂಧಿಸಿದ ಅತ್ಯಂತ ಸಾಮಯಿಕವಾದ ಸಮಸ್ಯೆಯ ಬಗ್ಗೆ ಪ್ರಸ್ತಾಪಿಸಿರುವ ಸುಧೀಂದ್ರ ಕುಲಕರ್ಣಿ ಅವರು (ಪ್ರ.ವಾ., ಮೇ 28), ಅರ್ಥಪೂರ್ಣವಾದ ಚರ್ಚೆಗೆ ನಾಂದಿ ಹಾಡಿದ್ದಾರೆ. ಭಾರತದ ಸಂದರ್ಭದಲ್ಲಿ 'ಸೆಕ್ಯುಲರಿಸ್ಟರು' ಎನ್ನುವ ಪದ ಪ್ರಯೋಗವೇ ಅಷ್ಟು ಸರಿಯಲ್ಲ. ಕಾರಣ, 'ಸರ್ವಧರ್ಮ ಸಮಭಾವವು ನಮ್ಮ ಸಂಸ್ಕೃತಿಯ ಉಸಿರು ಮತ್ತು ನಮ್ಮ ಸಂವಿಧಾನದ ಪ್ರಾಣ' ಎಂಬ ಅವರ ಮಾತೇ ಅಂಥದ್ದೊಂದು ವರ್ಗದ ಪ್ರಸ್ತಾಪಕ್ಕೆ ಅವಕಾಶ ನೀಡುವುದಿಲ್ಲ ಎನಿಸುತ್ತದೆ.

ನಮ್ಮ ದೇಶದ ಬಹುಸಂಖ್ಯಾತ ಜನಸಮುದಾಯದಲ್ಲಿ ಆಗಿಂದಾಗ್ಗೆ ಜಾತಿ ಜಾತಿಗಳ ನಡುವೆ ಸಣ್ಣಪುಟ್ಟ ಒಳಜಗಳಗಳು ನಡೆಯುತ್ತ ಬಂದಿದ್ದರೂ ಒಟ್ಟಾರೆ ಎಲ್ಲರೂ ಎಲ್ಲರ ಜೊತೆ ಸೌಹಾರ್ದಯುತವಾಗಿ ಬದುಕುತ್ತ ಬಂದಿರುವುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ. ಇನ್ನು ಜಾತ್ಯತೀತತೆಯನ್ನು ಸಂವಿಧಾನ ಅಂಗೀಕರಿಸಿರುವುದು ಕೂಡ ಬಹುಸಂಖ್ಯಾತ ಜನರ ಸ್ವಇಚ್ಛೆಯ ಮೇರೆಗೇ.

ಆದರ್ಶದ ಸ್ಥಿತಿಯಲ್ಲಿ ಈ ದೇಶದ ನಾಗರಿಕರೆಲ್ಲರೂ ಜಾತ್ಯತೀತರೆಂದೇ ಪರಿಗಣಿಸಲ್ಪಡಬೇಕು ಮತ್ತು ಅದನ್ನು ನಂಬಬೇಕು. ಯಾರನ್ನೋ ಕೆಲವರನ್ನು ಸೆಕ್ಯುಲರ್‌ವಾದಿಗಳೆಂದರೆ ಅವರದೊಂದು ಗುಂಪಿಗೆ ಮಾತ್ರ ಸೆಕ್ಯುಲರಿಸಂನಲ್ಲಿ ನಂಬಿಕೆ ಎಂದಾಗುತ್ತದೆ. ಸೆಕ್ಯುಲರಿಸಂ ಈ ದೇಶಕ್ಕೆ ಬೇಕೇ ಬೇಕು. ಆದರೆ 'ಉಗ್ರ ಸೆಕ್ಯುಲರಿಸಂ' ಬೇಡ ಎಂಬುದಷ್ಟೇ ದೇಶದ ಕೋಟಿಕೋಟಿ ಧರ್ಮ ನಿರಪೇಕ್ಷ ಜನರ ಸದಾಶಯ. ಸೆಕ್ಯುಲರಿಸಂ ಅನ್ನು ಸದಾ ಗುತ್ತಿಗೆ ತೆಗೆದುಕೊಂಡವರಂತೆ ಮಾತಾಡುವ, ಹಿಂದೂ ಧರ್ಮದ ಕುರಿತೋ ಅಲ್ಪಸಂಖ್ಯಾತರ ಕುರಿತೋ ಬಹುಸಂಖ್ಯಾತ ಸಮುದಾಯದವರ ಆಕ್ಷೇಪಣಾಪೂರ್ವಕವಾದ ಅಭಿಪ್ರಾಯ, ವಾದ, ಚರ್ಚೆಗಳು ಸಕಾರಣವಾಗಿದ್ದಾಗಲೂ ಅದನ್ನು ಎಂದೂ ಕಂಡಹಾಗೆಯೇ ಸಮರ್ಥಿಸದ ಅಥವಾ ಸಮರ್ಥಿಸಲು ಸಂಕೋಚಪಡುವ, ಇಲ್ಲವೇ ಅಂಜುವ, ಆದರೆ ಹೊರಗಿನಿಂದ ಬಂದ ಧರ್ಮವನ್ನು ಅನುಸರಿಸುತ್ತಿರುವವರಿಗೆ ಕೊಂಚ ಮಟ್ಟಿನ ಇರುಸುಮುರುಸು ಬಹುಸಂಖ್ಯಾತರಿಂದ ಆಯಿತೆಂದರೆ ಸಾಕು ಅದನ್ನು ಖಂಡಿಸುವುದಕ್ಕೆಂದೇ ಕಾದು ಕುಳಿತವರಂತೆ ಎರಗಿ ಬೀಳುವವರನ್ನು ಮಾತ್ರ ಸೆಕ್ಯುಲರ್‌ವಾದಿಗಳೆಂದು ವರ್ಣಿಸುವುದು ಸರಿಹೋಗುವುದಿಲ್ಲ. ಅವರನ್ನು 'ಉಗ್ರ ಸೆಕ್ಯುಲರ್‌ವಾದಿ'ಗಳೆಂದು ಕರೆಯುವುದೇ ಬಹುಶಃ ಸರಿಯೆನಿಸುತ್ತದೆ. ನಮ್ಮ ದೇಶದ ಜಾತ್ಯತೀತತೆಯ ಅತಿ ಎಂದರೆ ಇದೇ ಆಗಿದೆ. ಇಂಗ್ಲಿಷಿನಲ್ಲಿ ಹೇಳುವ 'More loyal than the king' ಎನ್ನುವುದಕ್ಕೆ ಸಮನಾದ್ದು. ಇದಕ್ಕೆ ಕಾರಣಗಳೇನೆಂದು ಕಂಡುಕೊಳ್ಳುವುದೂ ಮುಖ್ಯ.

ಸ್ವಾತಂತ್ರ್ಯ ಬಂದಾಗಿನಿಂದ ಈಚಿನವರೆಗೂ ಆಡಳಿತ ನಡೆಸಿದ ಪಕ್ಷದಿಂದ ಮುಸ್ಲಿಂ ತುಷ್ಟೀಕರಣ ನಿರಂತರವಾಗಿ ನಡೆಯುತ್ತ ಬಂದಿರುವುದೂ ನಿಜ ಮತ್ತು ಅದನ್ನು ತನ್ನ ಅನುಕೂಲಕ್ಕೆ ಬಳಸಿಕೊಂಡು ಈಗ ಆಡಳಿತದಲ್ಲಿರುವ ಪಕ್ಷ ಹಿಂದೂ ತುಷ್ಟೀಕರಣಕ್ಕೆ ಹೊರಟಿರುವುದೂ ನಿಜ. ವೋಟಿಗಾಗಿ ಇದುವರೆಗೆ ನಡೆದ ಮತ್ತು ಈಗಲೂ ನಡೆಯುತ್ತಿರುವ ಮುಸ್ಲಿಂ ತುಷ್ಟೀಕರಣ ಒಂದು ಕಡೆಯಾದರೆ, ಈಗ ಆಡಳಿತದಲ್ಲಿ ಇರುವ ಪಕ್ಷದ ಕಡೆಯಿಂದ ಅದಕ್ಕೆ ಪ್ರತಿಯಾಗಿ ನಡೆಯುತ್ತಿರುವ ಹಿಂದೂ ತುಷ್ಟೀಕರಣವೆಂಬಂಥ ನಡೆ ಈ ಎರಡೂ ತಪ್ಪು. ಈ ಎರಡರ ಅತಿಗಳ ದುಷ್ಪರಿಣಾಮವನ್ನು ಇಡೀ ದೇಶ ಅನುಭವಿಸಬೇಕಾಗಿ ಬಂದಿರುವುದು ನಿಜಕ್ಕೂ ದುರ್ದೈವವೇ ಸರಿ.

ಸೆಕ್ಯುಲರ್ ಪಕ್ಷ ಎಂದು ಬಿಂಬಿಸಿಕೊಂಡಿರುವ ಕಾರಣಕ್ಕೆ ಒಂದು ಪಕ್ಷದ ಜೊತೆ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಗುರುತಿಸಿಕೊಂಡಿರುವವರು ಹೀಗೆ ಅದರ ಒಳಪ್ರವಾಹವಾಗಿ ಹರಿಯುತ್ತಿರುವ ಒಂದು ಕೋಮಿನ ತುಷ್ಟೀಕರಣದ ನಡೆಗೆ ಜಾಣ ಕುರುಡರೂ ಜಾಣ ಕಿವುಡರೂ ಆಗಿರುವ ಕಾರಣಕ್ಕೆ, ಕುಲಕರ್ಣಿ ಅವರು ಹೇಳುವಂತೆ 'ಹಿಂದೂ ಸಮಾಜದ ಒಂದು ದೊಡ್ಡ ವರ್ಗ ಮುಸ್ಲಿಂ ವಿರೋಧಿ ಪ್ರಚಾರದಿಂದ ಪ್ರಭಾವಿತಗೊಂಡಿರಲು' ಸಾಕು.

ಇನ್ನು ಸೆಕ್ಯುಲರ್‌ವಾದಿಗಳು ಮುಸ್ಲಿಂ ಧರ್ಮಾಂಧತೆಯ ವಿರುದ್ಧ ದನಿ ಎತ್ತುತ್ತಿಲ್ಲವೇಕೆ ಎಂದು ಅವರು ಅತ್ಯಂತ ವ್ಯಗ್ರರಾಗಿದ್ದಾರೆ. ಅದಕ್ಕೆ ಕಾರಣ ಅತ್ಯಂತ ಸ್ಪಷ್ಟವೇ ಇದೆ. ಹಿಂದೂ ಧರ್ಮದಲ್ಲಿ ಅದರ ಬಗೆಗೆ ಮುಕ್ತ ಚರ್ಚೆಗೆ ಯಾವತ್ತೂ ಅವಕಾಶವಿರುವ ಹಾಗೆ ಇಸ್ಲಾಂ ಧರ್ಮದಲ್ಲಿ ಇಲ್ಲವೆಂಬುದು.



ಒಳಗಿನವರಿರಲಿ ಹೊರಗಿನವರು ಕೂಡ ಕೆಲವು ವರ್ಷಗಳ ಹಿಂದಿನವರೆಗೂ ಹಿಂದೂ ಕಂದಾಚಾರ, ಮೌಢ್ಯಗಳ ಬಗೆಗೆ ಖಂಡನೆಯ ಮಾತುಗಳನ್ನಾಡಬಹುದಿತ್ತು. ಅದಕ್ಕೆ ಉಗ್ರ ಪ್ರತಿರೋಧ ಇರುತ್ತಿರಲಿಲ್ಲ. ಈಚಿನ ವರ್ಷಗಳಲ್ಲಿ ಈ ಬಗೆಯ ವಿರೋಧ ಸ್ವಲ್ಪ ಹೆಚ್ಚಾಗಿದೆ. ಇನ್ನು ಅದೇ ಇಸ್ಲಾಂ ಧರ್ಮದಲ್ಲಿ ಒಳಗಿನವರಿಗೂ ಅದರ ಬಗೆಗೆ ಮುಕ್ತವಾಗಿ ಚರ್ಚಿಸಲೋ ಮೃದುವಾಗಿ ಖಂಡಿಸುವಂಥದ್ದಿದ್ದರೆ ಖಂಡಿಸಲೋ ಸಾಧ್ಯವೇ ಇಲ್ಲದಂಥ ಪರಿಸ್ಥಿತಿ ಇದೆ.

ಇದನ್ನು ಕವಿ ಕುವೆಂಪು ಬಹಳ ಹಿಂದೆಯೇ 'ಹಿಂದೂ ಧರ್ಮವು ಓಪನ್ ರಿಲಿಜನ್ ಆದರೆ ಅದೇ ಇಸ್ಲಾಂ ಧರ್ಮವು ಕ್ಲೋಸ್ಡ್ ರಿಲಿಜನ್' ಎಂದು ವರ್ಣಿಸಿದ್ದರು. ಆ ಕಾರಣದಿಂದಲೋ ಏನೋ ಮುಸ್ಲಿಂ ಸಜ್ಜನ ಬಂಧುಗಳು, ವಿಚಾರವಾದಿಗಳು ಅದರಲ್ಲಿನ ಕೆಲವರ ಉಗ್ರ ನಡೆಯ ಬಗ್ಗೆ ದನಿ ಎತ್ತಲು ಯಾವತ್ತೂ ಅಂಜುತ್ತಾರೆಂಬುದು ಗುಟ್ಟೇನಲ್ಲ. ಒಳಗಿನವರ ಪರಿಸ್ಥಿತಿಯೇ ಹೀಗಿರುವಾಗ ಇನ್ನು ಹೊರಗಿನವರು ಅಂಥದ್ದನ್ನು ಊಹಿಸಲೂ ಆಗದು. ಅದಕ್ಕೇ ಉಗ್ರ ಸೆಕ್ಯುಲರ್‌ವಾದಿಗಳು ಬಂಗಾರ ಮೌನ ತಾಳಿರುವುದು ಎನ್ನುವುದು ಸೂರ್ಯ ಸ್ಪಷ್ಟ. ಇದಕ್ಕೆ ಹೆಚ್ಚಿನ ಸಂಶೋಧನೆಯೇನೂ ಬೇಕಿಲ್ಲ.

ವಾಚಕರ ವಾಣಿ

ಸರ್ವ ವಿಳಂಬಕ್ಕೂ ಸರ್ವರ್ ಡೌನ್ ಕಾರಣ

ಎಲ್ಲ ಸರ್ಕಾರಿ ಕಚೇರಿಗಳು ಕಂಪ್ಯೂಟರೀಕರಣಗೊಂಡ ಪರಿಣಾಮವಾಗಿ ಜನರ ಕೆಲಸಗಳು ಶರವೇಗದಲ್ಲಿ ಸಕಾಲಕ್ಕೆ ನೆರವೇರುತ್ತವೆ, ಕಂಪ್ಯೂಟರೀಕರಣ ನಮಗೆ ದೊರೆತಿರುವ ವರ ಎಂದು ಶ್ರೀಸಾಮಾನ್ಯ ಖುಷಿಪಡುವಂತಿಲ್ಲ. ಏಕೆಂದರೆ, ಬಹುತೇಕ ಸರ್ಕಾರಿ ಕಚೇರಿಗಳಲ್ಲಿ ಸರ್ವರ್ ಡೌನ್ ಎಂಬ ಕಾರಣಕ್ಕೆ ತಿಂಗಳಲ್ಲಿ ಸುಮಾರು ಹತ್ತು ದಿನ ಕೆಲಸ ಸ್ಥಗಿತಗೊಳ್ಳುತ್ತದೆ. ಆ ಸಮಯದಲ್ಲಿ ನೌಕರರು ಆರಾಮವಾಗಿ ತಿರುಗಾಡತೊಡಗುತ್ತಾರೆ. ಒಂದು ವೇಳೆ ಕಚೇರಿ ಅವಧಿಯಲ್ಲಿ ಸರ್ವರ್ ಸರಿಯಾಗದಿದ್ದರೆ, ಕಚೇರಿ ಸಮಯ ಮುಗಿದ ತಕ್ಷಣ ಬಾಗಿಲು ಮುಚ್ಚಿ ಮನೆಯ ಕಡೆ ನಡೆಯುತ್ತಾರೆ. ಅಲ್ಲಿಗೆ ಆ ದಿನದ ಸಾರ್ವಜನಿಕ ಸಮಯ ಹೋಮಕ್ಕೆ. ಈ ಸರ್ವರ್ ಡೌನ್ ಅವ್ಯವಸ್ಥೆಯು ಕೆಲವು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲೂ ಹೆಚ್ಚಾಗಿದೆ. ಕೋಟ್ಯಂತರ ಗ್ರಾಹಕರಿರುವ ಬ್ಯಾಂಕ್‌ಗಳು ಈ ಕಾರಣದಿಂದ ತೀವ್ರವಾಗಿ ಬಳಲುತ್ತಿವೆ. ಕೈಯಲ್ಲಿ ಹಣ ಎಣಿಸುವಾಗ ಹತ್ತು ನಿಮಿಷ ತೆಗೆದುಕೊಳ್ಳುತ್ತಿದ್ದ ಕೆಲಸಕ್ಕೀಗ, ಹಣ ಎಣಿಸುವ ಮಷೀನು ಇದ್ದರೂ ಅರ್ಧ ಗಂಟೆ ಆಗುತ್ತದೆ. ಕೆಲವೊಮ್ಮೆ ದಿನಗಟ್ಟಲೆ ಕೆಲಸವಾಗದೆ ಇರುವುದೂ ಉಂಟು. ಸಮಯಕ್ಕೆ ಸರಿಯಾಗಿ ಪಿಂಚಣಿ ಪಡೆಯಲು ವಯೋವೃದ್ಧರು ಹರಸಾಹಸ ಪಡಬೇಕಾಗಿದೆ. ಖಾಸಗಿ ಸಂಸ್ಥೆಗಳಲ್ಲಿ ಇಲ್ಲದ ಇಂತಹ ಅವ್ಯವಸ್ಥೆ ಸರ್ಕಾರಿ ಕಚೇರಿಗಳಲ್ಲೇ ಯಾಕೆ? ಸರ್ವರ್ ಡೌನ್ ಕಾರಣಕ್ಕೆ ಕೆಲಸ ಮಾಡದ ನೌಕರರು ರಜಾ ದಿನಗಳಲ್ಲಿ ಕಾರ್ಯನಿರ್ವಹಿಸುವಂತೆ ನಿಯಮ ರೂಪಿಸಬೇಕು. ಪರಿಣತರ ತಂಡ ರಚಿಸಿ ಆದಷ್ಟು ಬೇಗ ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯಬೇಕು. ಇಲ್ಲವಾದಲ್ಲಿ, ಮನುಕುಲದ ಉಪಯೋಗಕ್ಕೆ ಕಂಪ್ಯೂಟರ್, ಅಂತರ್ಜಾಲದ ಅನ್ವೇಷಣೆ ಮಾಡಿದ ಮಹಾನುಭಾವರನ್ನೇ ಜನಸಾಮಾನ್ಯರು ಶಪಿಸುವಂತೆ ಆಗುತ್ತದೆ.

ಎಸ್.ರವಿ, ಮೈಸೂರು

ಪೋಷಕರಿಗೆ ಎಚ್ಚರಿಕೆಯ ಗಂಟೆ

ವಾಹನ ಚಲಾಯಿಸಿದ ಬಾಲಕನ ಪೋಷಕರಿಗೆ ಬೇಲೂರಿನ ಜೆಎಂಎಫ್‌ಸಿ ನ್ಯಾಯಾಲಯ ₹ 20 ಸಾವಿರ ದಂಡ ವಿಧಿಸಿರುವುದು, ಚಿಕ್ಕ ಮಕ್ಕಳ ಕೈಗೆ ವಾಹನ ಚಾಲನೆ ಮಾಡಲು ಕೊಡುವ ಎಲ್ಲ ಪೋಷಕರಿಗೂ ಎಚ್ಚರಿಕೆಯ ಗಂಟೆಯಾಗಿದೆ. ಮೈಸೂರಿನಲ್ಲಿ ಇತ್ತೀಚೆಗೆ ಡ್ರೈವಿಂಗ್ ಸ್ಕೂಲ್ ಚಾಲಕರೊಬ್ಬರ ಚಿಕ್ಕ ವಯಸ್ಸಿನ ಪುತ್ರ ಮನೆ ಮುಂದೆ ನಿಲ್ಲಿಸಿದ್ದ ಕಾರನ್ನು ಚಲಾಯಿಸಿ ಅಪಘಾತವಾಗಿ, ದಂಪತಿಯ ಸಾವಿಗೆ ಕಾರಣವಾದ ಪ್ರಕರಣ ಜನರಿಗೆ ಆಘಾತ ಉಂಟು ಮಾಡಿತ್ತು. ಮಕ್ಕಳು ಪ್ರಬುದ್ಧರಾಗಿ ರಸ್ತೆ ನಿಯಮಗಳನ್ನು ಸರಿಯಾಗಿ ಕಲಿತು, ಚಾಲನಾ ಪರವಾನಗಿ ಪಡೆದು ವಾಹನ ಚಲಾಯಿಸುವಂತೆ ನೋಡಿಕೊಳ್ಳುವುದು ಪೋಷಕರ ಮಹತ್ತರವಾದ ಜವಾಬ್ದಾರಿ.

ಭಾಸ್ಕರ್ ಶೆಟ್ಟಿ, ಹಾಸನ

ಹುದ್ದೆ ಭರ್ತಿಗೆ ತೊಡಕೇನು?

ಬಿಜೆಪಿಯ ಯುವ ಸಂಸದ ವರುಣ್ ಗಾಂಧಿ ತಮ್ಮದೇ ಪಕ್ಷದ ವಿರುದ್ಧ ಧ್ವನಿಯೆತ್ತಿದ್ದಾರೆ. ಖಾಲಿ ಇರುವ 60 ಲಕ್ಷಕ್ಕೂ ಹೆಚ್ಚು ಉದ್ಯೋಗಗಳನ್ನು ತುಂಬದೇ ಇರುವುದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಯುವಕರ ಬಗೆಗಿನ ಅವರ ಕಾಳಜಿಯ ಬಗ್ಗೆ ಸಂತೋಷವಾಯಿತು. ಆಡಳಿತಾರೂಢ ಪಕ್ಷದ ಪ್ರಣಾಳಿಕೆಗೆ ಮನಸೋತು ಯುವಕರೇ ಹೆಚ್ಚಾಗಿ ಆ ಪಕ್ಷಕ್ಕೆ ಮತ ಹಾಕಿದರು. ಆದರೆ ಸರ್ಕಾರದ ಸೇವೆ ಮಾಡಬೇಕೆಂಬ ಅವರ ಆಸೆಗೆ ಪುಷ್ಟಿ ದೊರೆತಿಲ್ಲ ಎಂಬುದು ವರುಣ್ ಅವರ ಮಾತುಗಳಲ್ಲಿ ವ್ಯಕ್ತವಾಗಿದೆ. ಈ ಹುದ್ದೆಗಳನ್ನು ಭರ್ತಿ ಮಾಡಲು ಕಾನೂನು ತೊಡಕುಗಳಿವೆಯೇ? ಖಾಸಗೀಕರಣ ಮಾಡುವ ಉದ್ದೇಶವಿದೆಯೇ ಅಥವಾ ಅಷ್ಟು ಜನರಿಗೆ ಸಂಬಳ ಕೊಡಲು ಖಜಾನೆಯಲ್ಲಿ ಹಣವಿಲ್ಲವೇ?

ಮಲ್ಲತ್ತಹಳ್ಳಿ ಡಾ. ಎಚ್.ತುಕಾರಾಂ, ಬೆಂಗಳೂರು

ಶೋಭೆ ತಾರದ ಕೆಸಿಆರ್ ನಡೆ

ದೇಶದ ಪ್ರಧಾನಿ ಹಾಗೂ ರಾಷ್ಟ್ರಪತಿ ಹುದ್ದೆಗಳು ಸಂವಿಧಾನಾತ್ಮಕವಾಗಿ ಅತ್ಯುನ್ನತ ಗೌರವ ಹೊಂದಿವೆ. ಪ್ರಧಾನಿ ಯಾವುದೇ ರಾಜ್ಯಕ್ಕೆ ಆಗಮಿಸುವರೆಂದಾಗ ಅಲ್ಲಿನ ಮುಖ್ಯಮಂತ್ರಿಯೇ ಖುದ್ದು ವಿಮಾನ ನಿಲ್ದಾಣದಲ್ಲಿ ಹಾಜರಿದ್ದು ಪ್ರಧಾನಿಗೆ ಸ್ವಾಗತ ಕೋರುವುದು ಶಿಷ್ಟಾಚಾರ. ಈ ವಿಚಾರದಲ್ಲಿ ತೃಣಮಾತ್ರವೂ ಪಕ್ಷ ರಾಜಕಾರಣ ಮಾಡಬಾರದು. ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ ತೆಲಂಗಾಣ ರಾಜಧಾನಿ ಹೈದರಾಬಾದ್‌ಗೆ ಭೇಟಿ ನೀಡಿದಾಗ, ಹೀಗೆ ಸ್ವಾಗತ ಕೋರಬೇಕಿದ್ದ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ (ಕೆಸಿಆರ್) ಅಲ್ಲಿರಲಿಲ್ಲ. ಆ ಸಮಯದಲ್ಲಿ ಅವರು ಬೆಂಗಳೂರಿನಲ್ಲಿದ್ದರು.

ಈ ಹಿಂದೆಯೂ ಒಮ್ಮೆ ಪ್ರಧಾನಿಯವರು ಹೈದರಾಬಾದ್‌ಗೆ ಭೇಟಿ ನೀಡಿದ್ದ ಸಮಯದಲ್ಲಿ ಕೆಸಿಆರ್ ವಿಮಾನ ನಿಲ್ದಾಣಕ್ಕೆ ಬಂದಿರಲಿಲ್ಲ. ತಮ್ಮ ಬದಲಿಗೆ ಸಚಿವರೊಬ್ಬರನ್ನು ಆ ಕೆಲಸಕ್ಕೆ ನಿಯೋಜಿಸಿದ್ದರು. ಮುಖ್ಯಮಂತ್ರಿ ಆದವರು ಅನಾರೋಗ್ಯದಿಂದಲೋ ಅಥವಾ ಅನಿವಾರ್ಯ ಕಾರಣಗಳಿಂದಲೋ ಪ್ರಧಾನಿ ಆಗಮನದ ಸಮಯದಲ್ಲಿ ಉಪಸ್ಥಿತರಿರಲು ಸಾಧ್ಯವಿಲ್ಲ ಎಂದಾದಾಗ, ಅವರ ಬದಲಿಗೆ ರಾಜ್ಯದ ಹಿರಿಯ ಸಚಿವರನ್ನು ನಿಯೋಜಿಸುವುದು ಸರಿ. ಆದರೆ ದೇಶದ ಒಕ್ಕೂಟ ವ್ಯವಸ್ಥೆಯ ಭಾಗವಾದ ರಾಜ್ಯವೊಂದಕ್ಕೆ ಪ್ರಧಾನಿ ಭೇಟಿ ನೀಡಿದಾಗ ಸಕಾರಣಗಳಿಲ್ಲದೆ ಕನಿಷ್ಠ ಅವರನ್ನು ಸ್ವಾಗತಿಸಲೂ ಮುಖ್ಯಮಂತ್ರಿಗೆ ಸಮಯವಿಲ್ಲವೇ ಎಂಬುದು ಗಂಭೀರ ಪ್ರಶ್ನೆ. ಇದರಿಂದ ದೇಶದ ಜನರಿಗೆ ಅದೆಂತಹ ಕೆಟ್ಟ ಸಂದೇಶ ರವಾನೆಯಾಗುತ್ತದೆ ಎಂಬುದು ಗಮನಾರ್ಹ. ಪಕ್ಷ ಸಿದ್ಧಾಂತವೇ ಬೇರೆ, ಗಣತಂತ್ರ ಒಕ್ಕೂಟದಲ್ಲಿ ಪಾಲನೆ ಆಗುತ್ತಿರುವ ಶಿಷ್ಟಾಚಾರ ಮತ್ತು ಸಂಪ್ರದಾಯಗಳೇ ಬೇರೆ. ಈ ದಿಸೆಯಲ್ಲಿ ಕೆಸಿಆರ್, ಪಕ್ಷದ ಚೌಕಟ್ಟು, ಪ್ರಣಾಳಿಕೆ, ನೀತಿ ಮತ್ತು ಸಿದ್ಧಾಂತವನ್ನು ಮೀರಿ ಪ್ರಧಾನಿಗೆ ಸ್ವಾಗತ ಕೋರಿ ಸಂವಿಧಾನವನ್ನು ಗೌರವಿಸಬೇಕಿತ್ತು. ಈ ಹಿಂದೆ ಎನ್‌ಡಿಎ ಮೈತ್ರಿಕೂಟದ ಸರ್ಕಾರದಲ್ಲಿ ಪ್ರಧಾನಿ ಆಗಿದ್ದ ಅಟಲ್ ಬಿಹಾರಿ ವಾಜಪೇಯಿ ಅವರು ಚುನಾವಣಾ ಪ್ರಚಾರಕ್ಕೆಂದು ದೆಹಲಿಯಿಂದ ಬೆಂಗಳೂರಿಗೆ ಆಗಮಿಸಿದ್ದರು. ಆಗ ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಇತ್ತು. ಮುಖ್ಯಮಂತ್ರಿಯಾಗಿದ್ದ ಎಸ್.ಎಂ.ಕೃಷ್ಣ ಅವರು ವಿಮಾನ ನಿಲ್ದಾಣಕ್ಕೆ ಖುದ್ದು ಆಗಮಿಸಿ ಸ್ವಾಗತಿಸಿದ್ದರು. ಇಂತಹ ನಡೆಗಳಿಂದ ರಾಜ್ಯದ ಘನತೆಯೂ ಹೆಚ್ಚುತ್ತದೆ.

ಬೇ.ನ.ಶ್ರೀನಿವಾಸಮೂರ್ತಿ, ತುಮಕೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಮೋದಿ ಆಳ್ವಿಕೆಯ 8 ವರ್ಷಗಳು



2014ರಲ್ಲಿ ಪ್ರಧಾನಿ ಹುದ್ದೆಗೇರಿದ ನರೇಂದ್ರ ಮೋದಿ ಅವರು ಆ ಹುದ್ದೆಯಲ್ಲಿ ಎಂಟು ವರ್ಷಗಳನ್ನು ಪೂರೈಸಿದ್ದಾರೆ. ಈ ಅವಧಿಯಲ್ಲಿ ದೂರಗಾಮಿಯಾದ ಹಲವು ನಿರ್ಧಾರಗಳನ್ನು ಸರ್ಕಾರ ಕೈಗೊಂಡಿದೆ. ಜಮ್ಮು-ಕಾಶ್ಮೀರದ ವಿಶೇಷ ಸ್ಥಾನವನ್ನು ರದ್ದುಪಡಿಸಲಾಗಿದೆ. ಇದು ಬಿಜೆಪಿಯ ಪ್ರಣಾಳಿಕೆಯಲ್ಲಿ ಹಲವು ವರ್ಷಗಳಿಂದ ಇದ್ದ ವಿಚಾರ. ಆದರೆ, ಈ ನಿರ್ಧಾರಕ್ಕೆ ಭಾರಿ ವಿರೋಧವೂ ವ್ಯಕ್ತವಾಗಿದೆ. ಪಾಕಿಸ್ತಾನ ನೆಲದಲ್ಲಿ ಅಡಗಿದ್ದ ಉಗ್ರರ ಮೇಲೆ ನಿರ್ದಿಷ್ಟ ದಾಳಿ, ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ತನ್ನ ದೊಡ್ಡ ಸಾಧನೆ ಎಂದು ಸರ್ಕಾರ ಹೇಳಿಕೊಂಡಿದೆ. ಇದರ ಜತೆಗೆ ನೋಟು ರದ್ದತಿ, ಕೋಮು ಧ್ರುವೀಕರಣ, ಕೋವಿಡ್ ನಿರ್ವಹಣೆಯಲ್ಲಿ ವೈಫಲ್ಯದ ಆರೋಪದಂತಹ ವಿಚಾರಗಳೂ ಇವೆ

ಪ್ರತಿಭಟನೆಯ ಬಿಸಿ, ವೈಫಲ್ಯ-ಭ್ರಷ್ಟಾಚಾರದ ಆರೋಪ

ನರೇಂದ್ರ ಮೋದಿ ಅವರ ಎಂಟು ವರ್ಷಗಳ ಆಳ್ವಿಕೆಯ ಅವಧಿಯಲ್ಲಿ ಹಲವು ವಿಚಾರಗಳ ಬಗ್ಗೆ ಟೀಕೆ, ಪ್ರತಿಭಟನೆ ಮತ್ತು ಪ್ರತಿರೋಧ ವ್ಯಕ್ತವಾಗಿದೆ. ತೀರಾ ಇತ್ತೀಚಿನದ್ದು ಎಂದರೆ, ಕೇಂದ್ರವು ಜಾರಿಗೆ ತಂದಿದ್ದ ಮೂರು ಕೃಷಿ ಕಾಯ್ದೆಗಳ ವಿರುದ್ಧ ನಡೆದ ಪ್ರತಿಭಟನೆ. 2020ರ ಸೆಪ್ಟೆಂಬರ್‌ನಲ್ಲಿ ಕೃಷಿ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆಗಳಿಗೆ ಕಾರಣವಾಗಬಹುದಾದ ಮೂರು ಕಾಯ್ದೆಗಳನ್ನು ಸಂಸತ್ತು ಅಂಗೀಕರಿಸಿತ್ತು. ಅದಾಗಿ ಕೆಲವೇ ದಿನಗಳಲ್ಲಿ, ಪಂಜಾಬ್ ಮತ್ತು ಹರಿಯಾಣದ ರೈತರು 2020ರ ನವೆಂಬರ್ 25ರಂದು 'ದೆಹಲಿ ಚಲೋ' ನಡೆಸುವುದಾಗಿ ಘೋಷಿಸಿದರು. ಆದರೆ, ಅವರಿಗೆ ದೆಹಲಿಗೆ ಪ್ರವೇಶ ನಿರಾಕರಿಸಲಾಯಿತು. ರೈತರ ಮೇಲೆ ಲಾಠಿ, ಜಲಫಿರಂಗಿ, ಅಶ್ರುವಾಯು ಷೆಲ್ ಪ್ರಯೋಗ ಎಲ್ಲವೂ ನಡೆದವು. ಎಲ್ಲ ಅಡೆತಡೆಗಳನ್ನು ದಾಟಿ ರೈತರು ದೆಹಲಿ ಗಡಿ ತಲುಪಿದರು. ಹಲವು ಸುತ್ತಿನ ಮಾತುಕತೆ ನಡೆದರೂ ಸಮಸ್ಯೆ ಬಗೆಹರಿಯಲಿಲ್ಲ. ಕೊನೆಗೂ ಸರ್ಕಾರ ಮಣಿಯಬೇಕಾಯಿತು. ಸರ್ಕಾರವು 2021ರ ನವೆಂಬರ್ 19ರಂದು ಕಾಯ್ದೆಗಳನ್ನು ಹಿಂದಕ್ಕೆ ಪಡೆಯಿತು. ಮೋದಿ ನೇತೃತ್ವದ ಸರ್ಕಾರಕ್ಕೆ ಎದುರಾದ ಅತಿ ದೊಡ್ಡ ಹಿನ್ನಡೆ ಇದು.

ಸಿಎಎ ವಿರೋಧಿ ಹೋರಾಟ: 2019ರ ಡಿಸೆಂಬರ್‌ನಲ್ಲಿ ಸಂಸತ್ತಿನ ಅಂಗೀಕಾರ ಪಡೆದ ಪೌರತ್ವ ತಿದ್ದುಪಡಿ ಕಾಯ್ದೆಯು (ಸಿಎಎ), 2020ರ ಜನವರಿಯಲ್ಲಿ ಜಾರಿಗೆ ಬಂತು. ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಅಫ್ಗಾನಿಸ್ತಾನದಿಂದ ವಲಸೆ ಬಂದು ಭಾರತದಲ್ಲಿ ಆರು ವರ್ಷ ನೆಲೆಸಿದ ಹಿಂದೂ, ಸಿಖ್, ಬೌದ್ಧ, ಪಾರ್ಸಿ ಮತ್ತು ಕ್ರೈಸ್ತರಿಗೆ ಪೌರತ್ವ ನೀಡುವುದು ಈ ಕಾಯ್ದೆಯ ಉದ್ದೇಶ. ಕಾಯ್ದೆಯು ಮುಸ್ಲಿಮರನ್ನು ತಾರತಮ್ಯದಿಂದ ನೋಡಿದೆ ಎಂಬ ಆರೋಪ ಕೇಳಿ ಬಂತು. ಈ ಕಾಯ್ದೆಯ ವಿರುದ್ಧ ದೇಶದಾದ್ಯಂತ ತೀವ್ರವಾದ ಪ್ರತಿಭಟನೆ ನಡೆಯಿತು. 2019ರ ಡಿಸೆಂಬರ್‌ನಲ್ಲಿ ದೆಹಲಿಯ ಶಾಹೀನ್‌ಬಾಗ್‌ನಲ್ಲಿ ಶುರುವಾದ ಪ್ರತಿಭಟನೆಯು 2020ರ ಮಾರ್ಚ್‌ನಲ್ಲಿ ಕೋವಿಡ್ ತಡೆಗಾಗಿ ಲಾಕ್‌ಡೌನ್ ಹೇರುವವರೆಗೆ ನಡೆಯಿತು.

ರಫೇಲ್ ಪ್ರಕರಣ: ಫ್ರಾನ್ಸ್‌ನ ಡಾಸೋ ಕಂಪನಿಯಿಂದ ರಫೇಲ್ ಯುದ್ಧ ವಿಮಾನ ಖರೀದಿಯಲ್ಲಿ ಅವ್ಯವಹಾರ ನಡೆದಿದೆ ಎಂಬ ಆರೋಪ ಎನ್‌ಡಿಎ ಸರ್ಕಾರದ ವಿರುದ್ಧ ಕೇಳಿ ಬಂದಿತ್ತು. ಹಿಂದಿನ ಯುಪಿಎ ಸರ್ಕಾರದ ಅವಧಿಯಲ್ಲಿ ಡಾಸೋ ಕಂಪನಿಯಿಂದ 126 ಯುದ್ಧ ವಿಮಾನ ಖರೀದಿಸುವ ಒಪ್ಪಂದ ಆಗಿತ್ತು. ಎನ್‌ಡಿಎ ಸರ್ಕಾರವು ಅದೇ ಮೊತ್ತಕ್ಕೆ ಕೇವಲ 36 ವಿಮಾನಗಳನ್ನು ಖರೀದಿಸಿದೆ. ಹಾಗಾಗಿ, ಈ ಖರೀದಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬುದು ವಿರೋಧ ಪಕ್ಷಗಳ ಆರೋಪವಾಗಿತ್ತು. ಭಾರತದ ಮಧ್ಯವರ್ತಿಗಳಿಗೆ ಡಾಸೋ ಕಂಪನಿಯು ಹಣ ನೀಡಿದೆ ಎಂಬ ವರದಿಗಳನ್ನು ಫ್ರಾನ್ಸ್‌ನ ಮೀಡಿಯಾಪಾರ್ಟ್ ಮಾಧ್ಯಮವು ಪ್ರಕಟಿಸಿತ್ತು.


ಕೋವಿಡ್ ಕರಾಳ ನೆನಪು: ಕೋವಿಡ್ ನಿರ್ವಹಣೆಯಲ್ಲಿ ಕೇಂದ್ರ ಸರ್ಕಾರವು ದಯನೀಯವಾಗಿ ವಿಫಲವಾಗಿದೆ ಎಂದು ವಿರೋಧ ಪಕ್ಷಗಳು ಹಲವು ಬಾರಿ ಆರೋಪಿಸಿದ್ದವು. ಹಾಸಿಗೆ, ಔಷಧ, ಆಮ್ಲಜನಕ ಕೊರತೆ ದೇಶವು ತತ್ತರಿಸುವಂತೆ ಮಾಡಿತ್ತು. ಕೇಂದ್ರವು ಹೇರಿದ್ದ ಲಾಕ್‌ಡೌನ್‌ನಿಂದಾಗಿ ವಿವಿಧ ಸ್ಥಳಗಳಲ್ಲಿದ್ದ ವಲಸೆ ಕಾರ್ಮಿಕರು ಭಾರಿ ಸಂಕಷ್ಟಕ್ಕೆ ಒಳಗಾಗಿದ್ದರು. ಸಾವಿರಾರು ಮಂದಿ ನಡೆದೇ ಊರು ಸೇರಿದ್ದರು. ನೂರಾರು ಮಂದಿ ಸತ್ತಿದ್ದರು.

ನೋಟು ರದ್ದತಿ: ₹500 ಮತ್ತು ₹1000 ಮುಖಬೆಲೆಯ ನೋಟುಗಳನ್ನು ಕೇಂದ್ರವು 2016ರ ನವೆಂಬರ್ 8ರಂದು ಅಮಾನ್ಯ ಮಾಡಿದ್ದು ಅತಿ ಹೆಚ್ಚು ಚರ್ಚೆಗೊಳಗಾದ ನಿರ್ಧಾರ. ನೋಟು ರದ್ದಾದ ನಂತರದ ಹಣ ಪಡೆಯಲು ಎಟಿಎಂನಲ್ಲಿ ದಿನಗಟ್ಟಲೆ ಸಾಲು ನಿಂತಿದ್ದ ಹಲವು ಮಂದಿ ಮೃತಪಟ್ಟಿದ್ದರು. ನೋಟು ರದ್ದತಿಯಿಂದ ಆದ ಲಾಭವೇನು ಎಂಬುದನ್ನು ಸರ್ಕಾರವು ಈ ವರೆಗೂ ಬಹಿರಂಗಪಡಿಸಿಲ್ಲ.

ಗೂಢಚರ್ಯೆ: ಇಸ್ರೇಲ್‌ನ ಎನ್‌ಎಸ್‌ಒ ಕಂಪನಿಯು ತಯಾರಿಸುವ ಗೂಢಚರ್ಯೆ ತಂತ್ರಾಂಶವನ್ನು ಭಾರತದ ರಾಜಕಾರಣಿಗಳು, ನ್ಯಾಯಮೂರ್ತಿಗಳು, ಪತ್ರಕರ್ತರು, ಸಾಮಾಜಿಕ ಕಾರ್ಯಕರ್ತರ ಮೇಲೆ ಬಳಸಲಾಗಿದೆ ಎಂಬ ಆರೋಪವು 2021ರಲ್ಲಿ ಭಾರಿ ಸದ್ದು ಮಾಡಿತ್ತು.


ನಿರುದ್ಯೋಗ ಸ್ಥಿತಿಗತಿ

ಭಾರತದಲ್ಲಿ ನಿರುದ್ಯೋಗ ಪ್ರಮಾಣದಲ್ಲಿ ಹೆಚ್ಚಳದ ಪ್ರವೃತ್ತಿ ಕಂಡುಬಂದಿದೆ ಎಂಬ ಅಂಶವನ್ನು ಸಿಎಂಐಇ ದತ್ತಾಂಶಗಳು ಉಲ್ಲೇಖಿಸಿವೆ. ಎನ್‌ಡಿಎ ಸರ್ಕಾರವು ಅಧಿಕಾರಕ್ಕೆ ಬರುವ ಪೂರ್ವದಲ್ಲಿ, 2014ರಲ್ಲಿ ದೇಶದ ನಿರುದ್ಯೋಗ ದರ ಶೇ 5.6ರಷ್ಟಿತ್ತು. 2016ರ ವೇಳೆಗೆ ಈ ಪ್ರಮಾಣ ಶೇ 8.9ಕ್ಕೆ ಏರಿಕೆಯಾಯಿತು. ನಂತರದ ವರ್ಷಗಳಲ್ಲಿ ಸ್ವಲ್ಪ ತಗ್ಗಿದರೂ, 2019ರಿಂದ ಏರಿಕೆಯಾಗುತ್ತಲೇ ಇದೆ. ಕೋವಿಡ್ ಬಾಧಿಸಿದ್ದ 2020ರಲ್ಲಿ ಅದು ಶೇ 23ರಷ್ಟಕ್ಕೆ ಹೆಚ್ಚಳ ಕಂಡಿತ್ತು.



ವರ್ಚಸ್ಸು ಹೆಚ್ಚಿಸಿಕೊಳ್ಳದ ರೂಪಾಯಿ

ಅಮೆರಿಕ ಡಾಲರ್ ಎದುರು ಭಾರತೀಯ ರೂಪಾಯಿ ಮೌಲ್ಯ ಕುಸಿತದ ಹಾದಿ ಹಿಡಿದಿದೆ. ಪ್ರಸಕ್ತ ವರ್ಷ ಕುಸಿತದಲ್ಲಿ ರೂಪಾಯಿಯು ಸಾರ್ವಕಾಲಿಕ ದಾಖಲೆಯನ್ನು ಬರೆದಿದೆ. 2014ರಲ್ಲಿ ಎನ್‌ಡಿಎ ಸರ್ಕಾರ ಆಡಳಿತ ವಹಿಸಿಕೊಂಡಾಗ ಒಂದು ಅಮೆರಿಕನ್ ಡಾಲರ್‌ಗೆ ಭಾರತದ ₹60.99 ವಿನಿಮಯ ದರ ನೀಡಬೇಕಿತ್ತು. ಕರೆನ್ಸಿ ವಿನಿಮಯ ದರವನ್ನು ಕಡಿತಗೊಳಿಸುವುದಾಗಿ ಸರ್ಕಾರ ಭರವಸೆ ನೀಡಿತ್ತಾದರೂ ಅದು ಏರಿಕೆಯಾಗುತ್ತಲೇ ಸಾಗಿದೆ. 2022ರಲ್ಲಿ ಸರಾಸರಿ 75 ರೂಪಾಯಿಯನ್ನು ತಲುಪಿದ್ದು, ಪ್ರತಿಪಕ್ಷಗಳು ಸರ್ಕಾರದ ಆರ್ಥಿಕ ನೀತಿಯನ್ನು ತರಾಟೆಗೆ ತೆಗೆದುಕೊಂಡಿವೆ.



ಸರ್ಕಾರದ ಕೆಲ ಯೋಜನೆಗಳಲ್ಲಿ ಪ್ರಗತಿ

ಎನ್‌ಡಿಎ ಸರ್ಕಾರದ ಈ ಎಂಟು ವರ್ಷಗಳಲ್ಲಿ ಸರ್ಕಾರದ ಹಲವು ಯೋಜನೆಗಳು ಜನರನ್ನು ತಲುಪಿವೆ ಎಂದು ಸರ್ಕಾರ ಪ್ರತಿಪಾದಿಸಿದೆ. ಕೋವಿಡ್ ತಡೆ ಲಸಿಕೆ ಕಾರ್ಯಕ್ರಮದಲ್ಲಿ ಸರ್ಕಾರ ಪ್ರಗತಿ ಸಾಧಿಸಿದೆ. ಈವರೆಗೆ 193 ಕೋಟಿ ಡೋಸ್ ಲಸಿಕೆಗಳನ್ನು ಉಚಿತವಾಗಿ ನೀಡಲಾಗಿದೆ. ಒಟ್ಟು 88 ಕೋಟಿ ಜನರು ಲಸಿಕೆಯ ಎರಡೂ ಡೋಸ್‌ಗಳನ್ನು ಹಾಕಿಸಿಕೊಂಡಿದ್ದು ಲಸಿಕಾ ಅಭಿಯಾನ ಮುಂದುವರಿಯುತ್ತಿದೆ.

ಮೋದಿ ನೇತೃತ್ವದ ಸರ್ಕಾರ ಜಾರಿಗೆ ತಂದಿದ್ದ ಜನಧನ್ ಯೋಜನೆಯೂ ಯಶಸ್ವಿಯಾಗಿದೆ ಎನ್ನಲಾಗಿದೆ. ಯೋಜನೆಯಡಿ 45.47 ಕೋಟಿ ಜನರು ಬ್ಯಾಂಕ್ ಖಾತೆ ತೆರೆದಿದ್ದಾರೆ. ಎಲ್ಲ ಖಾತೆಗಳಿಂದ ಈವರೆಗೆ ₹1.67 ಲಕ್ಷ ಕೋಟಿ ಠೇವಣಿ ಸಂಗ್ರಹವಾಗಿದೆ. ಯೋಜನೆಯ ಫಲಾನುಭವಿಗಳಿಗೆ 31 ಕೋಟಿ ರುಪೇ ಕಾರ್ಡ್‌ಗಳನ್ನು ವಿತರಿಸಲಾಗಿದೆ. ವಿದ್ಯುಚ್ಛಕ್ತಿ ಉಳಿತಾಯ ದಿಸೆಯಲ್ಲಿ ಜಾರಿಗೆ ತಂದ ಉಜಾಲ ಯೋಜನೆಯಡಿಯಲ್ಲಿ ಈವರೆಗೆ 36 ಕೋಟಿ ಎಲ್‌ಇಡಿ ಬಲ್ಬ್‌ಗಳನ್ನು ಜನರಿಗೆ ವಿತರಿಸಲಾಗಿದೆ. ಗ್ರಾಮೀಣ ಭಾರತದ ಮಹಿಳೆಯರಿಗಾಗಿ ಜಾರಿಗೊಳಿಸಲಾಗಿರುವ ಉಜ್ವಲ ಯೋಜನೆಯನ್ನು ಮುಂದುವರಿಸಲಾಗಿದ್ದು, 9 ಕೋಟಿ ಎಲ್‌ಜಿಪಿ ಸಿಲಿಂಡರ್ ಸಂಪರ್ಕಗಳನ್ನು ಒದಗಿಸಲಾಗಿದೆ ಎಂದು ಸರ್ಕಾರದ ಅಂಕಿಅಂಶಗಳು ತಿಳಿಸಿವೆ. ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ನಗರ ಪ್ರದೇಶದಲ್ಲಿ 1.22 ಕೋಟಿ ಮನೆಗಳು, ಗ್ರಾಮೀಣ ಪ್ರದೇಶದಲ್ಲಿ 2.4 ಕೋಟಿ ಮನೆಗಳ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿದೆ. ಶೌಚಾಲಯ ನಿರ್ಮಾಣದಲ್ಲಿ ಗಮನಾರ್ಹ ಪ್ರಗತಿ ಸಾಧಿಸಲಾಗಿದೆ ಎಂದು ಸರ್ಕಾರ ಪ್ರತಿಪಾದಿಸಿದೆ.

ಸುಧಾರಿಸದ ಆರ್ಥಿಕ ಸ್ಥಿತಿ

ದೇಶದ ಆರ್ಥಿಕ ಸ್ಥಿತಿ ನಿರೀಕ್ಷಿತ ಮಟ್ಟದಲ್ಲಿಲ್ಲ ಎಂದು ಆರ್ಥಿಕ ತಜ್ಞರು ವಿಶ್ಲೇಷಿಸಿದ್ದಾರೆ. ವಿದೇಶಿ ವಿನಿಮಯ ಮೀಸಲು ಪ್ರಮಾಣ ಇತ್ತೀಚಿನ ದಿನಗಳಲ್ಲಿ ಕರಗಿದೆ. ದೇಶದ ಒಟ್ಟು ಆಂತರಿಕ ಉತ್ಪನ್ನ (ಜಿಡಿಪಿ) ಪ್ರಮಾಣವೂ ಕಡಿಮೆಯಾಗಿದೆ. ಇಂಧನ ಹಾಗೂ ಆಹಾರ ಪದಾರ್ಥಗಳ ಬೆಲೆ ಏರಿಕೆಯಿಂದ ದೇಶದಲ್ಲಿ ಚಿಲ್ಲರೆ ಹಣದುಬ್ಬರದ ಪ್ರಮಾಣ ಏರಿಕೆಯಾಗುತ್ತಿದೆ. ಹಣದುಬ್ಬರವನ್ನು ಶೇ 6ಕ್ಕಿಂತ ಹೆಚ್ಚಿಗೆ ಆಗದಂತೆ ನೋಡಿಕೊಳ್ಳುವ ಗುರಿ ಈಡೇರಿಲ್ಲ. 2022ರ ಏಪ್ರಿಲ್‌ನಲ್ಲಿ ಶೇ 7.79ರಷ್ಟು ಹಣದುಬ್ಬರ ದಾಖಲಾಗಿದೆ.

ಇಂಧನ ದರವು ದೇಶದ ಜನರಿಗೆ ಹೊರೆಯೆನಿಸಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪ್ರತೀ ಬ್ಯಾರಲ್ ಕಚ್ಚಾತೈಲದ ದರ 118 ಡಾಲರ್ ಇದ್ದು, ಪೆಟ್ರೋಲ್ ಬೆಲೆ ಬೆಂಗಳೂರಿನಲ್ಲಿ ₹101.92 ಇದೆ. 2014ರಲ್ಲಿ ಪ್ರತಿ ಬ್ಯಾರಲ್ ಕಚ್ಚಾತೈಲದ ದರ 106.85 ಡಾಲರ್ ಇತ್ತು. ಆಗ ದೇಶದ ಪೆಟ್ರೋಲ್ ಬೆಲೆ ಲೀಟರ್‌ಗೆ ₹74 ಇತ್ತು.

ಆಧಾರ: ಸಿಎಂಐಇ, ಆರ್‌ಬಿಐ, ಎಕ್ಸ್‌ಚೇಂಜ್ ರೇಟ್ಸ್, ಎಚ್‌ಪಿಸಿಎಲ್, ಪಿಟಿಐ

ಇಡೀ ಜಗತ್ತಿಗೆ ಮೋದಿ ಮೋಡಿ

• ಪಿ. ರಾಜೀವ್



ವಿಭಿನ್ನ ಭಾಷೆ, ಸಂಸ್ಕೃತಿ, ಆಚಾರ-ವಿಚಾರವನ್ನೊಳಗೊಂಡ 130 ಕೋಟಿಗೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಭಾರತವು ಒಬ್ಬ ವ್ಯಕ್ತಿಯ ಸಂದೇಶ ಮತ್ತು ಸೂಚನೆಗಳಿಗೆ ತಲೆದೂಗುವಂತೆ ತೋರುವುದರ ಹಿಂದಿನ ಅಗೋಚರವಾದ ನಂಬಿಕೆ ಯಾವುದಿರಬಹುದು? ಸ್ವಚ್ಛಭಾರತ ಅಭಿಯಾನಕ್ಕೆ ಕರೆಕೊಟ್ಟಾಗ ಇಡೀ ದೇಶದ ಒಂದು ಸಮೂಹ ಕೈಯಲ್ಲಿ ಪೊರಕೆಯನ್ನು ಹಿಡಿದು ಕಾಯಕದಲ್ಲಿ ತೊಡಗಿದ್ದನ್ನು ನೋಡಿದ್ದೇವೆ. ಕೊರೊನಾದಂತಹ ರೋಗಾಣು ಅಪ್ಪಳಿಸಿದ ಭರಕ್ಕೆ ಇಡೀ ಜಗತ್ತು ಹಾನಿಗೊಳಗಾದಾಗ ದೀಪವನ್ನು ಬೆಳಗಿಸಿ ಗಂಟೆ-ಜಾಗಟೆಯನ್ನು ಮೊಳಗಿಸಲು ನರೇಂದ್ರ ಮೋದಿಯವರು ಕರೆ ನೀಡಿದಾಗ ಇಡೀ ದೇಶವೇ ಶ್ರದ್ಧಾಪೂರ್ವಕವಾಗಿ ಸೂಚನೆಯನ್ನು ಅನುಸರಿಸುತ್ತದೆ.

ಇದು ಭಾರತ ದೇಶಕ್ಕೆ ಮಾತ್ರ ಸೀಮಿತವಾಗಿ ನಿಲ್ಲುವುದಿಲ್ಲ. ಜಗತ್ತಿನಾದ್ಯಂತ ಯೋಗ ಆಚರಣೆ ನಡೆಯಬೇಕು ಎಂಬ ಭಾರತದ ಕೋರಿಕೆಗೆ ವಿಶ್ವಸಂಸ್ಥೆ ಮನ್ನಣೆ ನೀಡಿ, ಜೂನ್ 21 ಅನ್ನು ಅಂತರರಾಷ್ಟ್ರೀಯ ಯೋಗ ದಿನವನ್ನಾಗಿ ಘೋಷಿಸಿತು. ಇಂದು ದೇಶದ ಪುಟ್ಟ ಹಳ್ಳಿಯಿಂದ ಹಿಡಿದು ಜಗತ್ತಿನ ಪ್ರಮುಖ ರಾಷ್ಟ್ರಗಳೆಲ್ಲವೂ ಮೋದಿಯವರ ಮೋಡಿಗೆ ಒಳಗಾಗಿವೆಯೆಂದರೆ ಅತಿಶೋಯಕ್ತಿಯೇನಲ್ಲ!

ನರೇಂದ್ರ ಮೋದಿಯವರು ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದಾಗ ಭಾರತದ 18 ಸಾವಿರ ಹಳ್ಳಿಗಳಿಗೆ ವಿದ್ಯುತ್ ಸಂಪರ್ಕ ದೊರೆತಿರಲಿಲ್ಲ. ಕೇವಲ 1 ಸಾವಿರ ದಿನಗಳಲ್ಲಿ 18 ಸಾವಿರ ಹಳ್ಳಿಗಳನ್ನು ವಿದ್ಯುದೀಕರಣಗೊಳಿಸಲಾಯಿತು. ಪ್ರತಿವರ್ಷ ಹತ್ತಾರು ಸಾವಿರ ಮಹಿಳೆಯರು ಶ್ವಾಸಕೋಶದ ಕ್ಯಾನ್ಸರ್‌ನಿಂದ ಸಾಯುತ್ತಿದ್ದರು. ಹೊಗೆಯುಕ್ತ ವಾತಾವರಣದಲ್ಲಿ ಕೆಲಸ ನಿರ್ವಹಿಸುವ ಅನಿವಾರ್ಯವು ಕ್ಯಾನ್ಸರ್‌ಗೆ ಕಾರಣವಾಗುತ್ತಿತ್ತು. ಹೊಗೆಮುಕ್ತ ಅಡುಗೆ ಮನೆಯ ಕನಸು ಕಂಡ ಮೋದಿಯವರು ಉಜ್ವಲ ಯೋಜನೆ ಮೂಲಕ ತಲುಪಿದ್ದು ಬರೋಬ್ಬರಿ 9 ಕೋಟಿ ಕುಟುಂಬಗಳನ್ನು.

ಆರ್ಥಿಕ ಚಟುವಟಿಕೆಗಳಲ್ಲಿ ಜನಸಾಮಾನ್ಯನೂ ತೊಡಗಿಕೊಳ್ಳುವಂತೆ ಮಾಡಿದ ಪ್ರಧಾನ ಮಂತ್ರಿ 'ಜನ್‌ಧನ್ ಯೋಜನೆ', ಉತ್ಪಾದನೆಯನ್ನು ಹೆಚ್ಚಿಸಿ ರಫ್ತು ಕೈಗೊಳ್ಳುವ 'ಮೇಕ್ ಇನ್ ಇಂಡಿಯಾ' ಯೋಜನೆ, ಕಾರ್ಮಿಕ ನೀತಿ ಹಾಗೂ ಶ್ರಮಿಕರ ಘನತೆಯನ್ನು ಉತ್ತೇಜಿಸುವ ಶ್ರಮ ಏವ ಜಯತೆ, ಅಟಲ್ ಪಿಂಚಣಿಯಿಂದ ಹಿಡಿದು ಹೊಸ ಯೋಜನೆಗಳೆಲ್ಲವನ್ನೂ ತಂತ್ರಜ್ಞಾನ ಅಳವಡಿಕೆಗೆ ಹೊಂದಿಸಲಾಯಿತು. ಡಿಜಿಟಲ್ ಇಂಡಿಯಾ ಮಿಷನ್ ಜನರಲ್ಲಿ ಮಹತ್ತರ ಬದಲಾವಣೆಗೆ ಕಾರಣವಾಯಿತು.

ದೇಶದ ಬಹುಪಾಲು ಆದಾಯ ವಿದೇಶಗಳಿಂದ ಆಮದು ಮಾಡಿಕೊಳ್ಳುವ ಇಂಧನ ಹಾಗೂ ಯುದ್ಧ ಸಾಮಗ್ರಿಗಳ ಖರೀದಿಗೆ ವ್ಯಯವಾಗುತ್ತಿದೆ. 2050ರ ಹೊತ್ತಿಗೆ ಭಾರತವು ಇಂಧನ ಸ್ವಾವಲಂಬನೆ ಸಾಧಿಸಬೇಕು ಎಂದು ಮೋದಿಯವರು ಕರೆ ನೀಡಿದ್ದಾರೆ. 100 ಗಿಗಾವಾಟ್ ಸೌರ ವಿದ್ಯುತ್ ಹಾಗೂ 75 ಗಿಗಾವಾಟ್ ಪವನ ವಿದ್ಯುತ್ ಉತ್ಪಾದಿಸುವ ಯೋಜನೆಗೆ ನೀಲನಕ್ಷೆ ಸಿದ್ಧವಾಗಿದೆ. ರಕ್ಷಣಾ ಸಾಮಗ್ರಿಗಳಿಗೆ ವಿದೇಶಗಳನ್ನೇ ಆಶ್ರಯಿಸಿ ಅಪಾರ ಪ್ರಮಾಣದ ಹಣವನ್ನು ವ್ಯಯಿಸಬೇಕಾಗಿತ್ತು. ಭಾರತಕ್ಕೆ ಶಸ್ತ್ರಾಸ್ತ್ರಗಳನ್ನು ಪೂರೈಸುವ ರಾಷ್ಟ್ರಗಳೇ ಶತ್ರು ರಾಷ್ಟ್ರಗಳಿಗೂ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿದ್ದವು. ರಕ್ಷಣಾ ವೆಚ್ಚದ ಶೇ 80ರಷ್ಟು ಹಣವನ್ನು ಸ್ವದೇಶಿ ನಿರ್ಮಿತ ಉತ್ಪನ್ನಗಳ ಖರೀದಿಗೆ ಮೀಸಲಿಡುವುದರೊಂದಿಗೆ 'ಆತ್ಮ ನಿರ್ಭರ' ಭಾರತ ನಿರ್ಮಾಣಕ್ಕೆ ಆದ್ಯತೆ ನೀಡಲಾಗಿದೆ.

ಪ್ರತಿಯೊಬ್ಬ ಭಾರತೀಯ ಪ್ರಜೆಯ ಅಭಿವೃದ್ಧಿ ಹಾಗೂ ಸಂರಕ್ಷಣೆಯೊಂದಿಗೆ ರಾಷ್ಟ್ರ ನಿರ್ಮಾಣದ ಧ್ಯೇಯೋದ್ದೇಶದೊಂದಿಗೆ ಸಾಗುತ್ತಿರುವ ಮೋದಿಯವರ ನೇತೃತ್ವದ ಸರ್ಕಾರ ಎಂಟು ವರ್ಷಗಳನ್ನು ಪೂರೈಸುವುದರೊಂದಿಗೆ ರಾಷ್ಟ್ರೀಯತೆಯ ನಂಟನ್ನು ಬೆಸೆಯುವಲ್ಲಿ ಯಶಸ್ವಿಯಾಗಿ ಮುನ್ನಡೆಯುತ್ತಿದೆ.

ಲೇಖಕ: ಬಿಜೆಪಿ ರಾಜ್ಯ ಘಟಕದ ವಕ್ತಾರ, ಶಾಸಕ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 133

ವಸಿಷ್ಠ-ಅರುಂಧತಿ ವಿವಾಹ

ಶಂಕರನ ಮಾರ್ಗದರ್ಶನದಂತೆ ಯಜ್ಞಶಾಲೆಗೆ ಯಾರಿಗೂ ಕಾಣಿಸದಂತೆ ಹೋದ ಸಂಧ್ಯೆ, ಶಂಕರನ ಅನುಗ್ರಹದಿಂದ ಹವಿಸ್ಸಿನ ರೂಪ ಪಡೆದಳು. ಹವಿಸ್ಸಿನ ರೂಪದಲ್ಲಿ ಯಾಗಾಗ್ನಿಗೆ ಬೀಳುವ ಮುನ್ನ ಆಕೆ ತನಗೆ ತಪೋವಿಧಿಯನ್ನು ಉಪದೇಶಿಸಿದ ಬ್ರಹ್ಮಚಾರಿ ವೇಷಧಾರಿಯಾದ ವಸಿಷ್ಠಮುನಿಯನ್ನು ಸ್ಮರಿಸಿದಳು. ಏಕೆಂದರೆ, ಬ್ರಹ್ಮನ ಆದೇಶದಂತೆ ಸಂಧ್ಯೆಗೆ ತಪಸ್ಸನ್ನಾಚರಿಸುವ ವಿಧಾನವನ್ನು ವಸಿಷ್ಠ ತಿಳಿಸಿದ್ದ. ಅದು ಸಂಧ್ಯೆ ಮನಸ್ಸಿನಲ್ಲಿ ಒಳ್ಳೆಯ ಭಾವನೆ ಮೂಡಿಸಿತ್ತು. ತನಗೆ ತಪೋವಿಧಾನ ತಿಳಿಸಿದ ಮುನಿಯೇ ಮುಂದಿನ ಜನ್ಮದಲ್ಲಿ ತನ್ನ ಪತಿಯಾಗಬೇಕೆಂದು ಬಯಸಿದಳು. ಪುರೋಡಾಶರೂಪದಲ್ಲಿದ್ದ ಅವಳ ಶರೀರವು ಯಾಗಾಗ್ನಿಗೆ ಬಿದ್ದ ಕ್ಷಣದಲ್ಲಿಯೇ ಭಸ್ಮವಾಗಿ, ಆ ಪುರೋಡಾಶದ ಸುವಾಸನೆ ಅಲ್ಲೆಲ್ಲಾ ಹರಡಿತು. ಅಗ್ನಿಯು ಸಂಧ್ಯೆಯ ಶರೀರವನ್ನು ಸುಟ್ಟ ನಂತರ, ಶಂಕರನ ಅಪ್ಪಣೆಯಂತೆ ಪವಿತ್ರವಾದ ಅವಳ ದಿವ್ಯಶರೀರ ಸೂರ್ಯಮಂಡಲ ಪ್ರವೇಶಿಸುವಂತೆ ಮಾಡಿದ.

ಸಂಧ್ಯೆಯ ಶರೀರವನ್ನು ಸ್ವೀಕರಿಸಿದ ಸೂರ್ಯ, ಎರಡು ಭಾಗವಾಗಿ ವಿಭಜಿಸಿದ. ಅದನ್ನು ಪಿತೃ ಮತ್ತು ದೇವತೆಗಳ ಪ್ರೀತಿಗಾಗಿ ಹಂಚಿದ. ಇದರಿಂದ ಸಂಧ್ಯೆಯ ಶರೀರದ ಮೇಲುಭಾಗವು ರಾತ್ರಿ ಮತ್ತು ಹಗಲಿನ ಮಧ್ಯದಲ್ಲಿರುವ ಪ್ರಾತಸ್ಸಂಧ್ಯೆಯೆನಿಸಿ ದೇವತೆಗಳಿಗೆ ಪ್ರಿಯವೆನಿಸಿದರೆ, ಕೆಳಭಾಗದ ಶರೀರವು ಹಗಲು ರಾತ್ರಿಗಳ ಮಧ್ಯಭಾಗದಲ್ಲಿ ಬರುವ ಸಾಯಂಸಂಧ್ಯೆಯಾಗಿ ಪಿತೃಗಳಿಗೆ ತುಂಬಾ ಪ್ರಿಯವಾದುದಾಯಿತು. ಸಾಯಂಸಂಧ್ಯೆಯು ಪಿತೃಗಳಿಗೆ ಜನನಿಯಾಗಿಯೂ ಪ್ರಸಿದ್ಧಳಾದಳು. ಸೂರ್ಯೋದಯಕ್ಕಿಂತ ಮೊದಲು ಅರುಣನು ಉದಯಿಸುವ ಕಾಲದಲ್ಲಿ ಪ್ರಾತಸ್ಸಂಧ್ಯೆಯು ಹುಟ್ಟುವುದು. ಅದು ದೇವತೆಗಳಿಗೆ ಪ್ರಿಯವಾದುದು. ಬಳಿಕ ಸೂರ್ಯನು ರಕ್ತಕಮಲದಂತೆ ಕೆಂಬಣ್ಣವಾಗಿ ಅಸ್ತನಾಗುವಾಗ ಹುಟ್ಟುವ ಸಾಯಂಸಂಧ್ಯೆ ಪಿತೃಗಳಿಗೆ ಪ್ರಿಯವಾದುದು.

ಸಂಧ್ಯೆಯ ಪ್ರಾಣವನ್ನು ಮತ್ತು ಮನಸ್ಸನ್ನು ಶಂಕರ ದಿವ್ಯವಾದ ಶರೀರವುಳ್ಳ ವುಗಳನ್ನಾಗಿ ಮಾಡಿದ. ಮೇಧಾತಿಥಿಮುನಿಯ ಯಜ್ಞವು ಮುಗಿಯುವ ಹೊತ್ತಿಗೆ ಅಗ್ನಿಕುಂಡದಿಂದ ಪುಟಕ್ಕೆ ಹಾಕಿದ ಚಿನ್ನದಂತಿರುವ ಕನ್ಯೆಯಾಗಿ ಎದ್ದು ಬಂದಳು. ಅಗ್ನಿಯಿಂದ ಬಂದ ಕನ್ಯೆಯನ್ನು ಮೇಧಾತಿಥಿಮುನಿಯು ಎರಡು ಕೈಗಳಿಂದ ಎತ್ತಿಕೊಂಡ. ಆ ಮಗುವಿಗೆ ಅವಭೃಥಸ್ನಾನವನ್ನು ಮಾಡಿಸಿದ. ಅಧರ್ಮವನ್ನು ತಡೆಯುವ ಸಾಮರ್ಥ್ಯವುಳ್ಳವಳಾದುದರಿಂದ ಆಕೆಗೆ 'ಅರುಂಧತೀ' ಎಂದು ಹೆಸರನ್ನಿಟ್ಟ. ನಂತರ ಯಾಗವನ್ನು ಮುಗಿಸಿದ ಮೇಧಾತಿಥಿಯು ಕೃತಕೃತ್ಯನಾದವನಂತೆ ಸಂತೋಷಗೊಂಡ. ಅವನಿಗೆ ಅರುಂಧತಿ ಸಿಕ್ಕಿದ್ದು ಮಹಾಪುಣ್ಯ ಬಂದಂತಾಗಿತ್ತು. ತನ್ನ ಆಶ್ರಮದಲ್ಲಿ ಬಾಲಕಿಯನ್ನು ತುಂಬಾ ವಾತ್ಸಲ್ಯದಿಂದ ನೋಡಿಕೊಳ್ಳುತ್ತಾ, ಶಿಷ್ಯರೊಡನೆ ವಾಸಿಸುತ್ತಿದ್ದ. ಅರುಂಧತಿಯು ಚಂದ್ರಭಾಗಾ ನದಿತೀರದಲ್ಲಿರುವ ಮೇಧಾತಿಥಿಯ ತಾಪಸಾರಣ್ಯ ಎಂಬ ಆಶ್ರಮದಲ್ಲಿ ಬೆಳೆಯತೊಡಗಿದಳು. ಐದನೆಯ ವರ್ಷವು ಪ್ರಾಪ್ತವಾದಾಗ ಸಾಧ್ವಿಯಾದ ಆ ಅರುಂಧತಿಯು ತನ್ನ ಒಳ್ಳೆ ಗುಣಗಳಿಂದ ಚಂದ್ರಭಾಗಾನದಿ ಮತ್ತು ತಾಪಸ ಅರಣ್ಯವನ್ನು ಪವಿತ್ರವಾಗಿ ಮಾಡಿದಳು. ಮುಂದೆ ಅವಳು ಮದುವೆಯಾಗುವ ಪ್ರಾಪ್ತ ವಯಸ್ಸು ಬಂದಾಗ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರು ಮೇಧಾತಿಥಿಯ ಆಶ್ರಮಕ್ಕೆ ಬಂದು ಅರುಂಧತಿಗೆ ಬ್ರಹ್ಮಪುತ್ರನಾದ ವಸಿಷ್ಠ ಮುನಿಯೊಡನೆ ವಿವಾಹ ಮಾಡಿಸಿದರು. ಆನಂದಪ್ರದವಾದ ಮದುವೆಯಲ್ಲಿ ಭಾಗವಹಿಸಿದ ಎಲ್ಲಾ ದೇವತೆಗಳು ಮತ್ತು ಮುನಿಗಳು ತುಂಬಾ ಹರ್ಷದಿಂದ ತೃಪ್ತಿಪಟ್ಟರು.

ಈ ಸಂದರ್ಭದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರು ನವದಂಪತಿಗಳಾದ ಅರುಂಧತಿ ಮತ್ತು ವಸಿಷ್ಠರ ಶಿರಸ್ಸಿನಲ್ಲಿ ಪ್ರೋಕ್ಷಿಸಿದ ಆಶೀರ್ವಾದಜಲದಿಂದ ಶಿಪ್ರಾನದಿ ಸೇರಿದಂತೆ ಏಳು ಪವಿತ್ರವಾದ ನದಿಗಳು ಹುಟ್ಟಿದವು. ಪತಿವ್ರತೆಯ ರಲ್ಲಿ ಶ್ರೇಷ್ಠಳಾದ ಅರುಂಧತಿಯು ಸುಂದರನಾದ ವಸಿಷ್ಠಮುನಿಯನ್ನು ಪತಿಯಾಗಿ ಪಡೆದು ರಾರಾಜಿಸಿದಳು. ನವದಂಪತಿಗಳಿಗೆ ಶಕ್ತಿಮುನಿ ಮುಂತಾದ ಶ್ರೇಷ್ಠ ಪುತ್ರರು ಜನಿಸಿದರು.

ಹೀಗೆ ಬ್ರಹ್ಮ ನಾರದನಿಗೆ ಸಂಧ್ಯೆಯ ಕಥೆ ಹೇಳಿದ ನಂತರ 'ನಿನಗೆ ಸಂಧ್ಯಾದೇವಿಯ ಪವಿತ್ರವೂ ಶ್ರೇಷ್ಠವೂ ಸಕಲ ಇಷ್ಟಾರ್ಥಗಳನ್ನುಂಟು ಮಾಡುವಂತಹ ದಿವ್ಯಚರಿತ್ರೆಯನ್ನು ಹೇಳಿರುವೆ. ಈ ಕಥೆಯನ್ನು ಶ್ರದ್ಧೆಯಿಂದ ಕೇಳಿದ ಸ್ತ್ರೀಯರಾಗಲೀ ಪುರುಷರಾಗಲೀ ಅವರು ಬಯಸಿದ ಸಕಲ ಇಷ್ಟಾರ್ಥಗಳನ್ನೂ ಪಡೆಯುವರು. ಇದರಲ್ಲಿ ಸಂಶಯವಿಲ್ಲ' ಎಂದು ಹೇಳುತ್ತಾನೆ.

ಇಲ್ಲಿಗೆ ಶಿವಪುರಾಣದ ರುದ್ರಸಂಹಿತೆಯಲ್ಲಿನ ಸತೀಖಂಡದ ಏಳನೆಯ ಅಧ್ಯಾಯ ಮುಗಿಯುತ್ತದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ ಸೋಮವಾರ ಮೇ 30, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು ತಿಥಿ: ವೈಶಾಖ ಕೃಷ್ಣ ಅಮಾವಾಸ್ಯೆ ಗಂ. 17-00 ನಕ್ಷತ್ರ: ಕೃತ್ತಿಕಾ ಗಂ. 07-12 ಯೋಗ: ಸುಕರ್ಮ ಗಂ. 23-38, ಕರಣ: ನಾಗವಾನ್ ಗಂ. 17-00, ವೃಷಭ ಮಾಸದ 15 ನೇ ದಿನ.
ರಾಹುಕಾಲ : ಬೆಳಿಗ್ಗೆ 07:30 – 09:00 ಸೂರ್ಯೋದಯ : 06-06 ಸೂರ್ಯಾಸ್ತ : 06-50
ಮುಸ್ಲಿಂ ದಿನಾಂಕ : 28 ಶವ್ವಾಲ್
ದಿನ ವಿಶೇಷ : ವಟ ಸಾವಿತ್ರಿ ವ್ರತ (ಅಮಾವಾಸ್ಯೆ ಪಕ್ಷ) ಅದೃಷ್ಟ ಸಂಖ್ಯೆ : 2, 9

ಮೇಷ: ಸಹೋದ್ಯೋಗಿಗಳ ಸಹಕಾರದಿಂದ ಕೆಲಸ ಕಾರ್ಯಗಳಲ್ಲಿ ಜಯ, ಮನಸ್ಸಿಗೆ ಉಲ್ಲಾಸ. ತಾಂತ್ರಿಕ ವಿದ್ಯಾಭ್ಯಾಸದಲ್ಲಿ ಉನ್ನತ ಯಶಸ್ಸು ದೊರೆತು ಆನಂದ. ರೇಷ್ಮೆ ಉದ್ಯಮಿಗಳಿಗೆ ಅವಕಾಶಗಳ ಸುರಿಮಳೆ.

ವೃಷಭ: ದವಸ ಧಾನ್ಯಗಳ ದಾಸ್ತಾನಿಗಾಗಿ ಹೆಚ್ಚಿನ ಬಂಡವಾಳ ಹೂಡುವುದು ಸರಿಯಲ್ಲ. ತಾಂತ್ರಿಕ ಪರಿಣತರಿಗೆ ಉನ್ನತ ಸಂಸ್ಥೆಗಳಲ್ಲಿ ಉದ್ಯೋಗ ಸಿಗಲಿದೆ. ಈ ಹಿಂದೆ ರೂಪಿಸಿದ್ದ ಯೋಜನೆಗಳು ಇಂದು ಯಶಸ್ವಿಯಾಗಲಿದೆ.

ಮಿಥುನ: ಆಡುವ ಸುಳ್ಳು ಮಾತಿನ ಫಲವನ್ನು ತಕ್ಷಣದಲ್ಲಿ ಅನುಭವಿಸುವಂತಾಗುವುದು. ಆರೋಗ್ಯಕ್ಕಾಗಿ ವ್ಯಾಯಾಮ ಮಾಡುವುದನ್ನು ಅಭ್ಯಾಸಿಸಿಕೊಳ್ಳಿರಿ. ಕೆಲವರ ಸಂಬಂಧವು ಕೊನೆಗೊಳ್ಳುವಂತಹ ಪರಿಸ್ಥಿತಿ ಎದುರಾಗಬಹುದು.

ಕರ್ಕಾಟಕ: ನಿಮ್ಮ ಕಲಾ ಸೇವೆಯನ್ನು ಗುರುತಿಸಿ ಪ್ರಶಂಸೆ ಹಾಗೂ ಸನ್ಮಾನ ದೊರೆಯಲಿದೆ. ಗುಪ್ತಚರ ದಳದವರಿಗೆ ವಿಶೇಷ ದಿನ. ವಾಣಿಜ್ಯೋದ್ಯಮಿಗಳಿಗೆ ಉದ್ಯೋಗಕ್ಕೆ ಸಂಬಂಧಿಸಿದಂತೆ ವಿಶೇಷವಾದ ಅನುಭವ ಉಂಟಾಗುವುದು.

ಸಿಂಹ: ನಿಮ್ಮ ಕೆಲಸದಲ್ಲಿ ಹೆಚ್ಚಿನ ಸ್ವಾತಂತ್ರ್ಯ ಸಿಕ್ಕಿ ಉತ್ತಮ ಚಟುವಟಿಕೆಗಳು ಇರುವುವು. ಜೊತೆಗೆ ನಿಮ್ಮ ಅನಿಸಿಕೆ ಅಭಿಪ್ರಾಯಗಳಿಗೆ ಹೆಚ್ಚಿನ ಮನ್ನಣೆ ಇರುವುದು. ದಾಖಲೆ ಅಥವಾ ಒಪ್ಪಂದಗಳಿಗೆ ಎಚ್ಚರ ವಹಿಸಿ ಸಹಿ ಮಾಡಿರಿ.

ಕನ್ಯಾ: ವೈಯಕ್ತಿಕ ಜೀವನದ ಸಮಸ್ಯೆ ಬಗೆ ಹರಿಯುವದರಿಂದ ಮನಸ್ಸಿಗೆ ನೆಮ್ಮದಿ. ವಿದ್ಯಾರ್ಥಿಗಳಿಗೆ ಒಳ್ಳೆಯ ಸಮಯ. ವ್ಯಾಪಾರದಲ್ಲಿ ಪ್ರಬುದ್ಧತೆಯಿಂದ ವ್ಯವಹರಿಸಿ. ವಾಹನ ಬಿಡಿಭಾಗಗಳ ಮಾರಾಟಗಾರರಿಗೆ ಹೆಚ್ಚಿನ ಆದಾಯ.

ತುಲಾ: ನಿಮ್ಮ ಸಹೋದರರು ನಿಮ್ಮ ಕೆಲಸದಲ್ಲಿ ನೆರವಿಗೆ ಬರಲಿದ್ದಾರೆ. ಸಂಶೋಧನಾ ಕ್ಷೇತ್ರದಲ್ಲಿನ ಕಾರ್ಯಗಳಲ್ಲಿ ಪ್ರಗತಿ. ಮನೆ ಹಿರಿಯರೊಬ್ಬರ ಮಧ್ಯಸ್ಥಿಕೆಯಿಂದ ನೆಂಟಸ್ತಿಕೆಯಲ್ಲಿ ಸಂಬಂಧ ಕೂಡಿ ಬರುವುದು.

ವೃಶ್ಚಿಕ: ಬರಹಗಾರರಿಗೆ ಹೇರಳ ಅವಕಾಶಗಳಿಂದ ಹೆಚ್ಚಿನ ಲಾಭ. ಸಿನೆಮಾ ರಂಗದವರಿಗೆ ಬಿಡುವಿಲ್ಲದೆ ಒತ್ತಡದ ಕೆಲಸವಿರಲಿದೆ. ರಾಜಕೀಯ ವ್ಯಕ್ತಿಗಳು ಸೂಕ್ತ ಸ್ಥಾನ ಲಭ್ಯವಾಗುವ ಅವಕಾಶವನ್ನು ಹಾಳು ಮಾಡಿಕೊಳ್ಳಬೇಡಿ.

ಧನು: ಕೆಲವೊಂದು ವಿಷಯಗಳನ್ನು ಹಾಗೂ ಅದರಿಂದಾಗುವ ಲಾಭ ನಷ್ಟಗಳ ಬಗ್ಗೆ ಪುನರಾವಲೋಕನವನ್ನು ಮಾಡುವುದು ಉತ್ತಮ. ಎಲೆಕ್ಟ್ರಿಕಲ್ ಶಾಪ್‌ನವರಿಗೆ ಉತ್ತಮ ಲಾಭ. ಶ್ರೀ ಮಹಾಲಕ್ಷ್ಮಿ ಅಷ್ಟೋತ್ತರದ ಪಠನೆ ಮಾಡಿ.

ಮಕರ: ಮುದ್ರಣಕಾರರಿಗೆ ದೇಹಾಯಾಸ ಹೆಚ್ಚಾಗಿ ತಪ್ಪುಗಳು ನಡೆಯಬಹುದಾದ ಸನ್ನಿವೇಶಗಳಿದೆ. ಮಕ್ಕಳ ಶೈಕ್ಷಣಿಕ ಕ್ಷೇತ್ರದಲ್ಲಿ ಪ್ರಗತಿ. ಬಹಳ ದಿನಗಳಿಂದ ಸ್ಥಗಿತಗೊಂಡಿದ್ದ ಕೆಲಸ ಇಂದು ನೆರವೇರುತ್ತದೆ.

ಕುಂಭ: ಕೆಲಸ ಕಾರ್ಯಗಳನ್ನು ಬೇಗ ಮುಗಿಸಿಕೊಳ್ಳುವ ನಿಮ್ಮ ಪ್ರಯತ್ನ ಫಲಿಸಲಿದೆ. ನಿಮ್ಮನ್ನು ನೀವೇ ವಿಮರ್ಶಿಕೊಳ್ಳಿ ನಿಮ್ಮ ಸರಿ ತಪ್ಪುಗಳು ನಿಮಗೇ ಅರಿವಾಗುವುದು. ದೈವಬಲದ ಕಾರಣ ಕೈಗೊಂಡ ಕೆಲಸ-ಕಾರ್ಯಗಳಲ್ಲಿ ಜಯ.

ಮೀನ: ನಿಮ್ಮ ನಾಜೂಕಿನ ಮಾತುಗಳು, ಹಿತವಚನಗಳು ಸಹೋದ್ಯೋಗಿಗೆ ಧೈರ್ಯ. ಯೋಜನೆಗಳ ನಾಯಕತ್ವವನ್ನು ವಹಿಸಿಕೊಂಡು ಕೆಲಸಗಳನ್ನು ಪೂರೈಸುವಿರಿ. ಯಾವುದೇ ವಿಚಾರದಲ್ಲಿ ಕಳವಳ ಬೇಡ.

ಬೆರಗಿನ ಬೆಳಕು

ಗುರುರಾಜ ಕರಜಗಿ

ನಂಬಿಕೆಯ ಹಂಗೇಕೆ ?

ನಂಬು ದೇವರ, ನಂಬು, ನಂಬೆನ್ನುವುದು ಲೋಕ |
ಕಂಬನಿಯನಿಡುವ ಜನ ನಂಬಲೊಲ್ಲದರೇಂ? ||
ಹಂಬಲನೆ ತೊರೆದಂಗೆ ನಂಬಿಕೆಯ ಹಂಗೇಕೆ? |
ತುಂಬು ವಿರತಿಯ ಮನದಿ - ಮಂಕುತಿಮ್ಮ ||638||

ಪದ-ಅರ್ಥ: ನಂಬೆನ್ನುವುದು = ನಂಬು + ಎನ್ನುವುದು, ಕಂಬನಿಯನಿಡುವ = ಕಂಬನಿಯನು + ಇಡುವ, ನಂಬಲೊಲ್ಲದರೇಂ = ನಂಬಲು + ಒಲ್ಲದರೇಂ(ಇಷ್ಟಪಡರೇ), ಹಂಬಲನೆ = ಆಸೆಯನೆ, ತೊರೆದಂಗೆ = ಬಿಟ್ಟವನಿಗೆ, ವಿರತಿ = ವೈರಾಗ್ಯ.

ವಾಚ್ಯಾರ್ಥ: ನಂಬು, ದೇವರನ್ನು ನಂಬು ಎನ್ನುತ್ತಿದೆ ಜಗತ್ತು. ಆದರೆ ಕಷ್ಟದಲ್ಲಿದ್ದು ಕಣ್ಣೀರಿಡುವ ಜನರು ಏಕೆ ನಂಬುವುದಿಲ್ಲ? ಎಲ್ಲ ಅಪೇಕ್ಷೆಗಳನ್ನೇ ಬಿಟ್ಟವನಿಗೆ ನಂಬಿಕೆಯ ಮುಲಾಜೇಕೆ? ಮನಸ್ಸಿನಲ್ಲಿ ವೈರಾಗ್ಯವನ್ನು ತುಂಬಿಕೊ.


ವಿವರಣೆ: ಬದುಕು ನಿಂತಿರುವುದೇ ನಂಬಿಕೆಯ ಮೇಲೆ. ತಂದೆ, ತಾಯಿ, ಸಹೋದರಿ, ಸಹೋದರ, ಜೊತೆಯ ಕೆಲಸಗಾರ, ವಾಹನ ಚಾಲಕ, ಹೊಟೆಲ್ಲಿನಲ್ಲಿ ಅಡುಗೆ ಮಾಡುವವ, ಹೀಗೆ ಯಾರ ಜೊತೆಗೆ ನಮ್ಮ ಸಂಪರ್ಕ ಬರುತ್ತದೋ, ಅವರಲ್ಲಿ ನಂಬಿಕೆ ಇರಬೇಕು, ಇರದಿದ್ದರೆ ಗತ್ಯಂತರವಿಲ್ಲ. ಹೀಗೆ ಬದುಕು ಮತ್ತೊಬ್ಬರನ್ನು ನಂಬಿಯೇ ಸಾಗುತ್ತದೆ. ಪ್ರಪಂಚದಲ್ಲಿ ಎಲ್ಲರೂ ನಂಬಿಕೆಯ ಬಗ್ಗೆಯೇ ಹೇಳುತ್ತಾರೆ. ಅದೇ ಬಾಳಿನ ಸ್ಥಿರತೆಗೆ ಕಾರಣ ಎನ್ನುತ್ತಾರೆ. ಆದರೆ ಬಹಳ ಬಾರಿ ನಮ್ಮ ನಂಬಿಕೆ, ಅಪೇಕ್ಷೆಯ ಮೇಲೆ ನಿಂತಿರುತ್ತದೆ. ಕಷ್ಟಗಳು ಬಂದಾಗ ದೇವರ ಮೇಲೆ ನಂಬಿಕೆ ಹೆಚ್ಚಾಗುತ್ತದೆ. ಸಾಹೇಬರ ಮೇಲೆ ನಂಬಿಕೆ, ಅವರಿಂದ ಪ್ರಯೋಜನವಾಗುತ್ತದೆ ಎಂಬ ಆಸೆಯ ಮೇಲೆ ನಿಂತಿದೆ. ಅವರಿಂದ ಏನೂ ಪ್ರಯೋಜನವಿಲ್ಲವೆಂದಾಗ ನಂಬಿಕೆ ಕರಗಿ ಹೋಗುತ್ತದೆ. ಅದಕ್ಕೇ ಜೀವನದಲ್ಲಿ ದೊಡ್ಡ ತೊಂದರೆ, ಅನಾಹುತವಾದರೆ, ಜನ, 'ದೇವರೆಲ್ಲಿದ್ದಾನೆ?' 'ಅವನು ಕಣ್ಣು ಮುಚ್ಚಿಕೊಂಡಿದ್ದಾನೆ' 'ಅವನಿಗೆ ನಮ್ಮಂಥವರ ಕೂಗು ಕೇಳಿಸುವುದಿಲ್ಲ' 'ಅವನನ್ನು ನಂಬಿಯೇ ಹಾಳಾದೆವು' 'ದೇವರನ್ನು ನಂಬಿ ಸುಖವಿಲ್ಲ' ಎನ್ನುತ್ತಾರೆ. ಇದನ್ನೇ ಕಗ್ಗ ಧ್ವನಿಸುತ್ತದೆ. ಪ್ರಪಂಚದಲ್ಲಿ ಎಲ್ಲರೂ ನಂಬು, ದೇವರ ನಂಬು ಎನ್ನುತ್ತಾರೆ, ಆದರೆ ಕಣ್ಣೀರಿಡುವ ಜನ ಮಾತ್ರ ನಂಬುವುದಿಲ್ಲವಲ್ಲ? ಅಪೇಕ್ಷೆಯಿಂದ ತಾನೆ ನಂಬಿಕೆ ಹುರಿಗೊಳ್ಳುವುದು? ಅಪೇಕ್ಷೆಯೇ ಇಲ್ಲದೆ ಹೋದರೆ ನಂಬಿಕೆಯ ಅವಶ್ಯಕತೆ ಎಲ್ಲಿದೆ?

ಸಿದ್ಧಾರ್ಥ ಮನೆ ಬಿಟ್ಟು ಮಧ್ಯರಾತ್ರಿ ಸಮ್ಯಗ್ ಜ್ಞಾನಾಪೇಕ್ಷಿಯಾಗಿ ಹೊರಟ. ಎಲ್ಲ ವ್ರತಗಳನ್ನು ಮಾಡಿದ, ದೇಹವನ್ನು ಅತಿಯಾಗಿ ದಂಡಿಸಿದ. ಗುರುವನ್ನರಸಿ ಸುತ್ತಾಡಿದ. ಮನಸ್ಸಿಗೆ ಶಾಂತಿ ದೊರಕಲಿಲ್ಲ. ರಾಜಮಹಲಿನಲ್ಲಿ ಶಾಂತಿ ಸಿಗಲಿಲ್ಲ, ಶಾಂತಿಯನ್ನರಸಿ ವನ, ವನ ಸುತ್ತಿದರೂ ಶಾಂತಿಯಿಲ್ಲ ಎಂದುಕೊಳಂಡು ಅತೃಪ್ತಿಯಿಂದ ನದಿಯ ಸ್ನಾನಕ್ಕೆ ಹೋದ. ಆಗ ನಿರಂಜನಾ ನದಿಯಲ್ಲಿ ನೀರು ಕಡಿಮೆ ಇತ್ತು, ಸೆಳವೂ ಕಡಿಮೆ. ಆದರೆ ಸಿದ್ಧಾರ್ಥನ ದೇಹ ಬೆಂಡಿನಂತಾಗಿತ್ತು. ಆ ಸೆಳವಿನಲ್ಲೇ ದೇಹ ಕೊಚ್ಚಿಕೊಂಡು ಹೊರಟಿತು. ಆಯ್ತು, ನನ್ನ ಜೀವದ ಅವಧಿ ಮುಗಿಯಿತು ಎಂದುಕೊಂಡು ಜೀವಭಯದಿಂದ ಅಚೀಚೆ ಕೈಚಾಚಿದ. ಯಾವುದೋ ಮರದ ಬೇರು ಸಿಕ್ಕಿತು. ಅದನ್ನು ಹಿಡಿದುಕೊಂಡು ನೇತಾಡುತ್ತಿದ್ದ. ಒಂದು ಕ್ಷಣ ಯೋಚಿಸಿದ. 'ಅರಮನೆಯಲ್ಲಿ ಶಾಂತಿಯನ್ನು ಬಯಸಿದೆ, ಇಲ್ಲಿ ಮುಕ್ತಿಯನ್ನು ಬಯಸಿದೆ, ಎರಡೂ ಬಯಕೆಗಳೇ ಅಲ್ಲವೆ? ಈ ಜಗದ ಆಸೆ ಬಿಟ್ಟವನಿಗೆ, ಆ ಜಗದ ಆಸೆಯಾದರೂ ಯಾಕೆ ಬೇಕು?' ಎಂದು ಮುಕ್ತಿಯ ಆಸೆಯನ್ನೂ ತೊರೆದ. ಆಸೆ ಕರಗಿದ ತಕ್ಷಣವೇ ಜ್ಞಾನೋದಯವಾಯಿತು. ಆತ ಹೇಳಿದ, 'ನಮ್ಮ ಎಲ್ಲ ದುಃಖಗಳಿಗೆ, ತೊಂದರೆಗಳಿಗೆ ಆಸೆಯೇ ಮೂಲ ಕಾರಣ'.ಕಗ್ಗ ಹೇಳುತ್ತದೆ, 'ಎಲ್ಲ ಹಂಬಲಗಳನ್ನೇ ತೊರೆದ ವನಿಗೆ ನಂಬಿಕೆಯಾದರೂ ಯಾಕೆ ಬೇಕು? ಅದಕ್ಕೆ ಮನಸ್ಸಿನಲ್ಲಿ ಆಸೆಯನ್ನು ತೊರೆದು ವೈರಾಗ್ಯ ವನ್ನು ತುಂಬು'. ❖

ಪದಬಂಧ 4973 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಫಲದೊಡನೆ ಇರಿಸಿದ ಢಾಲು (3)
3.ಅಡಗಿಕೊಳ್ಳಲು ಸೂಕ್ತವಾದ ಅರಣ್ಯ (3)
5.ಪಾತಿಯ ಬಳಿ ಹಾರಾಡುತ್ತಿರುವ ದುಂಬಿ (5)
6.ವಶಪಡಿಸಿಕೊಂಡಿರುವ ಮೃತದೇಹ! (2)
8.ಪ್ರಾಣಿಗಳನ್ನು ಹಿಡಿಯುವ ಬಲೆ (2)
9.ಮಧುರ ಫಲ ನೀಡುವ ವೃಕ್ಷ (2)
10.ಕನಸಲ್ಲಿ ಕಾಣಿಸಿದ ಕೊಳೆ (2)
14.ಒಳ್ಳೆತನದ ಸೋಗಿನಲ್ಲಿ ಮೋಸ ಮಾಡುವವನು (5)
15.ಕುದುರೆಯನ್ನೇರುವ ಬಳೆ (3)
16.ಜಗಳಕ್ಕೊಂದು ಪರ್ಯಾಯ ಪದ (3)

ಮೇಲಿಂದ ಕೆಳಕ್ಕೆ
1.ಕನ್ನಡದಲ್ಲಿರುವ ರಿಸಲ್ಟ್! (4)
2.ಮೋಕ್ಷ ಮಾಡಿಸಿಕೊಂಡಿರುವ ಕೆನ್ನೆ! (3)
3.ಈಕೆ ಅಣ್ಣನ ಹೆಂಡತಿ (3)
4.ವಿದ್ಯುತ್ತನ್ನು ಹಿಡಿದಿಟ್ಟುಕೊಂಡಿರುವ ಕೋಶ (4)
7.ಅನೇಕ ಚಿಕ್ಕಚಿಕ್ಕ ಮನೆಗಳುಳ್ಳ ಆವಾರ (3)
8.ಪಾಕದೊಳಗಿನ ದೋಷ ಗೊತ್ತಾಯಿತೇ? (3)
9.ಹೆಣ್ಣು ದುಂಬಿಯಿದು (4)
11.ನ್ಯಾಯಕ್ಕಾಗಿ ಒತ್ತಾಯ ಮಾಡುವುದು (4)
12.ನೆನಪು ಮಾಡಿಕೊಂಡು ತೋರಿದ ವಯ್ಯಾರ (3)
13.ಪೆದ್ದನಲ್ಲಿ ತಿರುಗಿದ್ದಾನಲ್ಲಾ? (3)



4972ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಪಾಖ್ಯಾನ 3.ಕೋಲಾಹಲ
5.ಗುಡಾಣ 6.ತಿಮಿರ
8.ಪುಲ್ಲಿಂಗ 9.ತಪಂ
10.ಲಾಯ 11.ನಕಾರ
12.ಸುರಂಗ 14.ಪೌರುಷ
16.ಗ್ರಹಚಾರ 17.ರಾಗಾಲಾಪ

ಮೇಲಿಂದ ಕೆಳಕ್ಕೆ:
1.ಉನ್ನತಿ 2.ನಗು
3.ಕೋಣ 4.ಲಫಂಗ
7.ರಕ್ತಸಂಚಾರ 8.ಪುಸಲಾಯಿಸು
11.ನಖಾಗ್ರ 13.ಗಣಪ
14.ಪೌರ 15.ಷರಾ

ಸುಡೊಕು 5359

				3		4		6
		1	5		2			
		8		4			5	1
	9				4	6		
6		2		8				5
		4	2			3		
				2				9
	1	3	8		5		6	
9	4		6		3	8		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.


5358 ಸುಡೊಕು

5	3	1	4	8	6	2	9	7
7	8	4	2	3	9	1	5	6
2	9	6	1	5	7	8	4	3
8	1	7	5	4	2	3	6	9
3	6	2	9	7	1	5	8	4
9	4	5	8	6	3	7	1	2
1	7	8	3	9	4	6	2	5
4	2	3	6	1	5	9	7	8
6	5	9	7	2	8	4	3	1

ಭಾರತದ ಜೊತೆ ದ್ವಿಪಕ್ಷೀಯ ವ್ಯಾಪಾರ ವಹಿವಾಟು

ಪ್ರಥಮ ಸ್ಥಾನಕ್ಕೆ ಅಮೆರಿಕ





ನವದೆಹಲಿ (ಪಿಟಿಐ): ಭಾರತದ ಜೊತೆಗೆ ಅತಿ ಹೆಚ್ಚು ವ್ಯಾಪಾರ ನಡೆಸಿದ ದೇಶಗಳ ಸಾಲಿನಲ್ಲಿ 2021–22ರಲ್ಲಿ ಅಮೆರಿಕವು ಚೀನಾವನ್ನು ಹಿಂದಿಕ್ಕಿ ಮೊದಲ ಸ್ಥಾನಕ್ಕೆ ಬಂದಿದೆ.

ಭಾರತ–ಅಮೆರಿಕ ಮಧ್ಯೆ ಆರ್ಥಿಕ ಒಪ್ಪಂದಗಳು ಬಲಗೊಳ್ಳುತ್ತಿವೆ ಎನ್ನುವುದನ್ನು ಇದು ಸೂಚಿಸುತ್ತಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಹೇಳಿದೆ.

2021–22ರಲ್ಲಿ ಅಮೆರಿಕ ಮತ್ತು ಭಾರತದ ಮಧ್ಯೆ ₹ 9.19 ಲಕ್ಷ ಕೋಟಿ ಮೊತ್ತದ ದ್ವಿಪಕ್ಷೀಯ ವ್ಯಾಪಾರ ನಡೆದಿದೆ. ಇದೇ ಅವಧಿಯಲ್ಲಿ ಭಾರತ–ಚೀನಾ ದ್ವಿಪಕ್ಷೀಯ ವ್ಯಾಪಾರದ ಮೊತ್ತವು ₹ 8.88 ಲಕ್ಷ ಕೋಟಿ ಆಗಿದೆ.

ಅಮೆರಿಕದ ಜೊತೆಗಿನ ಭಾರತದ ರಫ್ತು ಮತ್ತು ಆಮದು ವಹಿವಾಟು ಏರಿಕೆ ಕಂಡಿದೆ. 2020–21ರಲ್ಲಿ ₹ 3.97 ಲಕ್ಷ ಕೋಟಿ ಇದ್ದ ರಫ್ತು ವಹಿವಾಟಿನ ಮೌಲ್ಯವು 2021–22ರಲ್ಲಿ ₹ 5.86 ಲಕ್ಷ ಕೋಟಿಗೆ ಏರಿಕೆ ಆಗಿದೆ. ಆಮದು ವಹಿವಾಟಿನ ಮೌಲ್ಯವು ₹ 2.23 ಲಕ್ಷ ಕೋಟಿಯಿಂದ ₹ 3.33 ಲಕ್ಷ ಕೋಟಿಗೆ ಏರಿಕೆ ಆಗಿದೆ ಎಂದು ಸಚಿವಾಲಯ ಮಾಹಿತಿ ನೀಡಿದೆ.

ಚೀನಾದ ಜೊತೆಗಿನ ರಫ್ತು ಮತ್ತು ಆಮದು ವಹಿವಾಟು ಸಹ ಹೆಚ್ಚಾಗಿದೆ. 2020–21ರಲ್ಲಿ ₹ 1.63 ಲಕ್ಷ ಕೋಟಿ ಇದ್ದ ರಫ್ತು ವಹಿವಾಟಿನ ಮೌಲ್ಯವು 2021–22ರಲ್ಲಿ ₹ 1.64 ಲಕ್ಷ ಕೋಟಿಗೆ ಏರಿದೆ. ಆಮದು ವಹಿವಾಟು ₹ 5.02 ಲಕ್ಷ ಕೋಟಿಯಿಂದ ₹ 7.25 ಲಕ್ಷ ಕೋಟಿಗೆ ಹೆಚ್ಚಾಗಿದೆ.

2013–14ರಿಂದ 2017–18ರವರೆಗೆ ನಿರಂತರವಾಗಿ ಹಾಗೂ 2020–21ರಲ್ಲಿ ಚೀನಾವು ಭಾರತದ ಪ್ರಮುಖ ವ್ಯಾಪಾರ ಪಾಲುದಾರ ಆಗಿತ್ತು.

ಭಾರತವು ವಿಶ್ವಾಸಾರ್ಹ ವ್ಯಾಪಾರ ಪಾಲುದಾರ ಆಗಿ ಹೊರಹೊಮ್ಮುತ್ತಿದೆ. ಜಾಗತಿಕ ಕಂಪನಿಗಳು ಚೀನಾದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳುತ್ತಿವೆ. ಭಾರತದಂತಹ ದೇಶಗಳ ಜೊತೆ ವ್ಯಾಪಾರಕ್ಕೆ ಮುಂದಾಗುತ್ತಿವೆ ಎಂದು ಭಾರತೀಯ ರಫ್ತುದಾರರ ಸಂಘಟನೆಗಳ ಒಕ್ಕೂಟದ (ಎಫ್ಐಇಒ) ಉಪಾಧ್ಯಕ್ಷ ಖಾಲಿದ್ ಖಾನ್ ಹೇಳಿದ್ದಾರೆ.

ಭಾರತದಲ್ಲಿ 139 ಕೋಟಿ ಜನಸಂಖ್ಯೆ ಇದ್ದು, ಜಗತ್ತಿನ ಅತಿದೊಡ್ಡ ಗ್ರಾಹಕ ಮಾರುಕಟ್ಟೆ ಆಗಿದೆ. ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯೂ ಹೌದು. ಹೀಗಾಗಿ ತಂತ್ರಜ್ಞಾನ, ತಯಾರಿಕೆ, ವ್ಯಾಪಾರ ಮತ್ತು ಹೂಡಿಕೆಯಲ್ಲಿ ಭಾರತ ಮತ್ತು ಅಮೆರಿಕದ ಕಂಪನಿಗಳಿಗೆ ಹೆಚ್ಚಿನ ಅವಕಾಶಗಳಿವೆ ಎಂದು ತಿಳಿದುಕೊಂಡಿವೆ ಎಂದು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪ್ಲಾಂಟೇಷನ್ ಮ್ಯಾನೇಜ್‌ಮೆಂಟ್ (ಐಐಪಿಎಂ) ಬೆಂಗಳೂರು ನಿರ್ದೇಶಕ ರಾಕೇಶ್ ಮೋಹನ್ ಜೋಶಿ ತಿಳಿಸಿದ್ದಾರೆ.

ಪಾಲಿಶ್ ಆಗಿರುವ ವಜ್ರ, ಔಷಧ ಉತ್ಪನ್ನಗಳು, ಚಿನ್ನಾಭರಣ, ಪೆಟ್ರೋಲಿಯಂ, ಇತ್ಯಾದಿ ಭಾರತದಿಂದ ಅಮೆರಿಕಕ್ಕೆ ರಫ್ತಾಗುತ್ತಿವೆ. ಅಮೆರಿಕದಿಂದ ಭಾರತಕ್ಕೆ ಮುಖ್ಯವಾಗಿ ಪೆಟ್ರೋಲಿಯಂ, ಪಾಲಿಶ್ ಆಗದ ವಜ್ರ, ನೈಸರ್ಗಿಕ ಅನಿಲ, ಚಿನ್ನ, ಕಲ್ಲಿದ್ದಲು, ಬಾದಾಮಿ ಆಮದಾಗುತ್ತಿದೆ ಎಂದು ಜೋಶಿ ಮಾಹಿತಿ ನೀಡಿದ್ದಾರೆ.

ಭಾರತವು ವ್ಯಾಪಾರ ಮಿಗತೆ ಹೊಂದಿರುವ ಕೆಲವೇ ದೇಶಗಳಲ್ಲಿ ಅಮೆರಿಕವೂ ಒಂದಾಗಿದೆ. 2021–22ರಲ್ಲಿ ಭಾರತವು ಅಮೆರಿಕ ಜೊತೆ ₹ 2.52 ಲಕ್ಷ ಕೋಟಿ ಮೌಲ್ಯದ ವ್ಯಾಪಾರ ಮಿಗತೆ ಹೊಂದಿದೆ.

ಭಾರತದ ಪ್ರಮುಖ ವ್ಯಾಪಾರ ಪಾಲುದಾರ ದೇಶಗಳು: ಅಮೆರಿಕ, ಚೀನಾ, ಯುಎಇ, ಸೌದಿ ಅರೇಬಿಯಾ, ಇರಾಕ್, ಸಿಂಗಪುರ.

ಎಫ್‌ಪಿಐ ಹೊರಹರಿವು ₹ 39 ಸಾವಿರ ಕೋಟಿ

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಮೇ 2ರಿಂದ 27ರವರೆಗಿನ ಅವಧಿಯಲ್ಲಿ ಭಾರತದ ಷೇರುಪೇಟೆಯಿಂದ ₹ 39,137 ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ.

ಅಮೆರಿಕದ ಬಾಂಡ್ ಗಳಿಕೆ ಹೆಚ್ಚಾಗುತ್ತಿರುವುದು, ಡಾಲರ್ ಮೌಲ್ಯ ವೃದ್ಧಿ ಹಾಗೂ ಅಮೆರಿಕದ ಕೇಂದ್ರೀಯ ಬ್ಯಾಂಕ್ ಫೆಡರಲ್ ರಿಸರ್ವ್‌ನಿಂದ ಬಡ್ಡಿದರ ಏರಿಕೆಯ ಕಾರಣಗಳಿಂದಾಗಿ ಬಂಡವಾಳ ಹೊರಹರಿವು ಹೆಚ್ಚಾಗುತ್ತಿದೆ.

ಮೇನಲ್ಲಿ ಈವರೆಗೆ ಆಗಿರುವ ಬಂಡವಾಳ ಹೊರಹರಿವನ್ನೂ ಪರಿಗಣಿಸಿದರೆ, 2022ರಲ್ಲಿ ಈವರೆಗೆ ಒಟ್ಟಾರೆ ₹ 1.66 ಲಕ್ಷ ಕೋಟಿ ಬಂಡವಾಳವನ್ನು ಹಿಂದಕ್ಕೆ ಪಡೆದಂತಾಗಿದೆ.

ಕಚ್ಚಾ ತೈಲ ದರ ಏರಿಕೆ, ಹಣದುಬ್ಬರ ಹೆಚ್ಚಳ ಮತ್ತು ಕೇಂದ್ರೀಯ ಬ್ಯಾಂಕ್ ತನ್ನ ಹಣಕಾಸು ನೀತಿಯನ್ನು ಬಿಗಿಗೊಳಿಸಿರುವ ಕಾರಣ ಮುಂಬರುವ ದಿನಗಳಲ್ಲಿಯೂ ಎಫ್‌ಪಿಐ ಒಳಹರಿವು ಅಸ್ಥಿರವಾಗಿರಲಿದೆ ಎಂದು ಕೋಟಕ್ ಸೆಕ್ಯುರಿಟೀಸ್‌ನ ಈಕ್ವಿಟಿ ಸಂಶೋಧನೆಯ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.

ವಿದೇಶಿ ಬಂಡವಾಳ ಹೂಡಿಕೆದಾರರು ದೇಶದ ಸಾಲಪತ್ರ ಮಾರುಕಟ್ಟೆಯಿಂದಲೂ ಮೇ 2–27ರ ನಡುವಿನ ಅವಧಿಯಲ್ಲಿ ₹ 6 ಸಾವಿರ ಕೋಟಿ ಬಂಡವಾಳ ಹಿಂದಕ್ಕೆ ಪಡೆದಿದ್ದಾರೆ.

ಮೊದಲ ಸಂಬಳ: ಇವು ನೆನಪಿರಲಿ



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಕೆಲಸಕ್ಕೆ ಸೇರಿದ ನಂತರ, ಮೊದಲ ಸಂಬಳದಲ್ಲಿ ಅಮ್ಮನಿಗೆ ಒಡವೆ ಮಾಡಿಸಿ ಕೊಡಬೇಕು, ತಂದೆಗೊಂದು ಒಳ್ಳೆಯ ಸ್ಕೂಟರ್ ಕೊಡಿಸಬೇಕು, ತಂಗಿಗೊಂದು ಡ್ರೆಸ್ ಕೊಡಿಸಬೇಕು, ಅಜ್ಜ–ಅಜ್ಜಿಗೆ ಒಳ್ಳೆಯ ಬಟ್ಟೆ ತಂದುಕೊಡಬೇಕು... ಹೀಗೆ = ಪ್ರತಿಯೊಬ್ಬರಿಗೂ ಮೊದಲ ಸಂಬಳವನ್ನು ಖರ್ಚು ಮಾಡುವ ಬಗ್ಗೆ ಹಲವು ಕನಸುಗಳಿರುತ್ತವೆ.

ಆದರೆ ಕೆಲಸಕ್ಕೆ ಸೇರಿ, ಮೊದಲ ಸಂಬಳ ಪಡೆದಾಗ ಬಹುತೇಕರಿಗೆ ಅದನ್ನು ಹೇಗೆ ನಿರ್ವಹಣೆ ಮಾಡಬೇಕು ಎನ್ನುವ ಅಂದಾಜಿರುವುದಿಲ್ಲ. ನಮ್ಮ ಶಿಕ್ಷಣವು ಹಣಕಾಸು ನಿರ್ವಹಣೆಯ ಬಗ್ಗೆ ಅಷ್ಟೇನೂ ತಿಳಿಸಿಕೊಡುವುದಿಲ್ಲ. ಹೀಗಾಗಿ, ಅನೇಕರು ಈ ಹಂತದಲ್ಲಿ ಎಡವುತ್ತಾರೆ. ಹಾಗಾದರೆ ಮೊದಲ ಸಂಬಳದ ಹಣವನ್ನು ಅರ್ಥಪೂರ್ಣವಾಗಿ ಖರ್ಚು ಮಾಡುವುದು ಹೇಗೆ?

1 ಹೂಡಿಕೆ ಆರಂಭಿಸಿ: ಗುಬ್ಬಚ್ಚಿಯೊಂದು ಧಾನ್ಯದ ಒಂದೊಂದೇ ಕಾಳನ್ನು ಹೆಕ್ಕಿ ಹೆಕ್ಕಿ ಡಬ್ಬದಲ್ಲಿ ಇಡುತ್ತಿತ್ತು. ಕೆಲವು ದಿನಗಳ ನಂತರ ಆ ಡಬ್ಬ ಪೂರ್ತಿ ಧಾನ್ಯ ಸಂಗ್ರಹವಾಗಿತ್ತು ಎನ್ನುವ ಕಥೆಯನ್ನು ನೀವು ಬಾಲ್ಯದಲ್ಲಿ ಕೇಳಿರಬೇಕಲ್ಲಾ? ಹೌದು ಹನಿ ಹನಿ ಕೂಡಿದರೆ ಹಳ್ಳ ಎನ್ನುವ ಮಾತಿನಂತೆ ಸಣ್ಣ ಪ್ರಮಾಣದಲ್ಲಾದರೂ ಸರಿ ಹೂಡಿಕೆಯನ್ನು ಮೊದಲ ಸಂಬಳದಿಂದಲೇ ಆರಂಭಿಸಬೇಕು. ನಿಮ್ಮ ಸಂಬಳ ₹ 15 ಸಾವಿರ, ₹ 20 ಸಾವಿರ ಇದ್ದರೂ ಸರಿ ಒಂದಿಷ್ಟು ಉಳಿತಾಯ ಮಾಡಲು ಶುರು ಮಾಡಬೇಕು.

ಹೆಚ್ಚು ರಿಸ್ಕ್ ಇರುವ ಹೂಡಿಕೆ ಬೇಡ, ಸುರಕ್ಷತೆ ಇರುವ ಹಾಗೂ ಸರ್ಕಾರದ ಒತ್ತಾಸೆ ಸಿಗುವ ಹೂಡಿಕೆ ಇದ್ದರೆ ಒಳ್ಳೆಯದು ಎನ್ನುವವರು ಸಾರ್ವಜನಿಕ ಭವಿಷ್ಯ ನಿಧಿ (ಪಿಪಿಎಫ್) ಖಾತೆ ತೆರೆದು ಹೂಡಿಕೆ ಆರಂಭಿಸಿಬಹುದು. ಈ ಖಾತೆಯನ್ನು ಅಂಚೆ ಕಚೇರಿ ಅಥವಾ ಆಯ್ದ ಬ್ಯಾಂಕುಗಳಲ್ಲಿ ತೆರೆಯಬಹುದು. ಪಿಪಿಎಫ್‌ನಲ್ಲಿ ಪ್ರತಿ ವರ್ಷ ಮಾಡಬೇಕಿರುವ ಕನಿಷ್ಠ ಹೂಡಿಕೆ ಕೇವಲ ₹ 500. ಇನ್ನು ಪಿಪಿಎಫ್ ಜೊತೆ ಎನ್‌ಪಿಎಸ್, ಅಂದರೆ ರಾಷ್ಟ್ರೀಯ ಪಿಂಚಣಿ ಯೋಜನೆ, ಹೂಡಿಕೆ ಪರಿಗಣಿಸಬಹುದು. ನಿವೃತ್ತಿ ಜೀವನಕ್ಕೆ ಇದರಿಂದ ನೆರವಾಗುತ್ತದೆ. ಸ್ವಲ್ಪ ರಿಸ್ಕ್ ಇದ್ದರೂ ತೊಂದರೆಯಿಲ್ಲ ಹೆಚ್ಚು ಲಾಭ ಸಿಗುವ ಕಡೆ ತೊಡಗಿಸಬೇಕು ಎನ್ನುವವರು ಈಕ್ವಿಟಿ ಮ್ಯೂಚುವಲ್ ಫಂಡ್ ಮತ್ತು ಷೇರು ಮಾರುಕಟ್ಟೆ ಹೂಡಿಕೆ ಮಾಡಬಹುದು. ಮ್ಯೂಚುವಲ್ ಫಂಡ್ ಮತ್ತು ಷೇರು ಮಾರುಕಟ್ಟೆಯಲ್ಲಿ ಸಣ್ಣ ಮೊತ್ತ ಅಂದರೆ ₹ 100ರಿಂದಲೂ ಹೂಡಿಕೆ ಸಾಧ್ಯ. ನೆನಪಿಡಿ ಎಷ್ಟು ಬೇಗ ಹೂಡಿಕೆ ಆರಂಭಿಸುತ್ತಿರೋ ನಿಮಗೆ ಅಷ್ಟು ಹೆಚ್ಚು ಅನುಕೂಲವಾಗುತ್ತದೆ. ಹೂಡಿಕೆ ತಡವಾದರೆ ನಿವೃತ್ತಿಗೆ ಬೇಕಿರುವ ದೊಡ್ಡ ಮೊತ್ತದ ಉಳಿತಾಯದ ಗಂಟು ಮಾಡಿಕೊಳ್ಳುವುದು ಕಷ್ಟ.

2 ವಿಮೆ ತೆಗೆದುಕೊಳ್ಳಿ: ಕೆಲಸಕ್ಕೆ ಸೇರಿದ ನಂತರದಲ್ಲಿ ಮಾಡಬೇಕಿರುವ ಅತ್ಯಂತ ಮುಖ್ಯವಾದ ಕೆಲಸ ಅವಧಿ ವಿಮೆ ಮತ್ತು ಆರೋಗ್ಯ ವಿಮೆ ಪಡೆದುಕೊಳ್ಳುವುದು. ಉಳಿತಾಯ ಮತ್ತು ಹೂಡಿಕೆಯ ಹಾದಿ ಸುಗಮವಾಗಿರಬೇಕಾದರೆ ಈ ಎರಡು ವಿಮೆಗಳನ್ನು ಕಡ್ಡಾಯವಾಗಿ ಪಡೆದುಕೊಳ್ಳಿ. ಅವಧಿ ವಿಮೆಯು ವ್ಯಕ್ತಿ ಆಕಸ್ಮಿಕವಾಗಿ ಮೃತಪಟ್ಟ ಸಂದರ್ಭದಲ್ಲಿ ಆತನ ಕುಟುಂಬಕ್ಕೆ ಆರ್ಥಿಕ ಭದ್ರತೆ ಒದಗಿಸುತ್ತದೆ. 21ರಿಂದ 23ನೆಯ ವಯಸ್ಸಿನ ವ್ಯಕ್ತಿ ವಾರ್ಷಿಕ ಸುಮಾರು ₹ 8 ಸಾವಿರದಿಂದ ₹ 10 ಸಾವಿರದವರೆಗೆ ಪ್ರೀಮಿಯಂ ಪಾವತಿಸಿ ಸುಮಾರು ₹ 1 ಕೋಟಿ ಕವರೇಜ್ ಇರುವ ಅವಧಿ ವಿಮೆ ಪಡೆಯಬಹುದು. ಇನ್ನು ಆರೋಗ್ಯ ವಿಮೆ ಸಹ ಬಹಳ ಮುಖ್ಯ. ಅನಾರೋಗ್ಯ ಉಂಟಾದಾಗ ಉಳಿತಾಯದ ದುಡ್ಡನ್ನೆಲ್ಲ ಆಸ್ಪತ್ರೆಗೆ ಕಟ್ಟುವ ಬದಲು ಸಣ್ಣ ಮೊತ್ತದ ಪ್ರೀಮಿಯಂ ಕಟ್ಟಿ ಅಗತ್ಯವಿದ್ದಾಗ ಆರೋಗ್ಯ ವಿಮೆಯ ಸೌಲಭ್ಯ ಪಡೆದುಕೊಳ್ಳುವುದು ಜಾಣತನ.

3 ಮನೆಯ ಜವಾಬ್ದಾರಿ ತೆಗೆದುಕೊಳ್ಳಿ: ಕೆಲಸಕ್ಕೆ ಸೇರಿ ದುಡಿಮೆ ಆರಂಭಿಸುವತನಕ ತಂದೆ-ತಾಯಿ ನಿಮ್ಮ ಏಳ್ಗೆಗಾಗಿ ಶ್ರಮಿಸಿರುತ್ತಾರೆ. ಮನೆಯ ಹಣಕಾಸಿನ ಅಗತ್ಯಗಳನ್ನು ಅವರು ಪೂರೈಸಿರುತ್ತಾರೆ. ಆದರೆ ಕೆಲಸಕ್ಕೆ ಸೇರಿದ ತಕ್ಷಣ ಈ ಜವಾಬ್ದಾರಿಯನ್ನು ಸ್ವಯಂ ಪ್ರೇರಣೆಯಿಂದ ನಿಮ್ಮ ಹೆಗಲಿಗೇರಿಸಿಕೊಳ್ಳಿ. ದುಡಿಯಲು ಆರಂಭಿಸಿದ ಮೇಲೆ ನಿಮ್ಮ ಅಗತ್ಯಗಳಿಗೆ ತಂದೆ–ತಾಯಿಯಿಂದ ಹಣಕಾಸು ನೆರವು ಪಡೆಯುವುದನ್ನು ತಪ್ಪಿಸಿ. ಹೀಗೆ ಮಾಡುವುದರಿಂದ ವ್ಯವಹಾರ ಜ್ಞಾನ ಹೆಚ್ಚುತ್ತದೆ. ಯಾವುದಕ್ಕೆ ಖರ್ಚು ಮಾಡಬೇಕು, ಯಾವುದಕ್ಕೆ ಮಾಡಬಾರದು ಎನ್ನುವ ವಿವೇಚನೆ ಬರುತ್ತದೆ.

4 ಪೋಷಕರಿಗೆ ಉಡುಗೊರೆ ನೀಡಿ: ಮೊದಲ ಸಂಬಳ ಅನ್ನೋದು ಒಂದು ಭಾವನಾತ್ಮಕ ವಿಚಾರ. ಇದರಲ್ಲಿ ಪೋಷಕರಿಗೆ ಉಡುಗೊರೆ ಕೊಡುವುದನ್ನು ಮರೆಯಬೇಡಿ. ಉಡುಗೊರೆಯ ಮೌಲ್ಯ ಎಷ್ಟು ಎನ್ನುವ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ. ಅದು ಕಡಿಮೆ ಬೆಲೆಯದ್ದಾದರೂ ಸರಿಯೇ ಪ್ರೀತಿಯಿಂದ ನಿಮ್ಮ ಪ್ರೀತಿಪಾತ್ರರಿಗೊಂದು ಗಿಫ್ಟ್ ಕೊಡಿ.

5 ದಾನ ಮಾಡಿ: ದಾನ ಮಾಡಲು ಬೇಕಾದ ದೊಡ್ಡ ಸಂಬಳ ಇಲ್ಲ ಎನ್ನುವ ಮನಃಸ್ಥಿತಿ ಬೇಡ. ನಿಮ್ಮ ಆದಾಯದ ಕನಿಷ್ಠ ಶೇ 1ರಷ್ಟನ್ನಾದರೂ ದಾನಕ್ಕೆ ಮೀಸಲಿಡಿ. ನೀವು ಹತ್ತಿಪ್ಪತ್ತು ಸಾವಿರ ರೂಪಾಯಿ ಸಂಬಳ ಪಡೆದರೂ ಅದರಲ್ಲಿ ಇನ್ನೂರರಿಂದ ಐನೂರು ರೂಪಾಯಿ ದಾನಕ್ಕೆ ಮೀಸಲಿಡುವುದು ಕಷ್ಟವಾಗಲಿಕ್ಕಿಲ್ಲ. ದುಡಿಯುವ ಸಮಯದಲ್ಲಿ ಸಮಾಜದಿಂದ ಪಡೆದಿದ್ದನ್ನು ಸಮಾಜಕ್ಕೆ ಹಿಂದಿರುಗಿಸುವ ಜವಾಬ್ದಾರಿಯಿಂದ ಹಿಂದೆ ಸರಿಯಬಾರದು.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)



ಎರಡನೇ ವಾರವೂ ಏರಿಕೆ ಕಂಡ ಸೂಚ್ಯಂಕಗಳು

ಅನಿಶ್ಚಿತತೆಯ ನಡುವೆಯೂ ಷೇರುಪೇಟೆ ಸೂಚ್ಯಂಕಗಳು ಸತತ ಎರಡನೇ ವಾರ ಗಳಿಕೆ ಕಂಡಿವೆ. ಮೇ 27ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಅಲ್ಪ ಪ್ರಮಾಣದ ಗಳಿಕೆ ದಾಖಲಿಸಿವೆ. 54,884 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.02ರಷ್ಟು ಜಿಗಿದಿದೆ. 16,352 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.53 ರಷ್ಟು ಹೆಚ್ಚಳ ಕಂಡಿದೆ.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ಬ್ಯಾಂಕ್ ಸೂಚ್ಯಂಕ ಶೇ 3.3ರಷ್ಟು ಹೆಚ್ಚಳ ಕಂಡಿದೆ. ಆಟೊಮೊಬೈಲ್ ವಲಯ ಶೇ 3.3ರಷ್ಟು ಜಿಗಿದಿದೆ. ಆದರೆ ಲೋಹ ವಲಯ ಶೇ 8ರಷ್ಟು ಇಳಿಕೆಯಾಗಿದೆ. ಅನಿಲ ಮತ್ತು ತೈಲ ಸೂಚ್ಯಂಕ ಶೇ 3.6ರಷ್ಟು ಮತ್ತು ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 3.2ರಷ್ಟು ತಗ್ಗಿವೆ.

ಏರಿಕೆ–ಇಳಿಕೆ: ನಿಫ್ಟಿಯಲ್ಲಿ ಎಚ್‌ಡಿಎಫ್‌ಸಿ ಲೈಫ್ ಶೇ 10ರಷ್ಟು, ಕೋಟಕ್ ಬ್ಯಾಂಕ್ ಶೇ 6.5ರಷ್ಟು, ಎಚ್‌ಡಿಎಫ್‌ಸಿ ಲಿಮಿಟೆಡ್ ಶೇ 6ರಷ್ಟು ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಶೇ 5.5ರಷ್ಟು ಗಳಿಸಿಕೊಂಡಿವೆ. ಡಿವೀಸ್ ಲ್ಯಾಬ್ಸ್ ಶೇ 18.5ರಷ್ಟು, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 13ರಷ್ಟು, ಒಎನ್‌ಜಿಸಿ ಶೇ 11ರಷ್ಟು, ಟಾಟಾ ಸ್ಟೀಲ್ ಶೇ 11ರಷ್ಟು ಮತ್ತು ಏಷ್ಯನ್ ಪೇಂಟ್ಸ್ ಶೇ 9ರಷ್ಟು ಕುಸಿದಿವೆ.

ಮುನ್ನೋಟ: ಸದ್ಯ ಷೇರು ಮಾರುಕಟ್ಟೆಯು ಬೆಳವಣಿಗೆ ಕುಂಠಿತವಾಗುವ ಆತಂಕದ ಜೊತೆಗೆ ಆರ್ಥಿಕ ಹಿಂಜರಿತದ ಎದುರಾಗಬಹುದು ಎಂಬ ಭಯದಲ್ಲಿದೆ. ತೈಲ ಬೆಲೆ ಮತ್ತಷ್ಟು ಹೆಚ್ಚಳವಾಗುವ ಸಾಧ್ಯತೆಯೂ ಇದೆ. ಮಾರುಕಟ್ಟೆ ಎಷ್ಟು ತ್ವರಿತ ಮತ್ತು ಹರಿತ ಏರಿಳಿತಗಳನ್ನು ಕಾಣುತ್ತಿದೆ ಎಂದರೆ, ಕಳೆದ ವಾರದ ವಹಿವಾಟಿನ ಮೊದಲ ಮೂರು ದಿನಗಳಲ್ಲಿ ಸೂಚ್ಯಂಕಗಳು ಶೇ 1.5ರಷ್ಟು ಕುಸಿದಿದ್ದವು, ಆದರೆ ಕೊನೆಯ ಎರಡು ದಿನಗಳಲ್ಲಿ ಸೂಚ್ಯಂಕಗಳು ಶೇ 2.1ರಷ್ಟು ಹೆಚ್ಚಳ ದಾಖಲಿಸಿದವು.

ಕಳೆದ ಒಂದು ತಿಂಗಳ ಅಂಕಿ–ಅಂಶ ನೋಡಿದಾಗಲೂ ಮಾರುಕಟ್ಟೆ ನಿರಂತರ ಇಳಿಕೆ ಕಾಣುತ್ತಿರುವುದು ಕಂಡುಬರುತ್ತದೆ. ಒಂದು ತಿಂಗಳ ಅವಧಿಯಲ್ಲಿ ನಿಫ್ಟಿ ಶೇ 4.93ರಷ್ಟು ಕುಸಿದಿದ್ದರೆ ಸೆನ್ಸೆಕ್ಸ್ ಶೇ 4.31ರಷ್ಟು ತಗ್ಗಿದೆ. ಐ.ಟಿ. ಸೂಚ್ಯಂಕ ಶೇ 10.05ರಷ್ಟು, ಬ್ಯಾಂಕ್ ಸೂಚ್ಯಂಕ ಶೇ 2.17ರಷ್ಟು ಮತ್ತು ಲೋಹ ಸೂಚ್ಯಂಕ ಶೇ 17.76ರಷ್ಟು ತಗ್ಗಿವೆ. ಸದ್ಯ ಹೂಡಿಕೆದಾರರು ಬಂಡವಾಳ ರಕ್ಷಣೆಗೆ ಆದ್ಯತೆ ಕೊಡುವುದು ಒಳಿತು.

ಅಸಂಘಟಿತ ವಲಯದ ಕಾರ್ಮಿಕರ ಸ್ಥಿತಿ

ಬಹುತೇಕರ ಆದಾಯ ₹ 10 ಸಾವಿರಕ್ಕಿಂತ ಕಡಿಮೆ

ನವದೆಹಲಿ (ಪಿಟಿಐ): ಅಸಂಘಟಿತ ವಲಯದ 27.69 ಕೋಟಿ ಕಾರ್ಮಿಕರು ಇ-ಶ್ರಮ್ ಪೋರ್ಟಲ್‌ನಲ್ಲಿ ನೋಂದಾಯಿತರಾಗಿದ್ದು, ಇವರ ಪೈಕಿ ಶೇಕಡ 94.11ರಷ್ಟು ಮಂದಿಯ ತಿಂಗಳ ಆದಾಯ ₹ 10 ಸಾವಿರಕ್ಕಿಂತ ಕಡಿಮೆ. ಅಲ್ಲದೆ, ಇಷ್ಟು ಮಂದಿಯಲ್ಲಿ ಶೇ 74ರಷ್ಟು ಮಂದಿ ಪರಿಶಿಷ್ಟ ಜಾತಿ (ಎಸ್‌ಸಿ), ಪರಿಶಿಷ್ಟ ಪಂಗಡ (ಎಸ್‌ಟಿ) ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ (ಒಬಿಸಿ) ಸೇರಿದವರು.

2021ರ ನವೆಂಬರ್ ಮಧ್ಯಭಾಗದಲ್ಲಿ ಇ-ಶ್ರಮ್ ಪೋರ್ಟಲ್‌ನಲ್ಲಿ ಅಸಂಘಟಿತ ವಲಯದ 8 ಕೋಟಿ ಕಾರ್ಮಿಕರು ನೋಂದಾಯಿತರಾಗಿದ್ದರು. ಆಗ ತಿಂಗಳಿಗೆ ₹ 10 ಸಾವಿರಕ್ಕಿಂತ ಕಡಿಮೆ ಆದಾಯ ಹೊಂದಿರುವವರ ಪ್ರಮಾಣವು ಶೇ 92.37ರಷ್ಟು ಆಗಿತ್ತು.

ದೇಶದ ಅಸಂಘಟಿತ ವಲಯದಲ್ಲಿ ಒಟ್ಟು 38 ಕೋಟಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ ಎಂಬ ಅಂದಾಜು ಇದೆ. ಇಷ್ಟೂ ಜನ ಇ-ಶ್ರಮ್ ಪೋರ್ಟಲ್‌ನಲ್ಲಿ ನೋಂದಾಯಿತರಾದ ನಂತರದಲ್ಲಿ ಸಮಾಜದಲ್ಲಿ ಇರುವ ತೀವ್ರ ಅಸಮಾನತೆಯು ಸ್ಪಷ್ಟವಾಗಿ ಗೊತ್ತಾಗಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ದೇಶದ ಅಸಂಘಟಿತ ವಲಯದ ಕಾರ್ಮಿಕರ ಸಮಗ್ರ ದತ್ತಾಂಶವನ್ನು ರೂಪಿಸುವ ಗುರಿಯನ್ನು ಇ-ಶ್ರಮ್ ಪೋರ್ಟಲ್ ಹೊಂದಿದೆ. ಅಸಂಘಟಿತ ವಲಯದ ಅಷ್ಟೂ ಕಾರ್ಮಿಕರು ಇದೇ ವರ್ಷದೊಳಗೆ ಹೆಸರು ನೋಂದಾಯಿಸಿಕೊಂಡಲ್ಲಿ, ಅವರಿಗಾಗಿ ಸೂಕ್ತ ನೀತಿಗಳನ್ನು ರೂಪಿಸಲು ದೇಶದ ನಾಯಕತ್ವಕ್ಕೆ ಸಾಧ್ಯವಾಗಲಿದೆ ಎಂಬ ಅಭಿಪ್ರಾಯ ಕೂಡ ತಜ್ಞರಲ್ಲಿ ಇದೆ.

ಶೇ 4.36ರಷ್ಟು ಮಂದಿಯ ತಿಂಗಳ ಆದಾಯವು ₹ 10 ಸಾವಿರದಿಂದ ₹ 15 ಸಾವಿರದ ನಡುವೆ ಇದೆ. ಪೋರ್ಟಲ್‌ನಲ್ಲಿ ನೋಂದಣಿ ಆಗಿರುವವರಲ್ಲಿ ಶೇ 45.32ರಷ್ಟು ಮಂದಿ ಒಬಿಸಿ, ಶೇ 20.95ರಷ್ಟು ಮಂದಿ ಎಸ್‌ಸಿ ಹಾಗೂ ಶೇ 8.17ರಷ್ಟು ಮಂದಿ ಎಸ್‌ಟಿ ಸಮುದಾಯಗಳಿಗೆ ಸೇರಿದವರು. ಸಾಮಾನ್ಯ ವರ್ಗಕ್ಕೆ ಸೇರಿದವರ ಪ್ರಮಾಣ ಶೇ 25.56ರಷ್ಟು, ಮಹಿಳೆಯರ ಪ್ರಮಾಣ ಶೇ 52.81, ಪುರುಷರ ಪ್ರಮಾಣ ಶೇ 47.19ರಷ್ಟು ಇದೆ.

ಅಂಕಿ-ಅಂಶಗಳು

94.11%
₹ 10 ಸಾವಿರಕ್ಕಿಂತ ಕಡಿಮೆ ಆದಾಯ ಹೊಂದಿರುವ ಕಾರ್ಮಿಕರ ಪ್ರಮಾಣ

4.36%
₹ 10 ಸಾವಿರಕ್ಕಿಂತ ಹೆಚ್ಚು, ₹ 15 ಸಾವಿರಕ್ಕಿಂತ ಕಡಿಮೆ ಆದಾಯ ಹೊಂದಿರುವವರ ಪ್ರಮಾಣ







2024ರ ಜ.24ರಂದು ರಾಮಲಲ್ಲಾ ಪ್ರತಿಷ್ಠಾಪನೆ

ಪ್ರಜಾವಾಣಿ ವಾರ್ತೆ



ರಾಮ ಮಂದಿರ ವಿನ್ಯಾಸದ ನೀಲನಕ್ಷೆ –ಪಿಟಿಐ ಚಿತ್ರ

ಲಖನೌ: ಉತ್ತರಪ್ರದೇಶದ ಅಯೋಧ್ಯೆಯಲ್ಲಿ ನಿರ್ಮಾಣವಾಗಿರುವ ರಾಮ ಮಂದಿರದ ಗರ್ಭಗುಡಿಯಲ್ಲಿ 2024ರ ಜನವರಿ 24 ರಂದು ರಾಮಲಲ್ಲಾ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಲು ದಿನಾಂಕ ನಿಗದಿಪಡಿಸಲಾಗದೆ.

ಈ ಬಗ್ಗೆ ಮಾಹಿತಿ ನೀಡಿರುವ ದೇಗುಲದ ಪ್ರಧಾನ ಅರ್ಚಕ ಆಚಾರ್ಯ ಸತ್ಯೇಂದ್ರ ದಾಸ್, 'ನೂತನ ಮಂದಿರದಲ್ಲಿ ರಾಮಲಲ್ಲಾ ವಿಗ್ರಹ ಪ್ರತಿಷ್ಠಾಪನೆಗೆ 2024ರ ಜೂನ್ 24, ಅತ್ಯಂತ ಶುಭ ದಿನ ಎಂದು ಪರಿಗಣಿಸಲಾಗಿದೆ. ಡಿಸೆಂಬರ್ 2023ರಲ್ಲಿ ಗರ್ಭಗುಡಿ ನಿರ್ಮಾಣ ಕಾರ್ಯ ಪೂರ್ಣಗೊಳ್ಳಲಿದೆ. ಅದೇ ತಿಂಗಳಿನಿಂದ ಭಕ್ತರಿಗೆ ದೇಗುಲ ದರ್ಶನಕ್ಕೆ ಅವಕಾಶ ನೀಡಲಾಗುತ್ತದೆ' ಎಂದು ತಿಳಿಸಿದ್ದಾರೆ.

ಇದೇ ವೇಳೆ, 'ಗರ್ಭಗುಡಿಯ ನಿರ್ಮಾಣ ಕಾರ್ಯ ಇದೇ ಜೂನ್ 1ರಿಂದ ಆರಂಭವಾಗಲಿದೆ. ಈ ಹಿನ್ನೆಲೆಯಲ್ಲಿ 5 ದಿನಗಳ ಕಾಲ ನಡೆಯಲಿರುವ ವಿಶೇಷ ಪೂಜೆ ಈಗಾಗಲೇ ಆರಂಭವಾಗಿದೆ' ಎಂದು ತಿಳಿಸಿದ್ದಾರೆ.

ಜೂ.1ರಂದು ನಡೆಯಲಿರುವ ಪೂಜಾ ಕಾರ್ಯಕ್ರಮದಲ್ಲಿ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಭಾಗಿಯಾಗುವ ಸಾಧ್ಯತೆ ಇದೆ.

ಈ ಮಧ್ಯೆ, 2024ರ ಲೋಕಸಭಾ ಚುನಾವಣೆಗೂ ಮೊದಲೇ ರಾಮ ಮಂದಿರ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಬೇಕು ಎಂದು ಬಿಜೆಪಿ ಮತ್ತು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಬಯಸಿವೆ ಎಂದು ಮೂಲಗಳು ತಿಳಿಸಿವೆ. ಪ್ರಧಾನಿ ನರೇಂದ್ರ ಮೋದಿ ಅವರು 2020ರ ಆಗಸ್ಟ್‌ನಲ್ಲಿ ರಾಮ ಮಂದಿರ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದರು.



ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹490
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹495



ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹273-568
ದ್ವಿತಳಿ (ಬಿ.ವಿ)	₹350-803

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

'ಜನ್ ಸಮರ್ಥ್' ಪೋರ್ಟಲ್ ಆರಂಭಕ್ಕೆ ಚಿಂತನೆ

ನವದೆಹಲಿ (ಪಿಟಿಐ): ವಿವಿಧ ಸಚಿವಾಲಯಗಳು ಮತ್ತು ಇಲಾಖೆಗಳು ಜಾರಿಗೊಳಿಸುತ್ತಿರುವ ಯೋಜನೆಗಳ ಸೌಲಭ್ಯಗಳನ್ನು ಫಲಾನುಭವಿಗಳಿಗೆ ತ್ವರಿತ ವಿತರಿಸಲು ನೆರವಾಗಲು 'ಜನ್ ಸಮರ್ಥ್' ಹೆಸರಿನಲ್ಲಿ ಪೋರ್ಟಲ್ ಆರಂಭಿಸಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ.

'ಕನಿಷ್ಠ ಸರ್ಕಾರ, ಗರಿಷ್ಠ ಆಡಳಿತ' ಎಂಬ ಪ್ರಧಾನಿ ಮೋದಿ ನೇತೃತ್ವದ ಸರ್ಕಾರದ ಚಿಂತನೆಗೆ ಪೂರಕವಾಗಿ ಉದ್ದೇಶಿತ ಪೋರ್ಟಲ್‌ನಲ್ಲಿ ವಿವಿಧ 15 ಸರ್ಕಾರಿ ಯೋಜನೆಗಳ ಕುರಿತು ಫಲಾನುಭವಿಗಳಿಗೆ ಸೌಲಭ್ಯ, ಮಾಹಿತಿಯನ್ನು ಒದಗಿಸಲಾಗುತ್ತದೆ. ಕ್ರೆಡಿಟ್ ಆಧರಿತ ಬಂಡವಾಳ ಸಬ್ಸಿಡಿ ಯೋಜನೆಯನ್ನು ವಿವಿಧ ಸಚಿವಾಲಯಗಳು ಜಾರಿಗೊಳಿಸುತ್ತಿವೆ. ಯೋಜನೆಗಳ ಸ್ವರೂಪ ಆಧರಿಸಿ ಹಂತ–ಹಂತವಾಗಿ ಪೋರ್ಟಲ್ ವ್ಯಾಪ್ತಿಯನ್ನು ವಿಸ್ತರಿಸಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಜಂ ಖಾನ್ ಆಸ್ಪತ್ರೆಗೆ ದಾಖಲು

ನವದೆಹಲಿ(ಪಿಟಿಐ): ಸಮಾಜವಾದಿ ಪಕ್ಷದ ಮುಖಂಡ ಆಜಂ ಖಾನ್ ಅವರು ವೈದ್ಯಕೀಯ ತಪಾಸಣೆಗಾಗಿ ದೆಹಲಿಯ ಸರ್ ಗಂಗಾ ರಾಮ ಆಸ್ಪತ್ರೆಗೆ ಭಾನುವಾರ ದಾಖಲಾಗಿದ್ದಾರೆ.

ಸದ್ಯ ಅವರು ಆರೋಗ್ಯವಾಗಿದ್ದು, ಎಂದಿನಂತೆ ವೈದ್ಯಕೀಯ ತಪಾಸಣೆಗಾಗಿ ದಾಖಲಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ. ವಂಚನೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿದ್ದ ಆಜಂ ಖಾನ್ ಅವರು ಸುಪ್ರೀಂ ಕೋರ್ಟ್ ಜಾಮೀನು ನೀಡಿದ ಬಳಿಕ ಉತ್ತರ ಪ್ರದೇಶದ ಸೀತಾಪುರ ಕಾರಾಗೃಹದಿಂದ ಮೇ 20 ರಂದು ಬಿಡುಗಡೆಯಾಗಿದ್ದರು.

ನೇಪಾಳ: ವಿಮಾನ ಬಿದ್ದ ಸ್ಥಳ ಪತ್ತೆಯೇ ಸವಾಲಿನ ಕೆಲಸ

ಮೊಬೈಲ್ ಫೋನ್ ಸಿಗ್ನಲ್‌ನಿಂದ ಮಹತ್ವದ ಸುಳಿವು ಸಾಧ್ಯತೆ

ಕಠ್ಮಂಡು (ಪಿಟಿಐ): ಪತನಗೊಂಡಿರುವ ವಿಮಾನದ ಪೈಲಟ್ ಅವರ ಮೊಬೈಲ್ ಫೋನ್‌ನಿಂದ ಹೊರಹೊಮ್ಮಿದ ಸಿಗ್ನಲ್‌ಗಳೇ ಅಪಘಾತ ಸಂಭವಿಸಿದ ಸ್ಥಳದ ಬಗ್ಗೆ ಮಹತ್ವದ ಸುಳಿವು ನೀಡಲಿವೆ.

'ಪೈಲಟ್ ಅವರ ಮೊಬೈಲ್‌ನ ಸಿಗ್ನಲ್‌ಗಳನ್ನು ನೇಪಾಳ ಟೆಲಿಕಾಂ ಪತ್ತೆ ಹಚ್ಚಿದೆ. ಹೀಗಾಗಿ ವಿಮಾನವನ್ನು ಸೋಮವಾರ ಪತ್ತೆ ಮಾಡುವ ಸಾಧ್ಯತೆ ಇದೆ' ಎಂದು ಮಾಧ್ಯಮಗಳು ವರದಿ ಮಾಡಿವೆ.

ಪ್ರತಿಕೂಲ ಹವಾಮಾನ ಕಾರಣದಿಂದಾಗಿ ವಿಮಾನ ಪತ್ತೆ ಹಚ್ಚುವ ಕಾರ್ಯವನ್ನು ಸ್ಥಗಿತಗೊಳಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ತಾರಾ ಏರ್ ಸಂಸ್ಥೆಗೆ ಸೇರಿದ '9ಎನ್–ಏಇಟಿ' ವಿಮಾನವು, ಪೋಖರಾ ವಿಮಾನ ನಿಲ್ದಾಣದಿಂದ ಟೇಕಾಫ್ ಆದ 15 ನಿಮಿಷಗಳ ನಂತರ, ನಿಯಂತ್ರಣ ಗೋಪುರದಿಂದ ಸಂಪರ್ಕ ಕಳೆದುಕೊಂಡಿತ್ತು. ಈಗ, ವಿಮಾನ ಪತನವಾಗಿರುವ ನಿರ್ದಿಷ್ಟ ಸ್ಥಳವನ್ನು ಪತ್ತೆ ಮಾಡುವುದೇ ನೇಪಾಳ ಸೇನೆಯ ಸೈನಿಕರಿರುವ ರಕ್ಷಣಾ ತಂಡಕ್ಕೆ ಸವಾಲಿನ ಕೆಲಸವಾಗಿದೆ.

'ವಿಮಾನದ ಕ್ಯಾಪ್ಟನ್ ಪ್ರಭಾಕರ್ ಘಿಮಿರೆ ಅವರ ಮೊಬೈಲ್ ರಿಂಗಣಿಸುತ್ತಿದ್ದುದನ್ನು ನೇಪಾಳ ಟೆಲಿಕಾಂ ಸಂಸ್ಥೆಯು ಜಿಪಿಎಸ್ ತಂತ್ರಜ್ಞಾನ ಬಳಸಿ ಪತ್ತೆ ಹಚ್ಚಿದೆ. ಅದರ ಆಧಾರದ ಮೇಲೆ ವಿಮಾನವು ಪತನಗೊಂಡಿರಬಹುದಾದ ಸ್ಥಳವನ್ನು ಗುರುತಿಸುವ ಕಾರ್ಯ ನಡೆಯುತ್ತಿದೆ' ಎಂದು ತ್ರಿಭುವನ್ ಅಂತರರಾಷ್ಟ್ರೀಯ ವಿಮಾನನಿಲ್ದಾಣದ ಪ್ರಧಾನ ವ್ಯವಸ್ಥಾಪಕ ಪ್ರೇಮನಾಥ್ ಠಾಕೂರ್ ಹೇಳಿದ್ದಾರೆ.

'ವಿಮಾನವು ಖೈಬಾಂಗ್ ಬಳಿ ಎರಡು ಬಾರಿ ವೃತ್ತಾಕಾರದಲ್ಲಿ ಹಾರಾಡಿ ನಂತರ ಲೇಟೆ ಪಾಸ್ ಬಳಿ ಬಿತ್ತು ಎಂಬುದಾಗಿ ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ' ಎಂದು ಜಿಲ್ಲಾಧಿಕಾರಿ ಮ್ಯಾಗ್ದಿ ಚಿರಂಜೀವಿ ರಾಣಾ ಮಾಹಿತಿ ನೀಡಿದ್ದಾರೆ.



ಏಷ್ಯಾ ಕಪ್ ಹಾಕಿ ಟೂರ್ನಿ: ಮಿಂಚಿದ ವಿಷ್ಣುಕಾಂತ್, ಸುನಿಲ್, ನೀಲಂ

ಭಾರತ–ಮಲೇಷ್ಯಾ ಪಂದ್ಯ ರೋಚಕ ಡ್ರಾ

ಜಕಾರ್ತ (ಪಿಟಿಐ): ಜಿದ್ದಾಜಿದ್ದಿಯ ಹಣಾಹಣಿಯಲ್ಲಿ ಭಾರತ ತಂಡ ಏಷ್ಯಾಕಪ್ ಹಾಕಿ ಟೂರ್ನಿಯ ಸೂಪರ್ ಫೋರ್ ಹಂತದ ಎರಡನೇ ಪಂದ್ಯದಲ್ಲಿ ಮಲೇಷ್ಯಾ ಎದುರು ಡ್ರಾಗೆ ಸಮಾಧಾನ-ಪಟ್ಟುಕೊಂಡಿತು.

ಭಾನುವಾರ ಸಂಜೆ ನಡೆದ ಪಂದ್ಯದ ಆರಂಭದಲ್ಲಿ ಎರಡು ಗೋಲುಗಳನ್ನು ಬಿಟ್ಟುಕೊಟ್ಟ ಭಾರತ ದ್ವಿತೀಯಾರ್ಧದಲ್ಲಿ ಪುಟಿದೆದ್ದು ಮೂರು ಗೋಲು ಗಳಿಸಿತು. ಆದರೆ ಅಂತಿಮ ಹಂತದಲ್ಲಿ ಗೋಲು-ಬಿಟ್ಟುಕೊಟ್ಟು ಜಯದ ಅವಕಾಶವನ್ನು ಕೈಚೆಲ್ಲಿತು.

ವಿಷ್ಣುಕಾಂತ್ ಸಿಂಗ್ (32ನೇ ನಿಮಿಷ), ಎಸ್.ವಿ.ಸುನಿಲ್ (53ನೇ ನಿ) ಮತ್ತು ನೀಲಮ್ ಸಂಜೀವ್ ಕ್ಸೆಸ್ (55ನೇ ನಿ) ಭಾರತಕ್ಕಾಗಿ ಚೆಂಡನ್ನು ಗುರಿ ಮುಟ್ಟಿಸಿದರು. ರಜೀ ರಹೀಂ (12, 21, 56ನೇ ನಿ) ಗಳಿಸಿದ ಹ್ಯಾಟ್ರಿಕ್ ಗೋಲುಗಳು ಎದುರಾಳಿ ತಂಡದ ಕೈ ಹಿಡಿದವು.

ಶನಿವಾರ ನಡೆದ ಮೊದಲ ಪಂದ್ಯದಲ್ಲಿ ಜಪಾನ್ ವಿರುದ್ಧ 2-1ರಲ್ಲಿ ಗೆದ್ದಿದ್ದ ಭಾರತ ದ್ವಿತೀಯಾರ್ಧದಲ್ಲಿ ಒಂದು ಗೋಲಿನ ಮುನ್ನಡೆಯೊಂದಿಗೆ ಜಯದತ್ತ ಹೆಜ್ಜೆ ಹಾಕಿತ್ತು. ಈ ಮೂಲಕ ಫೈನಲ್‌ನಲ್ಲಿ ಸ್ಥಾನ ಖಚಿತಪಡಿಸಿಕೊಳ್ಳುವ ಸಾಧ್ಯತೆ ಇತ್ತು. ಆದರೆ ನಂತರ ಕೈಸುಟ್ಟುಕೊಂಡಿತು.

ಅರನೇ ನಿಮಿಷದಲ್ಲೇ ಮಲೇಷ್ಯಾ ಮೊದಲ ಗೋಲು ಗಳಿಸುವ ಸಾಧ್ಯತೆ ಇತ್ತು. ಆದರೆ ಮುಹಮ್ಮದ್ ಹುಸೇನ್ ಅವರ ಆಕ್ರಮಣವನ್ನು ತಡೆಯುವಲ್ಲಿ ಗೋಲ್‌ಕೀಪರ್ ಸೂರಜ್ ಕರ್ಕೇರಾ ಯಶಸ್ವಿಯಾದರು. ನಂತರ ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಫೈಜಲ್ ಸಾರಿ ಅವರ ಪ್ರಯತ್ನ ಕೂಡ ವಿಫಲವಾಯಿತು. ಆಕ್ರಮಣಕಾರಿ ಆಟವನ್ನು ಮುಂದುವರಿಸಿದ ಮಲೇಷ್ಯಾಗೆ 12ನೇ ನಿಮಿಷದಲ್ಲಿ ಮತ್ತೊಂದು ಪೆನಾಲ್ಟಿ ಕಾರ್ನರ್ ಅವಕಾಶ ಲಭಿಸಿತು. ಮಿಂಚಿನ ವೇಗದಲ್ಲಿ ಫ್ಲಿಕ್ ಮಾಡಿದ ರಹೀಮ್ ಅವರನ್ನು ತಡೆಯಲು ಕರ್ಕೇರಾಗೆ ಸಾಧ್ಯವಾಗಲಿಲ್ಲ. 21ನೇ ನಿಮಿಷದಲ್ಲೂ ಪೆನಾಲ್ಟಿ ಕಾರ್ನರ್ ಅವಕಾಶವನ್ನು ರಹೀಂ ಗೋಲಾಗಿ ಪರಿವರ್ತಿಸಿದರು.

ಮಿಂಚಿದ ಸುನಿಲ್: ಭಾರತದ ಮೊದಲ ಗೋಲು ಕೂಡ ಪೆನಾಲ್ಟಿ ಕಾರ್ನರ್ ಮೂಲಕ ಬಂತು. ಮೂರನೇ ಕ್ವಾರ್ಟರ್‌ನಲ್ಲಿ ಲಭಿಸಿದ ಮತ್ತೊಂದು ಪೆನಾಲ್ಟಿ ಕಾರ್ನರ್ ಭಾರತ ಕೈಚೆಲ್ಲಿತು. ಕೊನೆಯ ಕ್ವಾರ್ಟರ್‌ನಲ್ಲೂ ಎರಡು ಪೆನಾಲ್ಟಿ ಕಾರ್ನರ್‌ಗಳು ಲಭಿಸಿದವು. 53ನೇ ನಿಮಿಷದಲ್ಲಿ ಎದುರಾಳಿಯಿಂದ ಚೆಂಡನ್ನು ಕಸಿದುಕೊಂಡು ಮುನ್ನುಗ್ಗಿದ ಪವನ್ ರಾಜ್‌ಭರ್ ಅವರಿಂದ ಪಾಸ್ ಪಡೆದ ಸುನಿಲ್ ಅತ್ಯಮೋಘವಾಗಿ ಗುರಿ ಮುಟ್ಟಿಸಿದರು. ಕೊನೆಯ ಗೋಲು ಕೂಡ ಪೆನಾಲ್ಟಿ ಕಾರ್ನರ್ ಮೂಲಕವೇ ಬಂತು. ಸುನಿಲ್ ಅವರ ಪುಶ್‌ನಲ್ಲಿ ಸಂಜೀವ್ ಅವರು ಸುಂದರವಾಗಿ ಚೆಂಡನ್ನು ಗುರಿ ಸೇರಿಸಿದರು.



ಮಲೇಷ್ಯಾ ಆಟಗಾರನಿಂದ ಚೆಂಡು ಕಸಿದುಕೊಂಡು ಮುನ್ನುಗ್ಗಿದ ಉತ್ತಮ್ ಸಿಂಗ್ –ಹಾಕಿ ಇಂಡಿಯಾ ಚಿತ್ರ

ಅಂಧರ ಚೆಸ್ ಕಿಶನ್‌ಗೆ ಪ್ರಶಸ್ತಿ

ಹೊಸಪೇಟೆ: ಶಿವಮೊಗ್ಗದ ಕಿಶನ್ ಗಂಗೊಳ್ಳಿ ಸೇವಿಯರ್ ಅಂಗವಿಕಲರ ಸೇವಾ ಸಮಿತಿ ಆಯೋಜಿಸಿದ ರಾಜ್ಯ ಅಂಧರ ಚೆಸ್ ಟೂರ್ನಿಯಲ್ಲಿ ಚಾಂಪಿಯನ್ ಆದರು.



ಕಿಶನ್ ಗಂಗೊಳ್ಳಿ

ಒಂಬತ್ತು ಸುತ್ತುಗಳಲ್ಲಿ ಕಿಶನ್ 8 ಅಂಕ ಗಳಿಸಿದರು. ಅವರಿಗೆ ₹20 ಸಾವಿರ ನಗದು, ಪ್ರಮಾಣ ಪತ್ರ, ಟ್ರೋಫಿ ನೀಡಲಾಯಿತು.

ಬೆಂಗಳೂರಿನ ರಮೇಶ್ ಎ.ಆರ್ (7.5) ದ್ವಿತೀಯ ಹಾಗೂ ಕಲಬುರಗಿಯ ಕಿರಣ್ ಕುಮಾರ್ ಸಿ. ಸಿಂಪಿ (7.5) ತೃತೀಯ ಸ್ಥಾನ ಗಳಿಸಿದರು. ಇಬ್ಬರಿಗೆ ಕ್ರಮವಾಗಿ ₹18 ಸಾವಿರ, ₹16 ಸಾವಿರ ನಗದು, ಪ್ರಮಾಣ ಪತ್ರ ವಿತರಿಸಲಾಯಿತು. ಮಹಿಳೆಯರ ವಿಭಾಗದಲ್ಲಿ ಬೆಂಗಳೂರಿನ ಶೀಲಾವತಿ ಹಾಗೂ ಮಕ್ಕಳ ವಿಭಾಗದಲ್ಲಿ ರಾಯಚೂರಿನ ಮಲ್ಲೇಶ್ ಪ್ರಥಮ ಸ್ಥಾನ ಗಳಿಸಿದರು. ಇಬ್ಬರಿಗೆ ತಲಾ ₹5 ಸಾವಿರ, ಪ್ರಮಾಣ ಪತ್ರ ವಿತರಿಸಲಾಯಿತು.



ಪ್ರಶಸ್ತಿ ಜಯಿಸಿದ ರಿಯಲ್ ಮ್ಯಾಡ್ರಿಡ್ ಆಟಗಾರರ ಸಂಭ್ರಮ– ಪಿಟಿಐ ಚಿತ್ರ

ಚಾಂಪಿಯನ್ಸ್ ಲೀಗ್: ಲಿವರ್‌ಪೂಲ್ ತಂಡಕ್ಕೆ ನಿರಾಸೆ

ರಿಯಲ್ ಮ್ಯಾಡ್ರಿಡ್‌ಗೆ 14ನೇ ಕಿರೀಟ

ಪ್ಯಾರಿಸ್ (ಎಎಫ್‌ಪಿ): ವಿನಿಸಿಯಸ್ ಜೂನಿಯರ್ ಗಳಿಸಿದ ಏಕೈಕ ಗೋಲಿನ ಬಲದಿಂದ ರಿಯಲ್ ಮ್ಯಾಡ್ರಿಡ್ ತಂಡ ಯುಇಎಫ್‌ಎ ಚಾಂಪಿಯನ್ಸ್ ಲೀಗ್ ಟೂರ್ನಿಯ ಪ್ರಶಸ್ತಿಗೆ ಮುತ್ತಿಕ್ಕಿತು.

ಸ್ಟೇಡ್ ಡಿ ಫ್ರಾನ್ಸ್ ಕ್ರೀಡಾಂಗಣದಲ್ಲಿ ಶನಿವಾರ ತಡರಾತ್ರಿ ನಡೆದ ಫೈನಲ್ ಹಣಾಹಣಿಯಲ್ಲಿ ರಿಯಲ್ ಮ್ಯಾಡ್ರಿಡ್ 1–0ಯಿಂದ ಲಿವರ್‌ಪೂಲ್ ತಂಡಕ್ಕೆ ಸೋಲುಣಿಸಿತು. ಇದರೊಂದಿಗೆ ದಾಖಲೆಯ 14ನೇ ಬಾರಿ 'ಯೂರೋಪಿನ ರಾಜ' ಎನಿಸಿಕೊಂಡಿತು.

ಉಭಯ ತಂಡಗಳ ಜಿದ್ದಾಜಿದ್ದಿನ ಪೈಪೋಟಿಯಲ್ಲಿ ಮೊದಲಾರ್ಧದಲ್ಲಿ ಯಾವುದೇ ಗೋಲು ದಾಖಲಾಗಲಿಲ್ಲ. 59ನೇ ನಿಮಿಷದಲ್ಲಿ ಫೆಡರಿಕೊ ವಾಲ್ವರ್ಡೆ ನೀಡಿದ ಪಾಸ್‌ನಲ್ಲಿ ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿದ ಬ್ರೆಜಿಲ್ ದೇಶದ ವಿನಿಸಿಯಸ್ ಮ್ಯಾಡ್ರಿಡ್ ತಂಡದಲ್ಲಿ ಸಂಭ್ರಮದ ಅಲೆ ಎಬ್ಬಿಸಿದರು.

ಸಮಬಲದ ಗೋಲು ದಾಖಲಿಸುವ ಲಿವರ್‌ಪೂಲ್ ಆಟಗಾರರ ಆಸೆ ಕೈಗೂಡಲಿಲ್ಲ.

ಚಾಂಪಿಯನ್ಸ್ ಲೀಗ್‌ನಲ್ಲಿ ಆಡಿದ ಐದು ಫೈನಲ್‌ನಲ್ಲಿ ಲಿವರ್‌ಪೂಲ್ ತಂಡವು ಎರಡನೇ ಬಾರಿ ಸ್ಪೇನ್ ಮೂಲದ ರಿಯಲ್ ಮ್ಯಾಡ್ರಿಡ್‌ಗೆ ಮಣಿಯಿತು.


ಟಿಕೆಟ್ ಗೊಂದಲ; ಬಂಧನ: ಕ್ರೀಡಾಂಗಣದ ಹೊರಗೆ ಕೆಲವರು ಸೃಷ್ಟಿಸಿದ ಗೊಂದಲದ ಕಾರಣದಿಂದಾಗಿ ಪಂದ್ಯವು ನಿಗದಿತ ಸಮಯಕ್ಕಿಂತ 35 ನಿಮಿಷ ತಡವಾಗಿ ಆರಂಭವಾಯಿತು.

ಗೊಂದಲ ಸೃಷ್ಟಿಸಲು ಯತ್ನಿಸಿದ 39ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಲಾಗಿದೆ ಎಂದು ಫ್ರಾನ್ಸ್ ಪೊಲೀಸರು ತಿಳಿಸಿದ್ದಾರೆ.

ಭದ್ರತಾ ವೈಫಲ್ಯದಿಂದಾಗಿ ಅಸಲಿ ಟಿಕೆಟ್ ಹೊಂದಿರುವವರು ಕ್ರೀಡಾಂಗಣ ಪ್ರವೇಶಿಸಲು ಸಾಧ್ಯವಾಗಲಿಲ್ಲ ಎಂದು ಲಿವರ್‌ಪೂಲ್ ಆಡಳಿತ ದೂರಿದೆ. ನಕಲಿ ಟಿಕೆಟ್ ಹೊಂದಿದವರಿಂದ ಈ ಸಮಸ್ಯೆ ಸೃಷ್ಟಿಯಾಯಿತು ಎಂದು ಫ್ರಾನ್ಸ್ ಅಧಿಕಾರಿಗಳು ಹೇಳಿದ್ದಾರೆ.

ಟೂರ್ನಿಯಲ್ಲಿ ಹೆಚ್ಚು ಗೋಲು ಗಳಿಸಿದವರು

ಆಟಗಾರ	ತಂಡ	ಗೋಲು
ಕರೀಂ ಬೆಂಜೆಮಾ	ರಿಯಲ್ ಮ್ಯಾಡ್ರಿಡ್	15
ರಾಬರ್ಟ್ ಲೆವಾಂಡೊವಸ್ಕಿ	ಬಾಯರ್ನ್ ಮ್ಯೂನಿಚ್	13
ಸೆಬಾಸ್ಟಿಯನ್ ಹ್ಯಾಲರ್	ಅಜಾಕ್ಸ್	11



ಈಜು: ಬಸವನಗುಡಿ, ಡಾಲ್ಫಿನ್ ಕೇಂದ್ರ ಚಾಂಪಿಯನ್

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಬೆಂಗಳೂರಿನ ಬಸವನಗುಡಿ ಹಾಗೂ ಡಾಲ್ಫಿನ್ ಈಜು ಕೇಂದ್ರದ ತಂಡಗಳು ರಾಜ್ಯ ಈಜು ಸಂಸ್ಥೆ, ಕೆಎಲ್‌ಇ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಅಕಾಡೆಮಿ ಸಹಯೋಗದಲ್ಲಿ ನಡೆದ ರಾಜ್ಯ ಈಜು ಕೂಟದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದವು.

ಜೂನಿಯರ್ ವಿಭಾಗದಲ್ಲಿ 736 ಅಂಕ ಗಳಿಸಿದ ಬಸವನಗುಡಿ ಈಜು ಕೇಂದ್ರ ಅಗ್ರಸ್ಥಾನ ಪಡೆದರೆ, 720 ಅಂಕಗಳೊಂದಿಗೆ ಡಾಲ್ಫಿನ್ ಈಜು ಕೇಂದ್ರ ರನ್ನರ್ ಅಪ್ ಆಯಿತು. ಸಬ್ ಜೂನಿಯರ್ ವಿಭಾಗದಲ್ಲಿ 206 ಅಂಕ ಗಳಿಸಿದ ಡಾಲ್ಫಿನ್ ಈಜು ಕೇಂದ್ರ ಚಾಂಪಿಯನ್ ಪಟ್ಟ ಅಲಂಕರಿಸಿದರೆ, 127 ಅಂಕ ಗಳಿಕೆಯೊಂದಿಗೆ ಬಸವನಗುಡಿ ಈಜು ಕೇಂದ್ರ ತಂಡದ ರನ್ನರ್ ಅಪ್ ಪಡೆಯಿತು.

ಭಾನುವಾರ ಕೂಟದಲ್ಲಿ ಎಂಟು ದಾಖಲೆ ನಿರ್ಮಾಣವಾದವು. ಡಾಲ್ಫಿನ್ ಈಜು ಕೇಂದ್ರದ ಧಿನಿಧಿ ದೇಸಿಂಘು ಗುಂಪು–2ರ 50 ಮೀ. ಬಟರ್‌ಫ್ಲೈ–ನಲ್ಲಿ(29.09ಸೆ.), 200 ಮೀ. ಫ್ರೀಸ್ಟೈಲ್‌ನಲ್ಲಿ(2:09.27ಸೆ.), 50 ಮೀ. ಫ್ರೀಸ್ಟೈಲ್‌ನಲ್ಲಿ(27.88ಸೆ.) ದಾಖಲೆ ಬರೆದರು. ಮೂರು ವಿಭಾಗಗಳಲ್ಲಿ ದಾಖಲೆ ಮಾಡಿ ಗಮನ ಸೆಳೆದರು. 400 ಮೀ. ಮೆಡ್ಲೆಯಲ್ಲಿ ಇದೇ ಕೇಂದ್ರದ ಹಾಷಿಕಾ ರಾಮಚಂದ್ರ(5:19.94ಸೆ.) ದಾಖಲೆ ಬರೆದರು. ನೀನಾ ವೆಂಕಟೇಶ ಗುಂಪು–1ರ 50 ಮೀ. ಬಟರ್‌ಫ್ಲೈನಲ್ಲಿ(28.84ಸೆ.), 50 ಮೀ. ಫ್ರೀಸ್ಟೈಲ್‌ನಲ್ಲಿ(27.70ಸೆ.) ದಾಖಲೆ ಬರೆದರು.

ಜೂನಿಯರ್ ಬಾಲಕರ ಎರಡನೇ ಗುಂಪಿನಲ್ಲಿ 50 ಮೀ. ಫ್ರೀಸ್ಟೈಲ್‌ನಲ್ಲಿ ಇಶಾನ್ ಮೆಹ್ರಾ(25.54ಸೆ.) ದಾಖಲೆ ನಿರ್ಮಿಸಿದರು. ಜೂನಿಯರ್ ಬಾಲಕಿಯರ ಎರಡನೇ ಗುಂಪಿನ 4x100 ಮೆಡ್ಲೆಯಲ್ಲಿ ಡಾಲ್ಫಿನ್ ಈಜು ಕೇಂದ್ರ(4:42.64ಸೆ.) ದಾಖಲೆ ನಿರ್ಮಿಸಿತು.



ಜೂನಿಯರ್ ವಿಭಾಗದಲ್ಲಿ ಚಾಂಪಿಯನ್ ಆದ ಬೆಂಗಳೂರಿನ ಬಸವನಗುಡಿ ಈಜು ಕೇಂದ್ರದ ತಂಡದ ಸಂಭ್ರಮ



ಚೆಂಡನ್ನು ರಿಟರ್ನ್ ಮಾಡಿದ ನೊವಾಕ್ ಜೊಕೊವಿಚ್ –ಎಎಫ್‌ಪಿ ಚಿತ್ರ

ನಡಾಲ್–ನೊವಾಕ್ ಮುಖಾಮುಖಿ

ಪ್ಯಾರಿಸ್ (ಎಎಫ್‌ಪಿ): ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯ ಪುರುಷರ ಕ್ವಾರ್ಟರ್ ಫೈನಲ್‌ನಲ್ಲಿ ಹಾಲಿ ಚಾಂಪಿಯನ್ ಸ್ಪೇನ್‌ನ ರಫೆಲ್ ನಡಾಲ್ ಮತ್ತು ವಿಶ್ವ ಕ್ರಮಾಂಕದಲ್ಲಿ ಅಗ್ರಸ್ಥಾನದಲ್ಲಿರುವ ಸರ್ಬಿಯಾದ ನೊವಾಕ್ ಜೊಕೊವಿಚ್ ಮುಖಾಮುಖಿಯಾಗಲಿದ್ದಾರೆ.

ಭಾನುವಾರ ನಡೆದ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಅರ್ಜೆಂಟೀನಾದ ಡಿಯೆಗೊ ಸ್ವಾರ್ಟ್ಸ್‌ಮನ್ ವಿರುದ್ಧ 6-1, 6-3, 6-3ರಲ್ಲಿ ಜೊಕೊವಿಚ್ ಗೆದ್ದರು. ನಡಾಲ್ 3–6, 6–3, 6–2, 3–6, 6–3ರಲ್ಲಿ ಕೆನಡಾದ ಫೆಲಿಕ್ಸ್ ಅಗರ್ ಅಲಿಯಾಸಿಮ್ ವಿರುದ್ಧ ಗೆದ್ದರು. ಎಂಟರ ಘಟ್ಟದ ಪಂದ್ಯ ಮಂಗಳವಾರ ನಡೆಯಲಿದೆ.

ಕೆನಡಾದ ಯುವ ಆಟಗಾರ್ತಿ ಲೈಲಾ ಫರ್ನಾಂಡಸ್ ಮತ್ತು ಇಟಲಿಯ ಮಾರ್ಟಿನಾ ಟ್ರೆವಿಸನ್ ಮಹಿಳೆಯರ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಅಮೆರಿಕದ ಅಮಾಂಡ ಅನಿಸಿಮೊವ ವಿರುದ್ಧದ ಹಣಾಹಣಿಯಲ್ಲಿ ಲೈಲಾ ಫರ್ನಾಂಡಸ್ 6-3, 4-6, 6-3ರಲ್ಲಿ ಗೆಲುವು ಸಾಧಿಸಿದರು. ಮಾರ್ಟಿನಾ 7-6(10) 7-5ರಲ್ಲಿ ಬೆಲಾರಸ್‌ನ ಅಲೆಕ್ಸಾಂಡ್ರ ಸಾಸ್ನೊವಿಚ್ ಎದುರು ಗೆದ್ದರು.

ಅಮೆರಿಕದ ಕೊಕೊ ಗಫ್ ಬೆಲ್ಜಿಯಂನ ಎಲಿಸ್ ಮರ್ಟೆನ್ಸ್ ಎದುರು 6-4, 6-0ರಲ್ಲಿ ಜಯ ಗಳಿಸಿದರು.

ಐಎನ್‌ಬಿಎಲ್ 3x3 ಬ್ಯಾಸ್ಕೆಟ್‌ಬಾಲ್ ಲೀಗ್

ಹೈದರಾಬಾದ್, ಲೂಧಿಯಾನಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಸಾಮರ್ಥ್ಯ ತೋರಿದ ಲೂಧಿಯಾನ ಮತ್ತು ಹೈದರಾಬಾದ್ ತಂಡಗಳು ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ ಆಯೋಜಿಸಿರುವ ಐಎನ್‌ಬಿಎಲ್ 3x3 ಬ್ಯಾಸ್ಕೆಟ್‌ಬಾಲ್ ಲೀಗ್‌ನ ಕ್ರಮವಾಗಿ ಪುರುಷ ಮತ್ತು ಮಹಿಳಾ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದವು.

ಕಂಠೀರವ ಕ್ರೀಡಾಂಗಣದ-ಲ್ಲಿ ಭಾನುವಾರ ನಡೆದ ಪುರುಷರ ವಿಭಾಗದ ಫೈನಲ್ ಪಂದ್ಯದಲ್ಲಿ ಲೂಧಿಯಾನ 17–10ರಿಂದ ಮುಂಬೈ ತಂಡಕ್ಕೆ ಸೋಲುಣಿಸಿತು.

ಮಹಿಳೆಯರ ವಿಭಾಗದಲ್ಲಿ ಹೈದರಾಬಾದ್ 21–18ರಿಂದ ಕೋಲ್ಕತ್ತ ತಂಡವನ್ನು ಮಣಿಸಿ ಪ್ರಶಸ್ತಿ ತನ್ನದಾಗಿಸಿಕೊಂಡಿತು.

18 ವರ್ಷದೊಳಗಿನವರ ಪುರುಷರ ವಿಭಾಗದಲ್ಲಿ ಜೈಪುರ ತಂಡವು ಅಗ್ರಸ್ಥಾನ ಗಳಿಸಿತು. ಫೈನಲ್‌ನಲ್ಲಿ ಈ ತಂಡವು 21–10ರಿಂದ ಚಂಡೀಗಡ ತಂಡವನ್ನು ಸೋಲಿಸಿತು. ಇಂದೋರ್ ತಂಡವು 18 ವರ್ಷದೊಳಗಿನ ಮಹಿಳೆಯರ ವಿಭಾಗದ ಫೈನಲ್‌ನಲ್ಲಿ 14–9ರಿಂದ ಬಿಲಾಯಿ ತಂಡವನ್ನು ಮಣಿಸಿತು.

ಪೂರೈಕೆ ಬಲಗೊಳಿಸಲು ಸಿಆರ್‌ಇಎ ವರದಿಯಲ್ಲಿ ಸಲಹೆ

ಕಲ್ಲಿದ್ದಲು ಕೊರತೆ: ವಿದ್ಯುತ್ ಸಮಸ್ಯೆ?

ನವದೆಹಲಿ (ಪಿಟಿಐ): ದೇಶದ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಅಗತ್ಯ ಪ್ರಮಾಣದ ಕಲ್ಲಿದ್ದಲಿನ ದಾಸ್ತಾನು ಇಲ್ಲದಿರುವುದು ಬರುವ ಜುಲೈ–ಆಗಸ್ಟ್‌ನಲ್ಲಿ ಮತ್ತೊಮ್ಮೆ ವಿದ್ಯುತ್ ಸಮಸ್ಯೆಗೆ ಕಾರಣವಾಗಬಹುದು ಎಂದು ಸೆಂಟರ್ ಫಾರ್ ರಿಸರ್ಚ್ ಆನ್ ಎನರ್ಜಿ ಆ್ಯಂಡ್ ಕ್ಲೀನ್ ಏರ್ಸ್ (ಸಿಆರ್‌ಇಎ) ಎಂಬ ಸಂಸ್ಥೆ ಹೇಳಿದೆ.

ಇಂಧನ ಕ್ಷೇತ್ರ ಹಾಗೂ ಸಂಬಂಧಿಸಿದ ವಿಷಯಗಳ ಬಗ್ಗೆ ಸಂಶೋಧನೆ ನಡೆಸುವ ಸ್ವತಂತ್ರ ಸಂಸ್ಥೆಯಾದ ಸಿಆರ್‌ಇಎ, ಇತ್ತೀಚಿನ ತನ್ನ ವರದಿಯಲ್ಲಿ ಈ ಮಾಹಿತಿ ನೀಡಿದೆ.

'ಅಧಿಕೃತವಾಗಿ ಲಭ್ಯವಿರುವ ಮಾಹಿತಿಯನ್ನು ಕ್ರೋಡೀಕರಿಸಿ ಈ ಅಭಿಪ್ರಾಯಕ್ಕೆ ಬರಲಾಗಿದೆ. ಬರುವ ದಿನಗಳಲ್ಲಿ ವಿದ್ಯುತ್ ಬೇಡಿಕೆಯಲ್ಲಿ ಸ್ವಲ್ಪವೇ ಹೆಚ್ಚಳ ಕಂಡುಬಂದರೂ, ಅದಕ್ಕೆ ಸ್ಪಂದಿಸುವ ಸ್ಥಿತಿಯಲ್ಲಿ ಉಷ್ಣ ವಿದ್ಯುತ್ ಸ್ಥಾವರಗಳು ಇಲ್ಲ' ಎಂದು ಸಿಆರ್‌ಇಎ ಹೇಳಿದೆ.




'ಸಂಭಾವ್ಯ ಸಮಸ್ಯೆಯನ್ನು ಎದುರಿಸುವ ಸಲುವಾಗಿ, ಉಷ್ಣ ವಿದ್ಯುತ್ ಸ್ಥಾವರಗಳಿಗೆ ಅಗತ್ಯಪ್ರಮಾಣದ ಕಲ್ಲಿದ್ದಲನ್ನು ಪೂರೈಸಲು ಕ್ರಮ ಕೈಗೊಳ್ಳುವ ಅಗತ್ಯವಿದೆ. ನೈರುತ್ಯ ಮುಂಗಾರಿನ ಆರಂಭವು ಕಲ್ಲಿದ್ದಲಿನ ಗಣಿಗಾರಿಕೆ ಹಾಗೂ ಸಾಗಣೆ ಮೇಲೆ ಪರಿಣಾಮವನ್ನುಂಟು ಮಾಡಲಿದೆ. ದೇಶದ ಸ್ಥಾವರಗಳಲ್ಲಿನ ದಾಸ್ತಾನು ಖಾಲಿಯಾಗುತ್ತಿರುವಂತೆಯೇ, ಕಲ್ಲಿದ್ದಲನ್ನು ಮರುಭರ್ತಿ ಮಾಡದೇ ಇದ್ದರೆ ವಿದ್ಯುತ್ ಸಮಸ್ಯೆ ಕಾಡಲಿದೆ' ಎಂದೂ ಪ್ರತಿಪಾದಿಸಿದೆ.

ಇತ್ತೀಚೆಗೆ ದೇಶದಲ್ಲಿ ಕಂಡುಬಂದಿದ್ದ ವಿದ್ಯುತ್ ಸಮಸ್ಯೆಗೆ ಕಲ್ಲಿದ್ದಲಿನ ಉತ್ಪಾದನೆಯೇ ಕಾರಣ-ವಾಗಿರಲಿಲ್ಲ. ಅದರ ವಿತರಣೆ ಹಾಗೂ ಆಡಳಿತ ವ್ಯವಸ್ಥೆಯ ಉದಾಸೀನತೆಯೇ ಕಾರಣವಾಗಿತ್ತು ಎಂದು ವರದಿಯಲ್ಲಿ ವಿವರಿಸಲಾಗಿದೆ.

ಪ್ರಸ್ತುತ, ದೇಶದ ವಿದ್ಯುತ್ ಸ್ಥಾವರಗಳಲ್ಲಿ 2.7 ಕೋಟಿ ಟನ್ ಕಲ್ಲಿದ್ದಲು ಸಂಗ್ರಹ ಇದೆ. ಆಗಸ್ಟ್‌ನಲ್ಲಿ ಗರಿಷ್ಠ 214 ಗಿಗಾವಾಟ್‌ನಷ್ಟು ವಿದ್ಯುತ್‌ಗೆ ಬೇಡಿಕೆ ಕಂಡುಬರಬಹುದು ಎಂದು ಭಾರತ ಕೇಂದ್ರೀಯ ವಿದ್ಯುತ್ ಪ್ರಾಧಿಕಾರ (ಸಿಇಎ) ಅಂದಾಜಿಸಿದೆ.

ಕೋವಿಡ್: ರಾಜ್ಯದಲ್ಲಿ ಪ್ರಕರಣಗಳ ಸಂಖ್ಯೆ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಕೊಂಚ ಏರಿಕೆ ಕಂಡಿದ್ದು, ಭಾನುವಾರ 241 ಮಂದಿಯಲ್ಲಿ ಸೋಂಕು ದೃಢಪಟ್ಟಿದೆ. ಸುಮಾರು ಮೂರು ತಿಂಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ.



ಮಾರ್ಚ್ ಮೊದಲ ವಾರದ ಬಳಿಕ ಪ್ರಕರಣಗಳ ಸಂಖ್ಯೆ ಇಳಿಮುಖ ಮಾಡಿತ್ತು. ಏಪ್ರಿಲ್ ತಿಂಗಳಲ್ಲಿ ಈ ಸಂಖ್ಯೆ 50 ರ ಗಡಿಯ ಆಸುಪಾಸಿನಲ್ಲಿತ್ತು. ನಾಲ್ಕು ದಿನಗಳಿಂದ ಬೆಂಗಳೂರಿನಲ್ಲಿ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದುಕೊಂಡಿದೆ. ಭಾನುವಾರ ನಾಲ್ಕು ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ದೃಢಪಟ್ಟಿದ್ದು, ಬೆಂಗಳೂರಿನಲ್ಲಿ 232 ಮಂದಿಗೆ ಸೋಂಕು ದೃಢಪಟ್ಟಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 2,041 ಕ್ಕೆ ಏರಿಕೆಯಾಗಿದೆ. ಬೀದರ್, ಚಾಮರಾಜನಗರ ಸೇರಿದಂತೆ 11 ಜಿಲ್ಲೆಗಳು ಕೋವಿಡ್ ಮುಕ್ತಗೊಂಡಿವೆ. 14 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣ ಒಂದಂಕಿಯಲ್ಲಿದೆ. ಬೆಂಗಳೂರಿನಲ್ಲಿ 1,943 ಸೋಂಕಿತರು ಇದ್ದಾರೆ.

ಒಂದು ದಿನದ ಅವಧಿಯಲ್ಲಿ 18,579 ಮಂದಿಗೆ ಕೋವಿಡ್ ಪರೀಕ್ಷೆ ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 1.29 ರಷ್ಟು ಇದೆ. ರಾಜ್ಯದಲ್ಲಿ ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 39.51 ಲಕ್ಷ ದಾಟಿದೆ. 39.09 ಲಕ್ಷಕ್ಕೂ ಅಧಿಕ ಮಂದಿ ಸೋಂಕಿನಿಂದ ಚೇತರಿಸಿಕೊಂಡಿದ್ದಾರೆ. ಎಂದು ತಿಳಿದುಬಂದಿದೆ.

ಚೀನಾ: ಕೋವಿಡ್ ಇಳಿಕೆ, ನಿರ್ಬಂಧಗಳ ತೆರವು

ಬೀಜಿಂಗ್(ಎಪಿ): ಕೋವಿಡ್ ಪ್ರಕರಣಗಳು ಇಳಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಚೀನಾದ ರಾಜಧಾನಿ ಬೀಜಿಂಗ್ ಮತ್ತು ವಾಣಿಜ್ಯ ನಗರಿ ಶಾಂಘೈನಲ್ಲಿ ಕೆಲ ನಿರ್ಬಂಧಗಳನ್ನು ತೆರವುಗೊಳಿಸಲಾಗಿದೆ.

ಸಾರ್ವಜನಿಕ ಉದ್ಯಾನ, ಜಿಮ್‌ಗಳು ಮತ್ತು ಸಿನಿಮಾ ಹಾಲ್ ಅನ್ನು ಭಾನುವಾರ ಶೇ 50 ರಷ್ಟು ಸಾಮರ್ಥ್ಯದೊಂದಿಗೆ ತೆರೆಯಲಾಯಿತು. ಬೀಜಿಂಗ್ ಗ್ರಾಮಾಂತರ ಪ್ರದೇಶದಲ್ಲಿರುವ 'ಚೀನಾದ ಮಹಾಗೋಡೆ' ವೀಕ್ಷಣೆಗೆ ಸೋಮವಾರದಿಂದ ಪ್ರವಾಸಿಗರಿಗೆ ತೆರೆಯಲಿದ್ದು, ರೆಸ್ಟೋರೆಂಟ್‌ಗಳನ್ನು ತೆರೆಯಲು ಇನ್ನೂ ಅವಕಾಶ ನೀಡಿಲ್ಲ. ಪಾರ್ಸೆಲ್ ಮತ್ತು ಡೆಲಿವರಿಗೆ ಮಾತ್ರ ಅವಕಾಶ ನೀಡಲಾಗಿದೆ.

ಶಾಂಘೈ ನಗರದಲ್ಲೂ ಹಂತ ಹಂತವಾಗಿ ನಿರ್ಬಂಧಗಳನ್ನು ಸಡಿಲಗೊಳಿಸಲಾಗುತ್ತಿದ್ದು, ಕೊರೊನಾ ಸಂಕಷ್ಟ ದೂರವಾಗಿದೆ ಎಂಬ ಸುಳಿವು ಇದಾಗಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. ಕೊರೊನಾ ಪ್ರಕರಣಗಳು ತೀವ್ರವಾಗಿ ಇಳಿಕೆಯಾಗುತ್ತಿದ್ದರೂ ವಿಶೇಷ ಪಾಸ್ ಇದ್ದವರು ಮಾತ್ರ ನಿಯಮಿತ ಸಮಯದಲ್ಲಿ ಓಡಾಡಲು ಅವಕಾಶವಿದೆ.

ಚೀನಾದಲ್ಲಿ ಶನಿವಾರ 293 ಹೊಸ ಪ್ರಕರಣಗಳು ವರದಿಯಾಗಿವೆ. ಶಾಂಘೈನಲ್ಲಿ 122, ಬೀಜಿಂಗ್‌ನಲ್ಲಿ 21 ಪ್ರಕರಣಗಳು ಪತ್ತೆಯಾಗಿವೆ.

ಶ್ರೀಲಂಕಾ: ಭಾರತದ ನೆರವು ವಿತರಣೆ ಆರಂಭ

ಕೊಲಂಬೊ 9ಪಿಟಿಐ): ಶ್ರೀಲಂಕಾದ ಕಡಿಮೆ ಆದಾಯದ ಕುಟುಂಬಗಳಿಗೆ ಸಾಲ ಯೋಜನೆಯಡಿ ಹಾಲಿನ ಪುಡಿ, ಅಕ್ಕಿ, ಇನ್ನಿತರ ಪದಾರ್ಥಗಳ ನೆರವು ವಿತರಣೆಯನ್ನು ಭಾರತವು ಭಾನುವಾರ ಆರಂಭಿಸಿದೆ ಎಂದು ಆಹಾರ ಆಯುಕ್ತರ ಕಚೇರಿ ತಿಳಿಸಿದೆ.

'25 ಜಿಲ್ಲೆಗಳಲ್ಲಿ ಕಡಿಮೆ ಆದಾಯದ ಕುಟುಂಬಗಳಿಗೆ ನೆರವು ವಿತರಣೆಯನ್ನು ಆರಂಭಿಸಲಾಗಿದೆ. ಶ್ರೀಲಂಕಾ ಸರ್ಕಾರವು ವಿಭಾಗೀಯ ಸಚಿವಾಲಯದ ವ್ಯಾಪ್ತಿಯಲ್ಲಿ ಆಯ್ದ ಬಡ ಕುಟುಂಬಗಳಿಗೆ 10 ಕೆ.ಜಿ ಅಕ್ಕಿಯನ್ನು ವಿತರಿಸಲಿದೆ' ಎಂದು ಆಹಾರ ಆಯುಕ್ತ ಕೆ.ಪಿ.ಕೃಷ್ಣಮೂರ್ತಿ ಮಾಹಿತಿ ನೀಡಿದ್ದಾರೆ.

'ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರ ಮಧ್ಯ ಪ್ರವೇಶದಿಂದ 200 ಕೋಟಿ ಮೌಲ್ಯದ ಅಗತ್ಯ ಆಹಾರ ಸಾಮಗ್ರಿಗಳು ಮತ್ತು ಔಷಧಿ ಶ್ರೀಲಂಕಾ ತಲುಪಿವೆ. ಇಂಧನ ಕೊರತೆ ಸಮಸ್ಯೆಯು ನೆರವು ವಿತರಣೆಗೆ ಅಡಚಣೆಯಾಗಿದೆ' ಎಂದೂ ತಿಳಿಸಿದರು.



ಪೋಪ್ ಫ್ರಾನ್ಸಿಸ್ ಅವರು ಸೇಂಟ್ ಪೀಟರ್ಸ್ ಸ್ಕ್ವೇರ್‌ನಲ್ಲಿರುವ ಅಪೋಸ್ಟೋಲಿಕ್ ಅರಮನೆಯ ಕಿಟಕಿಯಿಂದ ಭಾನುವಾರದ ತಮ್ಮ ಸಾಂಪ್ರದಾಯಿಕ ಶುಭಾಶಯಗಳನ್ನು ತಿಳಿಸಿದರು – ಎಎಫ್‌ಪಿ ಚಿತ್ರ

ಭಾರತ ಸೇರಿ 21 ಬಿಷಪ್‌ಗಳಿಗೆ ಕಾರ್ಡಿನಲ್ ಸ್ಥಾನ: ಪೋಪ್

ವ್ಯಾಟಿಕನ್ ಸಿಟಿ (ಎಪಿ): ಭಾರತ, ಮಂಗೋಲಿಯಾ ಸೇರಿ ವಿವಿಧ ದೇಶಗಳ 21 ಚರ್ಚ್‌ಗಳ ಹಿರಿಯ ಬಿಷಪ್‌ಗಳನ್ನು ಈ ಬೇಸಿಗೆಯಲ್ಲಿ ವ್ಯಾಟಿಕನ್‌ನಲ್ಲಿ ನಡೆಯುವ ಸಮಾರಂಭದಲ್ಲಿ ಕಾರ್ಡಿನಲ್ ಹುದ್ದೆಗೆ ಏರಿಸಲಾಗುವುದು ಎಂದು ಪೋಪ್ ಫ್ರಾನ್ಸಿಸ್ ಭಾನುವಾರ ಹೇಳಿದ್ದಾರೆ.

ಫ್ರಾನ್ಸಿಸ್ ಅವರ ಸಂಕಲ್ಪಕ್ಕೆ ಅನುಗುಣವಾಗಿ ಕ್ಯಾಥೋಲಿಕ್ ಚರ್ಚ್ ಅನ್ನು ಜಾಗತಿಕವಾಗಿ ಪ್ರತಿನಿಧಿಸುವವರ ಆಯ್ಕೆಗೆ ಪ್ರತಿಷ್ಠಿತ ಕೆಂಪು ಟೋಪಿ ಸ್ವೀಕರಿಸಲು ಗೋವಾ ಮತ್ತು ದಮನ್‌ನ ಆರ್ಚ್ ಬಿಷಪ್ ಫಿಲಿಪ್ ನೇರಿ ಆಂಟ್ಯೋನಿಯೊ ಸೆಬಾಸ್ಟಿಯೊ ಡಿ ರೊಸಾರಿಯೊ ಫೆರ್ರೊವ್ ಹಾಗೂ ಹೈದರಾಬಾದ್‌ನ ಆರ್ಚ್ ಬಿಷಪ್ ಆಂಥೋನಿ ಪೂಲಾ ಸೇರಿ, ಮಂಗೋಲಿಯಾ, ಘಾನಾ, ನೈಜೀರಿಯಾ, ಸಿಂಗಪುರ, ಪೂರ್ವ ಟಿಮೋರ್, ಪೆರುಗ್ವೆ ಹಾಗೂ ಬ್ರೆಜಿಲ್‌ನಿಂದ ತಲಾ ಒಬ್ಬರು ಹಿರಿಯರ ಧರ್ಮ ಗುರುಗಳನ್ನು ಆಯ್ದ ಚರ್ಚ್‌ಗಳಿಂದ ಹೆಸರಿಸಲಾಗಿದೆ.

ಫ್ರಾನ್ಸಿಸ್ ಅವರು ಸೇಂಟ್ ಪೀಟರ್ಸ್ ಸ್ಕ್ವೇರ್‌ನಲ್ಲಿ ಭಾನುವಾರದ ತಮ್ಮ ಸಾಂಪ್ರದಾಯಿಕ ಶುಭಾಶಯಗಳನ್ನು ಸಾರ್ವಜನಿಕರಿಗೆ ತಿಳಿಸುವಾಗ ಕೊನೆಯಲ್ಲಿ ಈ ಆಯ್ಕೆಯನ್ನು ಪ್ರಕಟಿಸಿದರು. ಕನಿಷ್ಠ 16 ಹೊಸ ಕಾರ್ಡಿನಲ್‌ಗಳು 80 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರುತ್ತಾರೆ. ಇವರು ಮುಂದಿನ ಧರ್ಮಗುರುಗಳ ಆಯ್ಕೆಗೆ ರಹಸ್ಯ ಸಮಾವೇಶದಲ್ಲಿ ಮತ ಚಲಾಯಿಸಲು ಅರ್ಹರಾಗಿರುತ್ತಾರೆ ಎಂದು ಪೋಪ್ ಹೇಳಿದರು.

ಇಮ್ರಾನ್ – ಜರ್ದಾರಿ ರಾಜಿ ಸಂಭಾಷಣೆ: ಆಡಿಯೊ ವೈರಲ್

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರು ದೇಶದ ಮಾಜಿ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ಅವರೊಂದಿಗೆ ರಾಜಿಯಾಗುವ ಇಚ್ಛೆ ಹೊಂದಿದ್ದಾರೆ ಎನ್ನಲಾದ ಆಡಿಯೊವೊಂದು ವೈರಲ್ ಆಗಿದೆ.

ಜರ್ದಾರಿ ಮತ್ತು ರಿಯಲ್ ಎಸ್ಟೇಟ್ ಉದ್ಯಮಿ ಮಲಿಕ್ ರಿಯಾಜ್ ಅವರ ನಡುವೆ ನಡೆದ ಮಾತುಕತೆ ಎನ್ನಲಾದ ಆಡಿಯೊ ಸಂಭಾಷಣೆ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ರಿಯಾಜ್, ಪದಚ್ಯುತ ಪ್ರಧಾನಿ ಇಮ್ರಾನ್, ಜರ್ದಾರಿ ಅವರೊಂದಿಗೆ ರಾಜಿ ಸಭೆ ನಡೆಸುವ ಇಚ್ಛೆ ಹೊಂದಿದ್ದಾರೆಂದು ಎಂದು ಮಾಧ್ಯಮ ಗಳು ವರದಿ ಮಾಡಿವೆ.

ಇಮ್ರಾನ್ ಸರ್ಕಾರ ವಿರೋಧಿ ಪ್ರತಿಭಟನೆಯನ್ನು ನಿಲ್ಲಿಸಿದ ಬೆನ್ನಲ್ಲೇ ಈ ಆಡಿಯೊ ವೈರಲ್ ಆಗಿದೆ. 32 ಸೆಕೆಂಡ್‌ಗಳ ಆಡಿಯೊದಲ್ಲಿ ರಿಯಾಜ್, 'ಅವರು (ಇಮ್ರಾನ್ ಖಾನ್) ಹಲವು ಸಂದೇಶಗಳನ್ನು ಕಳುಹಿಸಿದ್ದಾರೆ' ಎಂದಿದ್ದಾರೆ. ಇದಕ್ಕೆ ಆಸಿಫ್ ಜರ್ದಾರಿ, 'ಅದೀಗ ಸಾಧ್ಯವೇ ಇಲ್ಲ' ಎಂದು ಪ್ರತಿಕ್ರಿಯಿಸಿದ್ದಾರೆ.

ಆದರೆ ಇಮ್ರಾನ್ ಖಾನ್ ನೇತೃತ್ವದ ಪಿಟಿಐ ಪಕ್ಷ ಇದು 'ನಕಲಿ ಆಡಿಯೊ' ಎಂದು ಹೇಳಿದೆ. ಜರ್ದಾರಿ ಅವರ ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ (ಪಿಪಿಪಿ) ಸದಸ್ಯರು, 'ಆಡಿಯೊ ಸಂಭಾಷಣೆ ಅಸಲಿ ಎಂಬಂತೆ ಕಾಣುತ್ತದೆ' ಎಂದಿದ್ದಾರೆ.

ಮತ್ತೊಂದು ನಗರ ರಷ್ಯಾ ವಶ?

ಪೊಕ್ರೊವ್‌ಸ್ಕ್, ಕೀವ್/ಮಾಸ್ಕೊ (ಎಪಿ/ಎಎಫ್‌ಪಿ): ಉಕ್ರೇನ್ ಪೂರ್ವದ ಸಿವಿರೊಡೊನೆಟ್‌ಸ್ಕ್ ನಗರದಲ್ಲಿ ಭಾನುವಾರ ಕದನ ತೀವ್ರಗೊಂಡಿದ್ದು, ಕಾರ್ಯತಂತ್ರದ ನೆಲೆ ವಶಕ್ಕೆ ರಷ್ಯಾ ಸೇನೆ ನಿರಂತರ ಶೆಲ್ ದಾಳಿ ನಡೆಸುತ್ತಿದೆ. ಉಕ್ರೇನ್ ಸೇನೆ ಕೂಡ ಬಾಂಬ್ ದಾಳಿ ನಡೆಸಿ, ತೀವ್ರ ಪ್ರತಿರೋಧ ಮುಂದುವರಿಸಿದೆ. ರಷ್ಯಾದ ಇಬ್ಬರು ಪ್ರಮುಖ ಸೇನಾಧಿಕಾರಿಗಳು ಉಕ್ರೇನ್ ಯೋಧರ ಗುಂಡಿಗೆ ಹತರಾಗಿದ್ದಾರೆ.

ರಷ್ಯಾ ಪಡೆಗಳ ಭೀಕರ ದಾಳಿಗೆ ಸೆವಿರೊಡೊನೆಟ್‌ಸ್ಕ್ ನಗರದಲ್ಲಿ ವಿದ್ಯುತ್ ಮತ್ತು ಮೊಬೈಲ್ ಫೋನ್ ಸೇವೆ ಕೂಡ ಅಸ್ತವ್ಯಸ್ತಗೊಂಡಿದೆ. ನಾಗರಿಕರು ಜೀವ ಭಯದಲ್ಲಿದ್ದಾರೆ ಎಂದು ಉಕ್ರೇನ್ ಅಧಿಕಾರಿಗಳು ಹೇಳಿದ್ದಾರೆ.

'ಸೆವೆರೊಡೊನೆಟ್‌ಸ್ಕ್ ಸಂಪೂರ್ಣ ನಮ್ಮ ನಿಯಂತ್ರಣದಲ್ಲಿದೆ. ನಾಜಿಗಳನ್ನು ಸೋಲಿಸಿ, ಅವರ ಎಲ್ಲ ನೆಲೆಗಳನ್ನು ನಾಶಪಡಿಸಲಾಗಿದೆ. ಇನ್ನು ಮುಂದೆ ನಗರಕ್ಕೆ ಯಾವುದೇ ಅಪಾಯವಿಲ್ಲ, ಜನರು ನೆಮ್ಮದಿಯಾಗಿ ಉಸಿರಾಡಬಹುದು' ಎಂದು ಚೆಚನ್ಯಾ ಸಶಸ್ತ್ರ ಪಡೆಗಳ ನಾಯಕ, ಪುಟಿನ್ ಮಿತ್ರ ರಂಜಾನ್ ಕದಿರೋವ್ ಘೋಷಿಸಿರುವುದಾಗಿ ರಷ್ಯಾದ ಸುದ್ದಿಸಂಸ್ಥೆ 'ಟಾಸ್' ವರದಿ ಮಾಡಿದೆ.

ಮಾನವೀಯ ನೆರವು: ರಷ್ಯಾ – ಭಾರತೀಯ ಸ್ನೇಹ ಸಮಾಜ ದಿಶಾ, ಕುರ್ಸ್ಕ್‌ನಲ್ಲಿರುವ ರಷ್ಯಾದ ಸಶಸ್ತ್ರ ಪಡೆಗಳ ವೈದ್ಯಕೀಯ ಕೇಂದ್ರಕ್ಕೆ ಔಷಧ ಸೇರಿ ಮೂರು ಟನ್ ಅಗತ್ಯ ವಸ್ತುಗಳ ಮಾನವೀಯ ನೆರವು ಕಳುಹಿಸಿದೆ ಎಂದು ನವದೆಹಲಿಯಲ್ಲಿನ ರಷ್ಯಾ ರಾಯಭಾರ ಕಚೇರಿ ಟೆಲಿಗ್ರಾಮ್‌ನಲ್ಲಿ ತಿಳಿಸಿದೆ.



ಹಾರ್ಕಿವ್ ನಗರದ ಉತ್ತರದಲ್ಲಿನ ರುಸ್ಕಾ ಲೊಜೊವಾ ಗ್ರಾಮದ ಬಳಿ ರಷ್ಯಾ ದಾಳಿಗೆ ನಾಶವಾಗಿರುವ ಸೇತುವೆಯನ್ನು ಉಕ್ರೇನ್ ಸೈನಿಕ ವೀಕ್ಷಿಸಿದರು – ಎಎಫ್‌ಪಿ ಚಿತ್ರ

ಭಾರತ–ಬಾಂಗ್ಲಾ: ರೈಲು ಸಂಚಾರ ಪುನರಾರಂಭ

ಕೋಲ್ಕತ್ತ (ಪಿಟಿಐ): ಕೋವಿಡ್ ಪಿಡುಗಿನಿಂದಾಗಿ ಸ್ಥಗಿತಗೊಂಡಿದ್ದ ಭಾರತ–ಬಾಂಗ್ಲಾದೇಶ ನಡುವಿನ ರೈಲು ಸಂಚಾರ ಭಾನುವಾರ ಪುನರಾರಂಭಗೊಂಡಿದೆ. ಕೋಲ್ಕತ್ತದಿಂದ ಬಾಂಗ್ಲಾದ ಖುಲ್ನಾಗೆ ಪ್ರಯಾಣಿಸುವ ಬಂಧನ್ ಎಕ್ಸ್‌ಪ್ರೆಸ್, ಢಾಕಾಗೆ ಪಯಣಿಸುವ ಮೈತ್ರಿ ಎಕ್ಸ್‌ಪ್ರೆಸ್ ಭಾನುವಾರ ಸಂಚಾರ ಆರಂಭಿಸಿದೆ ಎಂದು ಪೂರ್ವ ರೈಲ್ವೆ ವಲಯದ ವಕ್ತಾರ ಏಕಲವ್ಯ ಚಕ್ರವರ್ತಿ ತಿಳಿಸಿದ್ದಾರೆ.

ಬ್ರೆಜಿಲ್: ಭೂಕುಸಿತದಲ್ಲಿ 31 ಮಂದಿ ಸಾವು

ಬ್ರಸಿಲಿಯಾ (ಎಪಿ): ಈಶಾನ್ಯ ಬ್ರೆಜಿಲ್‌ನ ಪೆರ್ನಂಬುಕೊ ರಾಜ್ಯದಲ್ಲಿ ಶನಿವಾರ ಸುರಿದ ಭಾರಿ ಮಳೆಯ ಪರಿಣಾಮ ಸಂಭವಿಸಿದ ಭೂಕುಸಿತದಲ್ಲಿ ಕನಿಷ್ಠ 29 ಮಂದಿ ಮೃತಪಟ್ಟಿದ್ದಾರೆ. ಅಲಗೊಸ್ ರಾಜ್ಯದಲ್ಲಿ ಇಬ್ಬರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ಕೆಲವು ದಿನಗಳಿಂದ ಬ್ರೆಜಿಲ್‌ನಲ್ಲಿ ಮಳೆಯಾಗುತ್ತಿದ್ದು ಪ್ರವಾಹ ಭೀತಿ ಹಿನ್ನೆಲೆಯಲ್ಲಿ ಪೆರ್ನಂಬುಕೊದಲ್ಲಿ 1000ಕ್ಕೂ ಅಧಿಕ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ರೆಸಿಫೆ ನಗರದಲ್ಲಿ ಶಾಲೆಗಳನ್ನು ತೆರೆದು ನಿರಾಶ್ರಿತರಿಗೆ ಆಶ್ರಯ ನೀಡಲಾಗುತ್ತಿದೆ ಎಂದು ರಕ್ಷಣಾ ಅಧಿಕಾರಿಗಳು ತಿಳಿಸಿದ್ದಾರೆ.



ಪದಾರ್ಪಣೆ ಆವೃತ್ತಿಯಲ್ಲಿ ಚಾಂಪಿಯನ್; ಹಾರ್ದಿಕ್ ಆಲ್‌ರೌಂಡ್ ಆಟ; ರಾಜಸ್ಥಾನ ರಾಯಲ್ಸ್ ರನ್ನರ್ಸ್ ಅಪ್

ಗುಜರಾತ್ ಟೈಟನ್ಸ್‌ಗೆ ಕಿರೀಟ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಗುಜರಾತ್ ಟೈಟನ್ಸ್ ತಂಡವು ಪದಾರ್ಪಣೆ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿಯೇ ಪ್ರಶಸ್ತಿ ಗೆದ್ದು ಸಂಭ್ರಮಿಸಿತು.

ಒಂದು ಲಕ್ಷಕ್ಕೂ ಹೆಚ್ಚು ಪ್ರೇಕ್ಷಕರು ಸೇರಿದ್ದ ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ 15ನೇ ಆವೃತ್ತಿಯ ಟೂರ್ನಿಯ ಫೈನಲ್‌ನಲ್ಲಿ ಗುಜರಾತ್ 7 ವಿಕೆಟ್‌ಗಳಿಂದ ಜಯಿಸಿತು. 2008ರಲ್ಲಿ ಮೊದಲ ಆವೃತ್ತಿಯಲ್ಲಿ ಪ್ರಶಸ್ತಿ ಗೆದ್ದಿದ್ದ ರಾಜಸ್ಥಾನ ರಾಯಲ್ಸ್ ತಂಡದ ಕನಸು ಕಮರಿತು. ನಾಯಕ ಹಾರ್ದಿಕ್ ಪಾಂಡ್ಯ (17ಕ್ಕೆ3 ಮತ್ತು 34 ರನ್) ಆಲ್‌ರೌಂಡ್ ಆಟದ ಬಲದಿಂದ ಗುಜರಾತ್ ತಂಡವು ವಿಜಯೋತ್ಸವ ಆಚರಿಸಿತು.

131 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಟೈಟನ್ಸ್ 18.1 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 133 ರನ್ ಗಳಿಸಿತು. 19ನೇ ಓವರ್‌ನ ಮೊದಲ ಎಸೆತವನ್ನು ಸಿಕ್ಸರ್‌ಗೆತ್ತಿದ ಯುವ ಬ್ಯಾಟರ್ ಶುಭಮನ್ ಗಿಲ್ ಗೆಲುವಿನ ಕೇಕೆ ಹಾಕಿದರು. ಸುಡ್ಡು ಮದ್ದುಗಳ ಬೆಳಕು ಪ್ರಜ್ವಲಿಸಿತು. ಪ್ರೇಕ್ಷಕರ ಗ್ಯಾಲರಿಯಲ್ಲಿ ಸಂಭ್ರಮ ಪುಟಿದೆದ್ದಿತು. ಗಣ್ಯರ ಗ್ಯಾಲರಿಯಿಂದ ಓಡಿಬಂದ ನತಾಶಾ ಸ್ಟಾಂಕೊವಿಚ್ ತಮ್ಮ ಪತಿ ಹಾರ್ದಿಕ್ ಅವರನ್ನು ಆಲಂಗಿಸಿಕೊಂಡು ಅಭಿನಂದಿಸಿದರು.

ಹಾರ್ದಿಕ್ ಬೌಲಿಂಗ್: ಪಂದ್ಯದಲ್ಲಿ ಟಾಸ್‌ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ರಾಜಸ್ಥಾನ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 130 ರನ್ ಗಳಿಸಿತು. ಹಾರ್ದಿಕ್ (17ಕ್ಕೆ3) ಪರಿಣಾಮಕಾರಿ ದಾಳಿಯಿಂದಾಗಿ ರಾಜಸ್ಥಾನ ಬ್ಯಾಟಿಂಗ್ ಪಡೆಯು ವೈಫಲ್ಯ ಅನುಭವಿಸಿತು.

ಟೂರ್ನಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದ ಜೋಸ್ ಬಟ್ಲರ್, ನಾಯಕ ಸಂಜು ಸ್ಯಾಮ್ಸನ್ ಮತ್ತು ಶಿಮ್ರೊನ್ ಹೆಟ್ಮೆಯರ್ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿದ ಪಾಂಡ್ಯ ತಮ್ಮ ತಂಡದ ಮೇಲುಗೈಗೆ ಕಾರಣರಾದರು.

ಎರಡನೇ ಕ್ವಾಲಿಫೈಯರ್‌ನಲ್ಲಿ ರನ್‌ಗಳ ಹೊಳೆ ಹರಿಸಿದ್ದ ರಾಜಸ್ಥಾನ ತಂಡವು ಇಲ್ಲಿ ನೂರು ರನ್‌ಗಳ ಮೊತ್ತ ದಾಟಲು ಪರದಾಡಿತು. ಸಾಯಿ ಕಿಶೋರ್, ಮೊಹಮ್ಮದ್ ಶಮಿ ಅವರ ಉತ್ತಮ ಬೌಲಿಂಗ್ ಮುಂದೆ ದೊಡ್ಡ ಮೊತ್ತ ಗಳಿಸಲು ರಾಜಸ್ಥಾನಕ್ಕೆ ಸಾಧ್ಯವಾಗಲಿಲ್ಲ.

ಗಿಲ್‌ಗೆ ಜೀವದಾನ: ಶುಭಮನ್ ಗಿಲ್ ಅವರಿಗೆ ಎರಡು ಬಾರಿ ಕ್ಯಾಚ್ ಕೈಚೆಲ್ಲಿದ್ದು ರಾಯಲ್ಸ್ ತಂಡಕ್ಕೆ ದುಬಾರಿಯಾಯಿತು. ಮೊದಲ ಮತ್ತು ಆರನೇ ಓವರ್‌ನಲ್ಲಿ ಅವರಿಗೆ ಜೀವದಾನ ಲಭಿಸಿತ್ತು.

ಗುರಿ ಬೆನ್ನಟ್ಟಿದ ಗುಜರಾತ್ ತಂಡಕ್ಕೆ ಎರಡನೇ ಓವರ್‌ನಲ್ಲಿಯೇ ಪ್ರಸಿದ್ಧ ಕೃಷ್ಣ ಪೆಟ್ಟು ಕೊಟ್ಟರು. ವೃದ್ಧಿಮಾನ್ ಸಹಾ ವಿಕೆಟ್ ಎಗರಿಸಿದ ಪ್ರಸಿದ್ಧ ಸಂಭ್ರಮಿಸಿದರು. ಐದನೇ ಓವರ್‌ನಲ್ಲಿ ಮ್ಯಾಥ್ಯೂ ವೇಡ್ ವಿಕೆಟ್ ಗಳಿಸಿದ ಟ್ರೆಂಟ್ ಬೌಲ್ಟ್ ಮತ್ತೊಂದು ಯಶಸ್ಸು ಗಳಿಸಿಕೊಟ್ಟರು. ಆದರೆ, ಈ ಸಂಭ್ರಮಕ್ಕೆ ಗಿಲ್ (45; 43ಎ) ಮತ್ತು ಪಾಂಡ್ಯ ತಣ್ಣೀರು ಎರಚಿದರು.

ಮೂರನೇ ವಿಕೆಟ್ ಗೆ 63 ರನ್ ಸೇರಿಸಿದ ಈ ಜೊತೆಯಾಟವನ್ನು ಲೆಗ್‌ಸ್ಪಿನ್ನರ್ ಚಾಹಲ್ ಮುರಿದರು. ಹಾರ್ದಿಕ್ ವಿಕೆಟ್ ಗಳಿಸಿದ ಚಾಹಲ್ ತಂಡದಲ್ಲಿ ಮತ್ತೆ ನಿರೀಕ್ಷೆ ಮೂಡಿಸಿದರು. ಆದರೆ ಗಿಲ್ ಜೊತೆ ಸೇರಿದ ಡೇವಿಡ್ ಮಿಲ್ಲರ್ ತಂಡವನ್ನು ಗೆಲುವಿನ ದಡ ಸೇರಿಸಿದರು.


ಹಾರ್ದಿಕ್ ಪಾಂಡ್ಯ ಬ್ಯಾಟಿಂಗ್ ವೈಭವ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ರಾಜಸ್ಥಾನ ರಾಯಲ್ಸ್ 9ಕ್ಕೆ 130 (20 ಓವರ್)

ಯಶಸ್ವಿ ಸಿ ಸಾಯಿ ಕಿಶೋರ್ ಬಿ ಯಶ್ 22 (16ಎ, 4X1, 6X2), ಬಟ್ಲರ್ ಸಿ ಸಹಾ ಬಿ ಹಾರ್ದಿಕ್ 39 (35ಎ, 4X5), ಸ್ಯಾಮ್ಸನ್ ಸಿ ಸಾಯಿ ಕಿಶೋರ್ ಬಿ ಹಾರ್ದಿಕ್ 14 (11ಎ, 4X2), ದೇವದತ್ತ ಸಿ ಶಮಿ ಬಿ ರಶೀದ್ 2 (10ಎ), ಹೆಟ್ಮೆಯರ್ ಸಿ ಮತ್ತು ಬಿ ಹಾರ್ದಿಕ್ 11 (12ಎ, 4X2), ಅಶ್ವಿನ್ ಸಿ ಮಿಲ್ಲರ್ ಬಿ ಸಾಯಿ ಕಿಶೋರ್ 6 (9ಎ), ರಿಯಾನ್ ಬಿ ಶಮಿ 15 (15ಎ, 4X1), ಬೌಲ್ಟ್ ಸಿ ತೆವಾಟಿಯಾ ಬಿ ಸಾಯಿ ಕಿಶೋರ್ 11 (7ಎ, 6X1), ಒಬೆದ್ ರನೌಟ್ (ತೆವಾಟಿಯಾ/ಶಮಿ) 8 (5ಎ, 6X1), ಪ್ರಸಿದ್ಧ ಔಟಾಗದೆ 0 (0ಎ)

ಇತರೆ (ಲೆಗ್‌ಬೈ 2) 2

ವಿಕೆಟ್ ಪತನ: 1-31 (ಯಶಸ್ವಿ ಜೈಸ್ವಾಲ್, 3.6), 2-60 (ಸಂಜು ಸ್ಯಾಮ್ಸನ್, 8.2), 3-79 (ದೇವದತ್ತ ಪಡಿಕ್ಕಲ್, 11.5), 4-79 (ಜೋಸ್ ಬಟ್ಲರ್, 12.1), 5-94 (ಶಿಮ್ರೊನ್ ಹೆಟ್ಮೆಯರ್, 14.6), 6-98 (ರವಿಚಂದ್ರನ್ ಅಶ್ವಿನ್, 15.5), 7-112 (ಟ್ರೆಂಟ್ ಬೌಲ್ಟ್, 17.3), 8-130 (ಒಬೆದ್ ಮೆಕಾಯ್, 19.4), 9-130 (ರಿಯಾನ್ ಪರಾಗ್, 19.6)

ಬೌಲಿಂಗ್: ಮೊಹಮ್ಮದ್ ಶಮಿ 4-0-33-1, ಯಶ್ ದಯಾಳ್ 3-0-18-1, ಲಾಕಿ ಫರ್ಗ್ಯುಸನ್ 3-0-22-0, ರಶೀದ್ ಖಾನ್ 4-0-18-1, ಹಾರ್ದಿಕ್ ಪಾಂಡ್ಯ 4-0-17-3, ಆರ್. ಸಾಯಿ ಕಿಶೋರ್ 2-0-20-2

ಗುಜರಾತ್ ಟೈಟನ್ಸ್ 3ಕ್ಕೆ 133 (18.1 ಓವರ್)

ವೃದ್ಧಿಮಾನ್ ಬಿ ಪ್ರಸಿದ್ಧ 5 (7ಎ, 4X1), ಶುಭಮನ್ ಔಟಾಗದೆ 45 (43ಎ, 4X3, 6X1), ವೇಡ್ ಸಿ ಪರಾಗ್ ಬಿ ಬೌಲ್ಟ್ 8 (10ಎ, 6X1), ಹಾರ್ದಿಕ್ ಸಿ ಯಶಸ್ವಿ ಬಿ ಚಾಹಲ್ 34 (30ಎ, 4X3, 6X1), ಮಿಲ್ಲರ್ ಔಟಾಗದೆ 32 (19ಎ, 4X3, 6X1)

ಇತರೆ (ಲೆಗ್‌ಬೈ 1, ವೈಡ್ 8) 9

ವಿಕೆಟ್ ಪತನ: 1-9 (ವೃದ್ಧಿಮಾನ್ ಸಹಾ, 1.4), 2-23 (ಮ್ಯಾಥ್ಯು ವೇಡ್, 4.3), 3-86 (ಹಾರ್ದಿಕ್ ಪಾಂಡ್ಯ, 13.2)

ಬೌಲಿಂಗ್: ಟ್ರೆಂಟ್ ಬೌಲ್ಟ್ 4-1-14-1, ಪ್ರಸಿದ್ಧ ಕೃಷ್ಣ 4-0-40-1, ಯಜುವೇಂದ್ರ ಚಾಹಲ್ 4-0-20-1, ಒಬೆದ್ ಮೆಕಾಯ್ 3.1-0-26-0, ಆರ್. ಅಶ್ವಿನ್ 3-0-32-0

ಫಲಿತಾಂಶ: ಗುಜರಾತ್ ಟೈಟನ್ಸ್‌ಗೆ 7 ವಿಕೆಟ್ ಜಯ, ಪ್ರಶಸ್ತಿ

ಪ್ರಮುಖ ಅಂಶಗಳು

ವೈಯಕ್ತಿಕ ಗರಿಷ್ಠ ಸ್ಕೋರ್: 140* ಕ್ವಿಂಟನ್ ಡಿಕಾಕ್ (ಲಖನೌ ಸೂಪರ್‌ಜೈಂಟ್ಸ್)

ಹೆಚ್ಚು ಡಾಟ್ ಬಾಲ್ ಹಾಕಿದವರು: 200 ಪ್ರಸಿದ್ಧಕೃಷ್ಣ (ರಾಜಸ್ಥಾನ ರಾಯಲ್ಸ್)

ಹ್ಯಾಟ್ರಿಕ್ ಸಾಧನೆ: 1 ಯಜುವೇಂದ್ರ ಚಾಹಲ್ (ರಾಜಸ್ಥಾನ ರಾಯಲ್ಸ್)

ಹೆಚ್ಚು ಅರ್ಧಶತಕ: 5 ಡೇವಿಡ್ ವಾರ್ನರ್ (ಡೆಲ್ಲಿ ಕ್ಯಾಪಿಟಲ್ಸ್)

ಫೇರ್‌ಪ್ಲೇ: ರಾಜಸ್ಥಾನ ರಾಯಲ್ಸ್

ಶ್ರೇಷ್ಠ ಬೌಲಿಂಗ್: 4-1-10-5 ಜಸ್‌ಪ್ರೀತ್ ಬೂಮ್ರಾ (ಮುಂಬೈ ಇಂಡಿಯನ್ಸ್)

2017	1062	63	74
ಒಟ್ಟು ಬೌಂಡರಿ	ಒಟ್ಟು ಸಿಕ್ಸರ್	ದಿನಗಳು	ಪಂದ್ಯಗಳು

ಪ್ರಶಸ್ತಿ ಮೊತ್ತ

- ₹20 ಕೋಟಿ ವಿಜೇತರು
- ₹13 ಕೋಟಿ ರನ್ನರ್ಸ್ ಅಪ್
- ₹7 ಕೋಟಿ ಮೂರನೇ ಸ್ಥಾನ; ರಾಯಲ್ ಚಾಲೆಂಜರ್ಸ್ ಬೆಂಗಳೂರು
- ₹6.5 ಕೋಟಿ ನಾಲ್ಕನೇ ಸ್ಥಾನ; ಲಖನೌ ಸೂಪರ್‌ಜೈಂಟ್ಸ್

ಆರೆಂಜ್ ಕ್ಯಾಪ್: ಜೋಸ್ ಬಟ್ಲರ್ (ರಾಜಸ್ಥಾನ ರಾಯಲ್ಸ್) ₹15 ಲಕ್ಷ
ರನ್ (863 ರನ್), ಶತಕಗಳು (4), ಬೌಂಡರಿ (83), ಸಿಕ್ಸರ್ (45)

ಪರ್ಪಲ್ ಕ್ಯಾಪ್: ಯಜುವೇಂದ್ರ ಚಾಹಲ್ ₹15 ಲಕ್ಷ
27 ವಿಕೆಟ್

(ಅಂಕಿ ಸಂಖ್ಯೆ: ಐಪಿಎಲ್ ಟಿ20 ವೆಬ್‌ಸೈಟ್)

ಮೊಟೇರಾದಲ್ಲಿ ಕೆಜಿಎಫ್ –2 ಮೋಡಿ

ಯಶ್ ಅಭಿನಯದ ಕೆಜಿಎಫ್ 2 ಚಿತ್ರದ ಸೂಪರ್ ಹಿಟ್ ಹಾಡು 'ಧೀರ.. ಧೀರ..' ಐಪಿಎಲ್ ಫೈನಲ್ ಪಂದ್ಯದ ಉದ್ಘಾಟನೆ ವೇದಿಕೆಯಲ್ಲಿ ಮೊಳಗಿತು. ಬಾಲಿವುಡ್ ತಾರೆ ರಣವೀರ್ ಸಿಂಗ್ ಈ ಹಾಡಿಗೆ ನರ್ತಿಸಿದರು. ಅಲ್ಲದೇ ಇದೇ ಚಿತ್ರ ಜನಪ್ರಿಯವಾಗಿರುವ 'ವೈಲೆನ್ಸ್..ವೈಲೆನ್ಸ್..' ಡೈಲಾಗ್ ಕೂಡ ಹೇಳಿ ಚಪ್ಪಾಳೆ ಗಿಟ್ಟಿಸಿದರು. ಸಂಗೀತಗಾರ ಎ.ಆರ್. ರೆಹಮಾನ್ ಕಾರ್ಯಕ್ರಮವೂ ಗಮನ ಸೆಳೆಯಿತು. ಪಂದ್ಯ ವೀಕ್ಷಿಸಲು ಸಿನಿತಾರೆಗಳು ಮತ್ತು ಗಣ್ಯರ ದಂಡು ನೆರೆದಿತ್ತು. ಚಿತ್ರನಟ ಅಕ್ಷಯ್ ಕುಮಾರ್, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತಿತರರು ಹಾಜರಿದ್ದರು.

ಗ್ಯಾಲರಿ ಹೌಸ್‌ಫುಲ್

ಮೊಟೇರಾದ ಕ್ರೀಡಾಂಗಣದ ಪ್ರೇಕ್ಷಕರ ಗ್ಯಾಲರಿಯು ಸಂಪೂರ್ಣ ಭರ್ತಿಯಾಗಿತ್ತು. 1.32 ಲಕ್ಷ ಆಸನ ಸಾಮರ್ಥ್ಯದ ಈ ಕ್ರೀಡಾಂಗಣದಲ್ಲಿ ಪಂದ್ಯ ವೀಕ್ಷಿಸಲು ಜನಸಾಗರವೇ ಸೇರಿತ್ತು. ಆಸನಗಳು ಭರ್ತಿಯಾದರೂ, ಕ್ರೀಡಾಂಗಣದ ಹೊರಗಡೆಯೂ ಜನರು ಸೇರಿದ್ದರು.


ಬಾಲಿವುಡ್ ನಟ ರಣವೀರ್ ಸಿಂಗ್ ಹಾಗೂ ಸಂಗೀತ ನಿರ್ದೇಶಕ ಎ.ಆರ್. ರಹಮಾನ್ ಗಾನ–ನೃತ್ಯದ ಝಲಕ್ –ಪಿಟಿಐ ಚಿತ್ರ

ಸರ್ಫಿಂಗ್: ರಮೇಶ್‌ಗೆ ಚಾಂಪಿಯನ್ ಕಿರೀಟ

ಪ್ರಜಾವಾಣಿ ವಾರ್ತೆ

ಮಂಗಳೂರು: ಆತಿಥೇಯ ಕರ್ನಾಟಕದ ರಮೇಶ್ ಬೂದಿಹಾಳ ಭಾನುವಾರ ಇಲ್ಲಿ ನಡೆದ ಇಂಡಿಯನ್ ಓಪನ್ ಸರ್ಫಿಂಗ್ ಚಾಂಪಿಯನ್‌ಷಿಪ್‌ನ ಮೂರನೇ ಆವೃತ್ತಿಯ ಪುರುಷರ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಸರ್ಫಿಂಗ್ ಆರಂಭದ ದಿನದಿಂದಲೂ ರಮೇಶ್ ಬೂದಿಹಾಳ್ ಉತ್ತಮ ಕೌಶಲಗಳನ್ನು ಪ್ರದರ್ಶಿಸಿ ನಿರ್ಣಾಯಕರ ಮನಗೆದ್ದರು. ಉಕ್ಕಿಬರುವ ಸಮುದ್ರದಲೆಗಳು ಮತ್ತು ರಭಸದ ಗಾಳಿಯ ನಡುವೆ ಅವರು ರೋಚಕ ಸಾಹಸ ತೋರಿ ಅಂಕಗಳನ್ನು ಗಳಿಸಿದರು. ತಮಿಳುನಾಡಿನ ಅಜೀಶ್ ಅಲಿ ದ್ವಿತೀಯ ಹಾಗೂ ಸತೀಶ್ ಸರವಣನ್ ತೃತೀಯ ಸ್ಥಾನ ಪಡೆದರು.

ಬಾಲಕಿಯರ ವಿಭಾಗದಲ್ಲಿ ಗೋವಾದ ಶುಗರ್ ಬನಾರ್ಸೆ ಮತ್ತು ಸೋಫಿಯಾ ಶರ್ಮಾ ಚಾಂಪಿಯನ್ ಆದರು. ಮಹಿಳೆಯರ ಮುಕ್ತ ವಿಭಾಗದಲ್ಲಿ ಗೋವಾದ ಶುಗರ್ ಬನಾರ್ಸೆ ಮೊದಲ ಸ್ಥಾನ, ಕರ್ನಾಟಕದ ಸೃಷ್ಟಿ ಸೆಲ್ವಂ, ಸಿಂಚನಾ ಗೌಡ ಕ್ರಮವಾಗಿ ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದರು.

16 ವರ್ಷದ ಬಾಲಕರ ವಿಭಾಗದಲ್ಲಿ ಚೆನ್ನೈನ ಕಿಶೋರ್ ಕುಮಾರ್ ಚಾಂಪಿಯನ್ ಆಗಿ ಹೊರಹೊಮ್ಮಿದರು. ತಮಿಳುನಾಡಿನ ನವೀನ್ ಕುಮಾರ್ ಆರ್. ಮತ್ತು ಜೀವನ್ ಎಸ್. ಎರಡನೇ ಹಾಗೂ ಮೂರನೇ ಸ್ಥಾನ ಪಡೆದರು.

ಬಾಲಕಿಯರ ವಿಭಾಗದಲ್ಲಿ ಗೋವಾದ ಸೋಫಿಯಾ ಶರ್ಮಾ 18.50 ಪಾಯಿಂಟ್ ದಾಖಲಿಸಿ ಚಾಂಪಿಯನ್‌ಷಿಪ್‌ನ ಅತ್ಯಧಿಕ ಪಾಯಿಂಟ್ ದಾಖಲಿಸಿದ ಆಟಗಾರ್ತಿ ಆಗಿ ಮೊದಲ ಸ್ಥಾನ ಗಳಿಸಿದರು. ಮಂಗಳೂರಿನ 9 ವರ್ಷದ ತನಿಷ್ಕಾ ಮೆಂಡನ್ ಹಾಗೂ ಸಾನ್ವಿ ಹೆಗ್ಡೆ ಕ್ರಮವಾಗಿ (12.23, 11.33) ಪಾಯಿಂಟ್ ದಾಖಲಿಸಿದ ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದುಕೊಂಡರು.


ರಮೇಶ್ ಬೂದಿಹಾಳ್ ಅಲೆಗಳನ್ನು ಎದುರಿಸಿದ ಪರಿ –ಪ್ರಜಾವಾಣಿ ಚಿತ್ರ/ಇರ್ಷಾದ್ ಮೊಹಮ್ಮದ್

ದೂರು: ಜಿಎಫ್‌ಐನಿಂದ ವರದಿ ಕೇಳಿದ ಸಾಯ್

ನವದೆಹಲಿ: ಆಯ್ಕೆ ಪ್ರಕ್ರಿಯೆಯಲ್ಲಿ ತಾರತಮ್ಯ ಎಸಗಲಾಗುತ್ತಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ವರದಿ ಸಲ್ಲಿಸುವಂತೆ ಭಾರತ ಕ್ರೀಡಾ ಪ್ರಾಧಿಕಾರವು ಜಿಮ್ನಾಸ್ಟಿಕ್ಸ್ ಫೆಡರೇಷನ್ ಆಫ್ ಇಂಡಿಯಾಗೆ ಸೂಚಿಸಿದೆ.

ಮಾರ್ಚ್ 11 ಮತ್ತು 12ರಂದು ನಡೆದಿದ್ದ ಆಯ್ಕೆ ಟ್ರಯಲ್ಸ್‌ನಲ್ಲಿ ಅನ್ಯಾಯ ಮಾಡಲಾಗಿದೆ ಎಂದು ದೇಶದ ಪ್ರಮುಖ ಜಿಮ್ನಾಸ್ಟ್ ಆಶಿಶ್ ಕುಮಾರ್ ಅವರು ಫೆಡರೇಷನ್‌ಗೆ ದೂರು ಸಲ್ಲಿಸಿದ್ದರು. ಅದರ ಪ್ರತಿಯನ್ನು ಸಾಯ್‌ಗೂ ಕಳುಹಿಸಿದ್ದರು. ಇದಕ್ಕೆ ಸ್ಪಂದಿಸಿರುವ ಸಾಯ್ ಅಗತ್ಯವಿದ್ದರೆ ತನಿಖೆಗೆ ಸಮಿತಿಯನ್ನು ರಚಿಸಲಾಗುವುದು ಎಂದು ತಿಳಿಸಿದೆ.

ಅರ್ಜುನ ಪ್ರಶಸ್ತಿ ಗಳಿಸಿರುವ ಆಶಿಶ್ ಕುಮಾರ್, ಆಯ್ಕೆ ಟ್ರಯಲ್ಸ್‌ನಲ್ಲಿ 5ನೇ ಸ್ಥಾನ ಗಳಿಸಿದರೂ ತಮ್ಮನ್ನು ಪರಿಗಣಿಸದೆ 7 ಮತ್ತು 8ನೇ ಸ್ಥಾನ ಗಳಿಸಿದವರಿಗೆ ಅವಕಾಶ ನೀಡಲಾಗಿದೆ ಎಂದು ದೂರಿನಲ್ಲಿ ತಿಳಿಸಿದ್ದರು.

ಎರಡು ಚಿನ್ನ ಗೆದ್ದ ಮನೀಷಾ

ದುಬೈ (ಪಿಟಿಐ): ಭಾರತದ ಮನೀಷಾ ರಾಮದಾಸ್ ಇಲ್ಲಿ ನಡೆಯುತ್ತಿರುವ ಫಜ್ಜಾ ದುಬೈ ಪ್ಯಾರಾ ಬ್ಯಾಡ್ಮಿಂಟನ್ ಅಂತರಾಷ್ಟ್ರೀಯ ಟೂರ್ನಿಯಲ್ಲಿ ಎರಡು ಚಿನ್ನದ ಪದಕಗಳಿಗೆ ಕೊರಳೊಡ್ಡಿದರು. ಪ್ರಮೋದ್ ಭಗತ್ ಮತ್ತು ಮಾನಸಿ ಜೋಷಿ ಅವರಿಗೂ ಚಿನ್ನ ಒಲಿಯಿತು.

ಭಾನುವಾರ ನಡೆದ ಮಹಿಳೆಯರ ವಿಭಾಗದ ಎಸ್‌ಯು5 ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಮನೀಷಾ 21-17, 21-11ರಿಂದ ಜಪಾನ್‌ನ ಅಕಿಕೊ ಸುಗಿನೊ ಅವರನ್ನು ಪರಾಭವಗೊಳಿಸಿದರು. ಮನದೀಪ್ ಕೌರ್ ಜೊತೆಗೂಡಿ ಡಬಲ್ಸ್ ಫೈನಲ್‌ನಲ್ಲಿ 21-9, 21-13ರಿಂದ ಥಾಯ್ಲೆಂಡ್‌ನ ನಿಪದಾ ಸೇನ್‌ಸುಪಾ ಮತ್ತು ಚನಿದಾ ಶ್ರೀನಾವಕುಲ್ ಅವರನ್ನು ಮಣಿಸಿದರು.



ಪ್ರಮೋದ್ ಭಗತ್ ಮನೀಷಾ ರಾಮದಾಸ್– ಟ್ವಿಟರ್ ಚಿತ್ರ

ಪುರುಷರ ಎಸ್‌ಎಲ್3 ಸಿಂಗಲ್ಸ್ ವಿಭಾಗದಲ್ಲಿ ಸ್ಪರ್ಧಿಸಿದ್ದ ಪ್ಯಾರಾಲಿಂಪಿಕ್ ಚಾಂಪಿಯನ್ ಪ್ರಮೋದ್, ಫೈನಲ್ ಪಂದ್ಯದಲ್ಲಿ 19-21, 21-17, 21-17ರಿಂದ ಭಾರತದವರೇ ಆದ ನಿತೀಶ್ ಕುಮಾರ್ ಅವರಿಗೆ ಸೋಲುಣಿಸಿದರು. ಮಹಿಳಾ ಸಿಂಗಲ್ಸ್ ಎಸ್‌ಎಲ್3 ವಿಭಾಗದ ಫೈನಲ್‌ನಲ್ಲಿ ಮಾನಸಿ 16-21, 24-22, 21-14ರಿಂದ ಮನದೀಪ್ ಕೌರ್ ಎದುರು ಗೆದ್ದರು.


ಪ್ರಾಚಿ ಯಾದವ್– ಸಾಯ್ ಮೀಡಿಯಾ ಟ್ವಿಟರ್ ಚಿತ್ರ

ಪ್ಯಾರಾ ಕೆನೊಯಿಂಗ್ ವಿಶ್ವಕಪ್ ಪ್ರಾಚಿ ಯಾದವ್‌ಗೆ ಕಂಚು

ನವದೆಹಲಿ (ಪಿಟಿಐ): ಭಾರತದ ಪ್ರಾಚಿ ಯಾದವ್ ಪ್ಯಾರಾ ಕೆನೊಯ್ ವಿಶ್ವಕಪ್‌ನಲ್ಲಿ ಕಂಚಿನ ಪದಕ ಜಯಿಸಿ ಇತಿಹಾಸ ರಚಿಸಿದ್ದಾರೆ.

ಪೋಲೆಂಡ್‌ನ ಪೋಜ್ನಾನ್‌ನಲ್ಲಿ ನಡೆದ ಟೂರ್ನಿಯ (ವಿಎಲ್2) 200 ಮೀಟರ್ಸ್ ವಿಭಾಗದಲ್ಲಿ ಪದಕ ಗೆದ್ದು ಈ ಸಾಧನೆ ಮಾಡಿದ ಭಾರತದ ಮೊದಲ ಮಹಿಳೆ ಎನಿಸಿಕೊಂಡಿದ್ದಾರೆ.

ಪ್ರಾಚಿ 1 ನಿಮಿಷ 4.71 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಆಸ್ಟ್ರೇಲಿಯಾದ ಸೂಸನ್ ಸೈಪೆಲ್ (1 ನಿ. 1.54 ಸೆ.) ಚಿನ್ನ ಗೆದ್ದರು. ಬೆಳ್ಳಿ ಪದಕವು ಕೆನಡಾದ ಬ್ರಿಯಾನ್ನಾ ಹೆನ್ನೆಸ್ಸಿ (1ನಿ. 1.58 ಸೆ.) ಅವರ ಪಾಲಾಯಿತು.

ಮನೀಷ್ ಕೌರವ್ (ಪುರುಷರ ಕೆಎಲ್3 200 ಮೀ.) ಮತ್ತು ಮಂಜೀತ್ ಸಿಂಗ್ (ವಿಎಲ್2 200 ಮೀ.) ಫೈನಲ್ ತಲುಪಿದ್ದಾರೆ.

ವಿಎಲ್3 200 ಮೀ. ವಿಭಾಗದ ಸೆಮಿಫೈನಲ್‌ನಲ್ಲಿ ಜೈದೀಪ್ ಸೋಲು ಅನುಭವಿಸಿದರು.